# ಕರ್ನಾಟಕ ವಿಧಾನ ಪರಿಷತ್ತು

## ಬುಧವಾರ, 05ನೇ ಜೂನ್ 2013

**ಸದನವು ವಿಧಾನ ಸೌಧದಲ್ಲಿರುವ ವಿಧಾನಪರಿಷತ್ತಿನ ಸಭಾಂಗಣದಲ್ಲಿ**
**ಪೂರ್ವಾಹ್ನ 11 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ (ಶ್ರೀ ಡಿ.ಹೆಚ್. ಶಂಕರಮೂರ್ತಿ)ಯವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

## 1. ಸಂತಾಪ ಸೂಚನೆ

**ಸಭಾಪತಿಯವರು:-**

**ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎನ್. ಚಿಕ್ಕೇಗೌಡ ಅವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.**

### ಶ್ರೀ ಎನ್. ಚಿಕ್ಕೇಗೌಡ

**ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎನ್. ಚಿಕ್ಕೇಗೌಡ ಅವರು ದಿನಾಂಕ: 04.06.2013 ರಂದು ನಿಧನ ಹೊಂದಿರುತ್ತಾರೆ.**

1926ನೇ ಜೂನ್, 13ರಂದು ಹೊಸಕೋಟೆ ತಾಲ್ಲೂಕಿನ ದೊಡ್ಡಗಟಿಗನಬ್ಬೆಯಲ್ಲಿ ಜನಿಸಿದ ಶ್ರೀಯುತರು ಬಿ.ಎಸ್‌ಸಿ. (ಕೃಷಿ) ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಕೃಷಿ ಮಹಾವಿದ್ಯಾಲಯ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ, ಮೈಸೂರು ರಾಜ್ಯ ಸಣ್ಣ ವ್ಯವಸಾಯ ವೇದಿಕೆಯ ಕಾರ್ಯದರ್ಶಿಯಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಬೆಂಗಳೂರು ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾಗಿ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ರಿಜೆಂಟ್ಸ್ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು 4ನೇ, 5ನೇ, 7ನೇ ಹಾಗೂ 9ನೇ ವಿಧಾನ ಸಭೆಗೆ ಹೊಸಕೋಟೆ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ದಿ: ದೇವರಾಜ್ ಅರಸ್ ಮತ್ತು ದಿ: ಎಸ್. ಬಂಗಾರಪ್ಪ ಅವರುಗಳ ಸಚಿವ ಸಂಪುಟದಲ್ಲಿ ಪಶುಸಂಗೋಪನೆ ಹಾಗೂ ಕೃಷಿ ಸಚಿವರಾಗಿಯೂ ಸಹ ಸೇವೆಯನ್ನು ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಹಿರಿಯ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀಮಾನ್ ಎನ್.ಚಿಕ್ಕೇಗೌಡರು ಕೃಷಿ ಹಾಗೂ ಪಶುಸಂಗೋಪನೆ ಸಚಿವರಾಗಿ ಹೊಸಕೋಟೆ ವಿಧಾನಸಭಾ ಕ್ಷೇತ್ರದಿಂದ 4 ಬಾರಿ ಶಾಸಕರಾಗಿ ಆಯ್ಕೆಗೊಂಡು ಅತ್ಯುತ್ತಮ ಸೇವೆ ಸಲ್ಲಿಸಿದಂತಹವರು. ಅವರ ನಿಧನದಿಂದಾಗಿ ಸಾರ್ವಜನಿಕ ಕ್ಷೇತ್ರಕ್ಕೆ ದೊಡ್ಡ ಹಾನಿಯುಂಟಾಗಿದೆ ಎಂದು ಹೇಳಬಹುದು. ಕೃಷಿ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರವಾದುದು, ಹೀಗಾಗಿ ಕೃಷಿ ಕ್ಷೇತ್ರ ಕೂಡ ಇವೊತ್ತು ಬರಡಾಗಿದೆ ಎಂದು ಹೇಳಬಹುದು. ಅವರು B.Sc., (Agri) ಪದವೀಧರರು, ಪದವಿಯಲ್ಲಿ ಕೃಷಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿ ನಂತರ ಕೃಷಿಯನ್ನೇ ಮೂಲ ಉದ್ಯೋಗವನ್ನಾಗಿ ಸ್ವೀಕರಿಸಿ, ಸತತವಾಗಿ ನಾಲ್ಕು ಬಾರಿ ಹೊಸಕೋಟೆ ಕ್ಷೇತ್ರವನ್ನು ಪ್ರತಿನಿಧಿಸಿ ಕೃಷಿ ಮತ್ತು ಪಶುಸಂಗೋಪನೆ ಸಚಿವರಾಗಿ ಅತ್ಯುತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಅತ್ಯಂತ ಗತ್ತುಗಾರಿಕೆಯವರೆಂದೇ ಖ್ಯಾತರಾದಂತಹವರು ಮತ್ತು ವರ್ಣರಂಜಿತ ವ್ಯಕ್ತಿತ್ವವನ್ನು ಹೊಂದಿದಂತಹವರು. ಅವರು ಸಹಕಾರಿಗಳು ಕೂಡ ಹೌದು. ಏಕೆಂದರೆ ಅವರು ಬೆಂಗಳೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ, ಕೃಷಿ ವಿಶ್ವವಿದ್ಯಾಲಯದ Board of Regents ನ ಸದಸ್ಯರಾಗಿ ಅವರ ವಿದ್ಯಾರ್ಹತೆಗೆ ತಕ್ಕಂತೆ ಅತ್ಯುತ್ತಮವಾದಂತಹ ಸೇವೆ ಸಲ್ಲಿಸಿದಂತಹ ಕೀರ್ತಿಗೆ ಭಾಜನರಾದವರು. ತಾಲ್ಲೂಕು ಪಂಚಾಯಿತಿ ರಚನೆ ಆಗುವುದಕ್ಕೂ ಮೊದಲು ತಾಲ್ಲೂಕು ಅಭಿವೃದ್ಧಿ ಮಂಡಳಿ(T.D.B.,) ಎಂದು ಇತ್ತು, ಅದರ ಅಧ್ಯಕ್ಷರಾಗಿ ಕೂಡ ಅವರು ಅತ್ಯುತ್ತಮ ಸೇವೆ ಸಲ್ಲಿಸಿರುತ್ತಾರೆ. ಅವರ ನಿಧನ ನಿಜವಾಗಿಯೂ ಸಾರ್ವಜನಿಕ ಕ್ಷೇತ್ರ ಮತ್ತು ಕೃಷಿ ಕ್ಷೇತ್ರಕ್ಕೆ ಬಹಳ ದೊಡ್ಡ ನಷ್ಟವನ್ನುಂಟುಮಾಡಿದೆ. ಕೃಷಿ ಜೊತೆಗೆ ಕೃಷಿಯ ಉಪ ಕಸುಬುಗಳಾದಂತಹ ಕೋಳಿ ಸಾಕಾಣಿಕೆ ಬಗ್ಗೆ ಬಹಳಷ್ಟು ಆಸಕ್ತಿಯನ್ನು ಹೊಂದಿದ್ದರು. ಕೃಷಿಯೊಂದರಿಂದಲೇ ರೈತ ಜೀವನ ನಡೆಸುವುದು ಬಹಳ ಕಷ್ಟವಾದ್ದರಿಂದ ಅದರ ಜೊತೆಗೆ ಉಪ ಕಸುಬುಗಳನ್ನು ಕೂಡ ಅನುಸರಿಸುವುದಕ್ಕೆ ಒತ್ತು ಕೊಡಬೇಕೆನ್ನುವಂತಹ ದೃಷ್ಟಿಯಿಂದ ಕೋಳಿ ಸಾಕಾಣಿಕೆಯನ್ನು ಅತ್ಯುತ್ತಮ

ರೀತಿಯಿಂದ ನಡೆಸಿಕೊಂಡು ಬಂದಂತಹ ಕೀರ್ತಿ ಮಾನ್ಯ ಚಿಕ್ಕೇಗೌಡರಿಗೆ ಸಲ್ಲತಕ್ಕದ್ದಾಗಿದೆ. ಇಂತಹ ಹಿರಿಯ ರಾಜಕಾರಣಿಗಳ ಜೀವನ ಕೃಷಿ ಕ್ಷೇತ್ರದ ಈಗಿನ ಯುವ ಜನಾಂಗಕ್ಕೆ ಆದರ್ಶಪ್ರಾಯವೆಂದು ಹೇಳಬಹುದು.

ದಿವಂಗತ ಎನ್.ಚಿಕ್ಕೇಗೌಡರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕರುಣಿಸಲಿ, ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಮತ್ತು ಅವರ ಹಿತೈಷಿಗಳಿಗೆ ಮತ್ತು ಅಭಿಮಾನಿಗಳಿಗೆ ಆ ಭಗವಂತ ಕರುಣಿಸಲೆಂದು ಪ್ರಾರ್ಥಿಸಿ ತಾವು ಸದನದಲ್ಲಿ ಮಂಡಿಸಿರುವಂತಹ ಈ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾದಂತಹ ಮಾನ್ಯ ಎನ್.ಚಿಕ್ಕೇಗೌಡರ ನಿಧನ ಕೃಷಿ ಕ್ಷೇತ್ರಕ್ಕೆ ತುಂಬಲಾರದ ನಷ್ಟವೆಂದು ನಾನು ಭಾವಿಸುತ್ತಿದ್ದೇನೆ. ಒಂದು ವಿಶೇಷ ಸಂಗತಿಯನ್ನು ನಾವಿಲ್ಲಿ ಕಾಣಬಹುದಾಗಿದೆ. ಸಚಿವಸಂಪುಟದಲ್ಲಿ ಸಚಿವರಾದವರು, ಯಾವ ಇಲಾಖೆ ಸಚಿವರಾಗಿರುತ್ತಾರೆ ಆ ಇಲಾಖೆಯ ವಿಚಾರ ಅವರಿಗೆ ಗೊತ್ತಿಲ್ಲದೆ ಇರುವಂತಹ ಸಂದರ್ಭಗಳು ಸಾಕಷ್ಟಿರುವುದನ್ನು ನಾವು ಕಂಡಿದ್ದೇವೆ. ಒಂದು ಆಡಳಿತ ಸೂತ್ರ ಅತ್ಯಂತ ಯಶ್ವಸಿಯಾಗಬೇಕೆಂದರೆ, ಇಲಾಖೆಯ ಸಚಿವರಾಗಿರುವಂಥವರು ಆ ಇಲಾಖೆಗೆ ಸಂಬಂಧಪಟ್ಟಂತೆ ಹಿಂದಿನಿಂದಲೂ ಅಧ್ಯಯನ ಮಾಡಿಕೊಂಡು, ಅದಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ತಿಳಿದುಕೊಂಡು ಬಂದವರಾಗಿದ್ದರೆ ಅವರಿಗೆ ಇಲಾಖೆಯ ಆಡಳಿತವನ್ನು ನಿರ್ವಹಿಸುವುದು ಅತ್ಯಂತ ಸುಲಲಿತವಾಗುತ್ತದೆ ಎನ್ನುವುದು ನಾವು ಕಂಡುಕೊಂಡಂತಹ ಸತ್ಯ. ಇವೊತ್ತಿನ ದಿನಗಳಲ್ಲಿ ರಾಜಕೀಯ ಒತ್ತಡಗಳ ಮಧ್ಯದಲ್ಲಿ, ಬೇರೆ ಬೇರೆ ಹಿರಿಯ ಮುಖಂಡರ ಆದೇಶಗಳ ಹಿನ್ನೆಲೆಯಲ್ಲಿ ಸಚಿವ ಸ್ಥಾನವನ್ನು ನೀಡಲಾಗುತ್ತಿರುವುದರಿಂದ ಆ ಇಲಾಖೆಗೆ ಪೂರ್ತಿ ಪ್ರಮಾಣದಲ್ಲಿ ನಾವು

ನ್ಯಾಯವನ್ನು ಒದಗಿಸುವುದಕ್ಕಾಗದಿರುವಂತಹ ಸಂದರ್ಭಗಳನ್ನು ನೋಡುತ್ತಿದ್ದೇವೆ. ಆದರೆ ಸನ್ಮಾನ್ಯ ಚಿಕ್ಕೇಗೌಡರು ಕೃಷಿಯಲ್ಲಿ B.Sc., ಪದವಿಯನ್ನು ಪಡೆದವರಾಗಿದ್ದರು, ಅಲ್ಲದೆ ಅವರು ನಡೆದು ಬಂದ ದಾರಿಯನ್ನು ಗಮನಿಸಿದಾಗ ಅವರು ಸಣ್ಣ ವ್ಯವಸಾಯಗಾರರ ವೇದಿಕೆಯ ಕಾರ್ಯದರ್ಶಿಯಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ, ಕೃಷಿ ವಿಶ್ವವಿದ್ಯಾಲಯದ Board of Regents ನ ಸದಸ್ಯರಾಗಿ, ಸತತವಾಗಿ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾದಂತಹ ಅವರು ಕೃಷಿ ಮತ್ತು ಪಶುಸಂಗೋಪನೆ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಆದಕಾರಣ ಪ್ರಾಯಶಃ ಚಿಕ್ಕೇಗೌಡರು ತಮ್ಮ ಅವಧಿಯಲ್ಲಿ ಕೊಟ್ಟಂತಹ ಉತ್ತಮ ಆಡಳಿತಕ್ಕೆ ಕಾರಣ, ಅವರು ಅದೇ ವಿಚಾರವನ್ನು ಅಧ್ಯಯನ ಮಾಡಿ ಬಂದಂತಹ ಒಬ್ಬ ಶಾಸಕರಾಗಿದ್ದರಿಂದ ಅವರು ಅಷ್ಟು ಯಶಸ್ವಿಯಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗಿದೆಯೆಂದು ನಾನಾದರೂ ಭಾವಿಸಿದ್ದೇನೆ. ಸಚಿವರಾಗುವವರೆಲ್ಲರೂ ಅದೇ ಕ್ಷೇತ್ರದಲ್ಲಿ ಅಧ್ಯಯನ ಮಾಡಿ ಬಂದವರು ಎಂದು ಹೇಳುವುದಕ್ಕಾಗುವುದಿಲ್ಲ, ಆದರೂ ಕೂಡ ಆ ರೀತಿಯ ಸೂಕ್ತ ಜೋಡಣೆಗಳನ್ನು ಕ್ಯಾಬಿನೆಟ್‌ನಲ್ಲಿ ಮಾಡಿಕೊಂಡರೆ ಹೆಚ್ಚು ಅರ್ಥಪೂರ್ಣವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಇಂತಹ ಹಿರಿಯ, ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ, ಅವರು ನಡೆದುಬಂದ ದಾರಿಯನ್ನು ನಾವೆಲ್ಲಾ ಅನುಸರಿಸುವಂತಹ ಪ್ರಯತ್ನಗಳನ್ನು ಮಾಡಿದರೆ ಮತ್ತೆ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಯಶಸ್ಸು ಸಿಗುವುದಕ್ಕೆ ಸಾಧ್ಯವಾಗಬಹುದು ಎನ್ನುವ ಮಾತನ್ನು ಹೇಳಿ ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಭಗವಂತ ಕರುಣಿಸಲೆಂದು ಹಾರೈಸಿ ತಾವು ತಂದಿರುವಂತಹ ಈ ಸಂತಾಪ ಸೂಚನಾ ನಿರ್ಣಯವನ್ನು ನಾನು ಅನುಮೋದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಇನ್ನೂ ಕೆಲವು ಸದಸ್ಯರು ನನ್ನಲ್ಲಿಗೆ ಬಂದು ಅಗಲಿದ ಗಣ್ಯರ ಬಗ್ಗೆ ಸದನದಲ್ಲಿ ಮಾತನಾಡುವುದಾಗಿ ಅಪೇಕ್ಷೆ

ವ್ಯಕ್ತಪಡಿಸಿದ್ದಾರೆ. ಆದರೆ, ಕಳೆದ ಎರಡು-ಮೂರು ವರ್ಷಗಳಿಂದ ನಾವು ಒಂದು ಪರಂಪರೆಯನ್ನು ಅನುಸರಿಸಿಕೊಂಡು ಬರುತ್ತಿದ್ದೇವೆ. ಅದೇನೆಂದರೆ, ಸಂತಾಪ ಸೂಚನೆಯ ಬಗ್ಗೆ ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಇವರಿಬ್ಬರು ಮಾತ್ರ ಮಾತನಾಡುವುದು, ಬಾಕಿ ಎಲ್ಲರೂ ಅದಕ್ಕೆ ನಮ್ಮ ಸಹಮತಿ ಇದೆ ಎಂದು ಹೇಳತಕ್ಕಂಥದ್ದು, ಇದು ನಮ್ಮ ಸದನದ ಪದ್ಧತಿಯಾದ ಕಾರಣಕ್ಕಾಗಿ ದಯಮಾಡಿ ಯಾರೂ ತಪ್ಪು ತಿಳಿಯಬಾರದು. ಬೇರೆ ಯಾವ ಸದಸ್ಯರಿಗೂ ನಾನು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ.

ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು. ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಬೆಳಿಗ್ಗೆ 11 ಗಂಟೆ 17 ನಿಮಿಷಕ್ಕೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು 11 ಗಂಟೆ 47 ನಿಮಿಷಗಳಿಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

## 2. ನೂತನ ಸಚಿವರ ಪರಿಚಯ

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇಂದು ಸದನಕ್ಕೆ ನೂತನ ಸಚಿವರಾದ ಶ್ರೀ ಶಾಮನೂರು ಶಿವಶಂಕರಪ್ಪ, ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ಮತ್ತು ಶ್ರೀ ಹೆಚ್. ಆಂಜನೇಯ, ಮಾನ್ಯ ಸಮಾಜ ಕಲ್ಯಾಣ ಸಚಿವರು ಆಗಮಿಸಿದ್ದು, ಇವರುಗಳ ಪರಿಚಯವನ್ನು ಸದನಕ್ಕೆ ಮಾಡಿಕೊಡುತ್ತಿದ್ದೇನೆ.

## 3. ಸಭೆಯ ಮುಂದಿಡಲಾದ ಕಾಗದ ಪತ್ರಗಳ

## (ಎರಡನೇ ಪಟ್ಟಿ)

**ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು) ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ**

1. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ
2. ಕರ್ನಾಟಕ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆ (ಕೆಬಿಟ್ಸ್) 2011–12ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

**II. ಶ್ರೀ ಆರ್.ವಿ. ದೇಶಪಾಂಡೆ, (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು):– ಮಾನ್ಯ ಸಭಾಪತಿಯವರೇ,**

**ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಕಾಯ್ದೆ (ಕರ್ನಾಟಕ ಆ್ಯಕ್ಟ್ 22 ಆಫ್ 1986) ಮೇರೆಗೆ**

1. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

**ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಕಲಂ 50(2) ಮತ್ತು 47(4)ರ ಮೇರೆಗೆ:**

1. ಗುಲ್ಬರ್ಗಾ ವಿಶ್ವವಿದ್ಯಾಲಯದ 2011–12ನೇ ಸಾಲಿನ ವಾರ್ಷಿಕ ವರದಿ.
2. ಮಂಗಳೂರು ವಿಶ್ವವಿದ್ಯಾಲಯದ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಕುವೆಂಪು ವಿಶ್ವವಿದ್ಯಾಲಯದ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ.
4. ಬೆಂಗಳೂರು ವಿಶ್ವವಿದ್ಯಾಲಯದ 2009–10ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2010–11ನೇ ಸಾಲಿನ ವಾರ್ಷಿಕ ವರದಿ.
5. ತುಮಕೂರು ವಿಶ್ವವಿದ್ಯಾಲಯದ 2006–07, 2007–08, 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ.
6. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ 2010–11ನೇ ಸಾಲಿನ ವಾರ್ಷಿಕ ವರದಿ.
7. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**ಹಂಪಿ ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ 1991ರ ಕಲಂ 25 ಹಾಗೂ 26ರ ಮೇರೆಗೆ**

1. ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ 2011–12ನೇ ಸಾಲಿನ ವಾರ್ಷಿಕ ವರದಿ.

**ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಅಧಿನಿಯಮ 2009ರ ಪ್ರಕರಣ 50(2)ರ ಮೇರೆಗೆ**

1. ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 2008–09 ರಿಂದ 2011–12 ರವರೆಗಿನ ವಾರ್ಷಿಕ ವರದಿ ಮತ್ತು ಕಾರ್ಯಸಾಧನಾ ಅನುಸೂಚಿ ವರದಿ.

**ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಧಿನಿಯಮ 2011ರ ಪ್ರಕರಣ 49(2) ಮತ್ತು 46(4) ರ ಮೇರೆಗೆ**

1. ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯದ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಧಿನಿಯಮ 2010ರ ಪ್ರಕರಣ 20ರ ಮೇರೆಗೆ**

1. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ.

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಪ್ರಕರಣ 58(2) ಮತ್ತು 57(4)ರ ಮೇರೆಗೆ**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2008–09, 2009–10, 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ ಹಾಗೂ

2008–09, 2009–10 ಮತ್ತು 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧಿನಿಯಮ 1994ರ ಕಲಂ 28(3)ರ ಮೇರೆಗೆ:**

1. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ, ಇದರ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**1956ರ ಕಂಪನಿಗಳ ಅಧಿನಿಯಮ 619ಎ ಮೇರೆಗೆ:**

1. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ). ಯನ್ನು ಮಂಡಿಸುತ್ತೇನೆ.

**III. ಶ್ರೀ ಕೆ ಅಭಯಚಂದ್ರ (ಯುವಜನ ಸೇವೆ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು):– ಮಾನ್ಯ ಸಭಾಪತಿಯವರೇ.**

**1956ರ ಕಂಪನಿ ಕಾಯ್ದೆಯ ಪರಿಚ್ಛೇದ 619ಎರ ಮೇರೆಗೆ**

1. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ). ಯನ್ನು ಮಂಡಿಸುತ್ತೇನೆ.

**IV. ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು): ಶ್ರೀ ಬಿ.ರಾಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):– ಮಾನ್ಯ ಸಭಾಪತಿಯವರೇ,**

**1956ರ ಕಂಪನಿಗಳ ಅಧಿನಿಯಮ 619(ಎ)ರ ಮೇರೆಗೆ):**

1. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

2. ಕರ್ನಾಟಕ ಪಲ್ಪ್‌ವುಡ್ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

3. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

**ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ 1974ರ ಕಲಂ 35(2) ಮತ್ತು 36(7)ರ ಮೇರೆಗೆ**

4. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**V. ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು) ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):– ಮಾನ್ಯ ಸಭಾಪತಿಯವರೇ,**

**1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262(3)ನೇ ಪ್ರಕರಣದ ಮೇರೆಗೆ:**

1. ಉಡುಪಿ ಜಿಲ್ಲಾ ಪಂಚಾಯತ್‌ನ 2011–12ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

**VI. ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು) ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರ ಪರವಾಗಿ):– ಮಾನ್ಯ ಸಭಾಪತಿಯವರೇ**

**ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ಅಧಿನಿಯಮ 1950ರ ಕಲಂ 35(3) ರ ಮೇರೆಗೆ:**

1. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ಆಡಳಿತ ವರದಿ.

2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

**VII. ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು) ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರ ಪರವಾಗಿ):– ಮಾನ್ಯ ಸಭಾಪತಿಯವರೇ**

**ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಕಾಯ್ದೆ 1962ರ ಅನುಚ್ಛೇದ 31(11) ಮತ್ತು 31(ಎ)ರ ಮೇರೆಗೆ**

1. ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರ ವರದಿಯನ್ನು ಮಂಡಿಸುತ್ತೇನೆ.

**VIII. ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು) ಶ್ರೀ ಎಂ.ಬಿ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಪರವಾಗಿ):– ಮಾನ್ಯ ಸಭಾಪತಿಯವರೇ**

**ಕಾಡಾ ಅಧಿನಿಯಮ 1980ರ ಕಲಂ 24ರ ಮೇರೆಗೆ:**

1. ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿ, ಇದರ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

1956ರ ಕಂಪನಿ ಅಧಿನಿಯಮ 619(ಎ)ರ ಮೇರೆಗೆ:

1. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

**IX. ಶ್ರೀ ವಿನಯ್‌ಕುಮಾರ್ ಸೊರಕೆ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):– ಮಾನ್ಯ ಸಭಾಪತಿಯವರೇ**

**ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ 48(5) ಮತ್ತು 49ರ ಮೇರೆಗೆ:**

1. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಅನುಷ್ಠಾನ ವರದಿ.

3. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2012–13ನೇ ಸಾಲಿನ ವಾರ್ಷಿಕ ವರದಿ.

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ 1973ರ ಕಲಂ 42ರ ಮೇರೆಗೆ**

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2011–12ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

**ಸಭಾಪತಿಯವರು:–** ಮಂಡಿಸಲಾಯಿತು.

## 4. ವಿಶೇಷ ಪ್ರಸ್ತಾವ

**ಅ) ಹಾಸನದಲ್ಲಿ ಕುರಿಯ ತಲೆಯನ್ನು ಕತ್ತರಿಸಿ ಆರ್.ಎಸ್.ಎಸ್. ಕಚೇರಿ ಮುಂದಿಟ್ಟು ಸಮಾಜ ಸ್ವಾಸ್ಥ್ಯವನ್ನು ಹಾಳು ಮಾಡಲು ಪ್ರಯತ್ನಿಸಿದವರನ್ನು ಬಂಧಿಸುವ ಬಗ್ಗೆ.**

ಶ್ರೀ **ಗೋ.ಮಧುಸೂಧನ್(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಹಾಸನ ನಗರದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಚೇರಿ 'ಪಾಂಚಜನ್ಯ' ಮುಂಭಾಗದಲ್ಲಿ ಕೆಲ ಕಿಡಿಗೇಡಿಗಳು ಕುರಿಯ

ತಲೆಯನ್ನು ಕತ್ತರಿಸಿ ತಂದಿಟ್ಟಿರುವ ಘಟನೆಯ ಬಗ್ಗೆ ರಾಜ್ಯದ ದಿನ ಪತ್ರಿಕೆಯಾದ 'ಕನ್ನಡ ಪ್ರಭ'ದಲ್ಲಿ ದಿನಾಂಕ:04.06.2013ರ ಪುಟ ಸಂಖ್ಯೆ:07ರಲ್ಲಿ ಪ್ರಕಟವಾಗಿರುತ್ತದೆ. ಕಾರ್ಯಾಲಯದ ಪಕ್ಕದಲ್ಲೇ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ 'ಪೆನ್‌ಷನ್ ಮೊಹಲ್ಲಾ " ಎಂಬ ಕಾಲೋನಿಯು ಇದ್ದು, ಈವರೆವಿಗೂ ಉತ್ತಮ ಕೋಮು ಸೌಹಾರ್ದ ಕಾಯ್ದುಕೊಳ್ಳಲಾಗಿದೆ. ಆದರೆ ಈ ವೇಳೆಯಲ್ಲಿ ಇಂತಹ ಹೀನ ಕೃತ್ಯ ನಡೆದಿದ್ದು, ಬಹು ಸಂಖ್ಯಾತರ ಭಾವನೆಗಳನ್ನು ಕೆರಳಿಸುವ ಕುತ್ಸಿತ ಪ್ರಯತ್ನವಾಗಿದೆ. ಇದೇ ರೀತಿ ಕುರಿ ತಲೆಯನ್ನು ಇಡಲಾಗಿತ್ತು. ಇಂತಹ ಕುಕೃತ್ಯಗಳು ಮರುಕಳಿಸುತ್ತಿರುವುದು ನಿಜವಾಗಿಯೂ ಆತಂಕಕಾರಿಯಾಗಿದೆ. ಈ ಬಗ್ಗೆ ಕೂಡಲೇ ಕ್ರಮ ವಹಿಸಿ ಮತೀಯ ಭಾವನೆ ಕೆರಳಿಸುವವರ ವಿರುದ್ಧ ಕ್ರಮವಹಿಸದಿದ್ದಲ್ಲಿ, ಮುಂಬರುವ ದಿನಗಳಲ್ಲಿ ಧಂಗೆಗಳಾಗುವ ಸಾಧ್ಯತೆಗಳಿರುತ್ತದೆ.

ಇಂತಹ ದುಷ್ಕೃತ್ಯ ಎಸಗಲು ಕಾರಣಕರ್ತರಾದವರು ಹಾಗೂ ಇದರ ಹಿಂದಿರುವವರನ್ನು ಕೂಡಲೇ ಬಂಧಿಸಿ, ಸಮಾಜದ ಸ್ವಾಸ್ಥ್ಯವನ್ನು ರಕ್ಷಿಸಲು ಕ್ರಮ ವಹಿಸಬೇಕಾಗಿ ತಮ್ಮ ಮುಖಾಂತರ ಸರ್ಕಾರಕ್ಕೆ ಹಾಗೂ ಸದನದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಉತ್ತರವನ್ನು ಬೇಗನೇ ಒದಗಿಸಲಾಗುತ್ತದೆ.

**ಆ) ಸಾರ್ವತ್ರಿಕ ವರ್ಗಾವಣೆ ಸಂಬಂಧ ಮಾರ್ಗಸೂಚಿ ಹೊರಡಿಸದೇ ಇರುವ ಬಗ್ಗೆ.**

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಪ್ರಸ್ತಕ ಸಾಲಿನಲ್ಲಿ ಸಾರ್ವತ್ರಿಕ ವರ್ಗಾವಣೆ ಮಾಡುವುದಾಗಿ ಸರ್ಕಾರ ಹೇಳಿಕೆ ನೀಡಿರುವುದು ಪತ್ರಿಕೆಗಳು ಹಾಗೂ ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ, ಸರ್ಕಾರದಿಂದ ಇದುವರೆವಿಗೂ ಸಾರ್ವತ್ರಿಕ ವರ್ಗಾವಣೆಯ ಮಾರ್ಗಸೂಚಿ ಹೊರಡಿಸಿರುವುದಿಲ್ಲ. ರಾಜ್ಯ ಸರ್ಕಾರಿ ನೌಕರರಲ್ಲಿ ಶೇಕಡಾ 50ರಷ್ಟು

ಶಿಕ್ಷಕರಿದ್ದಾರೆ. ಪ್ರಸ್ತಕ ಸಾಲಿನ ಶಾಲಾ ಶೈಕ್ಷಣಿಕ ಚಟುವಟಿಕೆಗಳು ಈಗಾಗಲೇ ಪ್ರಾರಂಭವಾಗಿದೆ. ಇನ್ನೂ ಕೂಡ ಸಾರ್ವತ್ರಿಕ ವರ್ಗಾವಣೆಯ ಮಾರ್ಗಸೂಚಿ ಹೊರಡಿಸದೆ ಇರುವುದು ವರ್ಗಾವಣೆ ಬಯಸಿದ ಶಿಕ್ಷಕರಿಗೆ ಹಾಗೂ ಇತರೆ ಇಲಾಖೆಗಳ ಸರ್ಕಾರಿ ನೌಕರರಿಗೆ ತುಂಬಾ ತೊಂದರೆಯಾಗುತ್ತದೆ. ವಿಳಂಬದಿಂದ ವರ್ಗಾವಣೆ ಬಯಸಿದ ನೌಕರರ ಮಕ್ಕಳ ಶಿಕ್ಷಣಕ್ಕೆ ತೊಂದರೆ ಉಂಟಾಗುತ್ತದೆ. ಆದಕಾರಣ ಸರ್ಕಾರ ಕೂಡಲೇ ಸಾರ್ವತ್ರಿಕ ವರ್ಗಾವಣೆಯ ಮಾರ್ಗಸೂಚಿಯನ್ನು ಹೊರಡಿಸಿ, ಜೂನ್ ಅಂತ್ಯದೊಳಗೆ ವರ್ಗಾವಣೆ ಪ್ರಕ್ರಿಯೆಯನ್ನು ಪೂರೈಸಿ, ವರ್ಗಾವಣೆ ಬಯಸಿದ ನೌಕರರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಈ ವಿಶೇಷ ಪ್ರಸ್ತಾವನೆಯ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಈ ವಿಚಾರವನ್ನು ಅವರ ಗಮನಕ್ಕೆ ತಂದು ಬೇಗನೇ ಉತ್ತರವನ್ನು ಒದಗಿಸಲಾಗುತ್ತದೆ.

**ಇ) ಬೋಧನಾ ಶುಲ್ಕ ಪಾವತಿಸಿದ ಪಾಲಿಟೆಕ್ನಿಕ್ ಸಿಬ್ಬಂದಿಗಳ ವೇತನ ತಡೆಹಿಡಿದಿರುವ ಬಗ್ಗೆ.**

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ 42 ಅನುದಾನಿತ ಪಾಲಿಟೆಕ್ನಿಕ್‌ಗಳು ಇದ್ದು, ಅವುಗಳ ಪೈಕಿ 16 ಸಂಸ್ಥೆಗಳಿಗೆ ಮಾತ್ರ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ವೇತನ ಬಿಡುಗಡೆ ಮಾಡಲಾಗಿದೆ. ಉಳಿದ 26 ಪಾಲಿಟೆಕ್ನಿಕ್‌ಗಳಿಗೆ ಬೋಧನಾ ಶುಲ್ಕ ಪಾವತಿಸಿಲ್ಲ ಎಂಬ ಕಾರಣಕ್ಕೆ ಅಲ್ಲಿಯ ಬೋಧಕ ಸಿಬ್ಬಂದಿಯ ವೇತನಾನುದಾನ ತಡೆಹಿಡಿಯಲಾಗಿದೆ.

ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಪಾಲಿಟೆಕ್ನಿಕ್ ಆಡಳಿತ ಮಂಡಳಿಗಳ ಮಧ್ಯೆ ಉದ್ಭವಿಸಿದ ಸಮಸ್ಯೆಗಳಿಂದಾಗಿ ಇದಕ್ಕೆ ಸಂಬಂಧವೇ ಇಲ್ಲದ ಬೋಧಕ–ಬೋಧಕೇತರ ಸಿಬ್ಬಂದಿಯ ವೇತನ ತಡೆಹಿಡಿದಿರುವುದು

ಅಮಾನವೀಯ ಎನಿಸಿದೆ. ಈ 26 ಪಾಲಿಟೆಕ್ನಿಕ್‌ನ ಸಿಬ್ಬಂದಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದು, ಮಕ್ಕಳ ಶುಲ್ಕ ಕಟ್ಟಲೂ ಆಗದೇ, ಮಕ್ಕಳನ್ನು ಶಾಲೆಗೆ ಸೇರಿಸಲು ಪರದಾಡುವಂತಾಗಿದೆ.

ಇಂತಹ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಮಾನ್ಯ ಉನ್ನತ ಶಿಕ್ಷಣ ಸಚಿವರು ಕೂಡಲೇ ಸಿಬ್ಬಂದಿಗೆ ವೇತನ ಬಿಡುಗಡೆ ಮಾಡಲು ತಕ್ಷಣ ಕ್ರಮ ಕೈಗೊಳ್ಳಬೇಕು ಹಾಗೂ ಬೋಧನಾ ಶುಲ್ಕವನ್ನು ಸಂಗ್ರಹಿಸಲು ಆಡಳಿತ ಮಂಡಳಿಯ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರಿಗೆ 'ಈ ಬಗ್ಗೆ ಸವಿಸ್ತಾರವಾಗಿರುವಂತಹ ವರದಿಯನ್ನು ಕಳುಹಿಸಬೇಕೆಂದು' ನಾನು ನಿರ್ದೇಶನವನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಮಾನ್ಯ ಸದಸ್ಯರಿಗೆ ತಿಳಿಸಲಾಗುತ್ತದೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಸಿಬ್ಬಂದಿಗೆ ಸಂಬಳ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ.

**ಸಭಾಪತಿಯವರು:–** ಇದರ ಬಗ್ಗೆ ಹೆಚ್ಚಿನ ಚರ್ಚೆ ಬೇಡ. ಅವರು ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ಹೇಳಲಿ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಇದು ಕೇವಲ ಪಾಲಿಟೆಕ್ನಿಕ್‌ಗೆ ಮಾತ್ರ ಸೀಮಿತವಾಗಿಲ್ಲ, ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿಯೂ ಈ ರೀತಿಯ ಸಂಗತಿಗಳು ಇವೆ. ಪದವಿ ಕಾಲೇಜುಗಳಲ್ಲಿಯೂ ಸಹ ಬೋಧನಾ ಶುಲ್ಕ ಪಾವತಿಸದೇ ಇರುವಂತಹ ಸಂಗತಿಗಳು ಇವೆ. ಮೊದಲು ಬೋಧನಾ ಶುಲ್ಕವನ್ನು ಏನು ಪಾವತಿಸುತ್ತಿದ್ದರು ಅದನ್ನು ಪೂರ್ಣವಾಗಿ ಸರ್ಕಾರವೇ ತೆಗೆದುಕೊಳ್ಳುತ್ತಿತ್ತು. ಅನಂತರ ಆಡಳಿತ ಮಂಡಳಿಯವರು ಇಷ್ಟು ............

**ಸಭಾಪತಿಯವರು:-** ಅದರ ಬಗ್ಗೆ ಸವಿಸ್ತಾರವಾದ ಚರ್ಚೆ ಬೇಡ. ಪಾಲಿಟೆಕ್ನಿಕ್ ಬಗ್ಗೆ ಮಾತ್ರ ಮಾತಾನಾಡಿ.

**ಶ್ರೀ ಎಸ್.ಆರ್. ಪಾಟೀಲ್(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಪಾಲಿಟೆಕ್ನಿಕ್‌ಗೆ ಸಂಬಂಧಪಟ್ಟಂತೆ ಮಾತ್ರ ಮಾನ್ಯ ಸದಸ್ಯರು ಉತ್ತರವನ್ನು ಬಯಸಿದ್ದಾರೆ. ಅದು ಅಷ್ಟಕ್ಕೆ ಸೀಮಿತವಾಗಿರಲಿ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ತಾವು ಎಂದೂ ಅವಕಾಶವನ್ನು ಮಾಡಿಕೊಟ್ಟಿಲ್ಲ.

**Mr CHAIRMAN:-** Let the Minister come back to the House with the information .

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ವೇತನ ಬಿಡುಗಡೆಯ ಬಗ್ಗೆ ಮಾನ್ಯ ಸಚಿವರು ಸೂಚನೆ ಕೊಡಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

**ಶ್ರೀ ಆರ್.ವಿ. ದೇಶಪಾಂಡೆ:-** ಸನ್ಮಾನ್ಯ ಸಭಾಪತಿಯವರೇ, ಯಾರಿಗೆ ವೇತನ ಸಿಗಬೇಕು ಅವರಿಗೆ ವೇತನ ಸಿಗಲೇಬೇಕು. ಆ ರೀತಿ ನಿರ್ದೇಶನ ಕೊಡುವುದು ನಮ್ಮ ಜವಾಬ್ದಾರಿ ಆಗಿದೆ.

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ಸರ್ಕಾರ ವೇತನ ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡಬೇಕಾಗಿದೆ. ಅವರುಗಳ ವೇತನ ಬಿಡುಗಡೆಯಾಗಿಲ್ಲ.

**ಶ್ರೀ ಆರ್.ವಿ. ದೇಶಪಾಂಡೆ:-** ಸನ್ಮಾನ್ಯ ಸಭಾಪತಿಯವರೇ, ನನ್ನ ಗಮನಕ್ಕೆ ಈ ವಿಚಾರ ಬಂದಾಗ ತಕ್ಷಣ ನಾನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರಿಗೆ ನಿರ್ದೇಶನವನ್ನು ನೀಡಿ ವರದಿ ಕಳುಹಿಸಿಕೊಡುವುದಕ್ಕೆ ಹೇಳಿದ್ದೇನೆ ಮತ್ತು ಸೂಕ್ತವಾಗಿರುವಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಸೂಕ್ತವಾದ ಕ್ರಮ ಎಂದರೆ ಯಾರಿಗೆ ಸಂಬಳವನ್ನು ನೀಡಿಲ್ಲ, ಅದನ್ನು ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಎಂದು ಅರ್ಥ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಎಷ್ಟು ತಿಂಗಳುಗಳಿಂದ ಅಲ್ಲಿನ ಸಿಬ್ಬಂದಿಗಳಿಗೆ ವೇತನ ಬಾಕಿ ಇದೆ ಎನ್ನುವುದನ್ನು ಅವರು ತಿಳಿಸಬೇಕಾಗಿದೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಸುಮಾರು ಆರು ತಿಂಗಳುಗಳಿಂದ ವೇತನವನ್ನು ಬಿಡುಗಡೆ ಮಾಡಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಆರು ತಿಂಗಳ ಹಿಂದೆ ಅವರ ಪಕ್ಷದ ಸರ್ಕಾರವೇ ಅಧಿಕಾರದಲ್ಲಿ ಇತ್ತು. ಆಗ ಇವರು ಎಲ್ಲಿಗೆ ಹೋಗಿದ್ದರು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ತಾವು ಉನ್ನತ ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ, ಇದೇ ಸದನದಲ್ಲಿ ಪಾಲಿಟೆಕ್ನಿಕ್ ಸಿಬ್ಬಂದಿಗಳಿಗೆ ಎಲೆಕ್ಟ್ರಾನಿಕ್ ಚೆಕ್ ಮೂಲಕ ವೇತನ ಕೊಡಬೇಕೆಂದು ಆದೇಶವನ್ನು ಹೊರಡಿಸಲಾಗಿತ್ತು.

**ಸಭಾಪತಿಯವರು:–** ಮಾನ್ಯ ಸಚಿವರು ವರದಿಯನ್ನು ಪಡೆದುಕೊಂಡು ಹೇಳಿಕೆ ಮಾಡುತ್ತಾರೆ. ಆಗ ಬೇಕಾದರೆ ಚರ್ಚೆ ಮಾಡಬಹುದು. ಈಗ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ತಮ್ಮ ವಿಷಯವನ್ನು ಪ್ರಸ್ತಾಪ ಮಾಡಬೇಕು.

**ಈ) ಸುಳ್ಯ ತಾಲ್ಲೂಕಿನ ಅಲೆಟ್ಟಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಐದು ಜನ ಶಿಕ್ಷಕರನ್ನು ಜಿಲ್ಲಾ ಪಂಚಾಯತ್ ನಿರ್ಣಯದಂತೆ ಅಮಾನತ್ತುಗೊಳಿಸಿರುವ ಬಗ್ಗೆ.**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಅಲೆಟ್ಟಿ ಎಂಬ ಗ್ರಾಮದ ಸರಕಾರಿ ಪ್ರೌಢಶಾಲೆಯ ಎಲ್ಲಾ ಐದು ಶಿಕ್ಷಕರನ್ನು ಜಿಲ್ಲಾ ಪಂಚಾಯತ್ ನಿರ್ಣಯದಂತೆ ಅಮಾನತ್ತುಗೊಳಿಸಲಾಗಿದ್ದು, ಶಾಲೆಯ ವಿದ್ಯಾರ್ಥಿಗಳ ಪರಿಸ್ಥಿತಿ ವರ್ಷಾರಂಭದಲ್ಲೇ ಅತಂತ್ರವಾಗಿದೆ. ಆ ಶಾಲೆಯಲ್ಲಿ

ಪೂರ್ಣಾವಧಿ ಮುಖ್ಯೋಪಾಧ್ಯಾಯರಿಲ್ಲದೆ ಆ ಶಾಲೆಯ ಆಡಳಿತ ಕೆಟ್ಟು ಹೋಗಿದ್ದು, ಪರಿಸ್ಥಿತಿ ನಿಯಂತ್ರಣ ಇಲ್ಲದೇ ಎಲ್ಲಾ ಸಹ ಶಿಕ್ಷಕರನ್ನು ಅಮಾನತ್ತುಗೊಳಿಸುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಜಿಲ್ಲೆಯಲ್ಲಿರುವ 116 ಪ್ರೌಢಶಾಲೆಗಳಲ್ಲಿ 86 ಜನ ಮುಖ್ಯೋಪಾಧ್ಯಾಯರ ಕೊರತೆ ಇದ್ದು ಜಿಲ್ಲೆಯ ಶೈಕ್ಷಣಿಕ ಆಡಳಿತ ಮಟ್ಟ ಸುಧಾರಣೆ ಮಾಡುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಖಾಲಿ ಇರುವ ಎಲ್ಲಾ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಈ ಕೂಡಲೇ ತುಂಬಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

**ಸಭಾಪತಿಯವರು:–** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರೇ, ತಮ್ಮ ಬಳಿ ಉತ್ತರ ಸಿದ್ಧವಾಗಿದ್ದರೆ ಉತ್ತರವನ್ನು ಕೊಡಬಹುದು. ಇಲ್ಲದಿದ್ದರೆ, ನಾಳೆ ಅಥವಾ ನಾಡಿದ್ದು ಉತ್ತರವನ್ನು ನೀಡಬಹುದು.

**ಶ್ರೀ ಕಿಮ್ಮನೆ ರತ್ನಾಕರ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನಾಳೆ ಉತ್ತರ ಕೊಡುತ್ತೇನೆ.

**ಸಭಾಪತಿಯವರು:–** ಈಗ ಗಮನ ಸೆಳೆಯುವ ಸೂಚನೆ.

**ಶ್ರೀ ಯಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಾನು ಒಂದು ವಿಶೇಷ ಪ್ರಸ್ತಾವನೆಯ ನೋಟೀಸ್‌ನ್ನು ಕಳುಹಿಸಿಕೊಟ್ಟಿದ್ದೆ.

**ಸಭಾಪತಿಯವರು:–** ಅದನ್ನು ನಾನು ನೋಡಿದೆ. ಅದು ಬಹಳ ಹಳೆಯ ವಿಚಾರವಾಗಿದೆ. ಅದನ್ನು ಹೇಗೆ ವಿಶೇಷ ಪ್ರಸ್ತಾವನೆಯ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ನೀವೇ ಹೇಳಿ.

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ನಾನೂ ಸಹ ಒಂದು ವಿಶೇಷ ಪ್ರಸ್ತಾವನೆಯನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ತಾವು ಪ್ರಸ್ತಾಪ ಮಾಡಿರುವಂತಹ ವಿಚಾರ ಹಳೆಯ ವಿಚಾರವಾಗಿದೆ. ಅದು ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿಯೂ ಪ್ರಸ್ತಾಪವಾಗಿದೆ.

**ಶ್ರೀ ಪುಟ್ಟಣ್ಣ:-** ಸನ್ಮಾನ್ಯ ಸಭಾಪತಿಯವರೇ, ಇದು ಹೇಗೆ ಹಳೆಯ ವಿಚಾರವಾಗುವುದಕ್ಕೆ ಸಾಧ್ಯ? ಮೊನ್ನೆ ದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ನಿನ್ನೆ ನಾನು ನೋಟೀಸ್ ಕೊಟ್ಟಿದ್ದೆ. ತಾವು ನಿನ್ನೆ ಅವಕಾಶವನ್ನು ಕೊಟ್ಟಿಲ್ಲ. ಅದಕ್ಕಾಗಿ ನಾನು ಈ ದಿನ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಆ ವಿಚಾರ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ಬಂದಿದೆ. ನನ್ನ ಹತ್ತಿರ ನೋಟೀಸ್ ಇದೆ. ಅದನ್ನು ಸರ್ಕಾರ ಕಳುಹಿಸಿಕೊಟ್ಟಿದ್ದೇನೆ. ಉತ್ತರ ಬರುತ್ತಿದೆ. ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ಆ ವಿಷಯ ಪ್ರಸ್ತಾಪವಾದಾಗ ನಾನು ನಿಮಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಪುಟ್ಟಣ್ಣ:-** ಸನ್ಮಾನ್ಯ ಸಭಾಪತಿಯವರೇ, ನಾನು ವಿಶೇಷ ಪ್ರಸ್ತಾವದ ಅಡಿಯಲ್ಲಿ ವಿಷಯವನ್ನು ಓದುತ್ತೇನೆ. ಸರ್ಕಾರ ಉತ್ತರವನ್ನು ಕೊಡಲಿ. ಎಷ್ಟು ಗಮನಸೆಳೆಯುವ ಸೂಚನೆಗಳಿಗೆ ಉತ್ತರ ಬರುತ್ತಿದೆ, ಎಷ್ಟಕ್ಕೆ ಬರುತ್ತಿಲ್ಲ ಎನ್ನುವುದು ತಮಗೇ ಗೊತ್ತಿದೆ. ಆದ್ದರಿಂದ ತಾವು ದಯಮಾಡಿ ಅವಕಾಶವನ್ನು ನೀಡಿದರೆ ನಾನು ಇದನ್ನು ಓದುತ್ತೇನೆ. ಅವರು ಉತ್ತರ ಕೊಡಲಿ.

**ಸಭಾಪತಿಯವರು:-** ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಗಮನ ಸೆಳೆಯುವ ಸೂಚನೆಯಡಿಯಲ್ಲಿ ಯಾರಾದರೂ ಒಂದು ವಿಚಾರದ ಬಗ್ಗೆ ಚರ್ಚೆಗೆ ನೋಟೀಸ್ ಕೊಟ್ಟಿದ್ದರೆ ಅದೇ ವಿಚಾರದ ಮೇಲೆ ಶೂನ್ಯವೇಳೆಯಲ್ಲಿ ಅಥವಾ ವಿಶೇಷ ಪ್ರಸ್ತಾವನೆಯ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ನೀಡಿದರೆ, ಯಾರು 3 ದಿನ ಅಥವಾ 5 ದಿನಗಳ ಹಿಂದೆ ಗಮನಸೆಳೆಯುವ ಸೂಚನೆಯ ನೋಟೀಸ್‌ನ್ನು ಕಳುಹಿಸಿದ್ದರು ಅವರಿಗೆ ನಾನು ಅನ್ಯಾಯ ಮಾಡಿದಂತಾಗುತ್ತದೆ.

**ಶ್ರೀ ಪುಟ್ಟಣ್ಣ:-** ಸನ್ಮಾನ್ಯ ಸಭಾಪತಿಯವರೇ, ಆ ಗಮನಸೆಳೆಯುವ ಸೂಚನೆ ಪ್ರಸ್ತಾಪವನ್ನು ನಾನೇ ಕೊಟ್ಟಿರುವುದು.

**ಸಭಾಪತಿಯವರು:–** ನೀವಲ್ಲ, ಬೇರೆ ಯಾರೋ ಕಳುಹಿಸಿಕೊಟ್ಟಿರುತ್ತಾರೆ.

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಆ ಗಮನಸೆಳೆಯುವ ಸೂಚನೆಯನ್ನು ನಾನೇ ಕಳುಹಿಸಿಕೊಟ್ಟಿರುವುದು.

**ಸಭಾಪತಿಯವರು:–** ಸರಿ ಹಾಗಾದರೆ, I Will try to give you scope in the Calling Attention.

**ಶ್ರೀ ಯಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಾನು ಕಳುಹಿಸಿಕೊಟ್ಟಿರುವ ನೋಟೀಸ್‌ನಲ್ಲಿರುವ ವಿಚಾರವನ್ನು ಏತಕ್ಕಾಗಿ ವಿಶೇಷ ಪ್ರಸ್ತಾವನೆಯ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಆ ವಿಚಾರ ತುಂಬಾ ಹಳೆಯ ವಿಚಾರವಾಗಿದೆ.

**ಶ್ರೀ ಯಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಇದು ನಿನ್ನೆ ರಾತ್ರಿ ನಡೆದಿರುವಂತಹ ಘಟನೆಯಾಗಿದೆ. ನಾನು ಈ ದಿನ ಬೆಳಿಗ್ಗೆ 9.15ಕ್ಕೆ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ನಿನ್ನೆ ರಾತ್ರಿ ವಿಧಾನಸೌಧದ ಮೂರನೆಯ ಮಹಡಿಯಲ್ಲಿ ಅರಣ್ಯ ಸಚಿವರಿಗೆ ಕೊಟ್ಟಿರುವಂತಹ ಕೊಠಡಿ ಸಂಖ್ಯೆ 304–305ನ್ನು ಒಡೆದು ಹಾಕಿ ಚೂರು ಮಾಡಿ ವಿಶ್ವ ಪಾರಂಪರಿಕ ಕಟ್ಟಡವನ್ನು ನಾಶ ಮಾಡಿರುವ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ.

**ಸಭಾಪತಿಯವರು:–** ನಾನು ಅದನ್ನು ನೋಡಿದ್ದೇನೆ. ಈ ವಿಷಯವನ್ನು ವಿಶೇಷ ಪ್ರಸ್ತಾವದ ಅಡಿಯಲ್ಲಿ ಪ್ರಸ್ತಾಪ ಮಾಡಬೇಕೆಂದು ಆಸೆಪಟ್ಟರೆ, ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಕೆಲವು ವಿಷಯಗಳನ್ನು ನಾವು ಬೇರೆ ದೃಷ್ಟಿಕೋನ ಇಟ್ಟುಕೊಂಡು ನೋಡಬೇಕಾಗುತ್ತದೆ.

(12.00 ಗಂಟೆ)

ನಾವು ಎಲ್ಲದಕ್ಕೂ ಸರ್ಕಾರ ಮಾಡಿದ್ದು ಅಥವಾ ಯಾರೋ ಮಾಡಿದ್ದು ಎಲ್ಲವೂ ತಪ್ಪು ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಅನುಕೂಲದ ದೃಷ್ಟಿಯಿಂದ ಕೆಲವು low bearing ಅಲ್ಲದೇ ಇರತಕ್ಕಂಥ ವಾಸ್ತವವನ್ನು ತೆಗೆದರೆ....

**ಶ್ರೀ ಯಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀಮಾನ್ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅವರ ರಾಜಕೀಯ ಕಾರ್ಯದರ್ಶಿಯವರಿಗೆ ಕೊಠಡಿಯನ್ನು ಕೊಟ್ಟಾಗ, ಅದನ್ನು ಒಡೆದು ಹಾಕಿದ್ದರೆ ಬಗ್ಗೆ ಈ ಸದನದಲ್ಲಿ ಚರ್ಚೆಗೆ ಬಂತು. ಆ ವಿಷಯ ಚರ್ಚೆಗೆ ಬಂದ ನಂತರ ನಾವೇನು ತೀರ್ಮಾನವನ್ನು ತೆಗೆದುಕೊಂಡೆವು. ವಿಧಾನಸೌಧ ವಿಶ್ವ ಪಾರಂಪರಿಕ ಕಟ್ಟಡ. ಇಲ್ಲಿ ಸಚಿವರುಗಳಿಗೆ ಕೊಠಡಿಗಳನ್ನು ಕೊಡುತ್ತಿದ್ದಾರೆ. ಈ ಹಿಂದೆ 1952ನೇ ಇಸವಿಯಿಂದ ಇಲ್ಲಿಯವರೆವಿಗೂ ಇದು 14ನೇ ವಿಧಾನ ಸಭೆ. ಬಹಳಷ್ಟು ಜನ ಮಂತ್ರಿಗಳು, ಬಹಳಷ್ಟು ಜನ ಹಿರಿಯರು ಬಂದು ಹೋಗಿದ್ದಾರೆ.

**ಸಭಾಪತಿಯವರು:–** ಅದರ ಬಗ್ಗೆ ಚರ್ಚೆ ಮಾಡುತ್ತಾ ಹೋದರೆ......

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಹಾಗಾದರೆ ವಿಧಾನಸೌಧವನ್ನು ಒಡೆಯಲಿಕ್ಕೆ ಬಿಡಬೇಕಾ? ಇದು ನಿಮ್ಮ ಚಿಂತನೆಯಾದರೆ,...

**ಸಭಾಪತಿಯವರು:–** ಇದು ನನ್ನ ಚಿಂತನೆಯಲ್ಲ.

**ಶ್ರೀ ಯಂ.ಸಿ. ನಾಣಯ್ಯ:–** ನಾನು ಹೇಳುತ್ತೇನೆ. ಯಾರ್ಯಾರಿಗೆ ವಿಧಾನಸೌಧದಲ್ಲಿ ಕೊಟ್ಟಿದ್ದಾರೆಯೋ ಅವರೆಲ್ಲರ ಆ ಕೊಠಡಿಗಳನ್ನು ಒಡೆದು ಚೂರು ಮಾಡಲಿ. ವಿಧಾನಸೌಧ ಪಾರಂಪರಿಕ ಕಟ್ಟಡ ಎಂದು ಹೇಳುವಂಥ ಹೆಸರೇ ಹೊರಟು ಹೋಗಲಿ. ಯಾರು ಏನು ಬೇಕಾದರೂ ಮಾಡಿಕೊಳ್ಳಲಿ

ಎನ್ನುವಂಥ ಪರಿಸ್ಥಿತಿ ನಿರ್ಮಾಣವಾದರೆ ನಾವು ಎಲ್ಲಿಗೆ ತಲುಪುತ್ತೇವೆ ಎನ್ನುವುದನ್ನು ಯೋಚನೆ ಮಾಡಬೇಕು.

**ಸಭಾಪತಿಯವರು:-** ಒಂದು ವಿಷಯವನ್ನು ಹೇಳುತ್ತೇನೆ. ಮೊದಲನೆಯದಾಗಿ ಈ ಕಟ್ಟಡವನ್ನು ನಿರ್ಮಾಣ ಮಾಡಿ 57 ವರ್ಷಗಳಾಗಿವೆ. ಒಂದು ಕಟ್ಟಡ ಪಾರಂಪರಿಕ ಕಟ್ಟಡವಾಗಬೇಕಾದರೆ ಅದಕ್ಕೆ 100 ವರ್ಷಗಳಾಗಿರಬೇಕು ಎಂಬುದು ಮೊದಲನೆಯ ಅಂಶ. ಹಾಗಾಗಿ ಆ 'ಪಾರಂಪರಿಕ ಕಟ್ಟಡ' ಎನ್ನುವ ಪದ ಈ ಕಟ್ಟಡಕ್ಕೆ ಅನ್ವಯಿಸುವುದಿಲ್ಲ. ಆದರೆ ನಿಮ್ಮ ಭಾವನೆಗಳನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಆ ಭಾವನೆಗಳನ್ನು ವ್ಯಕ್ತ ಮಾಡುವುದಕ್ಕೆ ಬೇರೆ ವೇದಿಕೆಯನ್ನು ಉಪಯೋಗಿಸಿಕೊಳ್ಳೋಣ. ಇಲ್ಲಿ ಪರ ಅಥವಾ ವಿರೋಧದ ಬಗ್ಗೆ ಹೇಗೆ ಚರ್ಚೆಮಾಡಲು ಸಾಧ್ಯ?

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾನು ಈ ನೋಟಿಸ್‌ನ್ನು ಓದುತ್ತೇನೆ. ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಬಂದು ಅದಕ್ಕೆ ಉತ್ತರವನ್ನು ಹೇಳಲಿ.

**ಸಭಾಪತಿಯವರು:-** ಮಾನ್ಯ ನಾಣಯ್ಯನವರೇ, ನೀವು ಹಿರಿಯರು. ನೀವು ಈ ನೋಟಿಸ್‌ನ್ನು ಓದಲೇಬೇಕೆಂದು ಒತ್ತಾಯ ಮಾಡಿದರೆ ನಾನದಕ್ಕೆ ಅವಕಾಶವನ್ನು ಕೊಡುತ್ತೇನೆ. ಓದಿ, ನಾನೇನು ಮಾಡುವುದಕ್ಕಾಗುವುದಿಲ್ಲ. ಕೆಲವು ಸಾರಿ ನಾವೇನು ಮಾಡುವುದಕ್ಕಾಗುವುದಿಲ್ಲ. ಹಿರಿಯರಿಗೊಂದು ಅವಕಾಶವನ್ನು ಕೊಡಬೇಕಾಗುತ್ತದೆ. ಅವರದನ್ನು ಓದಲಿ ಬಿಡಿ.

**Sri. S.R. PATIL:-** Sir, It is not in good taste ಎನ್ನುವಂಥ ಭಾವನೆಯಲ್ಲಿ ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡೋಣ.

**ಶ್ರೀ ಯಂ.ಸಿ. ನಾಣಯ್ಯ:-** ಅಧಿವೇಶನ ನಡೆಯುವುದು ಇನ್ನೆರಡು ದಿವಸಗಳು ಮಾತ್ರ. ಬೇರೆ ರೂಪದಲ್ಲಿ ಚರ್ಚೆ ಮಾಡಲು ಆಗದಿದ್ದರೆ ಹೇಗೆ. ನನ್ನದೊಂದು ಖಾಸಗಿ ವಿಧೇಯಕ ಎರಡು ವರ್ಷಗಳ ಹಿಂದೆ ಚರ್ಚೆಯಾಗಿ ಇಲ್ಲಿಯವರೆವಿಗೂ ಬಂದಿಲ್ಲ... ಎಲ್ಲರೂ ವಿಧಾನಸೌಧದಲ್ಲಿರುವ

ಕೊಠಡಿಗಳನ್ನೆಲ್ಲಾ ಒಡೆದು ನಿರ್ನಾಮ ಮಾಡಿಬಿಡಲಿ. ವಿಧಾನಸೌಧ ಎಂಬ ಕಟ್ಟಡ ಹೊಡೆದು ಹೋಗಲಿ.

**ಶ್ರೀ ಎಸ್.ಆರ್. ಪಾಟೀಲ್:-** ವಿಧಾನಸೌಧವನ್ನು ಒಡೆದು ಚೂರು ಮಾಡಲಿ ಎಂದು ನಾವು ಹೇಳುವವರಲ್ಲ.

**ಶ್ರೀ ಅಲ್ಲಮಪ್ರಭು ಪಾಟೀಲ್:-** ವಿಧಾನಸೌಧವನ್ನು ಒಡೆಯಲಿಕ್ಕೆ ಯಾರು ಬಿಡುವುದಿಲ್ಲ

**ಶ್ರೀ ಯಂ.ಸಿ. ನಾಣಯ್ಯ:-** ವಿಧಾನಸೌಧದ ವಿನ್ಯಾಸವನ್ನು ಹಾಳು ಮಾಡಿದರೆ ಇನ್ನೇನು ಹೇಳಲಿ?

**ಸಭಾಪತಿಯವರು:-** ಈ ವಿಚಾರದ ಬಗ್ಗೆ ಚರ್ಚೆಗೆ ನಾನು ಅವಕಾಶವನ್ನು ಕೊಡುವುದಿಲ್ಲ. ಮಾನ್ಯ ನಾಣಯ್ಯನವರು ಆ ನೋಟೀಸ್ ಅನ್ನು ಓದಲಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಒಂದು ಕೆಲಸ ಮಾಡಿ. ಎಲ್ಲವನ್ನೂ ಒಡೆದು ಹಾಕಿ. ಅವರಿಗೆ ಮನೆಯನ್ನು ಇಲ್ಲಿಯೇ ಕೊಡಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಪುಟ್ಟಸ್ವಾಮಿಯವರೆ, ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳಿ.

**ಸಭಾಪತಿಯವರು:-** ಮಾನ್ಯ ನಾಣಯ್ಯನವರೇ, ನಿಮ್ಮ ನೋಟಿಸ್‌ನ್ನು ಓದಿ. I allow you to read this notice.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಿಮ್ಮ ಮನಸ್ಸಿಗೆ ಅಸಮಾಧಾನವಾಗಿದ್ದರೆ ಕ್ಷಮಿಸಬೇಕು. ಬಹುಶಃ ಈ ಕಟ್ಟಡವನ್ನು ಮಂತ್ರಿಗಳಿಗೆ....

**ಸಭಾಪತಿಯವರು:-** ಮಾನ್ಯ ನಾಣಯ್ಯನವರೆ, ಭಾಷಣ ಮಾಡಬೇಡಿ. ನಾನು ನಿಮಗೆ ಓದಲು ಅವಕಾಶ ಮಾಡಿಕೊಟ್ಟಿದ್ದೇನೆ. Please read.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಿಮ್ಮ ಮನಸ್ಸಿಗೆ ಅಸಮಾಧಾನ ಬಂತು ಎಂದು ಗೊತ್ತಾದ ಮೇಲೆ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿ ಚರ್ಚೆ ಮಾಡುವುದಿಲ್ಲ. ನಾಳೆಯ ದಿವಸ ಸಾರ್ವಜನಿಕರು ಇದರ ಬಗ್ಗೆ ಪ್ರಸ್ತಾಪವನ್ನು ಮಾಡಲಿ. ರಕ್ಷಣೆ ಮಾಡಬೇಕಾದ ನೀವೇ ಇದಕ್ಕೆ ರಕ್ಷಣೆ ಕೊಡಲಿಕ್ಕೆ ತಯಾರಾಗಿಲ್ಲದಿದ್ದರೆ ಮತ್ತೆ ಇನ್ನೇನು ಹೇಳಬೇಕು ಹೇಳಿ.

**ಸಭಾಪತಿಯವರು:–** ಆಯಿತು. ನೀವು ಕೊಟ್ಟಿರುವ ನೋಟೀಸ್‌ನ್ನು ಓದುತ್ತೀರೀ ಇಲ್ಲವೋ ಎಂಬುದನ್ನು ಹೇಳಿ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಿಮ್ಮ ಮನಸ್ಸಿಗೆ ಅಸಮಾಧಾನವಾಗಿರುವ ಹಿನ್ನೆಲೆಯಲ್ಲಿ ನಾನಿದನ್ನು ಓದುವುದಿಲ್ಲ.

**ಸಭಾಪತಿಯವರು:–** ಆಯಿತು. ಹಾಗಾದರೆ ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಎಲ್ಲಾ ಮಂತ್ರಿಗಳು ಈ ತರಹ ಮಾಡಲಿಕ್ಕೆ ಅವಕಾಶವಿದೆ ಎನ್ನುವಂಥಾದ್ದು ಸರ್ಕಾರದಿಂದ ಆಗಲಿ. ಅವರು ಮಾಡಿಕೊಂಡು ಹೋಗಲಿ. ನಿಮಗೆ ಅಸಮಾಧಾನವಾಗಿದ್ದರೆ ನಾನೇಕೆ ಈ ನೋಟಿಸ್‌ನ್ನು ಓದಲಿ. ನಾವು ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳೋಣ.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದೊಂದು ಗಂಭೀರವಾದಂಥ ವಿಚಾರ. ಏಕೆಂದರೆ ವಿಧಾನಸೌಧ ಎನ್ನುವುದು ರಾಷ್ಟ್ರವ್ಯಾಪ್ತಿಯಾಗಿ ಜಗತ್ತಿನಲ್ಲಿಯೇ ಒಂದು ಅದ್ಭುತವಾದಂಥ ಕಟ್ಟಡವಾಗಿರುವಂಥದ್ದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಕಟ್ಟಡಕ್ಕೆ ಯಾವುದೇ ರೀತಿಯಲ್ಲಿ ಬದಲಾವಣೆ ಮತ್ತೊಂದನ್ನು ಮಾಡಿದರೆ..... ಮಾನ್ಯ ನಾಣಯ್ಯನವರು ಈ ಬಗ್ಗೆ ಕೊಟ್ಟಿರುವ ತಮ್ಮ ನೋಟಿಸ್‌ನ್ನು ಓದುತ್ತಾರೆ. ನಾಣಯ್ಯನವರೇ ನೀವು ನೋಟಿಸ್‌ನ್ನು ಓದಿ.

**ಶ್ರೀ ಆರ್.ವಿ. ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅವರು ನೋಟಿಸ್ ಓದುವುದಿಲ್ಲ. ಪತ್ರಿಕೆಗಳಲ್ಲಿ ಪ್ರಚಾರವನ್ನು ತೆಗೆದುಕೊಳ್ಳಬೇಕು ಎನ್ನುವುದು ಅವರ ಉದ್ದೇಶವಾಗಿದೆ. ಅದಕ್ಕಾಗಿ ಅವರು ಮಾತನಾಡಿದ್ದಾರೆ. ಅವರ ಉದ್ದೇಶ ಪೂರೈಸಿದೆ, ಇನ್ನು ಅವರು ನೋಟೀಸ್ ಓದುವುದಿಲ್ಲ. ನಿಮ್ಮ ಮಾತಿಗೆ ಕಿಮ್ಮತ್ತು ಬೆಲೆ ಎಂದ ಮೇಲೆ ಸದನದಲ್ಲಿ ಯಾರು ಏನು ಬೇಕಾದರೂ ಮಾಡಬಹುದು. ಯಾರು ಏನು ಬೇಕಾದರೂ ಮಾತನಾಡಬಹುದೇ? (ಗೊಂದಲ) ಸಭಾಪತಿಯವರ ಪೀಠದಿಂದ ಆದೇಶವನ್ನು ಮಾಡಿದ ಮೇಲೆ ಆಗಲ್ಲ ಎಂದರೆ.....

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇದು ಸರ್ಕಾರಿ ಕಟ್ಟಡ, ಸ್ವಂತ ಕಟ್ಟಡವಲ್ಲ. ದಿನನಿತ್ಯ ಬರುವವರು ಅದನ್ನು ಒಡೆಯಬೇಕು ಎಂದರೆ ಹೇಗೆ? ಪ್ರಚಾರಕ್ಕಾಗಿ ಎಂದು ಹೇಳುತ್ತಾರೆ.

**ಸಭಾಪತಿಯವರು:–** ಮಾನ್ಯ ವೆಂಕಟೇಶ್‌ರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಆರ್.ವಿ. ವೆಂಕಟೇಶ್:–** ಒಬ್ಬೊಬ್ಬರಿಗೆ ಒಂದೊಂದು ನ್ಯಾಯವಲ್ಲ. ಎಲ್ಲರಿಗೂ ಒಂದೇ ರೀತಿಯ ನ್ಯಾಯ ಇರಬೇಕು.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಪ್ರಚಾರಕ್ಕೋಸ್ಕರ ಮಾತನಾಡುತ್ತಿಲ್ಲ. ದಯಮಾಡಿ ಅವರು ಆ ಪದವನ್ನು ವಾಪಸ್ ತೆಗೆದುಕೊಳ್ಳಬೇಕು.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಹಿರಿಯ ಸದಸ್ಯರು. 'ಪ್ರಚಾರಕ್ಕೋಸ್ಕರ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ' ಎಂದು ಹೇಳಬಾರದು. ಇದು ಸರಿ ಅಲ್ಲ.

**ಶ್ರೀ ಆರ್.ವಿ. ವೆಂಕಟೇಶ್:-** ನಿಮ್ಮ ಸರಕಾರದ ಅಧಿಕಾರ ಅವಧಿಯಲ್ಲಿ ಸಹ ಇದು ನಡೆದಿದೆ. ಇವತ್ತು ಆಗಿರುವುದರ ಬಗ್ಗೆ ಮಾತ್ರ ಹೇಳುತ್ತಿದ್ದಾರೆ.

**ಸಭಾಪತಿಯವರು:-** ನೀವು ಇದರ ಬಗ್ಗೆ ಏಕೆ ಚರ್ಚೆ ಮಾಡುತ್ತೀರೀ? ನಾನು ಚರ್ಚೆಗೆ ಅವಕಾಶ ಮಾಡಿಕೊಟ್ಟಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಮಾನ್ಯ ನಾಣಯ್ಯನವರೆ, ನೀವು ನೋಟಿಸ್‌ನ್ನು ಓದುವುದಾದರೆ ನಾನದಕ್ಕೆ ಅವಕಾಶವನ್ನು ಕೊಡುತ್ತೇನೆ. ಓದಿ, ನೀವು ಓದುವುದಿಲ್ಲವೆಂದರೆ ನಾನು ಮುಂದಕ್ಕೆ ಹೋಗುತ್ತೇನೆ. ಏಕೆಂದರೆ, ಈ ವಿಷಯದ ಬಗ್ಗೆ ಚರ್ಚೆಗೆ ಒಂದು ವಿಧೇಯಕದಲ್ಲಿ ನೀವೇ ಈ ವಿಚಾರವನ್ನು ಕೊಟ್ಟಿದ್ದೀರಿ. ಹಿಂದೊಂದು ಸಾರಿ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿದೆ. ಹಾಗಾಗಿ ನಾನದನ್ನು ನೋಡಿದೆ. ಹಿಂದೊಮ್ಮೆ ಚರ್ಚೆಯಾಗಿರುವ ವಿಷಯವನ್ನೇ ಪುನಃ ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ ಇವತ್ತು ಈ ವಿಷಯವನ್ನು ಚರ್ಚೆ ಮಾಡುವುದು ಬೇಡವೆಂದು ಹೇಳಿದ್ದೆ. ನೀವು ಇಲ್ಲ ಈ ವಿಚಾರ ಬಹಳ ಪ್ರಮುಖವಾಗಿರುವುದು. ನಾನು ಓದುತ್ತೇನೆ ಎನ್ನುವುದಾದರೆ ನಾನು ನಿಮ್ಮ ಹಿರಿತನಕ್ಕೆ ಗೌರವವನ್ನು ಕೊಟ್ಟು ನಿಮ್ಮ ನೋಟಿಸ್‌ನ್ನು ಓದಿ ಎಂದು ಹೇಳಿದ್ದೇನೆ. ನೋಟಿಸ್‌ನ್ನು ಓದುವುದು ಬಿಡುವುದು ನಿಮಗೆ ಬಿಟ್ಟದ್ದು, ನೀವು ಅದನ್ನು ಓದುವುದಾದರೆ ಓದಿ. ಇಲ್ಲವೆಂದರೆ ನಾನು ಮುಂದಕ್ಕೆ ಹೋಗುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನನ್ನ ಖಾಸಗಿ ವಿಧೇಯಕ ಇಲ್ಲಿಯೇ ಇದೆ. ಎರಡು ವರ್ಷಗಳಿಂದ ಆ ವಿಧೇಯಕ ಚರ್ಚೆಗೆ ಬರಲಿಲ್ಲ. ತಾವು ಕೂಡ ಆ ಸಂದರ್ಭದಲ್ಲಿ ತಮ್ಮ ಸಮ್ಮತಿಯನ್ನು ವ್ಯಕ್ತ ಮಾಡಿರತಕ್ಕಂಥಾದ್ದು ಇದೆ.

**ಸಭಾಪತಿಯವರು:-** ಸದನವೇ ನಡೆಯದೇ ಹೋದರೆ ನಾನು ಹೇಗೆ ನಿಮಗೆ ಅವಕಾಶವನ್ನು ಕೊಡುವುದು ಹೇಳಿ.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾನದನ್ನು ಒಪ್ಪಿಕೊಳ್ಳುತ್ತೇನೆ. ನನ್ನ ಸ್ನೇಹಿತರು, 'ಪತ್ರಿಕೆಯ ಪ್ರಚಾರಕ್ಕೋಸ್ಕರ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ' ಎಂದು ಹೇಳಿದರು. ನಾನು ಸುಮಾರು 40 ವರ್ಷಗಳಿಂದ ರಾಜಕಾರಣದಲ್ಲಿದ್ದೇನೆ. ಪತ್ರಿಕೆಯ ಪ್ರಚಾರಕ್ಕೋಸ್ಕರ paid news ಕೊಟ್ಟು paid advertisement ಕೊಡುವಂಥ ಕೆಲವು ಜನ ಇರಬಹುದು.

**ಸಭಾಪತಿಯವರು:-** ಅದು sweeping remarks. ಅದು ಸರಿಯಲ್ಲ. ಬೇಡ ಅದನ್ನು ಬಿಟ್ಟುಬಿಡಿ.

**ಶ್ರೀ ಯಂ.ಸಿ. ನಾಣಯ್ಯ:-** ಇರಬಹುದು. Why did he make it? Let him withdraw that. I can make very serious allegations against him also.

**ಸಭಾಪತಿಯವರು:-** ಅದರ ಉದ್ದೇಶ ಬೇಡ. Don't try to defend. ಈಗ ಇದನ್ನು ಮುಗಿಸಬೇಕು ಎನ್ನುತ್ತೀರೋ ಮುಂದುವರೆಸಬೇಕು ಎನ್ನುತ್ತೀರಾ? ಮಾನ್ಯ ವೆಂಕಟೇಶ್‌ರವರೆ, ಅವರ ಮನಸ್ಸಿಗೆ ನೋವಾಗಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆ ಎಂದು ಹೇಳುವುದಕ್ಕೆ ಬರುವುದಿಲ್ಲವೇ. ನಾನು ಅದನ್ನು ಸಹ ಹೇಳಿಕೊಡಬೇಕೇ? ಅವರ ಮನಸ್ಸಿಗೆ ನೋವಾಗಿದ್ದರೆ ಆ ಪದವನ್ನು ವಾಪಸ್ ತೆಗೆದುಕೊಳ್ಳಿ.

**ಶ್ರೀ ಯಂ.ಸಿ ನಾಣಯ್ಯ:-** ಮಾನ್ಯ ಸಭಾಪತಿಯವರೇ, ನನಗೆ ಪ್ರಚಾರ ಬೇಕಿಲ್ಲ. ಪ್ರಚಾರಕ್ಕೋಸ್ಕರ ನಾನು ಹೇಳಲಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನಿಂದ ಈ ಸದನದ ಕಾಲ ವಿಳಂಬವಾಗಬಾರದು. ಯಾವುದೇ ರೀತಿಯಲ್ಲಿಯೂ ಅರ್ಥಪೂರ್ಣವಾದ ಚರ್ಚೆಯನ್ನು ನಡೆಸತಕ್ಕಂಥ ಸಂದರ್ಭದಲ್ಲಿ ನಾನು ಯಾವತ್ತು ನನ್ನ 8 ವರ್ಷಗಳ ಕಾಲಾವಧಿಯಲ್ಲಿ ಅಡ್ಡಿಪಡಿಸಿಲ್ಲ. ಆದರೆ ಇವತ್ತು ನೀವು ಸದನದ ಪೀಠದಿಂದ ಆದೇಶವನ್ನು ಮಾಡಿದ ಮೇಲೆ, ಅವರು

ಹಿರಿಯರೆ ಇರಲಿ, ಕಿರಿಯರೆ ಇರಲಿ. ಅದನ್ನು ಪಾಲಿಸಿಕೊಂಡು ಬರಬೇಕೆನ್ನುವ ಉದ್ದೇಶದಿಂದ ನಾನು ಹೇಳಿದ್ದೇನೆ. ಆ ತರಹ ಏನಾದರೂ ಅವರ ಮನಸ್ಸಿಗೆ ನೋವು ಮಾಡುವ ಹಾಗೆ, ಅವರು ಪ್ರಚಾರಕ್ಕಾಗಿ ಮಾಡುತ್ತಿರುವುದು ಎಂದು ನಾನು ಹೇಳಿದ್ದು ತಪ್ಪಾಗಿದ್ದರೆ ನನ್ನನ್ನು ಕ್ಷಮಿಸಿ.

**ಸಭಾಪತಿಯವರು:-** ಈ ವಿಷಯ ಮುಗಿಯಿತಲ್ಲ ಬಿಡಿ. ಮತ್ತೇಕೆ ಚರ್ಚೆ. ಚರ್ಚೆ ಮುಗಿದಿದೆ.

### 5. ವಿಧಾನಸೌಧದ ಕೊಠಡಿಯನ್ನು ಒಡೆದು ಮಾರ್ಪಡಿಸಿರುವ ಬಗ್ಗೆ.

**ಶ್ರೀ ಯಂ.ಸಿ. ನಾಣಯ್ಯ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಹಿಂದೆ ವಿಧಾನಸೌಧದಲ್ಲಿ ಕೊಠಡಿಗಳನ್ನು ಮಂತ್ರಿಗಳಿಗೆ ಮತ್ತು ರಾಜಕೀಯ ಕಾರ್ಯದರ್ಶಿಗಳಿಗೆ ಕೊಟ್ಟಂಥ ಸಂದರ್ಭಗಳಲ್ಲಿ ವಾಸ್ತು ಮತ್ತು ಇನ್ನಿತರ ನೆಪಗಳ ಆಧಾರದಲ್ಲಿ ಅಥವಾ ಜಾಗ ಚಿಕ್ಕದಾಗಿದೆ ಎಂದು ಅದರ ಬಾಗಿಲುಗಳನ್ನು ಹಾಗೂ ಗೋಡೆಗಳನ್ನು ಒಡೆದು ಹಾಕಿ ಅದನ್ನು ವಿಸ್ತಾರ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದ್ದು ಒಂದು ನಿದರ್ಶನ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾಗಿದ್ದವರು ಅವರಿಗೆ ಒದಗಿಸಿದಂಥ ಕೊಠಡಿ ಮತ್ತು ಆಪ್ತ ಕಾರ್ಯದರ್ಶಿಗಳ ಕೊಠಡಿಯ ಮಧ್ಯದಲ್ಲಿರತಕ್ಕಂಥ ಗೋಡೆಯನ್ನು ಒಡೆದು ಅದನ್ನು ವಿಸ್ತಾರ ಮಾಡಲು ಹೊರಟಾಗ ಬಹಳ ದೊಡ್ಡ ಪ್ರಮಾಣದಲ್ಲಿ ಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾಗಿ, ಆ ಸಂದರ್ಭದಲ್ಲಿ ಸದರಿ ವಿಷಯವನ್ನು ನಾವು ಸದನದಲ್ಲಿ ಪ್ರಶ್ನೆ ಮಾಡಿದ್ದರೂ ಸಹ ಈಗ ಮಾನ್ಯ ಸಚಿವರೊಬ್ಬರು ಕೊಠಡಿ ಸಂಖ್ಯೆ: 304–305ರ ಮಧ್ಯೆ ಇರತಕ್ಕಂಥ ಗೋಡೆಯನ್ನು ಒಡೆದು ವಿನ್ಯಾಸವನ್ನು ಬದಲು ಮಾಡಿ ಪಾರಂಪರಿಕ ಕಟ್ಟಡಕ್ಕೆ ಕುಂದನ್ನು ತರತಕ್ಕಂಥ ಕೆಲಸವನ್ನು ಮಾಡಿದ್ದಾರೆ. ನಾನು ಈ ಬಗ್ಗೆ ಕೆಲವು ವರ್ಷಗಳ ಹಿಂದೆ ಒಂದು ಖಾಸಗಿ ವಿಧೇಯಕವನ್ನು ಮಂಡಿಸಿದ್ದು ಇದು ಇನ್ನು ಚರ್ಚೆಯ ಹಂತದಲ್ಲಿರುತ್ತದೆ. ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯವರು ಸಹ ಅವರಿಗೆ ಒದಗಿಸಲಾದ ಎರಡು ಕೊಠಡಿಗಳ

ಮಧ್ಯೆ ಇದ್ದ ಗೋಡೆಯನ್ನು ಒಡೆಯಲು ಹೋದಾಗ ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಈ ಕೆಲಸವನ್ನು ಮಾಡಬಾರದೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದರೂ ಸಹ ಕೊಠಡಿ ಸಂಖ್ಯೆ: 304–305ರ ಕೊಠಡಿಗಳನ್ನು ಒಡೆದು ವಿನ್ಯಾಸವನ್ನು ಬದಲಾವಣೆ ಮಾಡಲಿಕ್ಕೆ ಹೊರಟಿರುವುದು ಅಕ್ಷಮ್ಯ ಮತ್ತು ಖಂಡನೀಯ. ಪಾರಂಪರಿಕ ಕಟ್ಟಡವನ್ನು ಉಳಿಸಿಕೊಳ್ಳಬೇಕೇ ವಿನಃ ಈ ರೀತಿ ಮಾಡಲಿಕ್ಕೆ ಅವಕಾಶವನ್ನು ಕೊಡಬಾರದು ಮತ್ತು ಈ ಒಂದು ಕೆಟ್ಟ ಸಂಪ್ರದಾಯವನ್ನು ತಡೆಯಲು ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯಿಸಲು ನಿಯಮ 330ಎ ಅಡಿಯಲ್ಲಿ ಈ ನೋಟಿಸ್‌ನ್ನು ನೀಡಲಾಗಿದೆ. ಈ ಬಗ್ಗೆ ನನ್ನ ಕಳಕಳಿ ಇಷ್ಟೆ. ತಕ್ಷಣವೇ ಆ ಕೆಲಸವನ್ನು ನಿಲ್ಲಿಸಬೇಕು. (ಗೊಂದಲ) ಎಲ್ಲರೂ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಇಡೀ ವಿನ್ಯಾಸವನ್ನೇ ಬದಲಾವಣೆ ಮಾಡಲು ಹೊರಟಿದ್ದಾರೆ.

**ಶ್ರೀ ಆರ್.ವಿ. ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರಾವಾಸೋದ್ಯಮ ಸಚಿವರು):–** ಮಾನ್ಯ ನಾಣಯ್ಯನವರು ಹೇಳುತ್ತಿರುವ ವಿಚಾರಗಳನ್ನು ಒಪ್ಪುತ್ತೇನೆ. ಈ ರೀತಿ ಆಗಬಾರದು, ಆಗುವುದಿಲ್ಲ. ಈ ಕುರಿತು ಸೂಕ್ತವಾದ ನಿರ್ದೇಶನ ಕೊಡಲಾಗುವುದು. ನೀವು ಯಾರ ಬಗ್ಗೆ ಹೇಳಿದಿರೋ ಆ ನಮ್ಮ ಗೌರವಾನ್ವಿತ ಸಚಿವರು ಕೆಳಮನೆಯಲ್ಲಿ, ಇದೇ ವಿಚಾರವನ್ನು ಮಾನ್ಯ ಯಡಿಯೂರಪ್ಪನವರು ಎತ್ತಿದಾಗ ಅದಕ್ಕೆ, 'ಆ ರೀತಿಯ ಆದೇಶವನ್ನು ನಾನು ಕೊಟ್ಟಿಲ್ಲ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ನಾಣಯ್ಯನವರು ಹೇಳುತ್ತಿರುವುದು ಸರಿಯಿದೆ. ಇನ್ನು ಮುಂದೆ ಇಂಥದ್ದು ಆಗುವುದಿಲ್ಲ ಎನ್ನುವ ಭರವಸೆಯನ್ನು ಸದನದಲ್ಲಿ ಕೊಡಲಿಚ್ಛಿಸುತ್ತೇನೆ. ತಕ್ಷಣವೇ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇವೆ. ಈ ಕೃತ್ಯಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆ.

**ಸಭಾಪತಿಯವರು:–** ಈಗ ಮತ್ತೆ ಈ ವಿಷಯ ಪ್ರಸ್ತಾಪ ಮಾಡುವುದು ಬೇಡ.

**ಡಾ॥ ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಗಳೇ, ವಿಧಾನಸೌಧ ಕಟ್ಟಡ "ಪಾರಂಪರಿಕ" ವಾದುದಲ್ಲ. ಅದರ ಬದಲಿಗೆ "ಅಪೂರ್ವ", "ಸುಂದರ" ಎಂಬ ಪದ ಬಳಸುವುದು ಸೂಕ್ತ. ಏಕೆಂದರೆ ಇದು ಪಾರಂಪರಿಕವಾದುದಲ್ಲ.

**6. ಗಮನಸೆಳೆಯುವ ಸೂಚನೆಗಳು**

**ವಿಷಯ:** ರಾಜ್ಯ ಸರ್ಕಾರ ಅತಿಥಿ ಉಪನ್ಯಾಸಕರ ವೇತನ ಬಾಕಿ ಬಿಡುಗಡೆ ಮಾಡದಿರುವ ಮತ್ತು ಬೇರೆ ಬೇರೆ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಕಾಲೇಜುಗಳಲ್ಲಿ ವೇತನ ತಾರತಮ್ಯ ಮಾಡುತ್ತಿರುವ ಬಗ್ಗೆ.

**ಶ್ರೀ ಬಸವರಾಜ ಹೊರಟ್ಟಿ:–** ರಾಜ್ಯ ಸರ್ಕಾರ ಅತಿಥಿ ಉಪನ್ಯಾಸಕರ ವೇತನ ಬಾಕಿ ಬಿಡುಗಡೆ ಮಾಡದಿರುವುದರಿಂದ ಅವರುಗಳು ಸಂಕಷ್ಟದಲ್ಲಿರುವರಲ್ಲದೆ ಯು.ಜಿ.ಸಿ.ಯಿಂದ ನಿಗದಿಪಡಿಸಿದ ವೇತನವನ್ನು ನೀಡದೆ ಬೇರೆ ಬೇರೆ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಕಾಲೇಜುಗಳಲ್ಲಿ ಬೇರೆ ಬೇರೆ ವೇತನ ನೀಡಲಾಗುತ್ತಿದ್ದು ಆ ವೇತನ ತಾರತಮ್ಯವನ್ನು ಸರಿಪಡಿಸಬೇಕೆಂದು ಕೋರುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರಾವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಗಳೇ,...

ರಾಜ್ಯದ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2012–13ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಇಲ್ಲಿಯವರೆಗೆ ಬಾಕಿಯಿರುವ ₹ 52 ಕೋಟಿಗಳನ್ನು ಬಿಡುಗಡೆ ಮಾಡಲು ತ್ವರಿತ ಕ್ರಮ ಕೈಗೊಳ್ಳಲಾಗುವುದು.

ಅತಿಥಿ ಉಪನ್ಯಾಸಕರುಗಳ ನೇಮಕಾತಿಯು ತಾತ್ಕಾಲಿಕ ವ್ಯವಸ್ಥೆಯಾಗಿರುವುದರಿಂದ ಇದು ವೇತನಕ್ಕೆ ಒಳಪಡದೇ ಕೇವಲ

ಗೌರವಧನವಾಗಿರುವುದರಿಂದ ಇದಕ್ಕೆ ಯುಜಿಸಿ ಮಾರ್ಗಸೂಚಿ ಅನ್ವಯವಾಗುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಏಕರೂಪ ಗೌರವಧನವನ್ನು ಪಾವತಿಸುವ ಸಂಬಂಧ ಸರ್ಕಾರವು ದಿನಾಂಕ: 07.06.2011ರ ಆದೇಶ ಸಂಖ್ಯೆ: ಇಡಿ 87 ಡಿಸಿಇ 2010 ರಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ₹ 10,000/– ಗಳನ್ನು ಹಾಗೂ ಸ್ನಾತಕೋತ್ತರ ಪದವಿ ಪಡೆದ ಅತಿಥಿ ಉಪನ್ಯಾಸಕರುಗಳಿಗೆ ₹ 8,000/– ಗಳನ್ನು ಪಾವತಿಸಲು ಆದೇಶಿಸಲಾಗಿರುತ್ತದೆ ಹಾಗೂ ಅದರಂತೆಯೇ ಗೌರವಧನವನ್ನು ಪಾವತಿಸಲಾಗುತ್ತಿದೆ. ಆದುದರಿಂದ, ಬೇರೆ ಬೇರೆ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳಿಗೆ ಏಕರೂಪ ಗೌರವಧನವನ್ನು ಪಾವತಿಸಲಾಗುತ್ತಿದೆ.

**ಸಭಾಪತಿಯವರು:–** ಒಂದು ವಿಷಯ. ಈ ವಿಚಾರವಾಗಿ ಮಾತನಾಡುವುದಕ್ಕೆ ಸಂಬಂಧಿಸಿದಂತೆ ನಾಲ್ಕೈದು ಜನರು ಸಹಿ ಮಾಡಿ ಕೊಟ್ಟಿದ್ದೀರಿ. ಅವರೆಲ್ಲರಿಗೂ ಮಾತನಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಆದರೆ, ಕೇವಲ ಕ್ಲ್ಯಾರಿಫಿಕೇಷನ್ ಮಾತ್ರ ಕೇಳಬೇಕು. ಹೀಗೆ ಮಾಡುವುದರಿಂದ ನನಗೆ ಸಮಯ ಸಿಗುತ್ತದೆ. ದಯವಿಟ್ಟು ಯಾರೂ ಉದ್ದಕ್ಕೆ ಭಾಷಣ ಮಾಡಬಾರದು. ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಹಾಗಾಗಿ ಅವರಿಂದ ಸೂಕ್ತ ಉತ್ತರ ಪಡೆದುಕೊಳ್ಳಿ. ಮಾತನಾಡುವವರ ಪಟ್ಟಿಯಲ್ಲಿ ಉದ್ದಕ್ಕೆ ಭಾಷಣ ಮಾಡುವವರ ಹೆಸರೂ ಇದೆ. ಅದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಸರ್ಕಾರ ತನ್ನ ಉತ್ತರದಲ್ಲಿ "ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು" ಎಂದು ಹೇಳಿದೆ. ಕಳೆದ ಒಂದು

ವರ್ಷದಿಂದ ಅತಿಥಿ ಉಪನ್ಯಾಸಕರಿಗೆ ಸಂಬಳ ಅಥವಾ ಗೌರವಧನವನ್ನು ಕೊಟ್ಟಿಲ್ಲ. ಇವರನ್ನು ನೇಮಕ ಮಾಡುವಾಗ ಟರ್ಮ್ಸ್ ಅಂಡ್ ಕಂಡೀಷನ್ ಅನುಸರಿಸಿದ್ದೀರಿ. ಆದರೆ, ಒಂದು ವರ್ಷದಿಂದ ಅವರಿಗೆ ಸಂಬಳ ಕೊಟ್ಟಿಲ್ಲ. ಸರ್ಕಾರ ಅವರಿಗೆ ಯಾವಾಗ ಸಂಬಳ ಕೊಡುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಹತ್ತೂವರೆ ಸಾವಿರ ಇರುವ ಈ ಉಪನ್ಯಾಸಕರನ್ನು ಇಟ್ಟುಕೊಂಡು ಅವರಿಗೆ ₹ 8,000–10,000 ಗಳನ್ನು ಕೊಡುವುದು ಎಷ್ಟು ಸರಿ? ಈ ರೀತಿ ಏಕರೂಪತೆಯ ಸಂಬಳ ನೀಡದೇ ಇರುವುದರಿಂದ ಮಕ್ಕಳ ಮೇಲೆ ಏನು ಪರಿಣಾಮ ಆಗುತ್ತದೆ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ನೀವು ಹೊಸದಾಗಿ ಮಂತ್ರಿಯಾಗಿ ಬಂದಿದ್ದೀರಿ. ನಿಮಗೆ ಹೆಚ್ಚು ತೊಂದರೆ ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಈ ರೀತಿಯ ಸಂಬಳ ತಾರತಮ್ಯವಾದರೆ ಅವರು ತಮ್ಮ ವಿದ್ಯಾರ್ಥಿಗಳಿಗೆ ಯಾವರೀತಿ ಪಾಠ ಮಾಡುತ್ತಾರೆ? ಒಂದು ವರ್ಷದಿಂದ ಅವರಿಗೆ ಸಂಬಳ ಕೊಟ್ಟಿಲ್ಲ. ಅವರು ಹೇಗೆ ಕೆಲಸ ಮಾಡುತ್ತಾರೆ? ಸರ್ಕಾರದಲ್ಲಿ ದುಡ್ಡಿನ ಕೊರತೆ ಇದೆಯೇ ಅಥವಾ ಇಲ್ಲವೇ ಎನ್ನುವುದನ್ನು ಹೇಳಬೇಕು. ನೀವು ಹೊಸದಾಗಿ ಬಂದಿದ್ದೀರಿ, ಆದರೆ ಇಲ್ಲಿಯ ತನಕ ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡಿದರು? ಈಗ ಕಾಲೇಜುಗಳು ಪ್ರಾರಂಭವಾಗಿವೆ. ಅತಿಥಿ ಉಪನ್ಯಾಸಕರು ಇಲ್ಲದೇ ಮಕ್ಕಳಿಗೆ ಪಾಠ ಮಾಡುವುದಕ್ಕೆ ಆಗುವುದಿಲ್ಲ. ತಿಂಗಳಿಗೆ ಒಂದು ಸಲ ಅವರಿಗೆ ಸಂಬಳ ಕೊಡದಿದ್ದರೆ ಏನಾಗುತ್ತದೆ ಎನ್ನುವುದರ ಬಗ್ಗೆ ನೀವು ವಿಚಾರ ಮಾಡಿ. ಅವರಿಗೆ ಸಂಬಳ ಕೊಡದೇ ಇದ್ದರೆ ಅವರು ಸರಿಯಾದ ರೀತಿಯಲ್ಲಿ ಪಾಠ ಮಾಡುವುದಕ್ಕೆ ಆಗುವುದಿಲ್ಲ. ಅವರು ತಮ್ಮ ನೋವುಗಳೇನು ಎಂದು ಹೇಳಿಕೊಂಡಿರುವುದು ಪ್ರತಿದಿನ ಪತ್ರಿಕೆಗಳಲ್ಲಿ ಬರುತ್ತಿವೆ. ಅದನ್ನು ತಾವು ಗಮನಿಸಿರುತ್ತೀರಿ. ಹಾಗಾಗಿ ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ ಸರಿಯಾಗಿ ಸಂಬಳ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಬಾಕಿ ಇರುವ ಸಂಬಳವನ್ನು ಬಿಡುಗಡೆ ಮಾಡುವುದು ಒಂದು ವಿಚಾರ. ಅವರಿಗೆ

ಕೊಡುತ್ತಿರುವ ₹ 8,000–10000 ಗಳ ವೇತನ ಸಾಕಾಗುವುದಿಲ್ಲ. ಬೆಂಗಳೂರಿನಲ್ಲಿ ಇಷ್ಟು ಕಡಿಮೆ ಪ್ರಮಾಣದ ಸಂಬಳವನ್ನು ಪಡೆದುಕೊಂಡು ಜೀವನ ಸಾಗಿಸುವುದಕ್ಕೆ ಆಗುವುದಿಲ್ಲ. ಇವರಿಗೆ ವರ್ಷಾನುಗಟ್ಟಲೇ ಸಂಬಳ ಕೊಡದೇ ಹೋದರೆ ಅವರು ತಮ್ಮ ಹೆಂಡತಿ–ಮಕ್ಕಳಿಗೆ ತಿನ್ನುವುದಕ್ಕೆ ಮಣ್ಣು ತೆಗೆದುಕೊಂಡು ಹೋಗಿ ಕೊಡಬೇಕೇ? ಅವರು ತಮ್ಮ ಮಕ್ಕಳನ್ನು ಹೇಗೆ ಓದಿಸಬೇಕು? ಅವರು ತಮ್ಮ ಸಂಸಾರ ಸಾಗಿಸುವುದಕ್ಕೆ ಏನು ಮಾಡಬೇಕು ಹೇಳಿ. ಇತ್ತೀಚಿನ ದಿನಗಳಲ್ಲಿ ಡಿಗ್ರಿ ಕಾಲೇಜುಗಳಲ್ಲಿ ಜನರಲ್ ಡಿಗ್ರಿಗಳಿಗೆ ಅಂದರೆ, ಬಿ.ಎ., ಬಿ.ಕಾಂ., ಬಿಎಸ್‌ಸಿ., ವಿಷಯಗಳಿಗೆ ಹೆಚ್ಚಿನ ವಿದ್ಯಾರ್ಥಿಗಳು ಸೇರುತ್ತಿದ್ದಾರೆ. ಒಂದೊಂದು ಸೆಕ್ಷನ್‌ನಲ್ಲಿ 120–150 ಜನ ವಿದ್ಯಾರ್ಥಿಗಳು ಇರುತ್ತಾರೆ. ಕೊಠಡಿಯಲ್ಲಿ ಎಷ್ಟು ಕುರ್ಚಿಗಳು ಹಿಡಿಸುತ್ತದೆಯೋ, ಅಷ್ಟನ್ನೂ ಹಾಕಿ ವಿದ್ಯಾರ್ಥಿಗಳನ್ನು ಕೂರಿಸುತ್ತಾರೆ. ಅವರಿಗೆ ಪಾಠ ಮಾಡುವುದು ಹೇಗೆ? ಅಟೆಂಡೆನ್ಸ್ ತೆಗೆದುಕೊಳ್ಳುವುದು ಹೇಗೆ? ಇದರ ಬಗ್ಗೆ ಕೂಡ ಸರ್ಕಾರ ಕ್ರಮ ಕೈಗೊಳ್ಳಬೇಕು. ಮಾನ್ಯ ಸಭಾಪತಿಗಳೇ, ಈ ಸಲ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಗಳಲ್ಲಿ ಅತಿ ಹೆಚ್ಚಿನ ಫಲಿತಾಂಶ ಬಂದಿದೆ. ಸರ್ಕಾರ, ಎಲ್ಲಾ ಸರ್ಕಾರಿ ಕಾಲೇಜುಗಳವರು ಇನ್‌ಟೇಕ್‌ಕ್ಕೋಸ್ಕರ ಯುನಿವರ್ಸಿಟಿಯ ಅಭಿಪ್ರಾಯಕ್ಕೆ ಕಾಯದೇ ಎಷ್ಟು ಜನ ವಿದ್ಯಾರ್ಥಿಗಳು ಬರುತ್ತಾರೋ, ಅಷ್ಟೂ ಜನರಿಗೆ ಪ್ರವೇಶ ಕೊಡಬೇಕೆಂದು ಆದೇಶ ಹೊರಡಿಸಬೇಕು. ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ವಂಚಿತರನ್ನಾಗಿ ಮಾಡಬಾರದು. ಯಾವ ಯಾವ ಕಾಲೇಜುಗಳಲ್ಲಿ ಕೊಠಡಿಗಳಿಲ್ಲವೋ ಅಂತಹ ಕಡೆ ಕೊಠಡಿಗಳನ್ನು ಕಟ್ಟುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲದೇ ಇದ್ದರೆ ಮಕ್ಕಳಿಗೆ ಅನ್ಯಾಯವಾಗುತ್ತದೆ . . .

**ಸಭಾಪತಿಯವರು:–** ಸಂಬಳ ಬಿಡುಗಡೆ ಮಾಡುವುದರ ಬಗ್ಗೆ ತಾವು ಮಾತನಾಡಿ.

**ಶ್ರೀ ಪುಟ್ಟಣ್ಣ:–** ಈ ವಿಚಾರ ಕೂಡ ಅದಕ್ಕೆ ಸಂಬಂಧಪಟ್ಟಿದ್ದರಿಂದ ನಾನು ಹೇಳಿದೆ. 2012–2013ರವರೆಗೆ ಯಾರು ಕೆಲಸ ಮಾಡುತ್ತಿದ್ದಾರೋ ಆ

ಎಲ್ಲಾ ಅತಿಥಿ ಉಪನ್ಯಾಸಕರನ್ನು ಮುಂದುವರೆಸಬೇಕು. 'ಮತ್ತೆ ಸಂದರ್ಶನ ಮಾಡುತ್ತೇವೆ, ಮತ್ತೆ ಆಯ್ಕೆ ಮಾಡುತ್ತೇವೆ' ಎಂದು ಹೇಳುವುದು ಬೇಡ. ಹೆಚ್ಚುವರಿಯಾಗಿ ವರ್ಕ್‌ಲೋಡ್ ಬಂದರೆ ಅದಕ್ಕೆ ಸಂಬಂಧಪಟ್ಟಂತೆ ಹೊಸ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ತಾವು ಹೇಳಿದ ಹಾಗೆ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:–** ನಾನು ನಿಮಗೆ ಹೇಳಲಿಲ್ಲ. ಏಕೆ ಅಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತೀರಿ? ನಾನು passing reference ಮಾಡಿದೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಇದರ ಬಗ್ಗೆ ಎಲ್ಲಾ ಮನವರಿಕೆ ಆಗಿದೆ. ನಾನು ಮಾನ್ಯ ಸಚಿವರಿಗೆ ಮೊದಲೇ ಧನ್ಯವಾದ ಹೇಳುತ್ತೇನೆ. ಏಕೆಂದರೆ, ಅವರು ಮಂತ್ರಿಗಳಾದ ಹೊಸದರಲ್ಲೇ ದಿನಾಂಕ:3–6–2013 ಸಂಜೆ ನಾಲ್ಕು ಗಂಟೆಗೆ ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂಥ ಎಲ್ಲಾ ಶಾಸಕರ ಸಭೆಯನ್ನು ಕರೆದಿದ್ದರು. ಸುಮಾರು ಮೂರು ಗಂಟೆಗಳ ಕಾಲ ಸಭೆ ಮಾಡಿದರು. ಆ ಸಭೆಯಲ್ಲಿ ಅತಿಥಿ ಉಪನ್ಯಾಸಕರ ಸಮಸ್ಯೆ ಬಗ್ಗೆ ಬಹಳ ದೀರ್ಘವಾದಂತಹ ಚರ್ಚೆಯನ್ನು ನಾವು ಮಾಡಿದ್ದೇವೆ. ಅದಕ್ಕೆ ಪೂರಕವಾಗಿ 'ಇದರ ಬಗ್ಗೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ' ಎಂದು ಹೇಳಿದ್ದಾರೆ. ಈಗ ಅದಕ್ಕೆ ಪೂರಕವಾಗಿ ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮೊದಲು ಅವರಿಗೆ ಧನ್ಯವಾದ ಹೇಳುತ್ತೇನೆ. ಈಗಾಗಲೇ ಸಂಬಳ ಬಿಡುಗಡೆ ಬಗ್ಗೆ ನಮ್ಮ ಹಿರಿಯ ಸದಸ್ಯರುಗಳು ಸಲಹೆಗಳನ್ನು ಕೊಟ್ಟಿದ್ದಾರೆ. ಯಾವ ಅವಧಿಯೊಳಗೆ ಬಾಕಿ ಇರುವ 52 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ? ಈ ಅತಿಥಿ ಉಪನ್ಯಾಸಕರು 1996 ರಿಂದ ಕೆಲಸ ಮಾಡುತ್ತಿರತಕ್ಕಂಥವರು. ಆದರೆ, ಅವರಿಗೆ 6 ತಿಂಗಳ, 8 ತಿಂಗಳ ಗೌರವಧನ ಒಟ್ಟೊಟ್ಟಿಗೆ ಸಿಕ್ಕಿದೆ. ಅವರಿಗೆ ಕಡಿಮೆ ಗೌರವಧನವನ್ನು ಕೊಡುತ್ತಿದ್ದೇವೆ. ಪ್ರತಿ ತಿಂಗಳು ನಮಗೆ ಗೌರವಧನ

ಕೊಡಬೇಕೆನ್ನುವುದು ಅವರ ಕೂಗು. ತಾತ್ಕಾಲಿಕವಾಗಿ ಈ ಅತಿಥಿ ಉಪನ್ಯಾಸಕರಿಗೆ ಕೊಡುತ್ತಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಇನ್ನು ಮುಂದೆ ಪ್ರತಿ ತಿಂಗಳು ಗೌರವಧನ ಕೊಡುವುದಕ್ಕಾಗದಿದ್ದರೂ ಕೊನೆ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ಗೌರವಧನ ಕೊಡುವಂತಹ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತರಬೇಕು.

**ಸಭಾಪತಿಯವರು:–** ಪ್ರತಿ ತಿಂಗಳು ಗೌರವಧನ ಕೊಡಿ ಎಂದು ಹೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಪ್ರತಿ ತಿಂಗಳು ಕೊಡುವುದು ಬೇಡ ಎಂದು ಹೇಳುತ್ತಿಲ್ಲ. ಪ್ರತಿ ತಿಂಗಳು ಕೊಡುವುದಕ್ಕೆ ಬಹಳ ಸಮಸ್ಯೆ ಇದೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,.....

**ಸಭಾಪತಿಯವರು:–** ನಾರಾಯಣಸ್ವಾಮಿಯವರೇ, ನಿಮ್ಮ ಅಭಿಪ್ರಾಯ ಬೇರೆ ಇರಬಹುದು, ಅವರ ಅಭಿಪ್ರಾಯ ಬೇರೆ ಇರಬಹುದು. ಈಗ ಅವರ ಅಭಿಪ್ರಾಯವನ್ನು ಅವರು ಹೇಳಲಿಬಿಡಿ. ನೀವು ಏಕೆ ಮಧ್ಯೆ ಮಾತನಾಡುತ್ತಿರಿ? ನೀವು ಮಾತನಾಡುವಾಗ ನಿಮ್ಮ ಅಭಿಪ್ರಾಯವನ್ನು ಹೇಳಿ. ನೀವು ಹದಿನೈದು ದಿವಸಕ್ಕೆ ಒಂದು ಸಲ ಗೌರವಧನ ಕೊಡಬೇಕೆ ಹೇಳಿ ತಪ್ಪೇನು ಇಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಎರಡು ತಿಂಗಳಿಗೊಮ್ಮೆಯಾದರೂ ಗೌರವಧನ ಕೊಡುವುದನ್ನು ಮಾನ್ಯ ಸಚಿವರು ಜಾರಿಗೆ ತರಬೇಕು. ಮಾನ್ಯ ಪುಟ್ಟಣ್ಣನವರು ಹೇಳಿದ ಹಾಗೆ ಅತಿಥಿ ಉಪನ್ಯಾಸಕರಿಗೆ ಕೊಡುತ್ತಿರುವ ಗೌರವಧನ ಸಾಲದು. ದಯಮಾಡಿ ಇದನ್ನು ಪರಿಷ್ಕರಣೆ ಮಾಡಬೇಕು. ಏಕೆಂದರೆ, ಸಭಾಪತಿ ಪೀಠದಲ್ಲಿರತಕ್ಕಂಥ ತಾವುಗಳೇ ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಈ ಗೌರವಧನವನ್ನು ಹೆಚ್ಚು ಮಾಡತಕ್ಕಂಥದ್ದರಲ್ಲಿ ಮೊದಲಿಗರಾಗಿ ಕೆಲಸ ಮಾಡಿದ್ದೀರಿ. ನಾನು ತಮಗೂ ಕೂಡ ಈ ಸಂದರ್ಭದಲ್ಲಿ ಧನ್ಯವಾದಗಳನ್ನರ್ಪಿಸುತ್ತೇನೆ. 1,800

ರೂಪಾಯಿಗಳಾಗಿದ್ದ ಗೌರವಧನವನ್ನು 5,000 ರೂಪಾಯಿಗಳಿಗೆ ಹೆಚ್ಚು ಮಾಡಿರುವ ಗೌರವ ತಮಗೆ ಸಲ್ಲುತ್ತದೆ. ಆದರೂ, ಅತಿಥಿ ಉಪನ್ಯಾಸಕರಿಗೆ ಕೊಡುತ್ತಿರುವ ಗೌರವಧನ ಸಾಲದು. ಇದು ಪರಿಷ್ಕರಣೆಯಾಗಬೇಕು. ಅತಿಥಿ ಉಪನ್ಯಾಸಕರು ಪದವೀಧರರಿಗೆ ಸೆಮಿಸ್ಟರ್ ಪದ್ಧತಿಯಲ್ಲಿ ಪಾಠ ಮಾಡುತ್ತಿದ್ದಾರೆ. ನಮ್ಮ ಶೈಕ್ಷಣಿಕ ವರ್ಷ ಜೂನ್ 15 ರಿಂದ ಪ್ರಾರಂಭವಾದರೂ ಕೂಡ ಅತಿಥಿ ಉಪನ್ಯಾಸಕರ ನೇಮಕ ಅಕ್ಟೋಬರ್ ಕೊನೆಯಲ್ಲಿ ಆಗುತ್ತದೆ. ಈ ರೀತಿ ಆಗಬಾರದು. ಜೂನ್ ಕೊನೆಯಲ್ಲಾದರೂ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಬೇಕು ಮತ್ತು ಅವರನ್ನು ನೇಮಕ ಮಾಡಿಕೊಳ್ಳುವಂಥದ್ದರಲ್ಲಿ ಇರತಕ್ಕಂಥ ನ್ಯೂನತೆಗಳನ್ನು ಸರಿಪಡಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಅತಿಥಿ ಉಪನ್ಯಾಸಕರ ಅವಶ್ಯಕತೆ ಇರುವುದು ಮಾನ್ಯ ಸಚಿವರಿಗೆ ಸ್ಪಷ್ಟವಾಗಿ ಗೊತ್ತಿದೆ. ಪ್ರತಿ ತಿಂಗಳು ಸಂಬಳ ಕೊಡುವುದಕ್ಕೆ ಏನು ಕಷ್ಟ ಇದೆ ಎಂದು ಸರ್ಕಾರದಲ್ಲಿರುವವರನ್ನು ಕೇಳಿದರೇ, ಯಾರು ಉತ್ತರ ಕೊಡುವುದಿಲ್ಲ. ಹಾಗಾದರೆ ಪ್ರತಿ ತಿಂಗಳು ಸಂಬಳ ಕೊಡುವುದಕ್ಕೆ ಏನು ಸಮಸ್ಯೆ ಇದೆ? ಎರಡನೇ ಸಂಗತಿ ಏನೆಂದರೆ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಒಟ್ಟು 1,500 ರಷ್ಟು ಹುದ್ದೆಗಳು ಸೃಷ್ಟಿಯಾಗಿವೆ. ಒಟ್ಟು 10,400 ರಷ್ಟು ಅತಿಥಿ ಉಪನ್ಯಾಸಕರ ಹುದ್ದೆ ಇದೆ. ಕಳೆದ ಎರಡು-ಮೂರು ವರ್ಷಗಳಲ್ಲಿ ಉನ್ನತ ಶಿಕ್ಷಣಕ್ಕೆ ಸುಮಾರು ಒಂದುಕಾಲು ಲಕ್ಷದಷ್ಟು ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿರಬೇಕಾದರೆ ಅಲ್ಲಿ ಶಾಶ್ವತವಾದ ಪೂರ್ಣಾವಧಿ ಹುದ್ದೆಗಳನ್ನು ಸೃಷ್ಟಿ ಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದಾರೆ. ಅದನ್ನು ಯಾವಾಗ ತುಂಬುತ್ತಾರೆ? ಇಲ್ಲದಿದ್ದರೆ ಈ ಅತಿಥಿ ಉಪನ್ಯಾಸಕರ ಸಮಸ್ಯೆ ಎಷ್ಟು ದಿನ ಹೀಗೆ ಮುಂದುವರೆಯುತ್ತಿರುತ್ತದೆ? ಹಾಗಾಗಿ ಈ ಎರಡು ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳದಿದ್ದರೆ ನಾವು ಅತಿಥಿ ಉಪನ್ಯಾಸಕರನ್ನು ಇಷ್ಟು ದೊಡ್ಡ ಸಂಖ್ಯೆಯಲ್ಲಿ ನೇಮಕ

ಮಾಡಿಕೊಳ್ಳುವುದು, ಆರ್ಥಿಕ ಇಲಾಖೆಯವರ ಜೊತೆ ನಾವು ಮಾತನಾಡಿದ್ದೇವೆ, ಆರ್ಥಿಕ ಇಲಾಖೆ ಒಪ್ಪಿಕೊಳ್ಳದೇ ಇರುವಂಥದ್ದು, ಅವರಿಗೆ ವರ್ಷ ಪೂರ್ತಿ ಹಣ ಬಿಡುಗಡೆ ಮಾಡದೆ ಇರತಕ್ಕಂಥದ್ದು, ಯಾವುದೇ ಒಂದು ಜವಾಬ್ದಾರಿಯುತ ಸರ್ಕಾರಕ್ಕೆ ನಾಚಿಕೆಗೇಡಿನ ವಿಷಯ. ಒಂದು ವರ್ಷ ಪೂರ್ತಿ ಕೆಲಸ ಮಾಡಿಸಿಕೊಂಡು ಕೊಡುವ 10,000 ರೂಪಾಯಿಯನ್ನು ಪ್ರತಿ ತಿಂಗಳು ಕೊಡುವುದಕ್ಕೆ ಆಗುವುದಿಲ್ಲ ಎಂದರೆ, ಆರ್ಥಿಕ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳಲ್ಲಿ ಎಲ್ಲೋ ಒಂದು ಕಡೆ ಇದರ ಬಗ್ಗೆ ಗೊಂದಲ ಇದೆ. ಹಾಗಾಗಿ ನಾವು ವಿನಂತಿ ಮಾಡಿಕೊಳ್ಳುವುದೇನೆಂದರೆ, ಶಾಶ್ವತವಾದ ಹುದ್ದೆಯನ್ನು ಸೃಷ್ಟಿ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತಾರೆ? ಎಷ್ಟು ಅತಿಥಿ ಉಪನ್ಯಾಸಕರ ಹುದ್ದೆ ನಮಗೆ ಬೇಕು ಎಂಬುದರ ಬಗ್ಗೆ ವಿಮರ್ಶೆ ಮಾಡುತ್ತಾರೆ ಮತ್ತು ಪ್ರತಿ ತಿಂಗಳು ಸಂಬಳ ಕೊಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ? ನಾನು ಮಾನ್ಯ ಮರಿತಿಬ್ಬೇಗೌಡರು ಹೇಳುವುದನ್ನು ಒಪ್ಪಿಕೊಳ್ಳುವುದಿಲ್ಲ. ನಾವು ಅವರಿಗೆ ಕೊಡುವುದೇ 10,000 ರೂಪಾಯಿ ಸಂಬಳ. ಅದನ್ನು ತಿಂಗಳಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಆ ಕುಟುಂಬ ಹೇಗೆ ಜೀವನ ಮಾಡಬೇಕು?

**ಸಭಾಪತಿಯವರು:-** ಪ್ರತಿ ತಿಂಗಳು ಕೊಡಬೇಕು, ಪ್ರತಿ ತಿಂಗಳು ಕೊಡುವುದಕ್ಕಾಗದಿದ್ದರೆ ಕನಿಷ್ಟ ಎರಡು ತಿಂಗಳಿಗೆ ಒಂದು ಬಾರಿಯಾದರೂ ಕೊಡಿ ಎಂದು ಮರಿತಿಬ್ಬೇಗೌಡರು ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:-** ನಾರಾಯಣಸ್ವಾಮಿಯವರೇ, ನಿಮ್ಮ ಸರ್ಕಾರ ಇದ್ದಾಗ ಏಕೆ ಪ್ರತಿ ತಿಂಗಳು ಕೊಡಲಿಲ್ಲ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಈಗ ಅವರು ಅಧಿಕಾರಕ್ಕೆ ಬಂದಿದ್ದಾರಲ್ಲಾ 'ಪ್ರತಿ ತಿಂಗಳು ಗೌರವಧನ ಕೊಡಿ' ಎಂದು ನಾವು ಕೇಳುತ್ತಿದ್ದೇವೆ.

**ಸಭಾಪತಿಯವರು:–** ನಾರಾಯಣಸ್ವಾಮಿಯವರೇ, ನಿಮಗೆ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಗಣೇಶ್ ಕಾರ್ಣಿಕ್‌ರವರೇ, ನೀವು ಮೊದಲಿನಿಂದ ಕೇಳಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನಾವು ಮೊದಲಿನಿಂದಲೂ ಕೇಳಿದ್ದೇವೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ನಿಮ್ಮದು ಬಹಳ ನಡೆಯುತ್ತಿತ್ತು. ಮಾನ್ಯ ಮರಿತಿಬ್ಬೇಗೌಡರು ಏನು ಹೇಳಿದರು, ತಿಂಗಳಿಗೆ ಕೊಟ್ಟರೆ ಸಂತೋಷ. ವರ್ಷಾನುಗಟ್ಟಲೆ ಕೊಡುವುದಕ್ಕಾಗಲಿಲ್ಲ, ಆರು ತಿಂಗಳುಗಟ್ಟಲೆ ಕೊಡುವುದಕ್ಕಾಗಲಿಲ್ಲ. ಎರಡು ತಿಂಗಳಿಗೊಮ್ಮೆಯಾದರೂ ಕೊಡಿ ಎಂದು ಮಾನವೀಯತೆಯ ದೃಷ್ಟಿಯಿಂದ ಹೇಳಿದರು. ಆ ಭಾವನೆ ನಿಮಗೆ ಇರಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರದಲ್ಲಿ 1,800 ರೂಪಾಯಿ ಗೌರವಧನ ಕೊಡುತ್ತಿದ್ದರು, ನಂತರ 2,500 ರೂಪಾಯಿ ಮಾಡಿದರು, ಅನಂತರ 5,000 ರೂಪಾಯಿ ಮಾಡಿದರು, ಆಮೇಲೆ 10,000 ರೂಪಾಯಿಗಳಷ್ಟು ಹೆಚ್ಚು ಮಾಡಿದರು. ಐದು ವರ್ಷದ ಅವಧಿಯಲ್ಲಿ ನಾಲ್ಕು ಬಾರಿ ಅತಿಥಿ ಉಪನ್ಯಾಸಕರ ಸಂಬಳ ಜಾಸ್ತಿ ಮಾಡಿರುವ ಬಗ್ಗೆ ಬೇರೆ ದಾಖಲೆ ಇಲ್ಲ. ಸಂಬಳ ಜಾಸ್ತಿ ಮಾಡಿದ್ದೇವೆ. ಆದರೆ, ಪ್ರತಿ ತಿಂಗಳು ಸಂಬಳ ಕೊಡುವುದಕ್ಕೆ ಸಮಸ್ಯೆಗಳಾಗಿತ್ತು. ಆದರೆ, ಈಗ ಪ್ರತಿ ತಿಂಗಳು ಕೊಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ನಾವು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಅತಿಥಿ ಉಪನ್ಯಾಸಕರುಗಳ ನೇಮಕಾತಿಯು ತಾತ್ಕಾಲಿಕ ವ್ಯವಸ್ಥೆಯಾಗಿರುವುದರಿಂದ ಇದು ವೇತನಕ್ಕೆ ಒಳಪಡದೇ ಕೇವಲ ಗೌರವಧನವಾಗಿರುವುದರಿಂದ ಇದಕ್ಕೆ ಯು.ಜಿ.ಸಿ. ಮಾರ್ಗಸೂಚಿ ಅನ್ವಯವಾಗುವುದಿಲ್ಲ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಮಾನ್ಯ ಸಚಿವರೇ, ಅತಿಥಿ ಉಪನ್ಯಾಸಕರಿಗೆ 25,000 ರೂಪಾಯಿ ಕೊಡಬೇಕೆಂದು ಯು.ಜಿ.ಸಿ. ಮಾರ್ಗಸೂಚಿಯಲ್ಲಿ ಇದೆ. ತಾವು ಅದನ್ನು ಗಮನಿಸಿಕೊಂಡು ಅತಿಥಿ ಉಪನ್ಯಾಸಕರಿಗೆ ಸಂಬಳ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮಾನ್ಯ

ಮರಿತಿಬ್ಬೇಗೌಡರು ಉಲ್ಲೇಖ ಮಾಡಿದರು. ಜೂನ್, ಜುಲೈ ತಿಂಗಳಿನಲ್ಲಿ ಕಾಲೇಜು ಪ್ರಾರಂಭವಾಗುತ್ತದೆ. ಅತಿಥಿ ಉಪನ್ಯಾಸಕರಿಗೆ ಜೂನ್ ತಿಂಗಳಿನಲ್ಲಿ ಬಂದು ಪಾಠ ಮಾಡಿ ಎಂದು ಹೇಳುತ್ತಾರೆ, ಏಕೆಂದರೆ, ಇಡೀ ವರ್ಷ ಪಾಠ ಮಾಡಿರುತ್ತಾರೆ. ಅವರಿಗೆ ಅಕ್ಟೋಬರ್ ತಿಂಗಳಿನಲ್ಲಿ ನೇಮಕಾತಿ ಆದೇಶ ಕೊಡುತ್ತಾರೆ. ಜುಲೈನಿಂದ ಅಕ್ಟೋಬರ್ ತಿಂಗಳಿನವರೆಗೆ ಸಂಬಳ ಕೊಡುವುದಿಲ್ಲ. ಏಕೆಂದರೆ, ಅಕ್ಟೋಬರ್ ತಿಂಗಳಿನಲ್ಲಿ ನೇಮಕಾತಿ ಆದೇಶವನ್ನು ಕೊಟ್ಟಿರುತ್ತಾರೆ. ಬಿಟ್ಟಿಯಾಗಿ ಪಾಠ ಮಾಡಿಸುತ್ತಾರೆ. ಹಾಗಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ, ಸೆಮಿಸ್ಟರ್ ಪದ್ಧತಿ ಇರುವುದರಿಂದ ಕೇವಲ ಮೂರ್ನಾಲ್ಕು ತಿಂಗಳುಗಳ ಕಾಲ ಪಾಠಕ್ಕೆ ಅವಕಾಶ ಸಿಗುವುದರಿಂದ ಮೊದಲನೆಯ ವಾರದಿಂದಲೇ ಅತಿಥಿ ಉಪನ್ಯಾಸಕರಿಗೆ ನೇಮಕಾತಿ ಮಾಡಿಕೊಳ್ಳುತ್ತೀರಿ. ಅವಾಗಿನಿಂದಲೇ ನೇಮಕಾತಿ ಆದೇಶ ಕೊಡಬೇಕು, ಸಂಬಳ ಕೊಡಬೇಕು ಎಂದು ಹೇಳುತ್ತಾ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ಓದಿದ್ದೇನೆ. I Will appreciate the spirit of the Hon'ble Minister for Higher Education. ಮೊನ್ನೆ ಮೀಟಿಂಗ್ ಮಾಡಿ ಇದರ ಬಗ್ಗೆ ವಿಸ್ತೃತ ಚರ್ಚೆಯನ್ನು ಮಾಡಿದ್ದಾರೆ. ಅತಿಥಿ ಉಪನ್ಯಾಸಕರ ಮೇಲೆ ಉನ್ನತ ಶಿಕ್ಷಣ ಇಲಾಖೆ ನಿಂತಿರುವುದು ಎಂದು ಅವರಿಗೂ ಗೊತ್ತಿದೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ ಎಷ್ಟು ಜನ ಕೆಲಸ ಮಾಡತ್ತಿದ್ದಾರೆ, ಅದರ ಮೂರರಷ್ಟು ಭಾಗ ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ದುರಂತವೇನೆಂದರೆ, ಯಾವ ಸರ್ಕಾರವೂ ಅವರಿಗೆ ತಿಂಗಳ ಸಂಬಳ ಕೊಡುವುದಕ್ಕೆ ಆಗಲಿಲ್ಲ. ಇದು ಇಲಾಖೆಯ ಮಾನ ಮರ್ಯಾದೆಯ ಪ್ರಶ್ನೆಯಾಗಿದೆ. ಇದರಲ್ಲಿ ನೀವು ನಮ್ಮನ್ನು ಬಯ್ಯುವುದು, ನಾವು ನಿಮ್ಮ ಕಡೆ ಬೆರಳು ತೋರಿಸುವುದು, ಅದಲ್ಲ ಪ್ರಶ್ನೆ. ಅವರಿಗೆ ತಿಂಗಳಿಗೆ ಸರಿಯಾಗಿ ಗೌರವಧನ ಬಿಡುಗಡೆ ಮಾಡಬೇಕೆನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಮಾನ್ಯ ಉನ್ನತ

ಶಿಕ್ಷಣ ಸಚಿವರು ಇದರ ಬಗ್ಗೆ ಕ್ರಮ ವಹಿಸಿದ್ದಾರೆ ಎಂದುಕೊಂಡಿದ್ದೆ. ಇದರ ಬಗ್ಗೆ ಎಲ್ಲಾ ವಿಚಾರಗಳನ್ನು ನಮ್ಮ ಸ್ನೇಹಿತರು ಸದನದ ಗಮನಕ್ಕೆ ತಂದಿದ್ದಾರೆ. ಇಲ್ಲಿ ಬಹಳ ಮುಖ್ಯವಾಗಿ 10,500 ಜನ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಜೂನ್ ತಿಂಗಳಿನಲ್ಲಿ ನೇಮಕಾತಿ ಆದೇಶ ಕೊಡಬೇಕೆನ್ನುವುದು ಮೊದಲನೆಯ ಪ್ರಶ್ನೆ. ಎರಡನೆಯದಾಗಿ, ಯು.ಜಿ.ಸಿ. ಮಾರ್ಗಸೂಚಿಯ ಪ್ರಕಾರ N.E.T. ಮತ್ತು S.L.E.T. ಮಾಡಿದವರಿಗೆ 25,000 ರೂಪಾಯಿ ಕೊಡಬೇಕೆನ್ನುವ ಅಂಶ ಉಲ್ಲೇಖ ಮಾಡಿದ್ದಾರೆ, ಅದನ್ನು ಕೊಡಬೇಕು. ಮೂರನೆಯದಾಗಿ, ನೇಮಕಾತಿ ಪ್ರಕ್ರಿಯೆಯಲ್ಲಿ local Principals ಏನು ರಾಜಕಾರಣ ಮಾಡುತ್ತಿದ್ದಾರೆ, ಅದನ್ನು ತಪ್ಪಿಸುವುದಕ್ಕೆ ಈಗೇನು ಹಳಬರು ಕೆಲಸ ಮಾಡುತ್ತಿದ್ದಾರೆ ಅವರನ್ನೇ ಮುಂದುವರೆಸಬೇಕು. ಹೊಸ ಹೊಸ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾದಾಗ ಹೊಸದಾಗಿ ನೇಮಕಾತಿ ಪ್ರಕ್ರಿಯೆ ಮಾಡಿ ಹೊಸಬರಿಗೆ ಅವಕಾಶ ಮಾಡಿಕೊಡಬೇಕು. ಹಳಬರಿಗೆ ಅನ್ಯಾಯ ಮಾಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಕೆಲಸಗಳನ್ನು ಮಾನ್ಯ ಸಚಿವರು ಮಾಡುತ್ತಾರೆನ್ನುವ ಭರವಸೆಯನ್ನು ಇಟ್ಟುಕೊಳ್ಳುತ್ತೇವೆ. ಇದು ಮಾನವೀಯ ಸಂಬಂಧ ಎಂದು ಮಾನ್ಯ ಸಚಿವರೇ ಹೇಳಿದ್ದಾರೆ. ಅವರು ತಿಂಗಳು ಪೂರ್ತಿ ಕೆಲಸ ಮಾಡಿರುತ್ತಾರೆ, ಸಂಬಳವನ್ನು ತಿಂಗಳ ಕೊನೆಯಲ್ಲಿ ಕೊಡದಿದ್ದರೆ ಅವರು ಮನೆಗೆ ಹೋಗಿ ಹೆಂಡತಿ ಮಕ್ಕಳಿಗೆ ಏನು ಹೇಳುವುದು ಮಕ್ಕಳ Fee ಕಟ್ಟುವುದು ಹೇಗೆ, ಬದುಕುವುದು ಹೇಗೆ ಎನ್ನುವುದರ ಬಗ್ಗೆ ಅವತ್ತಿನ ಸಭೆಯಲ್ಲಿ ಅವರು ಚೆನ್ನಾಗಿ ಹೇಳಿದ್ದಾರೆ. ಆದ್ದರಿಂದ ಪದೇಪದೇ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. ಎಷ್ಟು ಬಾಕಿ ಕೊಡಬೇಕಾಗಿದೆ, ಯಾವ ರೀತಿ ಹಣಕಾಸಿನ ಇಲಾಖೆಯ ಜೊತೆಯಲ್ಲಿ ಮಾನ್ಯ ಸಚಿವರು ಚರ್ಚೆ ಮಾಡಿ, ಈ ಸಮಸ್ಯೆಗೆ ಹಾಡಿ ಇಲಾಖೆಯ ಮಾನ ಮರ್ಯಾದೆ ಕಾಪಾಡಬೇಕು. ಅವರ ಜೀವನವನ್ನು ಕಾಪಾಡುವುದಕ್ಕೆ ಶಿಕ್ಷಣ ಇಲಾಖೆಯ ಉನ್ನತಿಗಾಗಿ ಯಾವ ರೀತಿ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಿದೆಯೋ ಆ ರೀತಿ ಕ್ರಮ ಕೈಗೊಳ್ಳಬೇಕೆನ್ನುವ ಮನವಿಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಮಾಡುತ್ತಿದ್ದೇನೆ.

(12–30 ಗಂಟೆ)

**ಪ್ರೋ॥ ಪಿ.ವಿ. ಕೃಷ್ಣಭಟ್ಟ(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಗಳೇ, ಇತ್ತೀಚಿನ ವರ್ಷಗಳಲ್ಲಿ ನಮ್ಮ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿ ಅನೇಕ ಹೊಸ ಭೋದನಾ ವಿಷಯಗಳನ್ನು ಪ್ರಾರಂಭ ಮಾಡಿದ್ದೇವೆ. ಮುಂಚೆ ಇದ್ದಂತಹ traditional subject ಗಳಿಗೆ ಈಗ admission ಕಡಿಮೆಯಾಗುತ್ತಿದೆ. ಕೆಲವು ವಿಚಿತ್ರದ ಸಂಗತಿಗಳು ಹೇಗಿದೆಯೆಂದರೇ, ದೀರ್ಘಕಾಲದ ಅನುಭವ ಇರುವಂತಹ ಪ್ರೊಫೆಸರ್ಸ್ ಇದ್ದಾರೆ. ಅವರು ಕೈ ತುಂಬಾ ಸಂಬಳವನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಆ ವಿಭಾಗಗಳಿಗೆ ವಿದ್ಯಾರ್ಥಿಗಳೇ ಇಲ್ಲ. ಅವರು ಕೇವಲ ಕಾಲೇಜುಗಳಿಗೆ ಹೋಗಿ ಮನೆಗೆ ವಾಪಸ್ ಬಂದು ಕಾಲವನ್ನು ಕಳೆಯುತ್ತಿದ್ದಾರೆ. ಅನ್ನು ಅನೇಕ ಹೊಸ ವಿಷಯಗಳು ಪ್ರಾರಂಭವಾಗಿವೆ. ಅದರಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇದ್ದಾರೆ. ಅಲ್ಲಿ ವಾರಕ್ಕೆ 16–18 periods ಪಾಠವನ್ನು ಮಾಡುತ್ತಾರೆ. ವಾರ ಪೂರ್ತಿ ಕೆಲಸ ಇರುತ್ತದೆ. ಆದರೆ, ಅಲ್ಲಿ ಅಗತ್ಯವಾದ ಖಾಯಂ ಅಧ್ಯಾಪಕರು ಇಲ್ಲ, ತಾತ್ಕಾಲಿಕ ಅಧ್ಯಾಪಕರ ಮೂಲಕ ಕಾಲೇಜುಗಳನ್ನು ನಡೆಸಲಾಗುತ್ತಿದೆ. ಕೆಲವು ವಿಭಾಗಗಳಲ್ಲಿ ವಿದ್ಯಾರ್ಥಿಗಳು ಇಲ್ಲದೆ ಕ್ಲಾಸ್ ಇಲ್ಲದೇ ಇರತಕ್ಕಂತಹ ಅಧ್ಯಾಪಕರು 70–80 ಸಾವಿರ ವೇತನವನ್ನು ಪಡೆಯುತ್ತಿದ್ದಾರೆ. ಆದರೆ, ವಾರ ಪೂರ್ತಿ ಕೆಲಸ ಮಾಡುವ ಈ ಅತಿಥಿ ಉಪನ್ಯಾಸಕರು ಕೇವಲ 8–10 ಸಾವಿರ ವೇತನವನ್ನು ಪಡೆಯುತ್ತಿದ್ದಾರೆ. ಇದು ಬಹಳ ವಿಚಿತ್ರವಾದ ಸಂಗತಿಯಾಗಿದೆ. ಮಾನ್ಯ ಶಿಕ್ಷಣ ಮಂತ್ರಿಗಳು ಬಹಳ ಅನುಭವಿಗಳು ಮತ್ತು ಶಿಕ್ಷಣದ ಬಗ್ಗೆ ಹೆಚ್ಚಿನ ಕಳಕಳಿಯನ್ನು ಹೊಂದಿದಂತಹವರಾಗಿದ್ದಾರೆ. ಆವತ್ತಿನ ದಿವಸ ಚಾರ್ಜ್ ತೆಗೆದುಕೊಳ್ಳುತ್ತಿದ್ದ ಹಾಗೇಯೇ ಅವರು ಆ ಇಲಾಖೆಯ ಬಗ್ಗೆ ತೋರಿಸಿದಂತಹ ಕಾಳಜಿ ಮತ್ತು seriousness ಅನ್ನು ಗಮನಿಸುತ್ತಿದ್ದೇವೆ. ಅದು ನಮಗೂ ಗೊತ್ತಾಗಿದೆ. ಆದರೆ ಕೆಲವು ಸಂಗತಿಗಳನ್ನು ತುರ್ತಾಗಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ಹಿಂದೆ ಮಾತನಾಡಿದ ನನ್ನ ಅನೇಕ ಸ್ನೇಹಿತರು ಹಲವಾರು ಸಂಗತಿಗಳನ್ನು ಹೇಳಿದ್ದಾರೆ. ಆದುದರಿಂದಾಗಿ ನಾನು

ಮತ್ತೆ ಅವುಗಳ ಬಗ್ಗೆ ಪುನರ್ ಉಚ್ಚರಿಸುವುದಕ್ಕೆ ಹೋಗುವುದಿಲ್ಲ. ಅವರಿಗೆ ವರ್ಷವಿಡೀ ವೇತನ ಸಿಗುವಂತಾಗಬೇಕೆನ್ನುವುದು ನನ್ನ ಒತ್ತಾಯವಾಗಿದೆ. ವರ್ಷದ 12 ತಿಂಗಳಲ್ಲಿ 10 ತಿಂಗಳಾದರೂ ಅವರಿಗೆ ಸಂಬಳ ಪೂರ್ತಿ ಸಿಗುವ ರೀತಿಯಲ್ಲಿ ಸರ್ಕಾರ ವ್ಯವಸ್ಥೆ ಮಾಡಬೇಕು. ಕಾಲೇಜು ಪ್ರಾರಂಭವಾದ 4–5 ತಿಂಗಳ ನಂತರ ಅವರಿಗೆ ನೇಮಕಾತಿ ಆದೇಶವನ್ನು ನೀಡಿ, ಅವರಿಂದ 4–5 ತಿಂಗಳು ಕೆಲಸ ಮಾಡಿಸಿಕೊಂಡು ಮಧ್ಯದಲ್ಲಿ ಅವರನ್ನು ಕೈ ಬಿಡುವ ಸ್ಥಿತಿ ಏನಿದೆ ಅದನ್ನು ತಪ್ಪಿಸಬೇಕು. ಇಡೀ ವಾರ ಪೂರ್ತಿ ಕೆಲಸ ಮಾಡುವ ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ 8–10 ಸಾವಿರ ವೇತನ ಸಮಯಕ್ಕೆ ಸರಿಯಾಗಿ ಪೂರ್ತಿ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಮತ್ತು ಅವರೆಲ್ಲರೂ ಎಂ.ಎ., ಪಿ.ಹೆಚ್.ಡಿ. ಮಾಡಿಕೊಂಡಿರುತ್ತಾರೆ ಅವರಿಗೆ ಒಂದು ತಿಂಗಳಿಗೆ 8–10 ಸಾವಿರ ವೇತನವನ್ನು ನೀಡುತ್ತೀರಿ. ಈ ಅಧ್ಯಾಪಕರಿಗೆ ಎರಡನೇ ದರ್ಜೆ ಗುಮಾಸ್ತನಿಗೆ ಸಿಗುವ ಸಂಬಳಕ್ಕಿಂತ ಕಡಿಮೆ ವೇತನವನ್ನು ನೀಡುತ್ತಿರುವುದು ಸರಿಯಲ್ಲ. ಇದು ನಾಚಿಕೆಗೇಡಿನ ಸಂಗತಿಯಾಗಿದೆ. ಈ ಮೊತ್ತವನ್ನು ತಾವು ನಿಶ್ಚಿತವಾಗಿ ಹೆಚ್ಚು ಮಾಡಬೇಕು. ಒಬ್ಬ ಅತಿಥಿ ಉಪನ್ಯಾಸಕ ಎಂ.ಎ., ಎಂ.ಎಸ್ಸಿ., ಮಾಡಿಕೊಂಡು ಅಧ್ಯಾಪಕ ವೃತ್ತಿಗೆ ಸೇರುತ್ತಾನೆ. ಅವರು ಎಷ್ಟು ವರ್ಷ ಅರೆಕಾಲಿಕವಾಗಿ ಸೇವೆ ಸಲ್ಲಿಸಬೇಕು. ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಕಳೆದ ವರ್ಷ ಸಹ್ಯಾದ್ರಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧ್ಯಾಪಕರು ನನ್ನ ಹತ್ತಿರ ಬಂದು ಅವರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದಾಗ, ಕಳೆದ 8 ರಿಂದ 12 ವರ್ಷಗಳಿಂದ ಅವರುಗಳು ತಾತ್ಕಾಲಿಕ ಅಧ್ಯಾಪಕರಾಗಿಯೇ ಕರ್ತವ್ಯವನ್ನು ನಿರ್ವಹಿಸುತ್ತಿರುವುದು ತಿಳಿದು ಬಂತು. ಅವರ ಪರಿಸ್ಥಿತಿ ಹೀಗಿರುವಾಗ ಸಹಜವಾಗಿ ಅವರಿಗೆ ಮದುವೆಯನ್ನು ಮಾಡಿಕೊಳ್ಳುವುದಕ್ಕೂ ಕೂಡ ಆತಂಕವಾಗಿತ್ತು. ಏಕೆಂದರೆ, ಆ ಅಧ್ಯಾಪಕ ವೃತ್ತಿಯನ್ನು ನಂಬಿಕೊಂಡು ಮದುವೆಯನ್ನು ಮಾಡಿಕೊಂಡರೆ, ನಾಳೆ ಕೆಲಸದಿಂದ ತೆಗೆದು ಹಾಕಿದರೆ ಮುಂದೆ ಸಂಸಾರವನ್ನು ಸಾಕುವುದು ಹೇಗೆ ಎಂದು ಆತಂಕ ಇತ್ತು. ಅವರ ಈ ಒಂದು ಆತಂಕವನ್ನು ಸರ್ಕಾರ ದೂರ ಮಾಡಬೇಕು. ಮೂರು ವರ್ಷಕ್ಕಿಂತ

ಹೆಚ್ಚು ಕಾಲ ಅವರ್‍ಯಾರೂ ತಾತ್ಕಾಲಿಕ ಉಪನ್ಯಾಸಕರಾಗಿ ಇರಬಾರದು, ಅವರನ್ನು ಸ್ಥಾಯಿಗೊಳಿಸುವಂತಹ (ಪರ್ಮನೆಂಟ್) ಕೆಲಸವನ್ನು ಸರ್ಕಾರ ಕೂಡಲೇ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಒಂದು ಮಿತಿಯನ್ನು ಹಾಕಬೇಕು. Clear vacancy ಇದ್ದರೆ ಆ ರೀತಿಯಲ್ಲಿ ಅವರನ್ನು ಸೇವೆಯಲ್ಲಿ induct ಮಾಡುವುದಕ್ಕೆ ಬೇಕಾದಂತಹ ಕ್ರಮವನ್ನು ದಯಮಾಡಿ ತೆಗೆದುಕೊಳ್ಳಬೇಕು. ಹಿಂದೆ ಯಾರೋ ಮಾಡಿದ್ದರು ಎಂದು ಆಪಾದನೆ ಮಾಡುವ ಪ್ರಶ್ನೆ ಆಗಬಾರದು. ಈ ಪ್ರಕರಣವನ್ನು ತುರ್ತಾಗಿ ಬಹಳ ಗಂಭೀರವಾಗಿ ಪರಿಗಣಿಸಬೇಕು. ಇದು ಮಾನವೀಯತೆಯ ಅನುಕಂಪದ ವಿಷಯವಾಗಿದೆ. ದಯವಿಟ್ಟು ಕೂಡಲೇ ಈ ಬಗ್ಗೆ ಗಮನ ಹರಿಸುತ್ತೀರೆಂದು ನಾನು ಅಪೇಕ್ಷೆ ಪಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯು.ಜಿ.ಸಿ. ಯಲ್ಲಿ ಈ ಬಗ್ಗೆ ನಿಯಮಾವಳಿ ಏನಿದೆ ಎಂದು ನೀವು ಕೆಲವು ಸಾಲುಗಳನ್ನು ಓದುತ್ತೇನೆ. ಅದರಲ್ಲಿ; **"However, the qualifications and selection procedure of appointing them should be the same as of the regularly appointed teachers. The fixed emoluments paid to such Contract Teachers should not be less than the monthly gross salary of the regularly appointed Lecturers"** ಎಂದಿದೆ. ಅಂದರೆ, ಅವರಿಗೆ ಕೊಡಬೇಕೆಂದೇನೂ ಇಲ್ಲ. Regular Lecturers ಇದ್ದವರು 8 periods ತೆಗೆದುಕೊಳ್ಳುತ್ತಾರೆ. ಆದರೆ ಇವರು 12–14 periods ತೆಗೆದುಕೊಳ್ಳುತ್ತಾರೆ. ಒಂದೇ ಕೆಲಸ ಮಾಡುವ ಇಬ್ಬರಿಗೂ ಸಮಾನ ವೇತನವನ್ನು ಇಲ್ಲಿ ಕೊಡುತ್ತಿಲ್ಲ. ಆದರೂ regular ಇದ್ದವರಿಗೆ ಕೊಡಬೇಕೆಂದು U.G.C. Guidelines ಇದೆ. Circular ಅನ್ನು ನಾನು ತಂದಿದ್ದೇನೆ ತಾವು ನೋಡಿ. ತಾವು ತಮ್ಮ ಎಲ್ಲ ಹಿರಿಯ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ 80 ಪರ್ಸೆಂಟ್ ಅಧ್ಯಾಪಕರು ಈ contract basis, part time basis ನಲ್ಲಿ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ಇವರುಗಳನ್ನು regularize ಮಾಡುವುದಕ್ಕೆ

ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅವರು ನಮ್ಮನ್ನು ಖಾಯಂಗೊಳಿಸಿ ಎಂದು ಧರಣಿ ಮಾಡುತ್ತಿದ್ದಾರೆ. ಇದರಿಂದಾಗಿ ಮಕ್ಕಳಿಗೆ ತೊಂದರೆಯಾಗುತ್ತಿದೆ ಈ ಎಲ್ಲಾ ಗೊಂದಲಗಳನ್ನು ನಿವಾರಣೆ ಮಾಡುವ ಸಲುವಾಗಿ ಸಾಧ್ಯವಾದಷ್ಟೂ regular teachers ಅನ್ನು ಆದಷ್ಟು ಬೇಗನೆ ನೇಮಕಾತಿ ಮಾಡಿ. ಅನಾವಶ್ಯಕ ತೊಂದರೆಗಳನ್ನು ನಿವಾರಣೆ ಮಾಡುವುದರ ಜೊತೆಗೆ ತೊಂದರೆಗಳು create ಆಗಬಾರದೆಂದು ನಾನು ಹೇಳಬಯಸುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಚರ್ಚೆಯಲ್ಲಿ ಭಾಗವಹಿಸಿದಂತಹ ಈ ಸದನದ ಎಲ್ಲಾ ಹಿರಿಯ ಸದಸ್ಯರು ಅತಿಥಿ ಉಪನ್ಯಾಸಕರ ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರುಗಳು ಮಾತನಾಡುತ್ತಾ, ಅತಿಥಿ ಉಪನ್ಯಾಸಕರುಗಳಿಗೆ ನೀಡಬೇಕಾದ ಬಾಕಿ ಮೊತ್ತ 52 ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತ ಏನಿದೆ, ಇದು ಹೇಗೆ ಬಾಕಿ ಉಳಿಯಿತು? ಎಂದು ಪ್ರಶ್ನೆ ಕೇಳಿದರು. ಇದು ಈ ವರ್ಷ ಅಥವಾ ಕಳೆದ ವರ್ಷದ ಬಾಕಿ ಅಲ್ಲ. 2010–11 ರಿಂದ ಆಯವ್ಯದಲ್ಲಿ ಇದಕ್ಕೆ ಸರಿಯಾದ provision ಮಾಡದೇ ಇರುವುದು. ಅದಕ್ಕೆ ಮುಖ್ಯವಾದ ಕಾರಣವಾಗಿದೆ. ನಾನು ಈ ಬಗ್ಗೆ ಯಾರ ಮೇಲೂ ಆಪಾದನೆ ಮಾಡುತ್ತಿಲ್ಲ. ಇದಕ್ಕೆ ಹಣಕಾಸು ಇಲಾಖೆಯ ಸಮ್ಮತಿಯನ್ನು ಸಹ ತೆಗೆದುಕೊಂಡಿಲ್ಲ. ಹಾಗಾಗಿ ಈ ಮೊತ್ತ ಬಾಕಿ ಉಳಿದಿದೆ. ಎಷ್ಟು ಜನ ಅತಿಥಿ ಉಪನ್ಯಾಸಕರು ಬೇಕೋ ಅಷ್ಟು ಜನರನ್ನು ತೆಗೆದುಕೊಳ್ಳಲೇಬೇಕಾಗಿದೆ. ನಾವು ಈ ವಿಚಾರದಲ್ಲಿ compromise ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಯಾವಾಗಲೂ ಆರ್ಥಿಕ ಶಿಸ್ತು ಇರಬೇಕಾಗುತ್ತದೆ. ಆರ್ಥಿಕ ಶಿಸ್ತು ಇಲ್ಲದೇ ಹೋದರೆ ಯಾವ ಸರ್ಕಾರಕ್ಕೂ ಸಹ ಯಾವುದೇ ಯೋಜನೆಯಲ್ಲಿ ಸರಿಯಾಗಿ ಕಾರ್ಯ ನಿರ್ವಹಿಸುವುದಕ್ಕಾಗುವುದಿಲ್ಲ. ವೇತನ ಕೊಡುವ ಪ್ರಶ್ನೆ ಇರಬಹುದು ಅಥವಾ ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ ಯಾವುದೇ ಕಾರ್ಯವನ್ನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ತಾವುಗಳು ಹೇಳುತ್ತಿರುವುದು ನಿಜ. ಪ್ರತಿ ತಿಂಗಳೂ ಅವರಿಗೆ ವೇತನ ಸಿಗಲಿಲ್ಲವೆಂದರೆ ಅವರ ಕುಟುಂಬಕ್ಕೆ ತೊಂದರೆಯಾಗುತ್ತದೆ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ

ಎನ್ನುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆ ದಿಕ್ಕಿನಲ್ಲಿ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಸಹ ಮಾಡುತ್ತೇವೆ. ಗೌರವಧನದ ಬಾಕಿ ಮೊತ್ತ 52 ಕೋಟಿ ರೂಪಾಯಿಗಳನ್ನು ಕೊಡುವುದರ ಬಗ್ಗೆ ಗೌರವಾನ್ವಿತ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಹಣಕಾಸಿನ ಇಲಾಖೆಯ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಆದರೆ, ಈ ಬಾಕಿ ಹಣ 52 ಕೋಟಿ ರೂಪಾಯಿಗಳನ್ನು ಇದೇ ತಿಂಗಳು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳುವುದಿಲ್ಲ. ಆದರೆ ನಿಮಗೆಲ್ಲರಿಗೂ ಸಮಾಧಾನ ಆಗುವಂತೆ ಅವರಿಗೆ ಬಾಕಿ ಕೊಡಬೇಕಾದ 52 ಕೋಟಿ ರೂಪಾಯಿಗಳು ಏನಿದೆ, ಅದನ್ನು ಈ ಜೂನ್ ತಿಂಗಳೊಳಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂಬ ಭರವಸೆಯನ್ನು ಕೊಡಬಯಸುತ್ತೇನೆ. ಮಾನ್ಯ ಗಣೇಶ್ ಕಾರ್ಣಿಕ್ ಅವರು 'ನಾಚಿಕೆ ಬರಬೇಕು' ಎಂದು ಹೇಳಿದರು. ಇದರಿಂದ ಯಾರಿಗೆ ನಾಚಿಕೆ ಆಗಬೇಕು ಎಂಬುದನ್ನು ನೀವೇ ನಿರ್ಣಯ ಮಾಡಿ. ಅದನ್ನು ನಾನು ಹೇಳುವುದಿಲ್ಲ. ನೀವು ಹೇಳಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ. ಹಿಂದೆ ಮುಂದೆ ಏನಾಯಿತೆಂದು ನಾನು ಹೇಳುತ್ತಿಲ್ಲ. ಈ ಜವಾಬ್ದಾರಿ ನಮ್ಮ ಮೇಲೆ ಬಂದಾಗ ಅದನ್ನು ಸರಿಪಡಿಸಬೇಕಾಗುತ್ತದೆ. ನಾನು ಯಾರ ಮೇಲೂ ಆಪಾದನೆ ಮಾಡುತ್ತಿಲ್ಲ. ಆದರೆ, ಆಪಾದನೆ ಮಾಡುವುದಕ್ಕಿಂತ ಟೀಕೆ ಟಿಪ್ಪಣಿ ಏನು ಮಾಡುತ್ತಿದ್ದೀರಿ ಅದನ್ನು ವಿಚಾರ ಮಾಡಿ ಮಾಡಬೇಕಾಗುತ್ತದೆ. ನೀವು ನಮ್ಮ ಮೇಲೆ ಟೀಕೆ ಟಿಪ್ಪಣಿ, ಆಪಾದನೆ ಮಾಡುವಾಗ ವಿಚಾರ ಮಾಡಿ ನಂತರ ಟೀಕೆ ಟಿಪ್ಪಣಿ ಮಾಡಬೇಕಾಗುತ್ತದೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಚಿವರು, 'ನಮಗೆ ಕೊಡುವುದಕ್ಕೆ ಆಗಲಿಲ್ಲ, ನಾಚಿಕೆ ಆಗಬೇಕು' ಎಂದು ಅವರ ಮೇಲೆಯೇ ಅವರು ಹೇಳಿಕೊಂಡರು ಅಷ್ಟೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಹಿಂದೆ ಯಾವುದೋ ಕಾರಣಕ್ಕಾಗಿ ಮಾಡುವುದಕ್ಕೆ ಆಗಿರಲಿಲ್ಲ. ನಾವುಗಳು ಪ್ರತಿ ಅಧಿವೇಶನದಲ್ಲಿಯೂ ಕೂಡ ಅತಿಥಿ ಉಪನ್ಯಾಸಕರಿಗೆ ವೇತನವನ್ನು ಬಿಡುಗಡೆ ಮಾಡುವ ಬಗ್ಗೆ

ಮಾತನಾಡಿದ್ದೇವೆ. ಯಾವತ್ತಿದ್ದರೂ ಕೂಡ ಇವರಿಗೆ ವೇತನವನ್ನು ಕೊಡಲೇಬೇಕಾಗುತ್ತದೆ.

(ಗೊಂದಲ)

**ಶ್ರೀ ಕೆ. ಅಭಯಚಂದ್ರ:–** ಯಾವುದೋ ಕಾರಣಕ್ಕಾಗಿ ಅಲ್ಲ. ಅದನ್ನು ನೀವು ಒಪ್ಪಿಕೊಳ್ಳಿ.

**ಶ್ರೀ ಆರ್.ವಿ. ದೇಶಪಾಂಡೆ:–** ನನಗೆ ಮಾತನಾಡುವುದಕ್ಕೇ ಅವಕಾಶ ಕೊಡಲಿಲ್ಲವೆಂದರೆ ಹೇಗೆ?

**ಸಭಾಪತಿಯವರು:–** ಮಾನ್ಯ ಸಚಿವರು ನೀವು ಪ್ರಸ್ತಾಪ ಮಾಡಿದಂತಹ ಮೂರು ವಿಷಯಗಳ ಪೈಕಿ ಒಂದು ವಿಷಯಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ಎರಡು ಪ್ರಶ್ನೆಗಳಿಗೆ ಉತ್ತರ ಬೇಡವೆಂದು ಹೇಳುವುದಾದರೆ, ನಾನು ಈ ಚರ್ಚೆಯನ್ನು ಮುಕ್ತಾಯಗೊಳಿಸುತ್ತೇನೆ. ನಿಮಗೆ ಉತ್ತರ ಬೇಡವೆಂದರೆ ನಾನೇನು ಮಾಡಲಿ.

**ಶ್ರೀ ಆರ್.ವಿ. ದೇಶಪಾಂಡೆ:–** ಅತಿಥಿ ಉಪನ್ಯಾಸಕರ ನೇಮಕಾತಿ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಆಗಿದ್ದು ನಿಜ. ನಮ್ಮ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಮೇಲೆ ದುಷ್ಪರಿಣಾಮ ಆಗಿದ್ದು ನಿಜ. ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ಮುಖ್ಯವಾಗಿ ಶಿಕ್ಷಣದ ಗುಣಮಟ್ಟಕ್ಕೆ ಹೆಚ್ಚಿನ ಮಹತ್ವ ಕೊಡಬೇಕೆಂದು ನಾವೆಲ್ಲರೂ ಪದೇ ಪದೇ ಹೇಳುತ್ತಿರುತ್ತೇವೆ. ನಮ್ಮಲ್ಲಿ ಕಾಲೇಜುಗಳು ಇವೆ. ಕಟ್ಟಡಗಳು ಇಲ್ಲ, ಉಪನ್ಯಾಸಕರು ಇಲ್ಲ. ಆದರೆ, ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ ಎನ್ನುವುದು ನಿಜ. ಏನು ಮಾಡಬೇಕು ಹೇಳಿ.

2009ನೇ ಇಸವಿಯಿಂದ 2011ನೇ ಇಸವಿಯವರೆಗೆ, I am subject to correction, 192 ಹೊಸ ಪದವಿ ಕಾಲೇಜುಗಳನ್ನು ಸರ್ಕಾರ ಮಂಜೂರು ಮಾಡಿದೆ. ಒಂದು ಕಾಲೇಜಿಗೆ ಕಟ್ಟಡ ಇರುವುದಿಲ್ಲ, ಮತ್ತೊಂದು ಕಾಲೇಜಿನಲ್ಲಿ ಪ್ರಾಧ್ಯಾಪಕರುಗಳಿರುವುದಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ ಅವುಗಳನ್ನು

ನಿಮ್ಮಗಳ ಸಹಕಾರದಿಂದ ಸರಿಪಡಿಸಬೇಕಾಗಿದೆ. ಅದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಸೌಕರ್ಯಗಳಿಲ್ಲ, ಮತ್ತು ಮಾನವ ಸಂಪನ್ಮೂಲಗಳಿಲ್ಲದ, ಕಾಲೇಜುಗಳು ಬಂದರೆ ಏನು ಪ್ರಯೋಜನ? ಕೆಲವು ಕಾಲೇಜುಗಳಲ್ಲಿ ಬೋಧಕರುಗಳಿಲ್ಲ, ಸಿಬ್ಬಂದಿಗಳಿಲ್ಲ. ಈ ರೀತಿಯ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ. ಹಾಗಾಗಿ ಒಂದು ಕಡೆ ಆರ್ಥಿಕ ಶಿಸ್ತು ಇರಬೇಕಾಗುತ್ತದೆ. ಕಾಲೇಜುಗಳು ಮಂಜೂರು ಆದಮೇಲೆ ಕ್ರಮೇಣ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಕಲಿಸುವುದಕ್ಕೆ ಪ್ರಾಧ್ಯಾಪಕರುಗಳಿರಬೇಕಾಗುತ್ತದೆ. ಇಲ್ಲವೆಂದರೆ ಅದನ್ನು 'ಕಾಲೇಜು' ಎನ್ನುವುದಿಲ್ಲ. ಯಾವ ರೀತಿಯ asset create ಮಾಡಲಾಗುತ್ತಿದೆ. ಎಂದರೇ, ಇವತ್ತು B.A.,, B.Ed., ಪದವಿಯನ್ನು ಕೊಟ್ಟರೆ ಅವರು ಈ ರಾಷ್ಟ್ರಕ್ಕೆ asset ಆಗಬೇಕೋ ಅಥವಾ liability ಆಗಬೇಕೋ ಎನ್ನುವ ವಿಚಾರದ ಬಗ್ಗೆ ನಾವು ನೀವು ಕೂಡ ಯೋಚನೆ ಮಾಡಬೇಕಾಗುತ್ತದೆ. ಹಾಗಾಗಿ ಮುಂದೆ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಎರಡನೆಯದಾಗಿ, ತಾವು ಹೇಳಿರುವಂಥದ್ದು ನಿಜ. ಈ ಬಾರಿ ಆ ರೀತಿಯ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವಶ್ಯಕತೆ ಇಲ್ಲದೇ ಇರುವಂತಹ ಕಡೆಯಲ್ಲಿ ಕಾಲೇಜುಗಳನ್ನು ರದ್ದು ಮಾಡಲಿ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾನು outer limit ಹೇಳುತ್ತೇನೆ. 15ನೇ ಜುಲೈ 2013ರ ಒಳಗೆ ಎಲ್ಲಾ ಅತಿಥಿ ಉಪನ್ಯಾಸಕರನ್ನು ಅವರವರ ಸ್ಥಾನದಲ್ಲಿ ತುಂಬುತ್ತೇವೆಂದು ಭರವಸೆಯನ್ನು ಕೊಡುತ್ತಿದ್ದೇನೆ.

**Mr. CHAIRMAN:-** Fine, fine.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಅದೇ ಪ್ರಕಾರ ಈ ಅತಿಥಿ ಉಪನ್ಯಾಸಕರ ಸಂಬಳದ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಇವರಗಳನ್ನು ತಾತ್ಕಾಲಿಕವಾಗಿ ಕೆಲಸಕ್ಕೆ

ತೆಗೆದುಕೊಂಡಿದ್ದೇವೆ. ತಾವು ಗೌರವನ್ವಿತ ರಾಜ್ಯಪಾಲರ ಭಾಷಣವನ್ನು ಓದಿದ್ದರೆ ಗೊತ್ತಾಗಬಹುದು. ಅದರಲ್ಲಿ ಬಹಳ ಸ್ಪಷ್ಟವಾಗಿ, 'ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ಅತೀ ಶೀಘ್ರದಲ್ಲಿ ನೇಮಕಾತಿಯನ್ನು ಮಾಡುತ್ತೇವೆ' ಎಂದು ಹೇಳಿದ್ದೇವೆ. ಆ ದಿಕ್ಕಿನಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅತಿಥಿ ಉಪನ್ಯಾಸಕರಿಗೆ ಕೊಡುವಂತಹ ವೇತನದ ವಿಚಾರ ಬಂದಾಗ, ಅವರಿಗೆ ತಿಂಗಳಿಗೆ ಕೊಡುವಂತಹ 8,000 ರೂಪಾಯಿಗಳು, 10,000 ರೂಪಾಯಿಗಳು ಕಡಿಮೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಆ 8,000 ರೂಪಾಯಿಗಳನ್ನು, 10,000 ರೂಪಾಯಿಗಳನ್ನೇ ಅವರಿಗೆ ಸರಿಯಾಗಿ ಕೊಡುವುದಕ್ಕೆ ಆಗುತ್ತಿಲ್ಲ. ಮುಂದೆ ಹೆಚ್ಚು ಮಾಡಿದರೆ ಮುಂದಿನ ಸಾರಿ ಪುನಃ 100 ಕೋಟಿ ರೂಪಾಯಿಗಳು ಅತಿಥಿ ಉಪನ್ಯಾಸಕರಿಗೆ ಬಾಕಿ ಕೊಡಬೇಕೆಂದು ನೀವು ಹೇಳುತ್ತೀರಿ, ನಾನು ಉತ್ತರವನ್ನು ಕೊಡಬೇಕಾಗುತ್ತದೆ. ಆದುದರಿಂದ ಅವರುಗಳಿಗೆ ಏನು ಬಾಕಿ ಕೊಡಬೇಕು ಅದನ್ನು ಮೊದಲು ಕೊಟ್ಟು, ಉಳಿದ ವಿಚಾರದ ಬಗ್ಗೆ ಚಿಂತನೆ ಮಾಡುತ್ತೇವೆಂದು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಇನ್ನು ಮೂರನೆಯದಾಗಿ U.G.C., ಮಾರ್ಗಸೂಚಿ ಇವರಿಗಿಲ್ಲ. ಖಾಯಂ ಉಪನ್ಯಾಸಕರುಗಳ ಕೊರತೆ ಇರುವುದರಿಂದ Workload ನೋಡಿಕೊಂಡು ಅದರ ಆಧಾರದ ಮೇಲೆ ಅತಿಥಿ ಉಪನ್ಯಾಸಕರಗಳನ್ನು ತಾತ್ಕಾಲಿಕವಾಗಿ ಕೆಲಸಕ್ಕೆ ತೆಗೆದುಕೊಂಡಿದ್ದೇವೆ. ನಾನು U.G.C., ಮಾರ್ಗಸೂಚಿ ನೋಡಿದ್ದೇನೆ. ಅತಿಥಿ ಉಪನ್ಯಾಸಕರಿಗೆ U.G.C., ಮಾರ್ಗಸೂಚಿ ಅನ್ವಯಿಸುವುದಿಲ್ಲ. ಇದರಲ್ಲಿ ನಿಮ್ಮೆಲ್ಲರ ಸಹಕಾರ ಇದ್ದರೆ ಪ್ರಾಥಮಿಕ ಶಿಕ್ಷಣ, ಉನ್ನತ ಶಿಕ್ಷಣ ಕ್ಷೇತ್ರದ ಗುಣಮಟ್ಟದಲ್ಲಿ ಸುಧಾರಣೆಯನ್ನು ತರುವುದಕ್ಕೆ ಸಾಧ್ಯವಾಗಬಹುದು. ಅದನ್ನು ಮಾಡುವುದಕ್ಕೆ ತಾವುಗಳೆಲ್ಲರೂ ಸಹಕರಿಸುತ್ತೀರಿ ಎನ್ನುವಂತಹ ವಿಶ್ವಾಸ ಇದೆ. ಆ ದಿಸೆಯಲ್ಲಿ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಅತಿಥಿ ಉಪನ್ಯಾಸಕರುಗಳಿಗೆ ಪ್ರತಿ ತಿಂಗಳು ವೇತನವನ್ನು ಕೊಡುವುದರ ಬಗ್ಗೆ ನೀವು ಉತ್ತರವನ್ನು ಕೊಡಲಿಲ್ಲ. ಬಾಕಿ ಎಲ್ಲಾ ವಿಚಾರಗಳ ಬಗ್ಗೆ ಉತ್ತರವನ್ನು ಕೊಟ್ಟಿರುತ್ತೀರಿ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಕಳೆದ ವರ್ಷ 10,500 ಅತಿಥಿ ಉಪನ್ಯಾಸಕರುಗಳಿದ್ದರು. ಅವರಿಗೆ ಸಂಬಳವನ್ನು ಕೊಡುವುದಕ್ಕೆ ಒಬ್ಬರಿಗೆ 8,000 ರೂಪಾಯಿಗಳಂತೆ ಲೆಕ್ಕ ಹಾಕಿದರೇ ಒಂದು ವರ್ಷಕ್ಕೆ ಸುಮಾರು 85 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಬಜೆಟ್‌ನಲ್ಲಿ ಸರ್ಕಾರ provision ಮಾಡಿರುವಂಥದ್ದು ಕೇವಲ 27 ಕೋಟಿ ರೂಪಾಯಿಗಳು ಮಾತ್ರ. ಹಾಗಾಗಿ ಈ ರೀತಿಯ ತೊಂದರೆಯಾಗಿದೆ. ನಮ್ಮ ಸರ್ಕಾರ ಜುಲೈ ತಿಂಗಳಿನಲ್ಲಿ ಬಜೆಟ್ ಮಂಡನೆ ಮಾಡುತ್ತದೆ. ಆಗ ವಸ್ತುಸ್ಥಿತಿ ಏನಿದೆ ಅದನ್ನು ಮಾನ್ಯ ಮುಖ್ಯಮಂತ್ರಿಗಳ ಮತ್ತು ಹಣಕಾಸು ಇಲಾಖೆಯ ಗಮನಕ್ಕೆ ತೆಗೆದುಕೊಂಡು ಬಂದು ಸರಿಯಾಗಿ ಹಣವನ್ನು provision ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆಗ automatically ಸರಿಯಾಗುತ್ತದೆ. ಆದರೆ, ಇವತ್ತೇ ಮಾಡಿ ಬಿಡುತ್ತೇನೆಂದು ಹೇಳುವುದಿಲ್ಲ. ಯಾರು ಕೆಲಸ ಮಾಡುತ್ತಾರೆ ಅವರಿಗೆ ಪ್ರತಿ ತಿಂಗಳು ವೇತನವನ್ನು ಕೊಡಬೇಕು. ಅತಿಥಿ ಉಪನ್ಯಾಸಕರಿಗೆ 4 ತಿಂಗಳಿಗೆ, 6 ತಿಂಗಳಿಗೆ, 1 ವರ್ಷದವರೆಗೆ ಅವರಿಗೆ ವೇತನ ಸಿಗಲಿಲ್ಲವೆಂದರೆ ಅವರ ಮನಸ್ಸಿನ ಸ್ಥಿತಿ ಏನಾಗಬೇಕು? ಇದು ಸರಿಯಾದುದ್ದಲ್ಲ. ಯಾವುದೇ ಸರ್ಕಾರ ಅಂತಹ ಕೆಲಸವನ್ನು ಮಾಡಬಾರದು. ಇದು ಸರ್ಕಾರದ ಜವಾಬ್ಧಾರಿಯಾಗಿದೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಇವತ್ತೇ ನಾನು ಹೀಗೆ ಮಾಡುತ್ತೇನೆ, ಹಾಗೆ ಮಾಡುತ್ತೇನೆಂದು ಭರವಸೆ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ, ಬಜೆಟ್‌ನಲ್ಲಿ ಕೇವಲ 27 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಹಿಂದಿನ ಬಾಕಿ 62 ಕೋಟಿ ರೂಪಾಯಿಗಳನ್ನು ನೀಡಲಾಗಿತ್ತು. ಆದರೆ, ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಾವು ಮುಂದಿನ ಬಾರಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದೇ ರೀತಿಯಾದರೆ ಈ ವಿಷಯವನ್ನು ಮುಂದಿನ ಸಾರಿಯೂ ಪ್ರಸ್ತಾಪ ಮಾಡುತ್ತಲೇ ಇರುತ್ತೀರಿ,

ನಾನು ಉತ್ತರವನ್ನು ಕೊಡುತ್ತಲೇ ಇರಬೇಕಾಗುತ್ತದೆ. ಆಗ ತಮಗೆ ಸರಿಯಾದಂತಹ ಮಾಹಿತಿಯನ್ನು ಆ ಸಮಯದಲ್ಲಿ ಕೊಡುತ್ತೇನೆ.

**ಶ್ರೀ ಗೋ. ಮಧುಸೂಧನ್:-** ಮಾನ್ಯ ಸಭಾಪತಿಯವರೇ, ಯಾವ ಪಕ್ಷದವರೇ ಸರ್ಕಾರ ನಡೆಸಲಿ, ಹಣಕಾಸು ಇಲಾಖೆ ಒಂದೇ ಅಗಿರುತ್ತದೆ. **"**If the file is correct, they (Finance Department) reject it twice" ಎನ್ನುವಂತಹ ಮಾತಿದೆ. ಆದುದರಿಂದ ಮಾನ್ಯ ಸಚಿವರು ಹಿರಿಯ ಸದಸ್ಯರಿದ್ದಾರೆ. ಆನೇಕ ದೊಡ್ಡ ದೊಡ್ಡ ಖಾತೆಗಳನ್ನು ನಿರ್ವಹಣೆ ಮಾಡಿದ್ದಾರೆ. ದಯಮಾಡಿ ಏನಾದರೂ ಮಾಡಿ, **'**tight**'** ಮಾಡುವಂತಹ ಕೆಲಸವನ್ನು ಮಾಡಬೇಕು.

**Mr.CHAIRMAN :-** 'Tight' ಮಾಡುವುದ್ಯಾವುದೂ ಬೇಡ. ಅತಿಥಿ ಉಪನ್ಯಾಸಕರುಗಳಿಗೆ ಸಂಬಳವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾವು ತಿಳಿದುಕೊಂಡಿದ್ದು ಏನೆಂದರೆ, ಶ್ರೀ ಆರ್.ವಿ. ದೇಶಪಾಂಡೆಯವರು ಕಂದಾಯ ಅಥವಾ ಭಾರೀ ಕೈಗಾರಿಕೆ ಇಲಾಖೆಯ ಸಚಿವರಾಗುತ್ತಾರೆಂದು ತಿಳಿದುಕೊಂಡಿದ್ದೆವು. ಏಕೆಂದರೆ ಇವರು ಕೂಡ ಮುಖ್ಯಮಂತ್ರಿ ಪದವಿಯ ಆಕಾಂಕ್ಷಿಯಾಗಿದ್ದರು. ಶ್ರೀ ವೀರಪ್ಪ ಮೊಯ್ಲಿ ಮತ್ತು ಶ್ರೀ ಎಸ್. ಬಂಗಾರಪ್ಪನವರ ಕಾಲದಲ್ಲಿ ಯಾರು ಮುಖ್ಯಮಂತ್ರಿ ಪದವಿಯ ಆಕಾಂಕ್ಷಿಯಾಗಿರುತ್ತಾರೆ, ಇವರಗಳನ್ನು unpopular ಮಾಡುವುದಕ್ಕೆ ಶಿಕ್ಷಣ ಸಚಿವರನ್ನಾಗಿ ಮಾಡುತ್ತಿದ್ದರು. ಆದರೆ, ಇವರು ಅದರಲ್ಲಿ successful ಆಗಬಹುದೆಂದು ನನಗನ್ನಿಸುತ್ತದೆ.

**ಪ್ರೊ: ದೊಡ್ಡರಂಗೇಗೌಡ:-** ಮಾನ್ಯ ಸಭಾಪತಿಯವರೇ,

**ಎಲ್ಲಿಯವರೆಗೆ ಪರಸ್ಪರ ದೋಷಾರೋಪಣೆ!!**

**ಸ್ವೀಕರಿಸಿರಬೇಕು ಸವಾಲುಗಳನ್ನು, ಅದೇ ನಿಜವಾದ ಚಿಂತನೆ**

**ಅಲ್ಲಿ ಇತ್ಯಾತ್ಮಕವಾಗಲಿ ನಮ್ಮ ಕಾರ್ಯ ಸಾಧನೆ.**

**ನಮ್ಮನ್ನು ನೀವು, ನಿಮ್ಮನ್ನು ನಾವು ಟೀಕಿಸಿಕೊಂಡೇ**

**ಪ್ರಗತಿ ರಥ ಕಿಲುಬುಗಟ್ಟಿದೆ.**

**ಈಗಾಗಲಾದರು ಕೀಲೆಣ್ಣೆ ಹಾಕಿ ಕಾಯಕಲ್ಪ ಮಾಡಿ.**

**Mr.CHAIRMAN:-** Thank you. ನಿನ್ನೆಯ ದಿವಸ ಎರಡು ಗಮನ ಸೆಳೆಯುವ ಸೂಚನೆ ಮತ್ತೊಂದು ನಿಯಮ 330ರ ಅಡಿಯಲ್ಲಿ ಎರಡನ್ನು ಅಜೆಂಡಾದಲ್ಲಿ ಸೇರಿಸಲಾಗಿದೆ. ಆದರೆ, ಆ ಇಲಾಖೆಗೆ ಸಂಬಂಧಪಟ್ಟ ಸಚಿವರು ನನ್ನನ್ನು ಸಂಪರ್ಕ ಮಾಡಿ ಒಂದು ವಿಷಯವನ್ನು ತಿಳಿಸಿದ್ದಾರೆ. ಅವರು 'ಇವತ್ತು ಒಂದು ತುರ್ತು ಕಾರಣಕ್ಕಾಗಿ ಸಭೆಗೆ ಬರುವುದಕ್ಕಾಗುತ್ತಿಲ್ಲ. ದಯಮಾಡಿ ಈ ವಿಷಯಗಳನ್ನು ನಾಳೆ ದಿವಸ ತೆಗೆದುಕೊಳ್ಳಿ' ಎಂದು ಕೇಳಿಕೊಂಡಿದ್ದಾರೆ. ಆ ಎರಡು ವಿಷಯಗಳನ್ನು ನಾಳೆ ದಿವಸ ತೆಗೆದುಕೊಳ್ಳುತ್ತೇನೆ. ಏಕೆಂದರೆ, ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಡಬೇಕು, ಇಲ್ಲವೆಂದರೆ ಸಭಾ ನಾಯಕರು ಉತ್ತರವನ್ನು ಕೊಡಬೇಕು. ಆದರೆ, ಉತ್ತರವೇ ತಯಾರಾಗಿ ಬರದೇ ಇರುವ ಕಾರಣಕ್ಕಾಗಿ ಅವರೆಡು ವಿಷಯವನ್ನು relist ಮಾಡುವುದಕ್ಕೆ ಆದೇಶವನ್ನು ಮಾಡಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದಾಗ relist ಆಗಬಾರದೆಂದು ಅದನ್ನೇ ಮಾತನಾಡುತ್ತಿದ್ದರು. Relist ಆಗುವಂಥದ್ದು ಆಗಬಾರದು. ಅವತ್ತಿನ ದಿವಸದ ಅಜೆಂಡಾದಲ್ಲಿ ಏನು ಇರುತ್ತದೆ ಅದನ್ನು ಅವತ್ತಿನ ದಿವಸವೇ ತೆಗೆದುಕೊಂಡು ಸರ್ಕಾರ ಉತ್ತರವನ್ನು ಕೊಡುವಂಥದ್ದು ಆಗಬೇಕು. ಶ್ರೀ ಎಸ್.ಆರ್. ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಹಿಂದೆ ಏನೇನು ಮಾತನಾಡಿದ್ದರು ಅದನ್ನು ಸದನಕ್ಕೆ ಬರುವುದಕ್ಕೂ ಮುಂಚೆ ಒಂದು ಸಾರಿ ಓದಿಕೊಂಡು ಬರಬೇಕು. ಇಲ್ಲದೇ

ಹೋದರೆ ಓದುವುದಕ್ಕೆ ನಾವು ಆ ನಡವಳಿಗಳನ್ನು ತೆಗೆದುಕೊಂಡು ಬಂದು ಕೊಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಒಂದು ವಿಷಯವನ್ನು ತಿಳಿಸುವುದಕ್ಕೆ ಬಯಸುತ್ತೇನೆ. ನಾನು ನುಡಿದಂತೆ ನಡೆಯುವಂತಹ ವ್ಯಕ್ತಿ. ನಾನು ಹಿಂದೆ ಏನು ನುಡಿದಿದ್ದೇನೆ ಅದನ್ನೆಲ್ಲಾ ನೆನಪು ಇಟ್ಟುಕೊಂಡಿದ್ದೇನೆ. ವಿರೋಧ ಪಕ್ಷದ ನಾಯಕನಾಗಿದ್ದಾಗ ಏನು ಮಾಡಬೇಕೆಂದು ಹೇಳಿದ್ದೇನೆ. ಅದನ್ನೆಲ್ಲಾ implement ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. Hundred percent ಯಾರೂ perfect ಆಗುವುದಿಲ್ಲ. ಶ್ರೀ ಬಸವರಾಜ ಹೊರಟ್ಟಿಯವರು ಅತ್ಯಂತ ಹಿರಿಯ ಸದಸ್ಯರು. ಅಲ್ಲಿದ್ದಾಗ ಏನು ಮಾತನಾಡಿದ್ದೇನೆ. ಅದಕ್ಕೆ ವ್ಯತ್ತಿರಿಕ್ತವಾಗಿ ನಾನು ಯಾವತ್ತು ನಡೆದುಕೊಳ್ಳುವುದಿಲ್ಲ. ನಿಶ್ಚಿತವಾಗಿ ನಾವು ನುಡಿದಂತೆ ಮಾಡುತ್ತೇವೆ. ಅದರಲ್ಲಿ ಎರಡು ಮಾತುಗಳಿಲ್ಲ. ಅವರುಗಳ ಎಲ್ಲಾ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಆ ರೀತಿಯಲ್ಲಿ ಕ್ರೀಯಾಶೀಲವಾಗಿ ಕೆಲಸ ಮಾಡುತ್ತೇವೆ.

**ಸಭಾಪತಿಯವರು:–** ಗುಟ್ಕಾ ನಿಷೇಧದ ಬಗ್ಗೆ ನಿನ್ನೆ ದಿವಸ ಚರ್ಚೆ ನಿಯಮ 68ರ ಅಡಿಯಲ್ಲಿ ತೆಗೆದುಕೊಳ್ಳುತ್ತೇನೆ. ಆ ವಿಷಯ ಇಂದಿನ ಅಜೆಂಡಾದಲ್ಲಿ ಇಲ್ಲ. ಅವರು ಅಜೆಂಡಾದಲ್ಲಿ ಸೇರಿಸಬೇಕಾದುದ್ದು ಸರಿ. ನಿನ್ನೆಯ ದಿವಸ ನಾನು ಸಭೆಯಲ್ಲಿ ಪ್ರಸ್ತಾಪ ಮಾಡಿದ ಹೇಳಿದ ಕಾರಣಕ್ಕೋಸ್ಕರವಾಗಿ ಅದನ್ನು ಅಜೆಂಡಾದಲ್ಲಿ ಸೇರಿಲ್ಲ. ಅದುದರಿಂದ ಈಗ ಚರ್ಚೆಯನ್ನು ಪ್ರಾರಂಭ ಮಾಡಿ, ಆ ವಿಷಯವನ್ನು ಮುಕ್ತಾಯಗೊಳಿಸಬೇಕು. ಅದು ಮುಗಿದ ಮೇಲೆ ಶ್ರೀ ಯಂ.ಸಿ. ನಾಣಯ್ಯನವರು ನಿಯಮ 59ರ ಅಡಿಯಲ್ಲಿ ಚರ್ಚೆಯನ್ನು ಮಾಡುವುದಕ್ಕೆ ಕೊಟ್ಟಂತಹ ನೋಟೀಸಿನ ವಿಷಯವನ್ನು ನಿಯಮ 68ಕ್ಕೆ convert ಮಾಡಿದ್ದೇನೆಂದು ಹೇಳಿದ್ದೇನೆ. ಎರಡು ಒಟ್ಟಿಗೆ ಲಿಸ್ಟ್ ಮಾಡುವುದಕ್ಕೆ ಬರುವುದಿಲ್ಲ. ಈ ವಿಷಯ ಮುಗಿದ ತಕ್ಷಣ ಶ್ರೀ

ಯಂ.ಸಿ. ನಾಣಯ್ಯನವರು ವಿಷಯವನ್ನು ಪ್ರಸ್ತಾಪ ಮಾಡಲಿ. ಅದಕ್ಕೆ ಅವಕಾಶವನ್ನು ಕೊಡುತ್ತೇನೆ. ಈಗ ವಿರೋಧ ಪಕ್ಷದ ನಾಯಕರು ವಿಷಯವನ್ನು ಪ್ರಾರಂಭ ಮಾಡಬೇಕು ಮತ್ತು ಬೇರೆ ಸದಸ್ಯರುಗಳು ಆ ವಿಷಯದ ಬಗ್ಗೆ ಸ್ವಲ್ಪ ಸಮಯ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

**(ಈ ಹಂತದಲ್ಲಿ ಪ್ಯಾನಲ್ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

## 7. ನಿಯಮ 68ರ ಮೇರೆಗೆ ಚರ್ಚೆ

## ಕರ್ನಾಟಕ ರಾಜ್ಯದಲ್ಲಿ ಗುಟ್ಕಾ ನಿಷೇಧ ಮಾಡಿರುವ ಬಗ್ಗೆ.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಿಯಮ 68ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಾನು ಒಂದಷ್ಟು ಪ್ರಮುಖವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಲೇಬೇಕಾಗಿದೆ. ಏಕೆಂದರೆ, ಗುಟ್ಕಾ ನಿಷೇಧದ ಬಗ್ಗೆ ಮಾತನಾಡಿದಾಗಲೆಲ್ಲಾ ಆರೋಗ್ಯಕ್ಕೆ ಹಾನಿಕಾರವಾದಂತಹ ಈ ಒಂದು ಗುಟ್ಕಾ ನಿಷೇಧ ಮಾಡುವುದಕ್ಕೆ ಬಿಜೆಪಿಯವರು ವಿರೋಧ ಮಾಡುತ್ತಾರೆಂದು ಮೊನ್ನೆಯಿಂದ ಬೇರೆ ಬೇರೆ ಕಡೆಗಳಲ್ಲಿ ಕೆಲವರು ಹೇಳುವುದನ್ನು ನಾನು ಕೇಳಿದ್ದೇನೆ. ನಾನು ಮತ್ತೆ ಪ್ರಸ್ತಾಪ ಮಾಡುವುದೇನೆಂದರೆ, ಗುಟ್ಕಾ ನಿಷೇಧಕ್ಕೆ ಖಂಡಿತವಾಗಿಯೂ ನಮ್ಮ ವಿರೋಧ ಇಲ್ಲ. ಆದರೆ, ಗುಟ್ಕಾ ನಿಷೇಧದ ಆ ತುರಾತುರಿ ನಿರ್ಧಾರ ಮತ್ತು ಆದೇಶದ ಹಿನ್ನಲೆಯಲ್ಲಿ ಈ ರಾಜ್ಯದ ಅಡಿಕೆ ಬೆಳೆಗಾರರಿಗೆ ಮತ್ತು ಅಡಿಕೆಯಿಂದ ತಮ್ಮ ದಿನನಿತ್ಯದ ಜೀವನವನ್ನು ನಿರ್ವಹಣೆ ಮಾಡುತ್ತಿರುವಂತಹ ಲಕ್ಷಾಂತರ ಮಂದಿಯ ಬಾಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಸರ್ಕಾರ ತುರಾತುರಿಯ ನಿರ್ಧಾರವನ್ನು ಸ್ವಲ್ಪ ಮಟ್ಟಿಗೆ ಮುಂದೂಡಬೇಕಾಗಿತ್ತು ಮತ್ತು ಅಡಕೆ ಬೆಳೆಗಾರರ ಜೊತೆಯಲ್ಲಿ ಚರ್ಚೆ ಮಾಡಬೇಕಾಗಿತ್ತು. ಬರೀ ಅಡಿಕೆ ಬೆಳೆಗಾರರು ಮಾತ್ರವಲ್ಲ ಅಡಕೆ

ವ್ಯವಹಾರವನ್ನು ಮಾಡುತ್ತಿರುವಂತಹ ಸಂಘ ಸಂಸ್ಥೆಗಳ ಜೊತೆಯಲ್ಲಿಯೂ ಕೂಡ ಚರ್ಚೆ ಮಾಡಬೇಕಾಗಿತ್ತು. ಹಾಗೂ ಅಡಿಕೆ ಬೆಳೆಗಾರರಿಗೆ ಮುಂದಿನ ದಿವಸಗಳಲ್ಲಿ ಆಗುವಂತಹ ತೊಂದರೆಗಳನ್ನು ಪರಿಹಾರ ಮಾಡಿ ಮುಂದೆ ಹೋಗಬೇಕಾಗಿತ್ತು ಎಂದು ಹೇಳುವಂಥದ್ದು ನಮ್ಮ ಆಶಯ. ಆ ಹಿನ್ನಲೆಯಲ್ಲಿ ನಾವು ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಏಕೆ ಇದು ಬಹಳ ಗಂಭೀರವಾದಂತಹ ವಿಚಾರ ಎಂದು ಬಹಳಷ್ಟು ಜನರು ಕೇಳಿದರು. ಅಡಿಕೆ ಬೆಳೆಗಾರರು ಮತ್ತು ಸರ್ಕಾರ ಕುಳಿತುಕೊಂಡು ಚರ್ಚೆ ಮಾಡಿ ಪರಿಹಾರವನ್ನು ಕಂಡುಕೊಳ್ಳಬಹುದಲ್ಲವೇ, ಈ ತುರಾತುರಿಯ ಆತುರದ ನಿರ್ಧಾರ ಮಾಡಿದ್ದರಿಂದ ಸರ್ಕಾರಕ್ಕೇನು ಲಾಭ.

**ಪ್ರೊ:ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೇ, ಅದು 'ತುರಾತುರಿ'ಯಲ್ಲ. 'ತುರಾತುರಿ'.

**ವೈಸ್ ಛೇರ್ಮನ್:–** ಮಾನ್ಯ ವಿರೋಧ ಪಕ್ಷದ ನಾಯಕರು 'ತರಾತುರಿ' ಎನ್ನುವುದರ ಬದಲು 'ತುರಾತುರಿ' ಎಂದು ಹೇಳುತ್ತಿದ್ದಾರೆಂದು ಮಾನ್ಯ ದೊಡ್ಡರಂಗೇಗೌಡರು ಹೇಳುತ್ತಿದ್ದಾರೆ. ಅದು ಅವರ ಮಂಗಳೂರಿನ ಭಾಷೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೆ, ತರಾತುರಿಯಲ್ಲಿ, 'ತರಾತುರಿ' ಎಂದು ಹೇಳುತ್ತಿದ್ದಾರೆ ಅಷ್ಟೇ.

**ವೈಸ್ ಛೇರ್ಮಸ್:–** ಮಂಗಳೂರಿನ ಕಡೆ ಹಾಗೆಯೇ.

**ಶ್ರೀ ಡಿ.ವಿ ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ದೊಡ್ಡರಂಗೇಗೌಡರು ಕವಿಗಳಾಗಿರುವುದರಿಂದ ಕನ್ನಡ ಭಾಷೆಯ ಬಗ್ಗೆ ಹೆಚ್ಚು ತಿಳಿದುಕೊಂಡಿದ್ದಾರೆ. ನಾವು ತಪ್ಪಾಗಿ ಮಾತನಾಡಿದಾಗ ನಮ್ಮನ್ನು ಕರೆಕ್ಟ್ ಮಾಡುವಂತಹ Head Master ಅವರು ಅದನ್ನು ನಾನು ಖಂಡಿತವಾಗಿ ಸ್ವಾಗತ ಮಾಡುತ್ತೇನೆ. ಎರಡು ಮೂರು ಅಂಶಗಳ ಹಿನ್ನೆಲೆಯಲ್ಲಿ ತುಂಬಾ ಗಂಭೀರವಾದಂತಹ ವಿಚಾರವಾದ ಕಾರಣ ಇದನ್ನು ಪ್ರಸ್ತಾಪ ಮಾಡಿದ್ದೇನೆ.

ಮಾನ್ಯ ಸಭಾಪತಿಯವರೇ, ನಿಮಗೂ ಕೂಡ ಗೊತ್ತಿದೆ. ಇಲ್ಲಿ ಸದನ ನಡೆಯುತ್ತಿರುವ ಸಂದರ್ಭದಲ್ಲಿ ಈ ವಿಚಾರ ರೈತರ ಹಿತಾಸಕ್ತಿಗೆ ಮಾರಕವಾಗುತ್ತದೆಂದು ಗೊತ್ತಿದ್ದರೂ ಕೂಡ ಏಕದಂ ರೈತರ ಮೇಲೆ ಗದಾಪ್ರಹಾರ ಮಾಡುವಂತಹ ರೀತಿಯಲ್ಲಿ ಆದೇಶ ಮಾಡುವಂತಹ ಪ್ರಯತ್ನವನ್ನು ಸರ್ಕಾರ ಮಾಡಿದೆ. ನಾನು ಅದನ್ನು ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಏಕೆಂದರೆ, ಸರ್ವೋಚ್ಚ ನ್ಯಾಯಾಲಯದ ಆದೇಶ ಇದೆ, ಅದಕ್ಕಾಗಿ ನಮಗೆ ಅದನ್ನು ಅನಿವಾರ್ಯವಾಗಿ ಮಾಡಬೇಕಾಗಿ ಬಂತು ಎಂದು ಹೇಳುವಂತಹ ಮಾತುಗಳನ್ನು ಕೇಳಿದ್ದೇನೆ. ಇಲ್ಲಿ ಆರೋಗ್ಯ ಸಚಿವರಾದ ಶ್ರೀ ಯು.ಟಿ. ಖಾದರ್‌ರವರು ಈಗ ಸದನದಲ್ಲಿಯೇ ಇದ್ದಾರೆ ಅವರು ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾಡಿದ್ದೇವೆಂದು ಹೇಳಿದರು. ಸರ್ವೋಚ್ಚ ನ್ಯಾಯಾಲಯ ಬಹಳ ಸ್ಪಷ್ಟವಾಗಿ ಹೇಳಿದೆ: "The Registry is directed to prepare the compliance of the Affidavit on or before 25.06.2013". ಯಾವಾಗ ಎಂದರೆ ದಿನಾಂಕ 26.06.2013ರ ಒಳಗೆ ಆ ಸರ್ವೋಚ್ಚ ನ್ಯಾಯಾಲಯದ Registrar ರವರು Compliance Report ಕೊಡಿ ಎಂದು ಕೇಳಿದ್ದಾರೆ. Affidavit ಏನೇ ಆಗಲಿ. 25ನೇ ಜೂನ್ 2013ಕ್ಕೆ. ಇವತ್ತು 5ನೇ ಜೂನ್ 2013. ಇನ್ನು 20 ದಿವಸಗಳಿತ್ತು. ಇಲ್ಲಿ ಸದನ ನಡೆಯುತ್ತಿತ್ತು. ಅಡಿಕೆ ಬೆಳೆಗಾರರ ಪ್ರದೇಶದಿಂದ ಬಂದಂತಹ ಎಲ್ಲಾ ಜನ ಪ್ರತಿನಿಧಿಗಳು ಇಲ್ಲಿ ಉಪಸ್ಥಿತರಿದ್ದರು. ಈ ಸದನದಲ್ಲಿ ಸರ್ಕಾರ ಆದೇಶವನ್ನು ಮಾಡಿದರೆ ಒಂದೇ ದಿವಸದಲ್ಲಿ CAMPCO (The Central Arecanut and Cocoa Marketing and Processing Co-operative Limited), MAMCO (Malnad Areca Marketing Cooperative Society, Ltd.) ಮತ್ತು ಅಡಿಕೆ ವ್ಯವಹಾರವನ್ನು ಮಾಡುವಂತಹ ಬೇರೆಯವರನ್ನು ಕರೆಯಬಹುದಾಗಿತ್ತು ಮತ್ತು ಯಾರು ಅಡಿಕೆ ಬೆಳೆ ಆಧಾರದಿಂದ ಬೇರೆ ಬೇರೆ ವ್ಯವಹಾರ ಮಾಡುವವರನ್ನು ಕರೆಯಬಹುದಾಗಿತ್ತು. ಇವತ್ತು ಸರ್ಕಾರ ಪ್ಲಾಸ್ಟಿಕ್ ಪ್ಲೇಟ್‌ಗಳು ಬೇಡವೆಂದು ಹೇಳುತ್ತದೆ ಆ ಪ್ಲಾಸ್ಟಿಕ್ ಪ್ಲೇಟ್‌ಗಳ ಬದಲು ಅಡಿಕೆ ಸೋಗೆಯಿಂದ (ಪಟ್ಟೆಯಿಂದ) ತಟ್ಟೆಗಳನ್ನು ತಯಾರು ಮಾಡುವಂತಹ

ಕೆಲಸವನ್ನು ಬಹಳಷ್ಟು ಜನರು ಮಾಡುತ್ತಿದ್ದಾರೆ. ಲಕ್ಷಾಂತರ ಯುವಕರು ಇವತ್ತು ಆ ಒಂದು ಸ್ವ ಉದ್ಯೋಗವನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡುತ್ತಿದ್ದಾರೆ. ನಿನ್ನೆಯ ದಿವಸ ರಾಜ್ಯಪಾಲ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸುವಂತಹ ಸಮಯದಲ್ಲಿ ಶ್ರೀ ವೀರಣ್ಣ ಮತ್ತಿಕಟ್ಟಿಯವರು ಜನರು ಗ್ರಾಮೀಣ ಪ್ರದೇಶಗಳಿಂದ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆಂದು ಹೇಳಿದರು. ಇವತ್ತು ಯುವಕರು ಗ್ರಾಮೀಣ ಪ್ರದೇಶಗಳಿಂದ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆಂದು ಹೇಳಿದರು. ಇವತ್ತು ಯುವಕರು ಗ್ರಾಮೀಣ ಪ್ರದೇಶಗಳಿಂದ ಪಟ್ಟಣಕ್ಕೆ ವಲಸೆ ಹೋಗುವುದನ್ನು ನಿಲ್ಲಿಸುವಂತಹ ಒಂದು ದೊಡ್ಡ ಜವಾಬ್ದಾರಿ ಇದೆ. ಕೃಷಿಗೆ ಹೆಚ್ಚು ಅದ್ಯತೆಯನ್ನು ಕೊಡಬೇಕೆಂದು ಹೇಳಿದ್ದನ್ನು ಸ್ವಾಗತ ಮಾಡುತ್ತೇನೆ. ಪ್ರಾಯಶಃ ತರಾತುರಿಯಲ್ಲಿ ಕೆಲಸವನ್ನು ಮಾಡುವಂತಹ ಸಂದರ್ಭದಲ್ಲಿ ತುರಾತುರಿಯಾಗಿ ಬಿಡುತ್ತದೆ.

**ವೈಸ್ ಛೇರ್ಮನ್:-** ನಾನು ಮಂಗಳೂರು ಭಾಷೆ ಅದೇ ರೀತಿ ಎಂದು ತಿಳಿದುಕೊಂಡೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಸ್ವಲ್ಪ ಹಾಗೆಯೇ ಇಂಥದ್ದು ಎಲ್ಲಾ ನಡೆಯುತ್ತದೆ. ಇವತ್ತು ಯುವಕರು ಗ್ರಾಮೀಣ ಪ್ರದೇಶಗಳಿಂದ ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದಕ್ಕೆ ಸರ್ಕಾರ ಏನು ಮಾಡಬೇಕೆಂದು ಆಲೋಚನೆ ಮಾಡಬೇಕಾಗಿತ್ತು. ಇವತ್ತು ಅಡಿಕೆ ಪಟ್ಟೆಯಿಂದ ತಟ್ಟೆಗಳನ್ನು ಮಾಡುವಂಥವರು ಮತ್ತು ಅಡಿಕೆಯಿಂದ ಸಾವಯವ ಕೃಷಿಯನ್ನು ಮಾಡುತ್ತಾರೆ. ಸಾವಯವ ಕೃಷಿಗೆ ಅಡಕೆ ಸೋಗೆಯಿಂದ ಬರುವಂತಹ ಸೋಗೆಗಳನ್ನು ಕಟ್ ಮಾಡಿ, ಸಾವಯವ ಕೃಷಿಯನ್ನು ಮಾಡಿ, ಅದರಿಂದ ಸಾವಿರಾರು ಯುವಕರುಗಳಿಗೆ ಉದ್ಯೋಗವನ್ನು ಸೃಷ್ಟಿ ಮಾಡಿದ್ದಾರೆ. ತಾವು ಹೇಳಿದಂತಹ ಕೆಲಸಕಾರ್ಯಗಳಿಗೆ ಸರ್ಕಾರ ತರಾತುರಿಯ ನಿರ್ಧಾರವನ್ನು ತೆಗೆದುಕೊಳ್ಳದೇ, ಪರಿಹಾರದ ಬಗ್ಗೆ ಚರ್ಚೆ ಮಾಡಬಹುದಾಗಿತ್ತು. ವಿಶೇಷವಾಗಿ ಗುಟ್ಕಾ ನಿಷೇಧದಿಂದ ಅಡಿಕೆ ಬೆಳೆಗಾರರಿಗೆ

ವಿಶೇಷವಾದಂತಹ ತೊಂದರೆಗಳಾಗುವುದಿಲ್ಲವೆಂದು ಪದೇ ಪದೇ ಆರೋಗ್ಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಉಲ್ಲೇಖ ಮಾಡಿದರು. ನಾನು ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ ಒಬ್ಬ ಅಡಿಕೆ ಬೆಳೆಗಾರ ವರ್ಷದ 365 ದಿನಗಳು ತನ್ನ ರಕ್ತವನ್ನು ಮತ್ತು ಬೆವರನ್ನು ಸುರಿಸಿ ದುಡಿಯುತ್ತಾನೆ. ಏಕೆಂದರೆ, ಅಡಿಕೆ ಬೆಳೆಗೆ ಪ್ರಕೃತಿ ವಿಕೋಪ ಬಹಳ ದೊಡ್ಡ ತೊಂದರೆಗಳನ್ನುಂಟು ಮಾಡುತ್ತದೆ. ಎಷ್ಟೋ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಅಡಿಕೆ ಬೆಲೆಯಲ್ಲಿನ ಏರಿಳಿತಗಳು ಆತ್ಮಹತ್ಯೆಗೆ ಶರಣಾಗುವಂತಹ ಕೆಲಸಗಳನ್ನು ಮಾಡುತ್ತದೆ. ಗುಟ್ಕಾ ನಿಷೇಧ ಎಂದರೆ ಏನು? ಆ ಗುಟ್ಕಾದಲ್ಲಿರುವಂತಹ ಕಚ್ಚಾ ವಸ್ತುವಿನಲ್ಲಿ ಶೇಕಡ 85 ರಿಂದ 90 ಪಾಲು ಇರುವಂಥದ್ದು ಅಡಿಕೆ. ಕೇವಲ 10% ಮಾತ್ರ ನಿಕೋಟಿನ್ ಮತ್ತು ತಂಬಾಕು. ಆದಕಾರಣ ಗುಟ್ಕಾ ನಿಷೇಧದ ಹಿನ್ನೆಲೆ ಏನು ಎನ್ನುವುದನ್ನು ತಿಳಿದುಕೊಳ್ಳಬೇಕು. ಸನ್ಮಾನ್ಯ ಆರೋಗ್ಯ ಸಚಿವರಾದ ಯು.ಟಿ. ಖಾದರ್‌ರವರು ಗುಟ್ಕಾ ನಿಷೇಧದಿಂದ ಅಡಿಕೆ ಬೆಳೆಗೆ ತೊಂದರೆಯಾಗುವುದಿಲ್ಲವೆಂದು ಹೇಳಿದರು. ನಾವು ಗುಟ್ಕಾ ನಿಷೇಧ ಮಾಡಿದ್ದು, ಅಡಿಕೆಯನ್ನು ನಿಷೇಧ ಮಾಡಿಲ್ಲವೆಂದು ಹೇಳಿದರು. ಅವರು ಅಡಿಕೆ ಬೆಳೆಗಾರರು ಅಲ್ಲ, ಅಡಿಕೆ ಬೆಳೆಗಾರರ ಸಮಸ್ಯೆಯೂ ಕೂಡ ಅವರಿಗೆ ಗೊತ್ತಿಲ್ಲ. ಆದರೆ, ಅಡಿಕೆ ಬೆಳೆಗಾರರ ಓಟನ್ನು ಮಾತ್ರ ತೆಗೆದುಕೊಂಡಿದ್ದಾರೆ. ಅವರು ಅಡಿಕೆ ಬೆಳೆಯುವ ಪ್ರದೇಶದಿಂದ ಬಂದಿದ್ದರು ಕೂಡ. ಅಡಿಕೆ ಬೆಳೆಯ ಬಗ್ಗೆ ಯಾವುದೇ ಸಂಗತಿಗಳು ಗೊತ್ತಿಲ್ಲ. ಆದರೆ, ನಮ್ಮ ಆಭಯಚಂದ್ರ ಜೈನ್‌ರವರು ಇಲ್ಲಿಯೇ ಕುಳಿತುಕೊಂಡಿದ್ದಾರೆ ಅವರು ಅಡಿಕೆಯನ್ನು ಬೆಳೆಯುತ್ತಾರೆ. ಆದರೂ ಸಹ ಇದರ ಬಗ್ಗೆ ಮಾತನಾಡುವುದಿಲ್ಲ. ಏಕೆ ಮಾತನಾಡುವುದಿಲ್ಲವೆಂದು ಗೊತ್ತಿಲ್ಲ. ಏಕೆಂದರೆ, ಇನ್ನು ಐದು ವರ್ಷದವರೆಗೆ ತೊಂದರೆ ಇಲ್ಲ ಅಲ್ಲವೇ? ಅಡಿಕೆ ಬೆಳೆಗಾರರು ಇವರಿಗೆ ಓಟು ಕೊಟ್ಟಿದ್ದಾರೆ, ಕರಾವಳಿ, ಮಲೆನಾಡು ಪ್ರದೇಶದವರೆಲ್ಲರೂ ಇವರಿಗೆ ಆಶೀರ್ವಾದ ಮಾಡಿದ್ದಾರೆ. ಇನ್ನು ಐದು ವರ್ಷದವರೆಗೆ ಅಧಿಕಾರವನ್ನು ನಡೆಸುವುದಕ್ಕೆ ಏನೂ ತೊಂದರೆಯಾಗುವುದಿಲ್ಲ. ಇವತ್ತು ಆರಣ್ಯ ಮಂತ್ರಿಗಳು ಹಸಿರು

ಟೀ–ಶರ್ಟ್‌ನ್ನು ಹಾಕಿಕೊಂಡು ಬಂದಿದ್ದಾರೆ ಅವರನ್ನು ನೋಡಿದರೆ ತುಂಬಾ ಖುಷಿಯಾಗುತ್ತಿದೆ.

**ವೈಸ್ ಛೇರ್ಮನ್:–** ಗ್ರೀನ್ ಟೀ–ಶರ್ಟ್ ಹಾಕಿಕೊಂಡು ಬಂದಿದ್ದಾರೆ. ಅವರು ಇವತ್ತು ಬೆಳಿಗ್ಗೆ ವಾಕಿಂಗ್ ಹೋದವರು ಸೀದಾ ಸದನಕ್ಕೆ ಬಂದಿದ್ದಾರೆಂದು ಅವರನ್ನು ನೋಡಿದರೆ ಅನ್ನಿಸುತ್ತದೆ. ಅವರು ಬಹಳ ಸ್ಮಾರ್ಟ್ ಆಗಿರುವುದನ್ನು ನೋಡುತ್ತಿದ್ದೇವೆ.

**ಶ್ರೀ ಬಿ. ರಮಾನಾಥ ರೈ(ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೇ, ಇವತ್ತು ಜಾಗತಿಕ ವಿಶ್ವ ಪರಿಸರ ದಿನಾಚರಣೆ. ಅವರ ಅಂಗವಾಗಿ ನಾನು ಹಸಿರು ಟೀ–ಶರ್ಟ್‌ನ್ನು ಹಾಕಿಕೊಂಡು ಬಂದಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಸದನದ ಎಲ್ಲಾ ಸದಸ್ಯರುಗಳಿಗೂ ಕೂಡ ಒಂದೊಂದು ಹಸಿರು ಟೀ–ಶರ್ಟ್ ಕೊಟ್ಟರೆ ನಾವು ಹಾಕಿಕೊಂಡು ಬರುತ್ತೇವೆ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೇ, ಈ ವರ್ಷ ಆಯಿತು. ಮುಂದಿನ ವರ್ಷದಿಂದ ಈ ದಿನವನ್ನು ಒಳ್ಳೆಯ ರೀತಿಯಿಂದ ಆಚರಣೆ ಮಾಡೋಣ. ಆ ಸಮಯದಲ್ಲಿ ಎಲ್ಲಾರಿಗೂ ಹಸಿರು ಟೀ–ಶರ್ಟ್ ಕೊಡೋಣ.

**(ಈ ಹಂತದಲ್ಲಿ ಉಪ ಸಭಾಪತಿಯಗಳಾದ ಶ್ರೀಮತಿ ವಿಮಲಾಗೌಡರವರು ಸಭಾಪತಿಗಳ ಪೀಠವನ್ನು ಆಲಂಕರಿಸಿದರು)**

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಹಿಂದೆ ಸದನಕ್ಕೆ ಬರುವಾಗ ಯಾವ ರೀತಿಯಾಗಿ ಶರ್ಟ್ ಹಾಕಿಕೊಂಡು ಬರಬೇಕೆಂದು ಚರ್ಚೆ ನಡೆದಾಗ ಸದನಕ್ಕೆ ಟೀ–ಶರ್ಟ್ ಹಾಕಿಕೊಂಡು ಬರಬಾರದೆಂದು ಹೇಳಲಾಗಿತ್ತು.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೇ, ನೀವು appreciate ವಿಶ್ವ ಪರಿಸರ ದಿನಚಾರಣೆ ಇವತ್ತು ನಿಮಗೆ ಮರೆತು

ಹೋಗಿದೆಯೋ, ನೆನಪು ಇದೆಯೋ ಇಲ್ಲವೋ ಗೊತ್ತಿಲ್ಲ. ನಿಮ್ಮಗೆಲ್ಲರಿಗೂ ಗೊತ್ತಾಗಬೇಕೆಂದು ಹಸಿರು ಟೀ–ಶರ್ಟ್ ಹಾಕಿಕೊಂಡಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಯಾರು ಏನು ಹೇಳಿದರು ಪರವಾಗಿಲ್ಲ. ನನಗೆ ಅರಣ್ಯ ಸಚಿವರಾದ ಶ್ರೀ ರಮಾನಾಥ ರೈರವರನ್ನು ನೋಡಿ ತುಂಬಾ ಖುಷಿಯಾಗಿದೆ. ಅವರು ಯಾವಾಗಲೂ ಇದೆ ರೀತಿಯಾಗಿರಬೇಕೆನ್ನುವುದು ನನ್ನ ಆಸೆ. ಅವರು ಯಾವಾಗಲೂ ಕೂಡ ಹಸಿರು ಹಸಿರಾಗಿಯೇ ಇರಬೇಕು. ಅರಣ್ಯಗಳು ಕೂಡ ಹಸಿರಾಗಿಯೇ ಇರಬೇಕು. ಆ ಟೀ–ಶರ್ಟ್‌ನ್ನು ಸದನದ ಎಲ್ಲಾ ಸದಸ್ಯರುಗಳಿಗೂ ಒಂದೊಂದು ಕೊಡಿಸಿದ್ದರೆ ಚೆನ್ನಾಗಿರುತ್ತಿತ್ತು. ಇವತ್ತು ವಿಶ್ವ ಪರಿಸರ ದಿನ ಎಂದು ಗೊತ್ತಾಗುತ್ತಿತ್ತು.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೇ ಈ ವರ್ಷ ಸಿಂಪಲ್ ಆಗಿ ಆಚರಣೆ ಮಾಡಿದ್ದೇವೆ. ಮುಂದಿನ ವರ್ಷ ಇನ್ನು ಚೆನ್ನಾಗಿ ಮಾಡೋಣ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಆದರೆ ಅರಣ್ಯ ಸಚಿವರು ಗುಟ್ಕಾ ನಿಷೇಧಕ್ಕೆ ಬೆಂಬಲವನ್ನು ವ್ಯಕ್ತಪಡಿಸಿದ ಕಾರಣ ಅಡಿಕೆ ತೋಟದ ಹಸಿರು ಎಲ್ಲಾ ಇವತ್ತು ಕೆಂಪು ಅಗುವುದಕ್ಕೆ ಪ್ರಾರಂಭವಾಗುತ್ತಿದೆ. ಇದು ಆಗಬಾರದಿತ್ತು.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೇ, Gorakh Singh Committee Report ನ್ನು ಜಾರಿ ಮಾಡಬೇಕೆಂದು ಹೇಳಿ, ಸರ್ಕಾರ ಏನು ಪ್ರಯತ್ನ ಮಾಡುತ್ತಿದೆ ಅದನ್ನು ತೆಗೆದುಕೊಂಡು ಬಂದಿದೆ. ಅದನ್ನು ನೀವುಗಳು appreciate ಮಾಡಬೇಕು.

**ಶ್ರೀ ಆರ್.ವಿ. ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ಮಾಹಿತಿಯನ್ನು ಅಷ್ಟೇ ಕೊಡುತ್ತೇನೆ. This is for your information. ಏನೆಂದರೆ, ದಿನಾಂಕ 6ನೇ ಏಪ್ರಿಲ್ 2013ಕ್ಕೆ

ಸರ್ವೋಚ್ಚ ನ್ಯಾಯಾಲಯದವರ ಆದೇಶದ ಪ್ರಕಾರವಾಗಿ ರಾಜ್ಯ ಸರ್ಕಾರಗಳು ಗುಟ್ಕಾ ನಿಷೇಧ ಮಾಡುತ್ತೇವೆಂದು Affidavit ಕೊಡಬೇಕೆಂದು ಎಲ್ಲಾ ರಾಜ್ಯ ಸರ್ಕಾರಗಳಿಗೆ ತಿಳಿಸಿದ್ದರು. ನಂತರ model code of conduct ಬಂದ ನಂತರ ಅಧಿಕಾರಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಇಂಟೀರಿಯಂ ಅಫಿಡೇವಿಟ ಫೈಲ್ ಮಾಡಿದರು. ಆಗ ಸರ್ವೋಚ್ಚ ನ್ಯಾಯಾಲದವರು " no, final Affidavit ನಮಗೆ ಬೇಕು" ಎಂದು ಹೇಳಿದರು. ಇಲ್ಲಿ ಶಾಸನ ಸಭೆ ಇತ್ತು ಎನ್ನುವುದು ನಿಜ. But, this is not a policy decision. 'Policy decision' ಮಾಡಬೇಕಾದರೆ ಸದನಕ್ಕೆ ಬರಬೇಕು. ಸರ್ವೋಚ್ಚ ನ್ಯಾಯಾಲಯದ ಆದೇಶ ಇದ್ದಾಗ ನಿಮ್ಮ ಪಕ್ಷ ಅಥವಾ ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿರಲಿ, ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ ಅದನ್ನು ಜಾರಿಗೆ ತೆಗೆದುಕೊಂಡು ಬರಬೇಕು. ಇಲ್ಲದೇ ಹೋದರೆ there will be contempt proceedings. ಹಾಗಾಗಿ ಅನಾವಶ್ಯಕವಾಗಿ ರೈತರಿಗೆ ಚಿತಾವಣೆಯನ್ನು ಕೊಡಬೇಡಿ.

(1.00 ಗಂಟೆ)

ಏಕೆಂದರೆ, ಇದರಿಂದ ಏನೂ ಉಪಯೋಗ ಆಗುವುದಿಲ್ಲ. ಅಡಿಕೆ ಬೆಳೆಗಾರರ ಸಲುವಾಗಿ ಏನು ಮಾಡಬೇಕೋ ಆ ಬಗ್ಗೆ ಸಲಹೆಗಳನ್ನು ಕೊಟ್ಟರೆ ಅದನ್ನು ಅನುಷ್ಠಾನಗೊಳಿಸುವ ಬಗ್ಗೆ ವಿಚಾರ ಮಾಡಲಾಗುತ್ತದೆ. ನಿನ್ನೆ ಕೆಳಮನೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಅಡಿಕೆ ಬೆಳೆಗಾರರ ಹಿತವನ್ನು ಸಂರಕ್ಷಣೆ ಮಾಡುವುದಾಗಿ ಬಹಳ ಸ್ಪಷ್ಟವಾದ ಆಶ್ವಾಸನೆಯನ್ನು ನೀಡಿದ್ದಾರೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್ ಆದೇಶ ಇದೆ ಎಂದು ಹೇಳಿ ಹಿಂದಿನ ಸರ್ಕಾರದವರು ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟುಬಿಟ್ಟರು.

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ನನ್ನ ಮಾತುಗಳನ್ನು ಮುಗಿಸುವವರೆಗೆ ನಾನು ಯಾರಿಗೂ yield ಆಗುವುದಿಲ್ಲ. ಅದಕ್ಕಾಗಿ ಯಾರೂ ಮಧ್ಯೆ ಪ್ರವೇಶ ಮಾಡಬಾರದೆಂದು ತಾವು ಆದೇಶ

ಮಾಡಬೇಕೆಂದು ವಿನಂತಿಸುತ್ತೇನೆ. ಅವರು note ಮಾಡಿಟ್ಟುಕೊಂಡು ಸ್ಪಷ್ಟೀಕರಣ ನೀಡುವಂತಹ ಸಂದರ್ಭದಲ್ಲಿ ಅದನ್ನು ತಿಳಿಸಲಿ. ಆದರೆ, ದಯವಿಟ್ಟು ಅವರು ನನಗೆ confusion create ಮಾಡಬಾರದು. Don't create confusion. I am on record. I am not yielding.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ಯಾರಿಗೂ yield ಆಗಿಲ್ಲ. ನನ್ನ ಹತ್ತಿರ ಕೂಡ ಸುಪ್ರೀಂ ಕೋರ್ಟ್‌ನ ಆದೇಶ ಇದೆ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದಲ್ಲಿ ನಾನು ಸಹ ಇದ್ದೆ. ಎದುರು ಪಕ್ಷದವರು ಪ್ರಬಲವಾದಾಗ ಅವರನ್ನು ಹಾದಿ ತಪ್ಪಿಸುವಂತಹ ಪ್ರಯತ್ನವನ್ನು ಎಲ್ಲರೂ ಮಾಡುತ್ತಾರೆ. ಆ ರೀತಿ ಹಾದಿ ತಪ್ಪಿಸುವುದಕ್ಕಾಗಿ ಮಧ್ಯ ಪ್ರವೇಶ ಮಾಡುವಂತಹ ಪ್ರಯತ್ನವನ್ನು ಈಗ ಇವರು ಮಾಡುತ್ತಿದ್ದಾರೆ. ಆದರೆ, ನಾನು ನನ್ನ ವಾದ ಮುಗಿಯುವವರೆಗೆ ಯಾರಿಗೂ yield ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಯಾರೂ ಮಧ್ಯ ಪ್ರವೇಶ ಮಾಡಬಾರದೆಂದು ತಾವು ಆದೇಶ ನೀಡಬೇಕೆಂದು ವಿನಂತಿಸುತ್ತೇನೆ.

**ಉಪ ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ದಯವಿಟ್ಟು ಯಾರೂ ಮಧ್ಯೆ ಪ್ರವೇಶ ಮಾಡಬೇಡಿ. ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಆ ವಿಚಾರದ ಬಗ್ಗೆ ತಾವು ಸ್ಪಷ್ಟೀಕರಣವನ್ನು ನೀಡಬಹುದು.

**Sri.R.V. DESHPANDE:-** I will not intervene...

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ಯಾರಿಗೂ yield ಆಗುವುದಿಲ್ಲ, ಅವರು ಬೇಕಾದರೆ ಟಿಪ್ಪಣಿ ಮಾಡಿಕೊಳ್ಳಲಿ, ನೋಟ್ ಪುಸ್ತಕವನ್ನು ಬೇಕಾದರೆ ಕಳುಹಿಸಿಕೊಡುತ್ತೇವೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಮಾತನ್ನು ನಾವು ಒಪ್ಪುತ್ತೇವೆ. ಆದರೆ, ಆ ವಿಚಾರವನ್ನು ಅವರು ವಿರೋಧ ಪಕ್ಷದ ಸದಸ್ಯರಿಗೂ ತಿಳಿಸಬೇಕಾಗುತ್ತದೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಹೇಳುತ್ತೇನೆ. ನಾನು ನಿನ್ನೆ ದಿವಸ ಮಾನ್ಯ ಮತ್ತೀಕಟ್ಟಿ ವೀರಣ್ಣನವರು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಅಂಗೀಕರಿಸಿ ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಮಾನ್ಯ ಮಧುಸೂದನ್‌ರವರಿಗೆ ಪದೇಪದೇ ಮಧ್ಯಪ್ರವೇಶ ಮಾಡಬಾರದೆಂದು ತಿಳಿಸಿದ್ದೇನೆ. ಈ ದಿನದಿಂದ ಆ ಆದೇಶವನ್ನು ಪಾಲಿಸುವುದಾಗಿ ಅವರು ಒಪ್ಪಿಕೊಂಡಿದ್ದಾರೆ. ಇನ್ನು ಅವರು ಮಧ್ಯಪ್ರವೇಶ ಮಾಡುವುದಿಲ್ಲ, ಇವೊತ್ತು ಅವರು ಎಷ್ಟು decent ಆಗಿ ಕುಳಿತುಕೊಂಡಿದ್ದಾರೆ ನೋಡಿ.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ಇಲ್ಲಿಯವರೆಗೂ indecent ಇದ್ದರು ಎನ್ನುವಂತಹ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪಿಕೊಂಡಂತಾಯಿತು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಹಲವಾರು ಸಂಗತಿಗಳ ವಿಚಾರದಲ್ಲಿ ತಿದ್ದಿಕೊಳ್ಳಬೇಕಾದುದು ನಮ್ಮೆಲ್ಲರ ಜವಾಬ್ದಾರಿ. ಈಗ ಅವರು 'ತರಾತುರಿ, ತುರಾತುರಿ' ಎಂದು ಹೇಳಿದ್ದನ್ನು ನಾವು ತಿದ್ದಿಕೊಳ್ಳಲಿಲ್ಲವೆ? ಅದಕ್ಕಾಗಿ ಹಲವಾರು ಸಂಗತಿಗಳನ್ನು ನಾವು ತಿದ್ದಿಕೊಳ್ಳಬೇಕಾದಂತಹ ಅವಶ್ಯಕತೆ ಇರುತ್ತದೆ.

ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮಾನ್ಯ ಆರ್.ವಿ. ದೇಶಪಾಂಡೆಯವರು

ಸುಪ್ರೀಂ ಕೋರ್ಟ್‌ನ ಆದೇಶದ ಬಗ್ಗೆ ಉಲ್ಲೇಖ ಮಾಡಿದರು. ಮತ್ತೆ ಆ ವಿಚಾರದ ಬಗ್ಗೆ ಪ್ರಸ್ತಾಪಿಸಬೇಕೆನ್ನುವಂತಹ ಆಲೋಚನೆ ನನಗಿರಲಿಲ್ಲ. ಇದನ್ನು list ಮಾಡಿದ್ದಾರೆ; "List this and the connected matters on 25/07/2013..." ಯಾವಾಗ ಎಂದರೆ ಮತ್ತೊಂದು ತಿಂಗಳಿಗೆ ಮಾಡಿ ಜೂನ್ 25ರೊಳಗೆ ಇವರು ಅಫಿಡವಿಟ್ ಕೊಡಲಿಕ್ಕೆ ಹೇಳಿ ಎಂದು ಹೇಳಿದಾಗ ಇವರಿಗೆ ಸಮಯದ ಅವಕಾಶ ಎಷ್ಟಿದೆ ಎನ್ನುವಂಥದ್ದನ್ನು ಸರ್ಕಾರ ತಿಳಿದುಕೊಳ್ಳಬೇಕು. ಈ ವಿಚಾರದಲ್ಲಿ ಬಹಳ ತುರ್ತಾಗಿ ಈ ನಿರ್ಧಾರವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಏನೂ ಇರಲಿಲ್ಲ, ಇದಕ್ಕೆ ಇನ್ನೂ ಸಮಯವಿತ್ತು. ಆದರೆ ಇದರಲ್ಲಿರುವಂತಹ ಒಂದು ಸಂಗತಿ ಎಂದರೆ ರೈತರ ಆ ಮನಸ್ಥಿತಿಗೆ ಮತ್ತೆ ಮಾರುಕಟ್ಟೆಯಲ್ಲಿರುವಂತಹ ದರ ಇವೊತ್ತೇನಾಗಿದೆ, ಅಡಿಕೆ ಬೆಳೆಗಾರರಿಗೆ ಬಹಳ ದೊಡ್ಡ ತೊಂದರೆ ಇರುವುದು ಮಧ್ಯವರ್ತಿಗಳಿಂದ, ಈ ಮಧ್ಯವರ್ತಿಗಳ ಹಾವಳಿ ಹೇಗಿದೆ ಎಂದರೆ, ಇವೊತ್ತು ಆಮದಾಗುವಂತಹ ಅಡಿಕೆಯಿಂದಾಗಿ ನಮ್ಮ ಅಡಿಕೆ ಬೆಳೆಗಾರರ ಮೇಲೆ ಎಷ್ಟು ಪ್ರಭಾವ ಬೀರುತ್ತದೆ ಎನ್ನುವುದರ ಬಗ್ಗೆ ನಾನು ಸುದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅದಕ್ಕೆ ಬಹಳಷ್ಟು ಸಮಯ ಬೇಕಾಗುತ್ತದೆ. ನಿನ್ನೆಯ ದಿವಸ ಮಾನ್ಯ ಆರ್.ವಿ. ದೇಶಪಾಂಡೆಯವರು ಅಡಿಕೆಯ ಆಮದು ಶುಲ್ಕವನ್ನು ಹೆಚ್ಚು ಮಾಡಿದ್ದು ನಮ್ಮ ಯು.ಪಿ.ಎ. ಸರ್ಕಾರ ಎನ್ನುವಂತಹ ಮಾತನ್ನು ತಿಳಿಸಿದರು. ಈ ಆಮದು ಶುಲ್ಕವನ್ನು ಹೆಚ್ಚು ಮಾಡಿರುವಂಥದ್ದು ಎನ್.ಡಿ.ಎ. ಸರ್ಕಾರ, ಆ cost price ಏನಿತ್ತು ಅದನ್ನು ₹ 75/– ರಿಂದ ₹ 110/–ಕ್ಕೆ ಹೆಚ್ಚಿಸಿರುವಂಥದ್ದು ಯು.ಪಿ.ಎ. ಸರ್ಕಾರ. ಇದರ ಬಗ್ಗೆ ನನ್ನಲ್ಲಿ ಮಾಹಿತಿ ಇದೆ. ಈ ವಿಚಾರವನ್ನು ನಾನು ನಿನ್ನೆಯ ದಿವಸವೇ ಹೇಳಿದ್ದೇನೆ. ಆದರೆ Import Duty ಯನ್ನು ಯಾವತ್ತು ಕೂಡ ಯು.ಪಿ.ಎ. ಸರ್ಕಾರ ಹೆಚ್ಚು ಮಾಡಲಿಲ್ಲ. ಏಕೆಂದರೆ ಮಧ್ಯೆ ಮಾತನಾಡುತ್ತಾ ಹೋದರೆ ಈ ರೀತಿಯ Confusion ಆಗುತ್ತದೆ. ಅದು ಸಹ ದಾಖಲೆಗಳಿಗೆ ಹೋಗುತ್ತದೆ, ಆದರೆ ಅದನ್ನು set right ಮಾಡುವುದಕ್ಕಾಗುತ್ತಿಲ್ಲ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸದನವನ್ನು ತಪ್ಪು ದಾರಿಗಳೆಯುತ್ತಿದ್ದಾರೆ. ನನ್ನ ಹತ್ತಿರ ದಾಖಲೆಗಳಿವೆ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ನಾನು ಸದನವನ್ನು ತಪ್ಪುದಾರಿಗಳೆಯುತ್ತಿಲ್ಲ. ಮಾನ್ಯ ಸಚಿವರು ಈ ರೀತಿ ಮಧ್ಯೆಪ್ರವೇಶ ಮಾಡಿ ಮಾತನಾಡುವುದು ಸರಿಯಲ್ಲ, ನನ್ನ ಮಾತುಗಳನ್ನು ಮುಗಿಸಿದ ನಂತರ ಅವರು ಮಾತನಾಡಲಿ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ದಯಮಾಡಿ ತಾವು ಕುಳಿತುಕೊಳ್ಳಿ, ಸರ್ಕಾರದ ಪರವಾಗಿ ಉತ್ತರ ಕೊಡುವಂತಹ ಸಂದರ್ಭದಲ್ಲಿ ತಾವು ಆ ಬಗ್ಗೆ ಸ್ಪಷ್ಟೀಕರಣವನ್ನು ನೀಡಬಹುದಾಗಿದೆ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, I am on a point of order. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನನ್ನ ಹೆಸರನ್ನು ಉಲ್ಲೇಖಿಸಿದ್ದಾರೆ.

(ಗೊಂದಲ)

**ಉಪ ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾನು record ಕೊಡುತ್ತಿದ್ದೇನೆ. 14ನೇ ಆಗಸ್ಟ್ 2012ರಂದು ಅಡಿಕೆ ಆಮದು ಶುಲ್ಕದ ದರ ₹ 35/– ಇದ್ದದ್ದು ₹ 75/– ಆಯಿತು. 13ನೇ ಮೇ 2013ರಂದು ಅದು ₹ 75/– ಇದ್ದದ್ದು ₹ 110/– ಆಯಿತು.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಈ ಸ್ಪಷ್ಟೀಕರಣವನ್ನು ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ನೀಡಬಹುದಲ್ಲವೆ? ಈಗ ಅದರ ಅಗತ್ಯವಿಲ್ಲ.

**Sri R.V. DESHPANDE:-** I am on a point of order.

**Sri. D.V. SADANAHDAGOWDA:-** It is not a point of order. What is the point of order? ಅದು clarification ಆಗಬೇಕು.

(ಗೊಂದಲ)

**ಶ್ರೀ ಆರ್.ವಿ ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ records ಸರಿ ಇರಬೇಕು.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರದವರಿಗೆ record set right ಮಾಡುವುದಕ್ಕೆ ಸಾಕಷ್ಟು ಅವಕಾಶಗಳಿರುತ್ತವೆ.

(ಗೊಂದಲ)

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಸರ್ಕಾರದಿಂದ ಉತ್ತರ ಕೊಡುವಂತಹ ಸಂದರ್ಭದಲ್ಲಿ ತಾವು ಮಾತನಾಡಿ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಸದನದ ದಾಖಲೆಗಳಿಗೆ ತಪ್ಪು ಮಾಹಿತಿ ಹೋಗುತ್ತಿದೆ, ಅದು ಆಗಬಾರದು. ಅಷ್ಟನ್ನು ಮಾತ್ರ ನಾನು ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ಮುಗಿಸಿದ ನಂತರ ತಾವು ಮಾತನಾಡಿ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಧ್ಯಪ್ರವೇಶ ಮಾಡಿ confusion create ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ನನ್ನಲ್ಲಿ ಸಹ ದಾಖಲೆಗಳಿವೆ.

**Sri K.B. SHANAPPA:-** He is not prepared to yield. You can answer it later.

**Sri. R.V. DESHPANDE:** No, I can answer immediately.

**Sri. K.B. SHANAPPA:-** He is not yielding.

(ಗೊಂದಲ)

**Sri. R.V. DESHPANDE:-** I am not a point of order. ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದರು. I am not a point of order.

(ಗೊಂದಲ)

**ಉಪ ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನೀವು ಯಾರು ಏನು ಹೇಳುತ್ತಿದ್ದೀರಿ ಎಂಬುದು ನನಗೆ ಒಂದೂ ಕೇಳಿಸುತ್ತಿಲ್ಲ.

(ಗೊಂದಲ)

**Sri. R.V. DESHPANDE:-** I am on a point of order.

(ಗೊಂದಲ)

**Sri. R.V. DESHPANDE:-** I am not a point of order. You decide. I am on a point of order.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ನನಗೆ confusion ಮಾಡಬೇಕೆಂಬುದು ಇವರ ಆಲೋಚನೆ ಇರಬಹುದು. ಆದರೆ ನಾನು ಯಾರಿಗೂ yield ಆಗುವುದಿಲ್ಲ.

**Sri. K.B. SHANAPPA:-** There is no question of point of order.

**Sri. D.V. SADANANDAGOWDA:-** What is the point of order?

**Sri. R.V. DESHPANDE:-** I have records here.

**Sri. D.V. SADANANDAGOWDA:-** Show me the provision.

**Sri. R.V. DESHPANDE:-** He is trying to mislead the House. The Opposition Leader is misleading the House. Truth is different. Truth is that the UPA Government did it.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಇವರು point of order ನ್ನು ಯಾವ provision ನ ಮೇಲೆ raise ಮಾಡುತ್ತಿದ್ದಾರೆ ಎಂಬುದನ್ನು ಅವರು ತಿಳಿಸಲಿ. We will answer that.

(ಗೊಂದಲ)

**ಉಪ ಸಭಾಪತಿಯವರು:-** ಸನ್ಮಾನ್ಯ ದೇಶಪಾಂಡೆಯವರೇ, ಸರ್ಕಾರದಿಂದ ಉತ್ತರ ಕೊಡುವಂತಹ ಸಂದರ್ಭದಲ್ಲಿ records ಸರಿ ಮಾಡೋಣ. ದಯಮಾಡಿ ತಾವು ಕುಳಿತುಕೊಳ್ಳಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆಯೋ ಕೇಳೋಣ.

**Sri R.V. DESHPANDE:-** Whether it means to say that you have rejected my point of order?

(ಗೊಂದಲ)

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಉತ್ತರ ಕೊಡುವಂತಹ ಸಂದರ್ಭದಲ್ಲಿ ಅವರು ಸ್ಪಷ್ಟೀಕರಣವನ್ನು ನೀಡಲಿ, ಯಾರು ಬೇಡವೆನ್ನುತ್ತಾರೆ?

**Sri D.V. SADANANDAGOWDA:-** Don't create confusion.

(ಗೊಂದಲ)

**Sri R.V. DESHAPANDE:-** If you have rejected my point of order , I Will sit down.

**ಉಪ ಸಭಾಪತಿಯವರು:–** ತಾವು ಹಿರಿಯರಿದ್ದೀರಿ, ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ.

(ಗೊಂದಲ)

**Sri. R.V. DESHPANDE:-** How are you allowing the Opposition Leader? . . .

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, a Member is on a point of order. ಇಂತಹ ಸಂದರ್ಭದಲ್ಲಿ ತಾವು ನಿರ್ಣಯವನ್ನು ಕೊಡಬೇಕಾಗುತ್ತದೆ. ಇಲ್ಲಿ clarification ಪ್ರಶ್ನೆ ಬರುವುದಿಲ್ಲ.

**Sri D.V. SADANANDAGOWDA:-** He is Showing the paper and telling that he is on a point of order. Let him show the provision.

(Interruptions)

**Sri S.R. PATIL:-** No question of clarification. He is on a point of order. ಅದನ್ನು ಪೀಠ ಹೇಳಬೇಕಾಗುತ್ತದೆ.

(ಗೊಂದಲ)

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು point of order ಎತ್ತಿದ್ದಾರೆ. ಯಾವ ಆಧಾರದ ಮೇಲೆ ಅವರು point of order ನ್ನು raise ಮಾಡುತ್ತಿದ್ದಾರೆ ಎಂಬುದನ್ನು ತಿಳಿಸಲಿ.

**Sri K.B. SHANAPPA:-** He is raising a point of order under What rule? What is the point of order? Let him refer the rule number. Rule number ಯಾವುದು ಎಂಬುದನ್ನು ಅವರು ಹೇಳಲಿ.

**ಉಪ ಸಭಾಪತಿಯವರು:-** ಆಯಿತು, ನಾನು ಕೇಳುತ್ತಿದ್ದೇನೆ, ತಾವೆಲ್ಲರೂ ಕುಳಿತುಕೊಳ್ಳಿ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವ ನಿಯಮದ ಅಡಿಯಲ್ಲಿ ಅವರು point of order raise ಮಾಡುತ್ತಿದ್ದಾರೆ ಎಂಬುದನ್ನು ತಿಳಿಸುವಂತೆ ದಯಮಾಡಿ ತಾವೇ ಕೇಳಿಬಿಡಿ.

**ಉಪ ಸಭಾಪತಿಯವರು:-** ನಾನು ಕೇಳುತ್ತೇನೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಚಿವರೇ, ಯಾವ ವಿಚಾರಕ್ಕೆ ತಾವು point of order ನ್ನು raise ಮಾಡುತ್ತಿದ್ದೀರಿ ಎಂಬುದನ್ನು ಹೇಳಿ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು ವಿಚಾರವೊಂದನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ನನ್ನ ಹೆಸರನ್ನು ತೆಗದುಕೊಂಡು 'ದೇಶಪಾಂಡೆಯವರು' ಇದನ್ನು ಯು.ಪಿ.ಎ. ಸರ್ಕಾರದವರು ಮಾಡಿದ್ದಲ್ಲ, ಎನ್.ಡಿ.ಎ.

ಸರ್ಕಾರದವರು ಮಾಡಿದ್ದು' ಎಂದು ಹೇಳಿದ್ದಾರೆ ಎಂದರು. ಅವರು records ಏನಿವೆ, ಸರ್ಕಾರದ ಆಜ್ಞೆಗಳೇನಿವೆ ಅವುಗಳನ್ನು ಪ್ರಸ್ತಾಪ ಮಾಡಿಲ್ಲ. ಅವರ ಮಾತಿಗೆ ಅಡ್ಡ ಬರಬೇಕೆಂಬ ಮನಸ್ಸು ನನಗಿಲ್ಲ. ಅವರು ಎಷ್ಟು ಮಾತನಾಡಬಯಸುತ್ತಾರೆಯೋ ಅಷ್ಟನ್ನು ಮಾತನಾಡಲಿ, ಒಳ್ಳೆಯ ಸಲಹೆಗಳನ್ನು ಕೊಡಲಿ. ಅವುಗಳನ್ನು ಅನುಷ್ಠಾನದಲ್ಲಿ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆದರೆ records set right ಮಾಡಬೇಕಾದರೆ, ಕೇಂದ್ರ ಸರ್ಕಾರ 4ನೇ ಆಗಸ್ಟ್ 2012 ರಂದು ಅಡಿಕೆ ಆಮದು ಶುಲ್ಕದ ದರವನ್ನು ₹ 35/– ರಿಂದ ₹ 75/– ಕ್ಕೆ ಹೆಚ್ಚಿಸಿದೆ. ಇದರಿಂದ ಕಳ್ಳ ಸಾಗಾಣಿಕೆ ಬಂದ್ ಆಯಿತು inferior ಅಡಿಕೆ ಏನು ಗುಟ್ಕಾಗೆ ಹೋಗುತ್ತಿತ್ತು ಅದು ಬಂದ್ ಆಗಿ ಅಡಿಕೆ ಧಾರಣೆ ಹೆಚ್ಚಾಯಿತು. ಹಾಗಾಗಿ CAMPCO ಆಗಲಿ ತೋಡ್ಕಾ ಸಂಸ್ಥೆಯಾಗಲಿ ಆಗಲಿ advertisements ಹಾಕಿ ಕೇಂದ್ರ ಸರ್ಕಾರಕ್ಕೆ ಯು.ಪಿ.ಎ. ಸರ್ಕಾರಕ್ಕೆ ಅಭಿನಂದಿಸುತ್ತಾರೆ. ಈ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುತ್ತಿದ್ದೇನೆ. ಇದನ್ನು record ಗೂ ಸಹ ಕೊಡುತ್ತಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾನು ಬಹಳ clear ಆಗಿ ಹೇಳಿದ್ದೇನೆ. ಶೇಕಡ 35ರಷ್ಟು Import Duty ಏನಿತ್ತು, ಇದನ್ನು ಮಾನ್ಯ ವಾಜಪೇಯಿ ಸರ್ಕಾರ ಇದ್ದಂತಹ ಕಾಲದಲ್ಲಿ ಶೇಕಡ 108ಕ್ಕೆ ಏರಿಸಿತ್ತು. ಆದರೆ cost price ಬಗ್ಗೆ ಅವರು ಹೇಳಿದ ರೀತಿಯಲ್ಲಿ 14ನೇ ತಾರೀಖಿಲ್ಲ 'New Delhi, Notification dated 13 th May 2013' ಅದು ನನ್ನಲ್ಲಿದೆ. ನಾನು ಇಲ್ಲವೆಂದು ಹೇಳುತ್ತಿಲ್ಲ, ಅದರ ಬಗ್ಗೆ clear ಆಗಿ ಹೇಳಿದ್ದೇನೆ. Cost price ಬಗ್ಗೆ 75/– ರೂ ಇದ್ದದ್ದನ್ನು 110/– ರೂ.ಗೆ ಹೆಚ್ಚಳ ಮಾಡಿರುವುದು ಯು.ಪಿ.ಎ. ಸರ್ಕಾರ, ಇದರ ಬಗ್ಗೆ ನಾನು ಚರ್ಚೆ ಮಾಡಿಲ್ಲ. Notification dated, 13 th May, 2013, ನಾನು ಹೇಳಿರುವಂಥದ್ದು cost price ನಿಮ್ಮ ಸರ್ಕಾರ ಮಾಡಿರುವಂಥದ್ದು, ಅಂದರೆ ಯು.ಪಿ.ಎ. ಸರ್ಕಾರವು CAMPCO ಸಂಸ್ಥೆಗಳು MAMPCO ಸಂಸ್ಥೆಗಳು ಒಟ್ಟಾಗಿ delegations ಹೋದಂತಹ ಸಂದರ್ಭದಲ್ಲಿ ಮಾಡಿರುವಂಥದ್ದು.

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ನನ್ನ ಬಳಿ correspondence ಮಾಡಿರುವಂತಹದ್ದು ಇದೆ. CAMPCO ಅವರು Photo ಹಾಕಿ advertisement ಹಾಕಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಚಿವರೇ, ತಾವು ಹಿರಿಯರಿದ್ದೀರಿ, ನಾನು ಯಾವತ್ತೂ ಯಾವುದೇ ಗೊಂದಲಗಳನ್ನು ಸೃಷ್ಟಿ ಮಾಡುವುದಿಲ್ಲ. ನನ್ನ ಬಳಿ ಏನು records ಇದೆ ಅದನ್ನು set right ಮಾಡಿ ಹೇಳುತ್ತಿದ್ದೇನೆ. ನೀವು ಮಾಡಿದಂತಹ ಕೆಲಸವನ್ನು ನಾವು ಮಾಡಿದ್ದೇವೆ ಎಂದು ಹೇಳಿಕೊಳ್ಳುವಂತಹ cheap popularity ಯ gimmicks ರಾಜಕಾರಣಕ್ಕೆ ನಾನು ಯಾವತ್ತೂ yield ಆಗಿಲ್ಲ, ಇನ್ನು ಮುಂದಕ್ಕೂ ಸಹ yield ಆಗುವುದಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, 'ನೀವು ಮಾಡಿದಂತಹ ಕೆಲಸವನ್ನು ನಾವು ಮಾಡಿದ್ದೇವೆ' ಎಂದು ಹೇಳಿಕೊಳ್ಳುವುದಿಲ್ಲವೆಂದು ಹೇಳಿದರು. ಆದರೆ ಮತ್ತೊಬ್ಬರು ಮಾಡಿದ್ದು ಹೇಳಿಯೇ ರಾಜಕಾರಣ ಮಾಡಿದ್ದು.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಇಂತಹ ಕೆಲಸವನ್ನು ನಿಮ್ಮ ಸರ್ಕಾರ ಮಾಡಿದ್ದು ಎಂದು ಈ ಸದನದಲ್ಲಿ ಈ ಸ್ಥಾನದಲ್ಲಿ ನಿಂತು ಯಾರಾದರೂ ಹೇಳಿ ಒಪ್ಪಿಕೊಂಡಿರುವುದು ಉಂಟೆ? ನಾನು ಈ ವಿಷಯವನ್ನು ಏಕೆ ಹೇಳುತ್ತಿದ್ದೇನೆಂದರೆ, on record ಇದ್ದದ್ದನ್ನು ನಾವು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಎರಡನೆಯದಾಗಿ, ನಾನು ಇದರ ಗಂಭೀರತೆಯ ಬಗ್ಗೆ ಮಾತನಾಡುತ್ತಿದ್ದೇನೆ. ಇವತ್ತು ಗುಟ್ಕಾ ನಿಷೇಧದಿಂದ ಅಡಿಕೆ ಬೆಳೆಗಾರರಿಗೆ ಏನು ತೊಂದರೆ ಆಗಿಲ್ಲ, ಕಾಲಕಾಲಕ್ಕೆ ಅಡಿಕೆ ಬೆಳೆಗಾರರಿಗೆ ತೊಂದರೆ ಆದರೆ ನಿಮ್ಮ ರಕ್ಷಣೆಗೆ ನಾವು ಇದ್ದೇವೆ ಎಂದು ಸರ್ಕಾರ ಹೇಳಿತ್ತು. ಗುಟ್ಕಾ ನಿಷೇಧದ ಬಗ್ಗೆ announce ಆದ ಮರುದಿವಸವೇ ಮಾರುಕಟ್ಟೆಯಲ್ಲಿ ಅಡಕೆಯ ಬೆಲೆ ಹೇಗೆ ಕುಸಿದಿದೆ ಎಂಬುದನ್ನು ಹೇಳಬಯಸುತ್ತೇನೆ. ದಿನಾಂಕ: 30/5/2013ರಲ್ಲಿ ಬೆಟ್ಟ ಅಡಿಕೆಗೆ

₹ 17,189/- ರಿಂದ 19,060/– ರೂ ಇತ್ತು. ಗುಟ್ಕಾ ನಿಷೇಧವಾದ ಮರು ದಿವಸವೇ ಬೆಟ್ಟ ಅಡಿಕೆಗೆ ದರ ₹ 16,619/– ರಿಂದ ₹ 17,719/–ಕ್ಕೆ ಇಳಿದಿದೆ. ಅಂದರೆ ₹ 2,000/- ಒಮ್ಮೆಲೆ ಇಳಿದಿದ್ದನ್ನು ನೋಡಿದ್ದೇವೆ. ಅದರ ನಂತರ ರಾಶಿ ಅಡಿಕೆಗೆ ಅಂದರೆ ಇಡಿ ಅಡಿಕೆಗೆ ದರ 18,009/– ರೂಪಾಯಿಗಳಿಂದ 19,069/– ರೂಪಾಯಿಗಳಿತ್ತು. ಆದರೆ ಗುಟ್ಕಾ ನಿಷೇಧವಾದ ಮರುದಿವಸವೇ ಅದರ ಬೆಲೆ 16,429/– ರೂಪಾಯಿಗಳಿಂದ 17,709/– ರೂಪಾಯಿಗಳಿಗೆ ಇಳಿಯಿತು. ಇದರ ಪರಿಣಾಮ ಯಾರ ಮೇಲೆ ಬೀಳುತ್ತದೆ ಹೇಳಿ. ಇವತ್ತು ನಾನು ಸಹಕಾರ ಸಂಘಕ್ಕೆ ಸಾಲವನ್ನು ಕಟ್ಟಬೇಕು. ನನ್ನ ಬಳಿ ಸ್ವಲ್ಪ ಅಡಿಕೆ ಇದೆ. ಆ ಅಡಿಕೆಗಳನ್ನು ಮಾರಿ ಸಹಕಾರಿ ಸಂಘಕ್ಕೆ ನಿಗದಿತ ಸಮಯದಲ್ಲಿ ಹಣವನ್ನು ಕಟ್ಟಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಪರಿಸ್ಥಿತಿ ಉಂಟಾದರೆ ಏನು ಮಾಡಬೇಕು ಹೇಳಿ. ಇವತ್ತು ಈ ದೇಶದಲ್ಲಿ, ಈ ರಾಜ್ಯದಲ್ಲಿ ಕೈಗಾರಿಕೋದ್ಯಮಿಗಳಿಗೆ ಮತ್ತು ಇತರರಿಗೆ ನಿಮ್ಮ tax exemption ಲಕ್ಷಾಂತರ ರೂಪಾಯಿಗಳನ್ನು ಕೊಡುವುದನ್ನು ನಾವು ನೋಡುತ್ತಿದ್ದೇವೆ. ಆದರೆ ರೈತ ಏನಾದರೂ ಬ್ಯಾಂಕಿಗೆ ಸಾಲ ಕಟ್ಟುವುದು ಒಂದು ದಿವಸ ವ್ಯತ್ಯಾಸವಾದರೂ ಅವನು ತೆಗೆದುಕೊಂಡಿರುವಂತಹ ಸಾಲದ ಮೇಲೆ ಬಡ್ಡಿಯನ್ನು ಮತ್ತೊಂದನ್ನು ಹಾಕುವುದನ್ನು ನಾವು ನೋಡಿದ್ದೇವೆ. ಈ ದೇಶದಲ್ಲಿ ಇವತ್ತಿನ ದಿವಸ ಯಾವುದೇ ಕೈಗಾರಿಕೋದ್ಯಮಿ ಆತ್ಮಹತ್ಯೆಗೆ ಶರಣಾಗಿಲ್ಲ, ಆದರೆ ಆತ್ಮಹತ್ಯೆಗೆ ಬಲಿ ಆಗುತ್ತಿರುವಂಥವರು ರೈತರು ಮಾತ್ರ. ಸುಪ್ರೀಂ ಕೋರ್ಟಿನ ಪ್ರಕಾರ ಇನ್ನೂ ಒಂದು ತಿಂಗಳ ಕಾಲಾವಕಾಶ ಇತ್ತಲ್ಲವೆ? ಅಲ್ಲದೆ ಇಲ್ಲಿ ಸದನ ನಡೆಯುತ್ತಿತ್ತು. ಜನಪ್ರತಿನಿಧಿಗಳಿದ್ದರು ಇವರೆಲ್ಲರನ್ನೂ ಕರೆದು ಸಭೆ ನಡೆಸಿ ತಕ್ಷಣ ಏನು ಮಾಡಬಹುದು ಎಂದು ಕೇಳಬಹುದಾಗಿತ್ತಲ್ಲವೆ? ಆದರೆ ಏಕೆ ಕೇಳಲಿಲ್ಲ ಎಂಬುದು ನಮ್ಮ ಪ್ರಶ್ನೆ. ಇದರಿಂದಾಗಿ ರೈತನ ಮೇಲೆ ಗಂಭೀರವಾದಂತಹ ಪರಿಣಾಮ ಬೀರಿದೆ. ಇವತ್ತು ಇನ್ನೊಂದು ಭಾರಿ ದೊಡ್ಡ ಸಂಗತಿಗಳನ್ನು ಹೇಳುತ್ತಿದ್ದಾರೆ, ಏನೆಂದರೆ, ಕಳೆದ ಎರಡು ಮೂರು ದಿವಸಗಳಿಂದ ಚಿತ್ರದುರ್ಗ, ಬಳ್ಳಾರಿ, ಬೆಂಗಳೂರು ಎಲ್ಲಾ ಕಡೆಗಳಲ್ಲಿಯೂ ಸಣ್ಣ ಸಣ್ಣ ಗೂಡಂಗಡಿಗಳ ಮೇಲೆ ದಾಳಿ ಆಗಿದೆ.

ಅವರು ಅದರಿಂದಲೇ ಜೀವನ ಮಾಡುವಂಥವರು. ಕೇವಲ ಗುಟ್ಕಾ ಮಾತ್ರ ban ಮಾಡಲಿಲ್ಲ, ಪಾನ್‌ಮಸಾಲವನ್ನು ಸಹ ban ಮಾಡಿ ಅವರ ಅಂಗಡಿಗಳನ್ನು ಬಂದ್ ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಬೇಕಾದರೆ ಇದರ ಬಗ್ಗೆ ಸರ್ಕಾರ ಯಾರಿಂದಲಾದರೂ ವರದಿಯನ್ನು ತರಿಸಿಕೊಳ್ಳಬಹುದು. ಇತ್ತೀಚೆಗೆ ಕೇರಳದಲ್ಲಿ ಒಂದು judgment ಆಗಿದೆ. ಏನೆಂದರೆ ಪಾನ್ ಮಸಾಲಗಳನ್ನು ಎಲ್ಲಿಯೂ ಕೂಡ ರದ್ದು ಮಾಡಬಾರದು, ಗುಟ್ಕಾದಲ್ಲಿ ತಂಬಾಕು ಮತ್ತು nicotine ಇರುವಂತಹ ಪದಾರ್ಥವನ್ನು ಮಾತ್ರ ban ಮಾಡಬೇಕು ಎಂದು ಹೇಳಿದ್ದಾರೆ. ಆದರೆ ಇಲ್ಲಿ ಪಾನ್ ಮಸಾಲ ಮಾಡುವಂಥದ್ದನ್ನು ಸಹ ban ಮಾಡುತ್ತಿದ್ದಾರೆ. ಇದರಿಂದಾಗಿ ಎಷ್ಟು ಜನರಿಗೆ ತೊಂದರೆಯಾಗಿದೆ ಗೊತ್ತಿದೆಯೇ? ನಾನು ಈ ಮಾತನ್ನು ಏಕೆ ಕೇಳುತ್ತಿದ್ದೇನೆಂದರೆ, ಈ ಗುಟ್ಕಾ ನಿಷೇಧದಿಂದಾಗಿ ಯಾವುದೇ ರೀತಿಯಾದಂತಹ ಪರಿಣಾಮ ಬೀರಲಿಲ್ಲ ಎಂದು ಹೇಳುತ್ತಿರುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. raid ಮಾಡುವಂತಹ ಅಧಿಕಾರಿಗಳಿಗೆ ಸಿಕ್ಕಿದ್ದೇ ಅವಕಾಶವೆಂದು ನುಗ್ಗುತ್ತಾರೆ. ಅಧಿಕಾರಿಗಳ ಸಂಗತಿಗಳು ಇಡೀ ಜಗತ್ತಿಗೇ ಗೊತ್ತಿದೆ. ಎಲ್ಲಿ ಅವಕಾಶ ಸಿಗುತ್ತದೆ ಅಲ್ಲಿ ಸವಾರಿ ಮಾಡುತ್ತಾರೆ. ಇವತ್ತು ಬೆಳಗಿನಿಂದಲೇ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಬೆಂಗಳೂರು ಹಾಗೂ ಇನ್ನಿತರ ಕಡೆಗಳಿಂದ ನಮ್ಮ ಮೇಲೆ ಈ ರೀತಿ ಸವಾರಿ ಆಗುತ್ತಿದೆ ಎಂದು ದೂರವಾಣಿ ಕರೆಗಳು ಬಂದಿದೆ. ದಾವಣಗೆರೆಗೆ ಸಂಬಂಧಪಟ್ಟಂತಹ ಮಾನ್ಯ ಸಚಿವರು ಇಲ್ಲಿಯೇ ಇದ್ದಾರೆ. ಅವರಿಗೂ ವಿಷಯ ತಿಳಿದಿರಬಹುದು. ಆದರೆ ಅವರಿಗೆ ಗೊತ್ತಿದ್ದರೂ ಸಹ ಅವರು ಏನೂ ಹೇಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಆಡಳಿತ ಪಕ್ಷದಲ್ಲಿ ಇದ್ದುಕೊಂಡು ಇದನ್ನು ವಿರೋಧ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಶಾಮನೂರು ಶಿವಶಂಕರಪ್ಪ(ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಗುಟ್ಕಾ ಇರಬೇಕು ಎಂದು ವಾದ ಮಾಡುತ್ತಿದ್ದಾರೆಯೇ ಹೇಗೆ? ಏಕೆಂದರೆ ಗುಟ್ಕಾದಿಂದ ಏನು ಅನಾಹುತ ಆಗುತ್ತದೆ ಎಂದು ನಮಗೆಲ್ಲರಿಗೂ

ತಿಳಿದಿದೆ. ರೈತರಿಗೆ ಏನು ಅನ್ಯಾಯ ಆಗಿದೆ ಅದನ್ನು ಸರಿಪಡಿಸುವುದಕ್ಕೆ ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ.

**ಶ್ರೀ ಡಿ.ವಿ. ಸದಾನಂದಗೌಡ:-** ಆಗಿರುವಂತಹ ಅನ್ಯಾಯವನ್ನು ಸರ್ಕಾರ ಯಾವಾಗ ಸರಿಪಡಿಸುತ್ತದೆ? ಧಾರಣೆ ಇಳಿದು ಹೋಯಿತಲ್ಲ.

**ಶ್ರೀ ಶಾಮನೂರು ಶಿವಶಂಕರಪ್ಪ:-** ಬೆಲೆ ಕಡಿಮೆ ಆದರೆ ನಾವು ರೈತರಿಗೆ ಸಹಾಯಧನ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಆದ್ದರಿಂದ ನಿಮಗೆ ಗುಟ್ಕಾ ಇರಬೇಕೆ ಬೇಡವೆ ಎಂಬುದನ್ನು ತಿಳಿಸಿ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, "ಊರು ಕೊಳ್ಳೇ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರಂತೆ" ಆ ರೀತಿ ಆಗಿದೆ. ಮೊನ್ನೆ ದಿವಸ ನಾವೆಲ್ಲರೂ ಅಡಿಕೆಗಳನ್ನು ತೆಗೆದುಕೊಂಡು ಹೋಗಿ ಮಂಡಿಯಲ್ಲಿ ಹಾಕಿದ್ದೇವೆ. ಸಹಕಾರ ಸಂಸ್ಥೆಗಳಿಗೆ ಹಾಕಿದ್ದೇವೆ. ಬೆಲೆ ಕಡಿಮೆ ಆಗಿದೆ. ಈ ರೀತಿ ಇರುವಾಗ ನಮ್ಮ ರಕ್ಷಣೆಗೆ ಯಾರು ಬರುತ್ತಾರೆ? ನಿನ್ನೆ ದಿವಸ ಕೆಳಗಿನ ಮನೆಯಲ್ಲಿ ನಡೆದಂತಹ ಸಂಗತಿಯನ್ನು ನಾನು ಇಲ್ಲಿ ಉಲ್ಲೇಖ ಮಾಡಬಾರದು. ಆದರೂ ಸಹ ನಿನ್ನೆ ದಿವಸ ಕಾಂಗ್ರೆಸ್ ಶಾಸಕರಾದಂತಹ ಮಾನ್ಯ ವಡ್ನಾಳ್ ರಾಜಣ್ಣ ನವರು ಮಾನ್ಯ ಹೆಬ್ಬಾರ್ ರವರು ಎಷ್ಟು ಪ್ರಬಲವಾಗಿ ಸರ್ಕಾರದ ವಿರುದ್ಧ ಮಾತನಾಡಿದರೆಂದರೆ, ಈ ರೀತಿ ನೀವು ಮಾಡಿರುವುದು ಸರಿ ಅಲ್ಲ, ನಮ್ಮನ್ನು ಕರೆದು ಮಾತನಾಡಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ಹೇಳಿದರು. ಆದರೆ ಆಡಳಿತ ಪಕ್ಷದಲ್ಲಿರುವಂತಹ ಬಹಳ ಜನ ಶಾಸಕರು ಅಧಿಕಾರಕ್ಕೋಸ್ಕರ ಬಾಯಿ ಮುಚ್ಚಿ ಕುಳಿತುಕೊಂಡಿದ್ದಾರೆ. ರೈತರ ಪರವಾಗಿ ಎಂದು ಹೇಳುವಂತಹ ಹೆಸರಿನಲ್ಲಿ ಅಧಿಕಾರಕ್ಕೋಸ್ಕರ ಕಣ್ಣಾಮುಚ್ಚಾಲೆ ಆಡುವಂತಹ ಪ್ರಯತ್ನ ನಡೆಯುತ್ತಿದೆ. ಕೇಂದ್ರ ಸರ್ಕಾರ ಪ್ರತಿ ಬಾರಿಯು ಅಡಿಕೆ ಬೆಳೆಗಾರರಿಗೆ ಸಮಸ್ಯೆ ಬಂದಾಗಲೆಲ್ಲಾ ಅವರಿಗೆ ಪರಿಹಾರವನ್ನು ಕೊಟ್ಟಿದೆ. ಇತ್ತೀಚೆಗೆ ಅಂದರೆ ನಮ್ಮ ಸರ್ಕಾರ ಇದ್ದಾಗ ಅಡಿಕೆಗೆ ಹಳದಿ ರೋಗ ಬಂದಾಗ ನಮ್ಮ Horticulture Secretary, Agriculture Secretary ಅವರನ್ನು ಕೇಂದ್ರಕ್ಕೆ ಕಳಿಸಿ ಇದರ ಬಗ್ಗೆ

ಸಮಾಲೋಚನೆಯನ್ನು ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. 'ಗೋರಕ್‌ಸಿಂಗ್' ವರದಿಯಲ್ಲಿ ಹತ್ತು ಎಕರೆಗಳವರೆಗೆ ಸಾಲಾ ಮನ್ನಾ ಮಾಡಬೇಕೆಂದು ತಿಳಿಸಿದ್ದಾರೆ. ಅದನ್ನೆಲ್ಲಾ ಅನುಷ್ಠಾನ ಮಾಡುವುದರ ಬಗ್ಗೆ ಒಂದು ಚರ್ಚೆಯನ್ನು ಮಾಡಬೇಕಾಗಿತ್ತು. ಈ ಧಾರಣೆ ಕುಸಿತದ ಬಗ್ಗೆ ಚರ್ಚೆ ಆಗಬೇಕಾಗಿತ್ತು. ಈ ಆದೇಶವನ್ನು ಒಂದಷ್ಟು ದಿವಸ ತಡೆಗಟ್ಟಿದ್ದರೆ ಏನೂ ಆಗುತ್ತಿರಲಿಲ್ಲ. ಇವತ್ತು ಗುಟ್ಕಾದ ಹೆಸರಿನಲ್ಲಿ ಅಡಿಕೆ ಬೆಳೆಗಾರರ ಬಗ್ಗೆ ಗಂಭೀರವಾದಂತಹ ಚಿಂತನೆ ಮಾಡುವ ಅವಶ್ಯಕತೆ ಇದೆ. nicotine ಮತ್ತು ತಂಬಾಕು ರಹಿತವಾದಂತಹ ಪಾನ್‌ಮಸಾಲೆಯನ್ನು ಇನ್ನಷ್ಟು ಉತ್ಪಾದನೆ ಮಾಡುವುದಕ್ಕೆ ಅಡಿಕೆ ಬೆಳೆಗಾರರು ಮತ್ತು ಬೇರೆ ಬೇರೆ ಸಹಕಾರ ಸಂಸ್ಥೆಗಳು ಏನು ಮಾಡಬೇಕು ಎಂಬುದರ ಬಗ್ಗೆ ಚಿಂತನೆ ಮಾಡಬೇಕಾಗಿತ್ತು. ಎಲ್ಲರೂ ಗುಟ್ಕಾ ಆರೋಗ್ಯಕ್ಕೆ ಹಾನಿಕರ ಎಂದು ಹೇಳುತ್ತಾರೆ. ಆದರೆ "ಅಗ್ಗದ ಮದ್ಯ" ಕೊಡುವುದು ಹಾನಿಕರವಲ್ಲವೆ ಸ್ವಾಮಿ? ಇವತ್ತು ಅಗ್ಗದ ಮದ್ಯ ಕೊಡಬೇಕೆಂದು ಸರ್ಕಾರ ಘೋಷಣೆ ಮಾಡುತ್ತದೆ. ಇತ್ತೀಚೆಗೆ "ತಂಬಾಕು ರಹಿತ" ದಿನವೆಂದು ಘೋಷಣೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಸಮೀಕ್ಷೆ ಪ್ರಕಾರ ಶೇಕಡ 25ರಷ್ಟು ತಂಬಾಕು ಸೇವನೆ ಮಾಡುವಂಥವರಲ್ಲಿ ಶೇಕಡ 16.5ರಷ್ಟು ಜನ ಸಿಗರೇಟನ್ನು ಸೇದುತ್ತಾರೆ. ಹಾಗಾದರೆ ಸಿಗರೇಟನ್ನು ಏಕೆ ರದ್ದು ಮಾಡಲಿಲ್ಲ? ಮಾತು ಎತ್ತಿದರೆ ಸುಪ್ರೀಂ ಕೋರ್ಟ್ ಎಂದು ಹೇಳುತ್ತಾರೆ. ಸುಪ್ರೀಂ ಕೋರ್ಟಿಗೆ ಇನ್ನೂ ಒಂದು ತಿಂಗಳ ಕಾಲಾವಕಾಶ ಇತ್ತಲ್ಲವೆ? ಬೆಳೆಗಾರರನ್ನು ಕರೆದು ಮಾತನಾಡಿಸಬಹುದಾಗಿತ್ತಲ್ಲವೆ? ಹಾಗಾದರೆ ಇವರು ಯಾವ cigarette lobby ಗೆ ಮಣಿದಿದ್ದಾರೆ? ಸಿಗರೇಟ್ ಸೇದಬಾರದು ಎಂದು ಏಕೆ ರದ್ದು ಮಾಡಲಿಲ್ಲ? ಯಾವ I.T.C. ಜೊತೆ ಶಾಮೀಲಾಗಿದ್ದಾರೆ? ಇದನ್ನು ಹೇಳಬೇಕು. ಅಡಿಕೆ ಬೆಳೆಗಾರರನ್ನು, ಜನಪ್ರತಿನಿಧಿಗಳ ಸಭೆಯನ್ನು ಕರೆಯುವುದಕ್ಕೆ ಸರ್ಕಾರಕ್ಕೆ ಇರುವಂತಹ ಆತಂಕವಾದರು ಏನು?

ಇದರ ಬಗ್ಗೆ ಏಕೆ ಚರ್ಚೆಗಳನ್ನು ಮಾಡುವುದಿಲ್ಲ? ಗುಟ್ಕಾ ನಿಷೇಧಕ್ಕೆ ಸಹಿ ಹಾಕುತ್ತಾರೆ ಎನ್ನುವ ವಿಚಾರ ತಿಳಿದ ಕೂಡಲೇ ನಾನು

ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದೆನು. ಅದಕ್ಕೆ 2–3 ಪುಟಗಳ ಸುದೀರ್ಘವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ನೀಡಿದ್ದಾರೆ. ಈಗ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. ಅದರ ಬಗ್ಗೆ ಚರ್ಚೆ ಆದಲ್ಲಿ ಇನ್ನೂ ಒಂದು ಗಂಟೆಗಳ ಕಾಲಾವಕಾಶ ಬೇಕಾಗುತ್ತದೆ. ಸಂಪೂರ್ಣವಾಗಿ ಸಮಂಜಸವಲ್ಲದ ಉತ್ತರ ನನಗೆ ಬಂದಿದೆ. ಬಹಳ ಸ್ಪಷ್ಟವಾಗಿ ಆ ವಿಚಾರಗಳನ್ನು ನಾನಿಲ್ಲಿ ಹೇಳಬಲ್ಲೆ, ತಾವು ಅನುಮತಿ ನೀಡಿದರೇ ಅದನ್ನು ನಾನಿಲ್ಲಿ ಓದುತ್ತೇನೆ. ನನ್ನ ಒಂದು ಸಣ್ಣ ಪತ್ರಕ್ಕೆ 2–3 ಪುಟಗಳ ಸುದೀರ್ಘವಾದ ಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳು ಬರೆದಿದ್ದಾರೆ. ಈ ಗುಟ್ಕಾ ನಿಷೇಧವನ್ನು ನಾನು ಸ್ವಾಗತಿಸುತ್ತೇನೆ. ಆದರೆ ಗುಟ್ಕಾ ನಿಷೇಧದ ಹಿನ್ನೆಲೆಯಲ್ಲಿ ವಿಶೇಷವಾಗಿ ಅಡಕೆ ಕೃಷಿ ಕಾರ್ಮಿಕರಿಗೆ ತೊಂದರೆ ಆಗುತ್ತದೆ. ಏಕೆಂದರೆ ಅಡಿಕೆ ಕೃಷಿಕಾರ್ಮಿಕರಿಗೆ ಸಿಗುವಷ್ಟು ಕೂಲಿ ಯಾರಿಗೂ ಸಿಗುವುದಿಲ್ಲ. ನಮ್ಮ ಅರಣ್ಯ ಸಚಿವರಾದ ರಮನಾಥರೈರವರು ಅಡಿಕೆ ಕೃಷಿ ಕಾರ್ಮಿಕರಿಗೆ 500 ರೂಪಾಯಿಗಳ ಕೂಲಿಯನ್ನು ಕೊಡುತ್ತಿರಬಹುದು. ಅವರು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಾತ್ರ ಕೆಲಸವನ್ನು ಮಾಡುತ್ತಾರೆ. ಇವತ್ತು ಅಡಿಕೆ ಕಾರ್ಮಿಕರು, ಅಡಿಕೆ ಕಾರ್ಮಿಕರು, ಅಡಿಕೆ ಎಲೆಯ ತಟ್ಟೆಗಳನ್ನು ಮಾಡುವವರು, ಮತ್ತು ಸಣ್ಣ ಗೂಡಿನ ಅಂಗಡಿಯವರೆಲ್ಲರಿಗೂ ಸಹ ಜೀವನ ನಡೆಸುವುದು ತೊಂದರೆಯಾಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಬೇರೆ ಬೇರೆ ಕಾರಣಗಳನ್ನು ನೀಡಿ, ನನಗೆ ಬರೆದಿರುವ ಪತ್ರದ ಕೊನೆಯ ಭಾಗವನ್ನು ಮಾತ್ರ ನಾನಿಲ್ಲಿ ಒದುತ್ತೇನೆ. ಅವರ ಪತ್ರದಲ್ಲಿ "ರಾಜ್ಯ ಸರ್ಕಾರದ ಈ ಕ್ರಮಕ್ಕೆ ಎಲ್ಲರೂ ಸಹಕಾರವನ್ನು ನೀಡಬೇಕು, ಸರ್ಕಾರದ ಗುಟ್ಕಾ ನಿಷೇಧಕ್ಕೆ ನಮ್ಮೆಲ್ಲರ ಸಹಕಾರವಿದೆ. ಒಂದು ವೇಳೆ ಈ ಕ್ರಮದಿಂದ ರಾಜ್ಯದ ಅಡಿಕೆ ಬೆಳೆಗಾರರಿಗೆ ತೊಂದರೆಯಾದರೆ ಅದರ ಬಗ್ಗೆ ಚಿಂತನೆಯನ್ನು ನಡೆಸಿ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು" ಎನ್ನುವ ಮಾತುಗಳನ್ನು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ನಾನು ಈಗಾಗಲೇ ಅಡಿಕೆ ಬೆಲೆಯ ಕುಸಿತದ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದೇನೆ. ಇಂತಹ ದಿವಸ ಅಡಿಕೆ ಬೆಳೆಗಾರರ ಸಭೆಯನ್ನು ಕರೆಯುತ್ತೇವೆ,

ಇಂತಹ ದಿವಸ ಎಲ್ಲರನ್ನು ಸಭೆಗೆ ಕರೆಯುತ್ತೇವೆ ಉಂಟಾಗಿರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಕೆಲಸವನ್ನು ನಾವು ಮಾಡುತ್ತೇವೆ, ಪಾನ್ ಮಸಾಲಗಳನ್ನು ಬ್ಯಾನ್ ಮಾಡದಿರುವ ಬಗ್ಗೆ ಆಹಾರ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡುತ್ತೇವೆ, ಗುಟ್ಕಾ, ನಿಕೋಟಿನ್, ತಂಬಾಕು ಸಂಬಂಧಿತ ಪದಾರ್ಥಗಳನ್ನು ಮಾತ್ರ ನಿಷೇಧ ಮಾಡಲಾಗುವುದು, ಪಾನ್ ಮಸಾಲಕ್ಕೆ ನಿಷೇಧವಿಲ್ಲ, ಎಲೆ ಮಾಡುವ, ಗೂಡು ಅಂಗಡಿಗಳನ್ನು ನಡೆಸುತ್ತಿರುವ ಯುವಕರಿಗೆ ಹೊಸ ಉದ್ಯೋಗವನ್ನು ನೀಡಲಾಗುವುದು ಎನ್ನುವ ಉತ್ತರ ಸರ್ಕಾರದಿಂದ ಬರಬೇಕು. ಇದನ್ನು ಹೇಳದೇ ತಪ್ಪಿಸಿಕೊಂಡು ಸಮಯ ಬಂದಾಗ ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ನಿಮಗೆ ಯಾವಾಗ ಸಮಯ ಬರುತ್ತದೆ? ಹೊಳೆ ದಾಟಿದ ಮೇಲೆ ದೋಣಿ ಅವಶ್ಯಕತೆ ನಮಗಿಲ್ಲ ಎಂದು ನಿಮಗೆ ಅನಿಸುತ್ತಿರಬಹುದು. ಆದರೆ, ತರಾತುರಿಯಲ್ಲಿ ಸರ್ಕಾರ ತಂದಂತಹ ಆದೇಶ ಅಡಿಕೆ ಬೆಳೆಗಾರರಿಗೆ ಮರಣಶಾಸನ ಆಗಿದೆ. ಇದರ ಬಗ್ಗೆ ಸೂಕ್ತವಾದ ಉತ್ತರ ಸರ್ಕಾರದಿಂದ ಬರಬೇಕು. ಅಧಿವೇಶನ ಮುಗಿಯುವುದರ ಮೊದಲು ಎಲ್ಲ ಜನಪ್ರತಿನಿಧಿಗಳ ಒಂದು ಸಭೆಯನ್ನು ಮತ್ತು ಎಲ್ಲಾ ಸಹಕಾರ ಸಂಸ್ಥೆಗಳ ಒಂದು ಸಭೆಯನ್ನು ಕರೆದು ಚರ್ಚೆಮಾಡಿ ಇದಕ್ಕೊಂದು ಪರಿಹಾರವನ್ನು ಕೊಟ್ಟು ರೈತರು ಆತ್ಮಹತ್ಯೆಗೆ ಶರಣಾಗದಂತೆ ಮಾಡಬೇಕೆಂದು ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಸಭಾಪತಿಗಳೇ, ಗುಟ್ಕಾ ನಿಷೇಧ ಮಾಡಿರುವುದನ್ನು ಸ್ವಾಗತಿಸುತ್ತೇವೆ ಎನ್ನುತ್ತಾ, ಬಹಳ ಒಳ್ಳೆಯ ಮಾತುಗಳನ್ನು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದರ ಜೊತೆಗೆ ಸಿಗರೇಟನ್ನು ಕೂಡ ನಿಷೇಧ ಮಾಡಬೇಕೆಂದು ಹೇಳಿದ್ದಾರೆ. ಸರ್ಕಾರ ದಯಮಾಡಿ ಈ ಅಧಿವೇಶನ ಮುಗಿಯುವುದರೊಳಗೆ ಸಿಗರೇಟನ್ನು ಕೂಡ ಬ್ಯಾನ್ ಮಾಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಗಳೇ, ಈ ಗುಟ್ಕಾ ಸೇವನೆಯಿಂದ ನಮ್ಮ ರಾಷ್ಟ್ರದಲ್ಲಿ ಲಕ್ಷಾಂತರ ಜನರು ಸಾವನ್ನಪ್ಪಿದ್ದು ಎಷ್ಟೋ ಕುಟುಂಬಗಳು ಬೀದಿ ಪಾಲಾಗಿವೆ. ಇದೊಂದು ಸಮಾಜದ ಪಿಡುಗು. ಇದರಲ್ಲಿ ಯಾರೇ ಆಗಲಿ ರಾಜಕೀಯವನ್ನು ಮಾಡಬಾರದು. ಎಲ್ಲರೂ ಕೂಡ ಈ ಪಿಡುಗನ್ನು ಹೋಗಲಾಡಿಸಲು ಪಕ್ಷಾತೀತವಾಗಿ ಕೈ ಜೋಡಿಸಬೇಕು. ಇವತ್ತಿನ ಪ್ರಾಣಾಂತಿಕ ರೋಗ ಕ್ಯಾನ್ಸರ್‌ಗೆ ಈ ಗುಟ್ಕಾ ಮುಖ್ಯ ಕಾರಣ ಎಂದು ಅನೇಕ ವರದಿಗಳು ಬಂದಿವೆ. ಇದರ ಹಿನ್ನೆಲೆಯಲ್ಲಿ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಗುಟ್ಕಾ ಪೀಡಿತರ ಸಾವುಗಳನ್ನು ತಡೆದು, ಅವರ ಕುಟುಂಬಗಳನ್ನು ರಕ್ಷಣೆ ಮಾಡುವ ಸಲುವಾಗಿ ಒಂದು ನಿರ್ಧಾರವನ್ನು ತೆಗೆದುಕೊಂಡು ಒಂದು ನಿಗಧಿತ ವೇಳೆಯಲ್ಲಿ ನೋಟಿಫಿಕೇಶನ್ ಮೂಲಕ ಗುಟ್ಕಾ ನಿಷೇಧ ಮಾಡಬೇಕೆಂದು ರಾಷ್ಟ್ರದ ಎಲ್ಲಾ ರಾಜ್ಯಗಳಿಗೂ ಸಹ ಆದೇಶವನ್ನು ನೀಡಿದೆ. ರಾಷ್ಟ್ರದ 26 ರಾಜ್ಯಗಳಲ್ಲಿ ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಈಗಾಗಲೇ ಈ ಗುಟ್ಕಾ ಪದಾರ್ಥಗಳನ್ನು ನಿಷೇಧ ಮಾಡಲಾಗಿದೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಕೂಡ ಜೂನ್ 25ರ ಒಳಗೆ ಒಂದು ಅಫಿಡೇವಿಟ್ ಸಲ್ಲಿಸಿ ಗುಟ್ಕಾ ನಿಷೇಧದ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿದ್ದ ಹಿನ್ನೆಲೆಯಲ್ಲಿ ನಮ್ಮ ನೂತನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರು ‘ World Tobacco day’ ದಿನದಂದು ನಮ್ಮ ರಾಜ್ಯದ ಜನರಿಗೆ ಗುಟ್ಕಾ ನಿಷೇಧದ ಸಂದೇಶವನ್ನು ಕೊಡಬೇಕೆಂದು ತೀರ್ಮಾನಿಸಿದರು. ನಮ್ಮ ರಾಜ್ಯದಲ್ಲಿ ಕೆಲವು ವರ್ಗದ ಜನರು ಈ ಪದಾರ್ಥಗಳನ್ನು ಸೇವಿಸಿ ಇದರಿಂದ ತೊಂದರೆಗೆ ಒಳಗಾಗಿದ್ದಾರೆ ಇವರ ರಕ್ಷಣೆಗೆ ಇದೇ ಸರಿಯಾದ ದಿನವೆಂದು ಭಾವಿಸಿ ಅಂದೇ ಗುಟ್ಕಾವನ್ನು ನಿಷೇಧ ಮಾಡಬೇಕೆಂದು ತೀರ್ಮಾನ ಕೈಗೊಂಡರು. ಇದನ್ನು ಎಲ್ಲಾ ವರ್ಗದ ಜನರು ಕೂಡ ಸ್ವಾಗತ ಮಾಡಿದ್ದಾರೆ. ಈ ಪಿಡುಗಿನಿಂದ ಸಾವನ್ನಪ್ಪಿದ್ದ ನೊಂದ ಕುಟುಂಬದ ಸದಸ್ಯರು ಈಗಲಾದರೂ ಇದು ನಿಲ್ಲಲೆಂದು ಬಹಳಷ್ಟು ಆಶಯವನ್ನು ಇಟ್ಟುಕೊಂಡಿದ್ದಾರೆ.

ಇದರ ಜೊತೆಗೆ ಇವತ್ತು ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ಅಡಕೆ ಬೆಳೆಗಾರರು ಇದ್ದಾರೆ. ಹಾಗೆಯೇ ನೂರಾರು ಕಂಪನಿಗಳು ಗುಟ್ಕಾವನ್ನು ತಯಾರು ಮಾಡುತ್ತಾರೆ. ಇದರಲ್ಲಿ ಬಹುತೇಕ ಕಂಪನಿಗಳು ಕಳಪೆ ಪ್ರಮಾಣದ ಗುಟ್ಕಾವನ್ನು ತಯಾರು ಮಾಡುತ್ತವೆ. ಈ ಕಂಪನಿಗಳು ಬಹಳ ಅಗ್ಗದ ಬೆಲೆಯ ಕಡಿಮೆ ಗುಣಮಟ್ಟದ ಅಡಿಕೆಯನ್ನು ಹೊರದೇಶದಿಂದ ತರಿಸಿಕೊಂಡು ಅದರ ಜೊತೆಗೆ ಕೆಲವು ಕೆಮಿಕಲ್ಸ್‌ಗಳನ್ನು ಸೇರಿಸಿ ಗುಟ್ಕಾವನ್ನು ತಯಾರಿಸುತ್ತವೆ. ಶೇಕಡ 75 ರಷ್ಟು ಕಂಪನಿಗಳು ಇದನ್ನೇ ಮಾಡುತ್ತಾರೆ. ಬಾಕಿ ಇರುವ 25% ಕಂಪನಿಗಳು ನಮ್ಮ ದೇಶದ ಅಡಿಕೆಯನ್ನು ಖರೀದಿಸಿ ಗುಟ್ಕಾ ತಯಾರಿಸಬಹುದು. ಅಡಿಕೆ ಬೆಳೆಗಾರರಿಗೂ ಈ ಗುಟ್ಕಾ ನಿಷೇಧದ ಹಿನ್ನೆಲೆಯಲ್ಲಿ ಎಲ್ಲಾ ಪಕ್ಷದ ಮುಖಂಡರುಗಳು ಅವರಿಗೆ ಸಾಂತ್ವನವನ್ನು ಹೇಳಬೇಕಾಗಿದೆ. ಅವರಿಗೆ ಇದರ ಬಗ್ಗೆ ಸಾಕಷ್ಟು ಅರಿತವಾಗಿದೆ. ಏಕೆಂದರೆ ಈ ಸಮಾಜದಲ್ಲಿ ಅವರು ಕೂಡ ಒಂದು ಭಾಗವಾಗಿದ್ದು, ಅವರದ್ದು ಕೂಡ ಜವಾಬ್ದಾರಿಯಿರುತ್ತದೆ. ಇದರಿಂದ ಅವರಿಗಾಗಿರುವ ನಷ್ಟಕ್ಕೆ ಸರ್ಕಾರ ಯಾವರೀತಿಯಲ್ಲಿ ಸ್ಪಂದಿಸಿ ಅದನ್ನೆಲ್ಲ ಸರಿಪಡಿಸಿ ಸಮತೋಲನ ತರಬಹುದು ಎನ್ನುವುದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿದೆ. ಈ ಸದನದ ಸದಸ್ಯನಾಗಿ ನನಗೂ ಒಂದು ನಂಬಿಕೆಯಿದೆ. ಬೆಳೆಗಾರರು ಕೂಡ ಇದನ್ನು ಅರಿತುಕೊಳ್ಳುತ್ತಾರೆ. ಈ ವಿಚಾರವಾಗಿ ನಾವು ಕೆಲವು ರಾಜಕಾರಣಿಗಳು ನಮ್ಮ ನಮ್ಮ ಉದ್ದೇಶಕ್ಕಾಗಿ ಇದನ್ನು ಮಾಡುವುದು ಸೂಕ್ತವಲ್ಲ. ಗುಟ್ಕಾ ನಿಷೇಧದ ಸಂಬಂಧದಲ್ಲಿ ನಾವೆಲ್ಲರೂ ಪಕ್ಷಾತೀತವಾಗಿ ಒಂದಾಗಬೇಕು. ಗುಟ್ಕಾದಲ್ಲಿ ಕೆಮಿಕಲ್ ಮಿಕ್ಸ್ ಮಾಡುತ್ತಿದ್ದಾರೆ ಎನ್ನುವ ಹೊಸ ರಾಗ ಕೇಳಿ ಬರುತ್ತಿದೆ. ನಶೆ ಬರುತ್ತದೆ ಎನ್ನುವ ಕಾರಣಕ್ಕಾಗಿಯೇ ಗುಟ್ಕಾದಲ್ಲಿ ಕೆಮಿಕಲ್ಸ್ ಮಿಕ್ಸ್ ಮಾಡುತ್ತಾರೆ. ಹಾಗೆಯೇ ಈ ಸದನದಲ್ಲಿ ಸಿಗರೇಟು ಸೇವನೆ ಬಗ್ಗೆ ಕೂಡ ಚರ್ಚೆ ನಡೆಯಿತು, ಮೊದಲು ಸಿಗರೇಟು ಸೇದುತ್ತಿದ್ದ ಎಷ್ಟೋ ಮಂದಿ ಈಗ ಗುಟ್ಕಾ ಸೇವನೆಗೆ ಬಂದಿದ್ದಾರೆ. ನಮ್ಮ ಸಮಾಜದಲ್ಲಿ ಸಿಗರೇಟು ಸೇದುವುದನ್ನು ಯಾರು ಕೂಡ ಒಪ್ಪುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇವನೆ ಮಾಡುವುದನ್ನು ನಿಷೇಧ

ಮಾಡಿವೆ. ಸಮಾಜದಲ್ಲಿ ಸಾರ್ವಜನಿಕವಾಗಿ ಸಿಗರೇಟು ಸೇವನೆ ಮಾಡುವುದು ಸರಿಯಲ್ಲವೆನ್ನುವುದು ಎಲ್ಲರಿಗೂ ತಿಳಿದಿದೆ. ಯಾರಾದರೂ ಸಿಗರೇಟು ಸೇದುವ ಯುವಕರನ್ನು ನೋಡಿದಾಗ ದೊಡ್ಡವರು ಈತನಿಗೆ ಮರ್ಯಾದೆ ಇಲ್ಲ, ಸಭ್ಯನಲ್ಲ ಎಂದು ಭಾವಿಸುತ್ತಾರೆಂದು ಎಲ್ಲರೂ ಸ್ವಲ್ಪ ಹೆದರುತ್ತಾರೆ. ಈ ಗುಟ್ಕಾ ಸೇವನೆ ಯಾರಿಗೂ ಗೊತ್ತಾಗುವುದಿಲ್ಲ. ಆದರೆ, ಈ ಗುಟ್ಕಾ ಸೇವನೆಗೆ ಜನರು ಅವರ ಸಂಪಾದನೆಯನ್ನೆಲ್ಲಾ ಖರ್ಚು ಮಾಡುತ್ತಾರೆ. ಹಾಗಾಗಿ ಈ ಗುಟ್ಕಾ ನಿಷೇಧಕ್ಕೆ ಎಲ್ಲರೂ ಸಹ ಬೆಂಬಲ ನೀಡಬೇಕು ಮತ್ತು ಎಲ್ಲಾ ರಾಜಕೀಯ ಮುಖಂಡರು ಸಹ ಇದರ ಬಗ್ಗೆ ಪ್ರಯತ್ನವನ್ನು ಮಾಡಬೇಕಾಗುತ್ತದೆ.

(1.30 ಗಂಟೆ)

ಕೋರ್ಟ್ ಆದೇಶ ಇರುವುದರಿಂದ ಇದು ಬ್ಯಾನ್ ಆಗಲೇಬೇಕು. ಅಲ್ಲದೇ ಗುಟ್ಕಾ ಒಂದನ್ನು ಬ್ಯಾನ್ ಮಾಡಿ ಕ್ಯಾನ್ಸರ್ ತಡೆಗಟ್ಟಲು ಸಾಧ್ಯವಿಲ್ಲ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. 'ಚಟ್ಟ ಏರುವ ತನಕ ಚಟ ತೀರಲ್ಲ' ಎಂದು ಗಾದೆ ಮಾತಿದೆ. ಚಟ ಎನ್ನುವುದು ಬಹಳ ಕೆಟ್ಟದ್ದು. ಚಟ ಹತ್ತಿಸಿಕೊಂಡಿರುವವರು ಒಂದು ಪದಾರ್ಥ ಇಲ್ಲವೆಂದರೆ ಇನ್ನೊಂದು ಪದಾರ್ಥಕ್ಕೆ ಹೋಗುತ್ತಾರೆಯೇ ಹೊರತು ಚಟವನ್ನು ಬಿಡುವುದಿಲ್ಲ. ನಮ್ಮ ಸಮಾಜದಲ್ಲಿ ಸಾಕಷ್ಟು ನಶೆ ತರಿಸುವ ಬೇರೆ ಬೇರೆ ಪದಾರ್ಥಗಳು ಇವೆ. ಉದಾಹರಣೆಗೆ ಡ್ರಗ್ಸ್ ಐವತ್ತು ರೂಪಾಯಿಗಳಿಗೆ ಸಿಗುತ್ತದೆ. ಇಂತಹ ಡ್ರಗ್ಸ್‌ಗಳನ್ನು ಬಳಸುತ್ತಾರೆ. ಅದನ್ನು ಸಹ ತಡೆಗಟ್ಟಬೇಕಾಗಿದೆ. ಇವತ್ತು Druggist & Chemist ಗಳು ಯಾವುದೇ prescriptions ಇಲ್ಲದೇ ನಶೆ ಬರುವ ಪದಾರ್ಥಗಳನ್ನು ಕೊಡುತ್ತಾರೆ. ಆದರೆ ತೆಗೆದುಕೊಳ್ಳುವರ್‍ಯಾರೂ ರೋಗಿಗಳಲ್ಲ. ಅದನ್ನು ರೋಗವನ್ನು ಬರಿಸಿಕೊಳ್ಳುವುದಕ್ಕೆ ತೆಗೆದುಕೊಳ್ಳುತ್ತಾರೆ. ಇದರ ಬಗ್ಗೆ ಕೂಡ ಮಾನ್ಯ ಆರೋಗ್ಯ ಸಚಿವರು ಗಮನ ಹರಿಸಬೇಕು. Drug Stores ಗಳಲ್ಲಿ prescriptions ಇಲ್ಲದೇ ಯಾವುದೇ alternatives ಆಗಲೀ, ಮೊತ್ತೊಂದಾಗಲೀ ಕೊಡುವಂತಿಲ್ಲ ಎಂದು Strict ಆಗಿ ಆದೇಶವನ್ನು ಕೊಟ್ಟು ನಿಲ್ಲಿಸಬೇಕು. ಜೊತೆಗೆ ಅಡಿಕೆ ಬೆಳೆಗಾರರು ಗುಟ್ಕಾ ಮಾತ್ರವಲ್ಲದೇ

ಅರ್ಧ–ಮುಕ್ಕಾಲಿನಷ್ಟು ಜನ ಸಾಂಪ್ರದಾಯಿಕವಾದ ಎಲೆ–ಅಡಕೆ ಬೆಳೆ ಬೆಳೆದು ಮಾರಾಟ ಮಾಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು, ಎಲ್ಲಾ ಅಂಗಡಿಗಳಲ್ಲಿ ರೈಡ್ ಮಾಡಿ ಬೇರೆ ಬೇರೆ ರೀತಿ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದರು. ಬೇರೆ ಪದಾರ್ಥಗಳಾದ ಪಾನ್ ಮಸಾಲ ಪದಾರ್ಥಗಳ ಮೇಲೂ ರೈಡ್ ಮಾಡುತ್ತಿದ್ದಾರೆ ಎಂದು ಹೇಳಿದರು. ಅದೂ ಕೂಡ ಹಾನಿಕಾರಕವಾಗಿದ್ದು, ಅದರಲ್ಲಿಯೂ ಕೆಮಿಕಲ್ಸ್ ಇದೆ. ಪಾನ್ ಎಂದರೆ ಕೇವಲ ವೀಳೆದೆಲೆ ಸುಣ್ಣ ಹಾಕಿಕೊಳ್ಳುವುದಲ್ಲ. ಮದುವೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ವೀಳೆದೆಲೆ, ಅಡಿಕೆ, ಸುಣ್ಣ ಗುಲ್ಕನ್, ಮತ್ತು ಸೋಂಪು ಹಾಕಿಕೊಂಡು ಸ್ವೀಟ್ ಬೀಡಾದಂತೆ ತಿನ್ನುವುದು ಬೇರೆ ವಿಷಯ. ಆದರೆ ಬೀಡಾ ಶಾಪ್‌ಗಳಲ್ಲಿ ಈ ರೀತಿಯ ಸ್ವೀಟ್ ಬೀಡಾ ಕೂಡದೇ ಜರ್ದಾ ಹಾಕುವುದು ನಡೆಯುತ್ತಿದ್ದು, ಇದು ಕೂಡ ಅಪಾಯಕಾರಿಯಾಗಿದೆ. ಈ ಜರ್ದಾಗಳಲ್ಲಿ 120–220–420 ಏನೇನೋ ಇದೆ. ಇದು ಕೂಡ ಅಪಾಯಕಾರಿಯಾಗಿದ್ದು, ಇದರಿಂದಲೂ ಕ್ಯಾನ್ಸರ್ ಬರುವುದನ್ನು ತಡೆಗಟ್ಟಬೇಕಾಗಿದೆ. ಒಂದು ಕಡೆ ಗುಟ್ಕಾ ಬ್ಯಾನ್ ಮಾಡಿದ ತಕ್ಷಣವೇ ಕ್ಯಾನ್ಸರ್ ತಡೆಗಟ್ಟಿದಂತೆ ಆಗುವುದಿಲ್ಲ. ಇದರ ಬಗ್ಗೆ ಪಕ್ಷಾತೀತವಾಗಿ ಎಲ್ಲರೂ ಚಿಂತನೆ ಮಾಡಿ ಗುಟ್ಕಾ ಬ್ಯಾನ್ ಆಗಲೇಬೇಕು ಮತ್ತು ಇದರಿಂದ ಆಗುವ ನಷ್ಟಕ್ಕೆ ಸರ್ಕಾರವು ಬೆಂಬಲ ಬೆಲೆ ಬಗ್ಗೆ ಹೇಳಬೇಕು ಮತ್ತು ಅವರನ್ನು ಮನವೊಲಿಸಿಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಪ್ರೊ|| ಪಿ.ವಿ. ಕೃಷ್ಣಭಟ್ಟ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದ ಹಾಗೂ ಜನರ ಮನಸ್ಸನ್ನು ಕಲಕಿ ಗೊಂದಲ ನಿರ್ಮಾಣ ಮಾಡಿರುವ ಈ ಸಮಸ್ಯೆಯ ಬಗ್ಗೆ ಮಾನ್ಯ ಸದಾನಂದಗೌಡರು ಚರ್ಚೆ ಮಾಡಿದ್ದಾರೆ. ಈಗ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಕೃತಜ್ಞನಾಗಿದ್ದೇನೆ.

ಇನ್ನು ಗುಟ್ಕಾ ನಿಷೇಧ ಮಾಡಿರುವುದರಿಂದ ಅಡಿಕೆ ಬೆಳೆಗಾರರ ಮೇಲೆ ಏನು ಪರಿಣಾಮ ಆಗುತ್ತಿದೆ ಎಂಬ ಬಗ್ಗೆ ಚರ್ಚೆ ನಡೆದಿದೆ. ಒಂದು

ಸಂಗತಿ ಏನೆಂದರೆ, ಗುಟ್ಕಾದಲ್ಲಿರುವ ಯಾವ ingredients ಗಳಿಂದ ಕ್ಯಾನ್ಸರ್ ಉತ್ಪನ್ನವಾಗಬಹುದು ಎಂದು ಕೊಟ್ಟಿರುವ ಅಭಿಪ್ರಾಯವು ನೇರವಾಗಿ ಅಡಕೆಗೆ ಸಂಬಂಧಪಟ್ಟಿಲ್ಲ. ಗುಟ್ಕಾದಲ್ಲಿ ಉಪಯೋಗಿಸಿರುವ ಬೇರೆ ಕೆಲವು ವಸ್ತುಗಳ ಪರಿಣಾಮವಾಗಿ ಕ್ಯಾನ್ಸರ್ ಬರಬಹುದು ಎಂದು ಕೆಲವು ತಜ್ಞರು ಮತ್ತು ಸಂಶೋಧಕರು ಹೇಳಿದ್ದಾರೆ. ಇದನ್ನು ಆಧಾರವಾಗಿಟ್ಟುಕೊಂಡು ಅಡಿಕೆಗೆ ಅನ್ವಯ ಮಾಡುವ ಪ್ರಯತ್ನ ನಡೆದಿದ್ದು, ಇದರಿಂದ ಅಡಿಕೆ ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ. ಕರ್ನಾಟಕದಲ್ಲಿ ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಅಡಿಕೆ ಬಹಳ ಮುಖ್ಯವಾದ ಬೆಳೆ ಆಗಿದೆ. ಸುಮಾರು 2.15 ಲಕ್ಷ ಎಕರೆ ಪ್ರದೇಶದಲ್ಲಿ ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಸುಮಾರು 140 ತಾಲ್ಲೂಕುಗಳಲ್ಲಿ ಅಡಿಕೆ ಬಹಳ ಮುಖ್ಯವಾದ ಬೆಳೆ ಆಗಿದ್ದು, ಸುಮಾರು 40 ಸಾವಿರ ಕೋಟಿ ರೂಪಾಯಿಗಳನ್ನು ಅಡಿಕೆ ಬೆಳೆ ಮೇಲೆ ವಿನಿಯೋಗ ಮಾಡಲಾಗಿದೆ. ಹೀಗೆ ಕರ್ನಾಟಕದಲ್ಲಿ ಬಹುದೊಡ್ಡ ಪ್ರಮಾಣದ ಜನರ ಜೀವನಕ್ಕೆ ಅಡಿಕೆ ಬೆಳೆಯು ಆಸರೆಯಾಗಿದೆ. ಈಗ ಆಗಿರುವ ಚರ್ಚೆಯಿಂದ ಒಂದು ನಿರ್ಣಯ ಹೊರಹೊಮ್ಮಲಿದ್ದು, ಈ ನಿರ್ಣಯ ಇಷ್ಟು ಜನರ ಜೀವನದ ಮೇಲೆ ಬಹಳ ದೊಡ್ಡ ಪರಿಣಾಮ ಬೀರುತ್ತದೆ. ಇದರಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ ಯಾವ ಕಾರಣಕ್ಕೆ ಗುಟ್ಕಾವನ್ನು ನಿಷೇಧ ಮಾಡಲು ಮತ್ತು ಅಡಿಕೆ ಬೆಳೆ ಅದರ ಪರಿಣಾಮ ಬೀರುತ್ತದೆಯೇ ಎನ್ನುವುದು ವೈಜ್ಞಾನಿಕ ಸಂಶೋಧನೆಯನ್ನು ಆಧರಿಸಿದೆಯೇ ಎಂಬುದು ಮುಖ್ಯವಾಗುತ್ತದೆ. ಅಡಿಕೆಯು ಯಾವುದೇ ಒಂದು ರೋಗವನ್ನು ಉತ್ಪನ್ನ ಮಾಡುವುದಕ್ಕೆ ಬದಲು ಅನೇಕ ರೋಗಗಳಿಗೆ ದಿವ್ಯ ಔಷಧವಾಗಿದೆ. ಗುಟ್ಕಾ ಬ್ಯಾನ್ ಮಾಡುವ ವಿಷಯದಲ್ಲಿ ನನ್ನದೇನು ಭಿನ್ನಾಭಿಪ್ರಾಯ ಇಲ್ಲ, ಆದರೆ ಗುಟ್ಕಾ ಬ್ಯಾನ್ ಹೆಸರಿನಲ್ಲಿ ಅಡಿಕೆ ಮೇಲೆ ಏನು ಪರಿಣಾಮ ಆಗುತ್ತದೆ ಮತ್ತು ರಕ್ಷಣೆ ಮಾಡಲು ಏನು ಕ್ರಮ ಕೈಗೊಳ್ಳಬೇಕು ಎನ್ನುವುದು ಮುಖ್ಯವಾದ ವಿಷಯವಾಗಿದೆ. ಅಡಿಕೆ ಉಪಯೋಗವನ್ನು ವೈದ್ಯಶಾಸ್ತ್ರಜ್ಞರು ಮತ್ತು ವಿಭಿನ್ನ ಪದ್ಧತಿಯವರು ಯಾವ ಯಾವ ರೋಗಗಳಿಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. Leucoderma, Leprosy, Gonorrhea, Urinary Problems,

Scabies, Cough, Fits, Stomach worms, Anemia, Obesity, Stimulant, Appetizer, Expelling Gas and fell, strengthening the Gums, Teeth and cleanses and deodorizes mouth and bad odour, helpful to cure such dysentery, diarrhea, heart burn, urinary stones, in controlling Diabetes, excessive passing of flatus, flatulent, colic, hyper acidity etc., ಸೇರಿದಂತೆ ಇನ್ನೂ ಅನೇಕ ರೋಗಗಳ ಚಿಕಿತ್ಸೆಯಲ್ಲಿ ಅಡಿಕೆ ಬಹಳ ಮುಖ್ಯವಾದ ಔಷಧವಾಗಿದೆ. ಅಡಿಕೆಯನ್ನು ಇತ್ತೀಚಿನ ವರ್ಷಗಳಲ್ಲಿ ಗುಟ್ಕಾ ತಯಾರು ಮಾಡಲು ಪ್ರಾರಂಭ ಮಾಡಿದ್ದು, ಇದರಿಂದ ಅನೇಕ ಸಮಸ್ಯೆಗಳು ಉದ್ಭವವಾಗಿವೆ ಎಂಬ ಮಾತುಗಳು ಬರುತ್ತಿದ್ದು, ಈ ವಿಷಯದಲ್ಲಿ conclusive ಆಗಿರುವ ಸಂಶೋಧನೆ ಆಗಿಲ್ಲ. ಅಲ್ಲದೇ ಗುಟ್ಕಾ ಉಪಯೋಗದಲ್ಲಿ cancerous ಆಗುವುದಾದರೆ ಗುಟ್ಕಾದಲ್ಲಿರುವ ಅಡಿಕೆ ಮತ್ತು ಹೊಗೆಸೊಪ್ಪಿನ ಪಾತ್ರ ಎಷ್ಟು? ಹೊಗೆಸೊಪ್ಪು ಯಾವರೀತಿ ಪರಿಣಾಮ ಬೀರುತ್ತದೆ ಎಂಬ ಸಂಶೋಧನೆಗಳು ಇದುವರೆಗೂ ಸಾಕಷ್ಟು ಆಗಿಲ್ಲ. ಪಾನ್ ನಿಷೇಧ ಮಾಡುವ ಹೆಸರಿನಲ್ಲಿ ಅಡಕೆ ಬೆಳೆಯ ಬಗ್ಗೆ ನಿಷೇಧ ಹೇರುವ ಅಥವಾ ಅದರ ಬಗ್ಗೆ ಅಪಪ್ರಚಾರ ನಡೆಸುವುದು ನಡೆಯುತ್ತಿದೆ. ಕೆಲವು ಅಧ್ಯಯನಗಳ ಬಗ್ಗೆ ನಾನು ಉಲ್ಲೇಖಿಸಲು ಇಷ್ಟಪಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಒಂದು ವರದಿಯನ್ನು The International Agency for Research on Cancer (IARC) ಎನ್ನುವಂತಹ ಸಂಸ್ಥೆ ಪ್ರಕಟಪಡಿಸಿದೆ. ಅದರಲ್ಲಿ ಪಾನ್ ಮತ್ತು ಅಡಿಕೆಯಿಂದ ಆಗುವಂತಹ ದುಷ್ಪರಿಣಾಮಗಳ ಬಗ್ಗೆ ಅವರು ಉಲ್ಲೇಖ ಮಾಡಿದ್ದಾರೆ. ಆದರೆ, ಇದೊಂದು ಸಮಗ್ರವಾಗಿರುವಂತಹ ಸಂಶೋಧನೆ ಅಲ್ಲ.

> "Studies by the renowned British Doctor Dr.Aman, the Indian Drug Research Laboratory Pune and a full-Fledged doctoral research workin Ayurveda Medicine at NTR University of Health Science,

> Vijayavada, Andhra Pradesh (Appendix I), have inferred that arecanut is capable of controlling diabetes in humans. The details are given in the Report of the Department of Agricultural Economics (2012)mentioned above. Contrary to this finding, the IARC (International Agency for Research on Cancer) monograph"

ಎನ್ನುವಂಥ ಸಂಸ್ಥೆ ಅಡಿಕೆಯಿಂದ ಕ್ಯಾನ್ಸರ್ ಉತ್ಪನ್ನವಾಗುತ್ತದೆ ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

"finds arecanut as an independent risk factor for type-2 diabetes."

ಅದು ಮಧುಮೇಹ ಕಾಯಿಲೆ ಎಂದು ಹೇಳಿದ್ದಾರೆ. it is not a conclusive research.

> "The IARC Findings are not based on the first hand clinical experiments. Rather it relied on the findings of past studies and reports compiled from different sources at different times with the Sole objective of establishing a cause and effect relationship between cancer and arecanut consumption."

ಈ ನಿಟ್ಟಿನಲ್ಲಿ ಸ್ವತಂತ್ರವಾಗಿರುವಂತಹ ಅಧ್ಯಯನ ನಡೆದಿಲ್ಲ. ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ಕೆಲವೊಂದು ಸಂಶೋಧನೆಗಳನ್ನು ಮಾಡಿದಂತೆ ಇದೆ. It is only based upon secondary data and not primary data.

"Since, IARC monograph is a 'review paper'and not a coherent research work with clear objectives, hypothesis, methodology and data. Hence, the report is one sided, biased and Subjective."

"The IARC Report indicates that the results related to cancers of the Stomach and cervix were just suggestive (but not conclusive) of the association with chewing betel quid (i.e. paan or beeda). The report admits that, in one trial, Where administering the powdered arecanut directly to oral cavity of humans was performed, it did not resultin the malignancy."

ಈ ರೀತಿಯ ಸಂಶೋಧನೆಗಳು ಇವತ್ತಿನ ದಿವಸ ಬೆಳಕಿಗೆ ಬಂದಿವೆ. ಈ ನಿಟ್ಟಿನಲ್ಲಿ ಸರ್ಕಾರ ತನ್ನ ನೀತಿಯನ್ನು ರೂಪಿಸಬೇಕಾಗುತ್ತದೆ. ಇಲ್ಲಿ ಎರಡು ಮುಖ್ಯವಾಗಿರುವಂತಹ ಪ್ರಶ್ನೆಗಳು ಇವೆ. ಅಡಿಕೆಯಿಂದಾಗಿ ಈ ರೀತಿಯ ದುಷ್ಪರಿಣಾಮಗಳು ಆಗುತ್ತವೆ ಎನ್ನುವಂತಹ ತೀರ್ಮಾನಕ್ಕೆ ಸರ್ಕಾರ ಬರಬೇಕಾದರೆ, ಅದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಇವೆಯೇ ಎನ್ನುವುದನ್ನು ಕುರಿತು ಚಿಂತನೆ ಮಾಡಬೇಕಾಗುತ್ತದೆ. ಈ ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳುವುದರಿಂದ ಒಟ್ಟು ಸಾರ್ವತ್ರಿಕವಾಗಿ ಈ ದೇಶದ ಆರ್ಥಿಕತೆಯ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗುತ್ತದೆ, ಆ ಪರಿಣಾಮಗಳಿಗೆ ಸರಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಮಾಡಬೇಕು ಎನ್ನುವುದು ಮತ್ತೊಂದು ಪ್ರಶ್ನೆಯಾಗಿದೆ. ದುರಾದೃಷ್ಟವಶಾತ್ ಕೇಂದ್ರ ಸರ್ಕಾರ ಈ ಎರಡೂ ಸಂಗತಿಗಳ ಬಗ್ಗೆ ಚಿಂತನೆ ಮಾಡಲಿಲ್ಲ ಎನ್ನುವಂತಹ ಮಾತನ್ನು ನಾನು ಹೇಳಬೇಕಾಗಿದೆ. ಮತ್ತೊಂದು ಸಂಶೋಧನೆಯ ಬಗ್ಗೆ ಉಲ್ಲೇಖ ಮಾಡುವುದಕ್ಕೆ ಬಯಸುತ್ತಿದ್ದೇನೆ.

" An authenticated research work on evaluation of the carcinogenicity of arecanut on rats was reported by Dr. Ramesh Rao and Dr. Padma Das. The study concluded that "from the point of view of carcinogenic risk in humans, the processed arecanuts are safer". And hence the researchers recommended to evolve proper processing methods for arecanut. It should be noted that arecanut in Karnataka is totally proceed; boiled and sundried and the same is being consumed in different parts of India. This study was sponsored by Indian Council of Medical Research, New Delhi and published in the reputed International Journal of Cancer in 1989. Though this work of Dr. Rao and Dr. Das was referred in the IARC Monograph, the conclusion mentioned above is NOT highlighted properly and deliberately discounted."

ಇದೇ ರೀತಿ ಇತ್ತೀಚಿನ ದಿನಗಳಲ್ಲಿ ಬಹಳ ಮುಖ್ಯವಾಗಿರುವಂತಹ ಒಂದು ಸಂಶೋಧನೆ ನಡೆದಿದೆ, ಅದು ಬಹಳ ಆಶ್ಚರ್ಯಕರವಾಗಿದೆ.

"Above all, results of a recent study astonishes all other previous Works on so called carcinogenicity of areaca with the conclusion that "chewing 'paan' may help fight cancer".

ಅಡಿಕೆ ಜಗಿಯುವುದರಿಂದ ಕ್ಯಾನ್ಸರ್‌ನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ನಿಷ್ಕರ್ಷೆಗೆ ವಿಜ್ಞಾನಿಗಳು ಬಂದಿದ್ದಾರೆ. ಸಂಶೋಧನೆಯ ಆಧಾರದ ಮೇಲೆ ಬಂದಿರುವಂತಹ ನಿಷ್ಕರ್ಷೆ ಇದು.

"A research was carried out jointly by the Indian Institute of Chemical Biology (IICB), the Institute of Haematology and Transfusion Medicine, Kolkata, and Piramal Life Sciences, Mumbai. As per this research study, a molecule derived from the betel leaf, a main ingredient of the traditional beeda or tambulam, is useful to cure Chronic Myeloid Leukemia (CML) a major blood cancer type in India. The results are published in official journal of cancer in Japan. It is important to mention here that, the use of betel leaf with arecanut was strongly advocated even in the ancient texts, because of its medicinal values."

ಅಡಿಕೆಯಿಂದ ಕ್ಯಾನ್ಸರ್ ಉಂಟಾಗುತ್ತದೆ ಎನ್ನುವಂತಹ ಪ್ರಚಾರ ಏನು ನಡೆದಿದೆ, ಇದನ್ನು ಆಧರಿಸಿ ಬಹುಶಃ ಸುಪ್ರೀಂ ಕೋರ್ಟ್ ತನ್ನ ನಿರ್ಣಯವನ್ನು ನೀಡಿದೆ. ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಸರ್ವಜ್ಞರಲ್ಲ. ಅವರಿಗೂ ಸಹ ಮಿತಿ ಇರುತ್ತದೆ. ಅವರ ಮುಂದೆ ಏನು ಮೆಟೀರಿಯಲ್‌ನ್ನು ಇಡುತ್ತಾರೆ ಅದರ ಆಧಾರದ ಮೇಲೆ ಅವರು ತೀರ್ಪನ್ನು ಕೊಡುತ್ತಾರೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಸುಪ್ರೀಂ ಕೋರ್ಟಿಗೆ ಮನವರಿಕೆ ಮಾಡಿ ಕೊಡದೇ ಇರುವ ಪರಿಣಾಮವಾಗಿ ಸುಪ್ರೀಂ ಕೋರ್ಟ್ ಈ ನಿರ್ಣಯಕ್ಕೆ ಬಂದಿದೆ ಎಂದು ನಾವು ಭಾವಿಸಬೇಕಾಗಿದೆ. ಅಡಿಕೆಯಿಂದ ಕ್ಯಾನ್ಸರ್ ಉಂಟಾಗುತ್ತದೆ ಅಥವಾ ಅದು ಆರೋಗ್ಯಕ್ಕೆ ಅಪಾಯಕಾರಿ ಎನ್ನುವುದಾದರೆ ಅದನ್ನು ಸಮರ್ಥನೆ ಮಾಡುವುದಕ್ಕೆ ಬೆಂಬಲ ಕೊಡಬೇಕು ಎನ್ನುವಂತಹ ಪ್ರಶ್ನೆ ಇಲ್ಲ. ಅದನ್ನು ತಡೆಯಬೇಕು. ಇಲ್ಲಿ ಎರಡು ಸಂಗತಿಗಳನ್ನು ನಾವು ಗಮನಿಸಬೇಕಾಗುತ್ತದೆ. ಅದು ಆರೋಗ್ಯಕ್ಕೆ ಅಪಾಯಕಾರಿ ಆಗದೇ ಇರುವ ಬಗ್ಗೆ ಸರಿಯಾಗಿರುವಂತಹ ಸಂಶೋಧನೆಯನ್ನು ಮಾಡದೇ, ತಪ್ಪು ಪ್ರಚಾರದ ಆಧಾರದ ಮೇಲೆ ಸರ್ಕಾರ ಈ ರೀತಿಯ ನಿಷ್ಕರ್ಷೆಗೆ ಒಂದು ಅದನ್ನು

ನಿಷೇಧ ಮಾಡುವುದಾದರೆ, ಅದರಿಂದ ಆಗುವಂತಹ ದುಷ್ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವುದು ಮೊದಲನೆಯ ಅಂಶ. ಇನ್ನು ಎರಡನೆಯದಾಗಿ, ಒಂದು ವರದಿ ಪ್ರಕಾರ, 'ಕರ್ನಾಟಕ ರಾಜ್ಯದಲ್ಲಿ ತಲತಲಾಂತರಗಳಿಂದ ಮೂರು ಕೋಟಿಯಷ್ಟು ಜನ ನೇರವಾಗಿ ಅಥವಾ ಪರೋಕ್ಷವಾಗಿ ಅಡಿಕೆ ಬೆಳೆಯ ಮೇಲೆ ಅವಲಂಬಿಸಿದ್ದಾರೆ' ಎಂದು ಇದೆ. ಇಷ್ಟು ಜನರ ಜೀವನದ ಮೇಲೆ ಪರಿಣಾಮ ಬೀರುವಂತಹ ಸಂಗತಿ ಇದಾಗಿದೆ. ಆಡಳಿತ ಪಕ್ಷದ ಪ್ರಮುಖರು ಮಾತನಾಡುವಂತಹ ಸಂದರ್ಭದಲ್ಲಿ ಸುಮಾರು 26 ರಾಜ್ಯಗಳಲ್ಲಿ ಈಗಾಗಲೇ ಇದನ್ನು ನಿಷೇಧ ಮಾಡಲಾಗಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, 26 ರಾಜ್ಯಗಳು, 03 ಕೇಂದ್ರಾಡಳಿತ ಪ್ರದೇಶ, ಅದರಲ್ಲಿ ನಾಲ್ಕು ಪ್ರಮುಖ ಬಿ.ಜೆ.ಪಿ. ಆಡಳಿತರೂಢ ರಾಜ್ಯಗಳಿಗೂ ಇವೆ.

**ಪ್ರೊ:.ಪಿ.ವಿ. ಕೃಷ್ಣಭಟ್ಟ:-** ಸನ್ಮಾನ್ಯ ಸಭಾಪತಿಯವರೇ, ಯಾವ ರಾಜ್ಯದಲ್ಲಿ ಯಾವ ಸರ್ಕಾರ ಆಡಳಿತದಲ್ಲಿ ಇದೆ ಎನ್ನುವುದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, 'ಬಿ.ಜೆ.ಪಿ. ಪಕ್ಷದ ಆಡಳಿತರೂಢ ರಾಜ್ಯಗಳಲ್ಲಿ ಗುಟ್ಕಾವನ್ನು ನಿಷೇಧ ಮಾಡುವುದಕ್ಕೆ ಅವರು ಆದ್ಯತೆಯನ್ನು ಕೊಟ್ಟಿದ್ದಾರೆ. ಹಾಗೆಯೇ 23 ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ರಾಜ್ಯಗಳಲ್ಲಿ ಇದನ್ನು ನಿಷೇಧಿಸಲಾಗಿದೆ' ಎನ್ನುವಂತಹ ಮಾತುಗಳನ್ನು ಮಾನ್ಯ ಸಭಾ ನಾಯಕರು ಮಾತುಮಾತಿಗೂ ಎಲ್ಲಾ ಕಡೆಗಳಲ್ಲಿ ಹೇಳುತ್ತಿರುತ್ತಾರೆ. ಅವರು ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಇಡೀ ದೇಶದಲ್ಲಿಯೇ ಅತೀ ಹೆಚ್ಚು ಅಂದರೆ, ಶೇಕಡಾ 60ರಷ್ಟು ಅಡಿಕೆ ಉತ್ಪಾದನೆ ಆಗುತ್ತದೆ. ಯಾವ ಯಾವ ರಾಜ್ಯದಲ್ಲಿ ಅಡಿಕೆ ಉತ್ಪಾದನೆ ಆಗುವುದಿಲ್ಲ ಅಲ್ಲಿ ತಕ್ಷಣ ನಿಷೇಧ ಮಾಡುತ್ತಾರೆ. ಏಕೆಂದರೆ, ಅಲ್ಲಿ ಗುಟ್ಕಾ

ನಿಷೇಧ ಮಾಡುವುದರಿಂದ ಅಲ್ಲಿನ ಅಡಿಕೆ ಬೆಳೆಗಾರರ ಮೇಲೆ ಯಾವುದೇ ರೀತಿಯ ಪರಿಣಾಮವುಂಟಾಗುವುದಿಲ್ಲ. ಇದನ್ನು ನಮ್ಮ ಹಿರಿಯರು ಅರ್ಥ ಮಾಡಿಕೊಳ್ಳಬೇಕು. ಅಡಿಕೆ ಮತ್ತು ತಂಬಾಕು ಬೆಳೆಯುವಂತಹ ರಾಜ್ಯಗಳಲ್ಲಿ ನಮ್ಮ ಕರ್ನಾಟಕ ರಾಜ್ಯ ಪ್ರಮುಖವಾಗಿರುವಂತಹ ರಾಜ್ಯವಾಗಿದೆ. ಇವತ್ತು ಹೊಸದಾಗಿ ಅಡಿಕೆಯನ್ನು ಬಳಸುತ್ತಿಲ್ಲ. ನೂರಾರು ವರ್ಷಗಳಿಂದ ಅಡಕೆಯ ಬಳಕೆ ನಡೆದುಕೊಂಡು ಬಂದಿದೆ. ಆಡಳಿತ ಪಕ್ಷದವರು ಮಾತುಮಾತಿಗೂ, 'ಬಿ.ಜೆ.ಪಿ. ಆಡಳಿತರೂಢ ರಾಜ್ಯಗಳಲ್ಲಿಯೂ ಗುಟ್ಕಾವನ್ನು ಬ್ಯಾನ್ ಮಾಡಲಾಗಿದೆ.' ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಏಕೆಂದರೆ, ಅಡಕೆ ಉತ್ಪಾದನೆ ಆಗದೇ ಇರುವಂತಹ ರಾಜ್ಯಗಳಲ್ಲಿ ಅದನ್ನು ನಿಷೇಧಿಸುವುದು ಸುಲಭದ ಕೆಲಸ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, We are not disputing, ಪ್ರತಿಶತ 60ರಷ್ಟು ಅಡಕೆ ಉತ್ಪಾದನೆ ನಮ್ಮ ರಾಜ್ಯದಲ್ಲಿ ಆಗುತ್ತಿದೆ ಎನ್ನುವುದರ ಬಗ್ಗೆ ನಾವು ಯಾವುದೇ ರೀತಿಯಲ್ಲಿಯೂ ವಾದ ಮಾಡುತ್ತಿಲ್ಲ. ಅವರು ಯಾಕೆ ಅನ್ಯತಾ ಭಾವಿಸುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಗುಟ್ಕಾಗೋಸ್ಕರ ಅಡಕೆ ಬೆಳೆಯಲಾಗುತ್ತಿದೆಯೇ? ಗುಟ್ಕಾ ಬರವುದಕ್ಕೂ ಮುಂಚೆಯೇ ಅಡಿಕೆ ಇರಲಿಲ್ಲವೇ?

**ಪ್ರೋಃಪಿ.ವಿ.ಕೃಷ್ಣಭಟ್ಟ:–** ಸನ್ಮಾನ್ಯ ಸಭಾಪತಿಯವರೇ, ಅವರ ಊರಿನಲ್ಲಿ ಈ ಬಗ್ಗೆ ಕೇಳಬೇಕು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ಅಡಿಕೆ ಬೆಳೆಗಾರ, ನಾನು ಯಾರನ್ನೂ ಕೇಳುವ ಅವಶ್ಯಕತೆ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಕೇರಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಅಡಕೆ ಬೆಳೆಯುತ್ತಾರೆ. ಅಲ್ಲಿಯೂ ಸಹ ಗುಟ್ಕಾ ನಿಷೇಧ ಮಾಡಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ಯುಪಿಎ ಸರ್ಕಾರದ ಅಂಗ ಪಕ್ಷಗಳು ಎಲ್ಲೆಲ್ಲಿ ಆಡಳಿತದಲ್ಲಿವೆಯೋ ಅವರನ್ನು ಸಮಾಧಾನ ಮಾಡಲಿಕ್ಕೆ ಅಲ್ಲೆಲ್ಲಾ ಬೇಗ ನಿಷೇಧ ಮಾಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾವೇಕೆ ಕೇಳುತ್ತಿದ್ದೇವೆಂದರೆ, 26ನೇ ತಾರೀಖು it was the final day of filing affidavit, ಇದು ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆಯೋ ಅಥವಾ ನಮ್ಮ ರಾಜ್ಯಕ್ಕಷ್ಟೇ ಅನ್ವಯಿಸುತ್ತದೆಯೋ ಎಂದು ತಿಳಿದುಕೊಳ್ಳುವ ಸಲುವಾಗಿ ಆ ಮಾತನ್ನು ನಾನು ಹೇಳಿದ್ದೇನೆ.

**ಪ್ರೊ॥ ಪಿ.ವಿ. ಕೃಷ್ಣಭಟ್ಟ:-** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿರತಕ್ಕಂಥ ಸಂಗತಿ ಏನೆಂದರೆ, ಮೊದಲನೆಯದಾಗಿ carcinogenic ಎನ್ನುವಂಥಾದ್ದನ್ನು ಹೇಳಿರುವುದರಿಂದ ಎಷ್ಟರಮಟ್ಟಿಗೆ ವೈಜ್ಞಾನಿಕವಾಗಿ ಇದು ಖಚಿತವಾದದ್ದು ಎನ್ನುವಂಥಾದ್ದನ್ನು ಸ್ಪಷ್ಟಪಡಿಸಬೇಕು. ಅದರ ಬಗ್ಗೆ ಎಷ್ಟು ಸಂಶೋಧನೆಗಳು ಆಗಬೇಕೋ ಆ ಸಂಶೋಧನೆಗಳು ಆಗಿಲ್ಲ ಎನ್ನುವುದು ಒಂದು ಮುಖ್ಯವಾಗಿರತಕ್ಕಂಥ ಸಂಗತಿ.

**ಶ್ರೀ ಯಂ.ಸಿ. ನಾಣಯ್ಯ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಭಟ್ಟರವರ ವಿಚಾರಧಾರೆಯನ್ನು ನಾನು ನೋಡಿದೆ. ಅವರ ವಿಚಾರಧಾರೆಯಲ್ಲಿ carcinogenic ಗೂ areca ಗೂ ಸಂಬಂಧವಿಲ್ಲ ಎಂದು ಅವರೇ ಓದಿರತಕ್ಕಂಥ ಹತ್ತಾರು ಸಂಶೋಧನೆಗಳಿಂದ ತಿಳಿದು ಬಂದಿದೆ. Carcinogenic ಗೆ ಏನಾದರೂ ಸಂಬಂಧವಿದ್ದರೆ, ಅದು tobacco ಜೊತೆಗೆ.

**ಪ್ರೊ॥ ಪಿ.ವಿ ಕೃಷ್ಣಭಟ್ಟ:–** ನಾನು ಆ ಮಾತನ್ನು ಹೇಳಿದ್ದೇನೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಹೇಳಿದೆ. As far as areca is concerned, areca is totally different from carcinogenic and nicotine. So areca is different. ಅವರು ಹೇಳಿದ ಪ್ರಕಾರ ಅಡಿಕೆಯನ್ನು ಅಗಿದರೆ I think it helps in leukemia ಎನ್ನುವಂಥಾದ್ದನ್ನು ತಾವು ಹೇಳುತ್ತಿದ್ದಿರಿ. ನಾನೇನು ಹೇಳುತ್ತೇನೆಂದರೆ, We are mixing up both gutka and areca as one unit now. But in reality I agree. ಏಕೆಂದರೆ ಗುಟ್ಕಾವನ್ನು ತಯಾರು ಮಾಡಬೇಕಾದರೆ areca ದ ಒಂದು component ಇದೇ ಇರಬೇಕಾಗುತ್ತದೆ. Areca ದ component ಇದ್ದಾಗ ಮಾತ್ರ ಗುಟ್ಕಾವನ್ನು ವ್ಯಾಪಾರ ಮಾಡಲಿಕ್ಕೆ ಸಾಧ್ಯ. ಆದ್ದರಿಂದ ನಾವು ಇವತ್ತು ವಿಚಾರ ಮಾಡುತ್ತಿರತಕ್ಕಂಥಾದ್ದು, areca by itself doesn't have any carcinogenic element at all. ಆದ್ದರಿಂದ ಈಗ ಬೇಕಾಗಿರತಕ್ಕಂಥಾದ್ದು carcinogenic element ಇಲ್ಲದೇ ಹೋದರೆ ಗುಟ್ಕಾವನ್ನು ಯಾವುದೇ ತರಹದಲ್ಲಿ process ಮಾಡಿಕೊಂಡು ತಿಂದರೂ ಕೂಡ there is no offence at all. And Supreme Court will not come in the way. ಒಂದು ವಿಚಾರವನ್ನು ಹೇಳುತ್ತೇನೆ. ಸರ್ವೋಚ್ಚ ನ್ಯಾಯಾಲಯದವರು ಈ ಒಂದು ಆದೇಶವನ್ನು ಮಾಡದೇ ಹೋಗಿದ್ದರೆ ಈ ರಾಷ್ಟ್ರದಲ್ಲಿ ಎಲ್ಲಿಯೂ ಕೂಡ ಗುಟ್ಕಾವನ್ನು ಯಾವ ರಾಜ್ಯದಲ್ಲಿಯೂ ಸಹ ನಿಷೇಧ ಮಾಡುತ್ತಿರಲಿಲ್ಲ. ಇದಕ್ಕೆ ಕಾರಣವೆಂದರೆ, ಇದು ಒಂದು ವ್ಯಾಪಾರ. ವ್ಯಾಪಾರಸ್ಥರ ಕೈಯಲ್ಲಿರಕತಕ್ಕಂಥ ಈ ಒಂದು ದೊಡ್ಡ ಪ್ರಮಾಣದ, ಎಷ್ಟೋ ಸಾವಿರ ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿರತಕ್ಕಂಥ ಒಂದು ದೊಡ್ಡ ವ್ಯವಹಾರ. ಈ ಹಿನ್ನೆಲೆಯಲ್ಲಿ, at least Supreme Court has come into the resue of the people of India. ಆದ್ದರಿಂದ ನಾವು ಈಗ ಒಂದು ಕೆಲಸವನ್ನು ಮಾಡೋಣ. ಸರ್ಕಾರವನ್ನು ನಾವು ಕೇಳುತ್ತಿರುವಂಥಾದ್ದು ಏನೆಂದರೆ, carcinogenic part of it, Gutka part of it, if it is minus tobacco, minus nicotine element. I think nothing is Wrong. ನಮ್ಮಲ್ಲಿರತಕ್ಕಂಥ ಒಂದು ಆತಂಕವೇನೆಂದರೆ, ಎಷ್ಟು

ವರ್ಷಗಳಿಂದ ಗುಟ್ಕಾ ಇದೆ ಎಂಬುದನ್ನು ಹೇಳಿ. The biggest manufacture of Gutka, there is one chap in Maharashtra. Its total turnover is about ₹ 8,000 to 10,000 crores. This is regarding one individual. There is another person in Uttar Pradesh. ಅವರದ್ದು ಸಹ ಇಷ್ಟೇ ದೊಡ್ಡ ಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿದೆ. ನಾನು ಹೇಳುವುದೇನೆಂದರೆ, this is a very big lobby in this country now. ಈ ಲಾಭಿಯಿಂದಾಗಿ ಏನಾಗಿದೆ ಎಂದರೆ, cutting across party lines ಹೇಳೋಣ. ಎಷ್ಟು ಜನ ನಮ್ಮ ರಾಜಕಾರಣಿಗಳು ಗುಟ್ಕಾವನ್ನು ಹಾಕಿಕೊಳ್ಳುತ್ತಾರೆ. ಅವರು ಬಾಯಿಯಲ್ಲಿ ಗುಟ್ಕಾವನ್ನು ಇಟ್ಟುಕೊಂಡು ನಂತರ ಅದನ್ನು ಕೆಳಗಡೆಗೆ ಉಗಿಯುತ್ತಾರೆ. ಈ ರೀತಿ ಬಹಳಷ್ಟು ಜನ ಇದ್ದಾರೆ. ಆದ್ದರಿಂದ ಸರ್ಕಾರಕ್ಕೆ ಇರತಕ್ಕಂಥ ಒಂದು ಬದ್ಧತೆ ಏನೆಂದರೆ, ಈ ಗುಟ್ಕಾ ಇದ್ದಂತಹ ಸಂದರ್ಭದಲ್ಲಿಯೂ ಸಹ ಹತ್ತಾರು ವರ್ಷಗಳಿಂದ ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಅಡಿಕೆ ಬೆಲೆ ಕಡಿಮೆಯಾಗಿಲ್ಲವೇ ಮಾನ್ಯ ಸದಾನಂದಗೌಡರೆ? ಎಂದು ಅವರನ್ನು ಕೇಳಬಯಸುತ್ತೇನೆ. ನಾವು ಸ್ವಲ್ಪ ಮಟ್ಟಿಗೆ ಅಡಿಕೆಯನ್ನು ಬೆಳೆಯುತ್ತೇವೆ. ಅವರು ಸಹ ದೊಡ್ಡ ಪ್ರಮಾಣದಲ್ಲಿ ಅಡಿಕೆಯನ್ನು ಬೆಳೆಯುವವರೆ. ಗುಟ್ಕಾ ಇದ್ದಾಗಲೂ ಸಹ ಅಡಕೆ ಬೆಲೆ ಒಂದು ಕ್ವಿಂಟಾಲ್‌ಗೆ ಎಷ್ಟು ಕೆಳಮಟ್ಟಕ್ಕೆ ಇಳಿದಿತ್ತು. ಅಡಿಕೆ ಬೆಲೆ ಕೆಳಮಟ್ಟಕ್ಕೆ ಇಳಿದಿರಲಿಲ್ಲವೆಂದೇನು ಇಲ್ಲ. ಆದರೆ ಆ ಸಮಯದಲ್ಲಿ ಗುಟ್ಕಾದ ಬೆಲೆಯೂ ಸಹ ಕಡಿಮೆ ಇತ್ತು. ಇದನ್ನು ನಾನು ಇಲ್ಲವೆಂದೇನು ಹೇಳುವುದಿಲ್ಲ. Let us not link it together. Areca is one part of it. ಆದರೆ ಗುಟ್ಕಾದಲ್ಲಿ areca is one of the necessary components. That we can't deny Then how to bifurcate this? ಇದನ್ನು bifurcate ಮಾಡಬೇಕಾಗಿರತಕ್ಕಂಥ ಸಂದರ್ಭದಲ್ಲಿ ವ್ಯಾಪಾರಸ್ಥರು ಯಾರು ಮಾದಕ ದ್ರವ್ಯಗಳನ್ನು, tobacco ವನ್ನು ಮಾರಾಟ ಮಾಡುತ್ತಿದ್ದಾರೆ, Let me tell you if there is a part of areca component in it, automatically it has to go.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಹೇಳಿದ್ದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ.

ಇಲ್ಲವೆಂದೇನೂ ಇಲ್ಲ. ಆದರೆ ಹೆಚ್ಚಿನ ಭಾಗ nicotine and tobacco ಇರುವಂಥಾದ್ದರಲ್ಲಿ ಶೇಕಡ 90ರಷ್ಟು ಕಚ್ಚಾ ವಸ್ತು ಅದರಲ್ಲಿ ಇರುವಂಥಾದ್ದು ಅಡಿಕೆ. ಗುಟ್ಕಾದ ಹೆಸರಿಯಲ್ಲಿ ಈ ಅಡಿಕೆಯ consumption ಆಗುತ್ತಿದೆ. ಇದನ್ನು ಯಾರಾದರೂ ಪ್ರಶ್ನೆ ಮಾಡಬಹುದು. ಗುಟ್ಕಾಕ್ಕಾಗಿ ಅಡಿಕೆಯನ್ನು ಬೆಳೆಸುತ್ತಾರೆ ಎಂದಲ್ಲ ಎಂದು ಮಾನ್ಯ ಪ್ರತಾಪಚಂದ್ರ ಶೆಟ್ಟರು ಸಹ ಹೇಳಿದರು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಗುಟ್ಕಾ ಬರುವ ಮೊದಲು ಅಡಕೆಯನ್ನು ಬೆಳೆಯಲಾಗುತ್ತಿತ್ತೇ ಇಲ್ಲವೇ ಎಂಬುದು ನನ್ನ ಒಂದು ಪ್ರಶ್ನೆ.

**ಶ್ರೀ ಡಿ.ವಿ. ಸದಾನಂದಗೌಡ:–** ನೀವು ಕೇಳಿದ್ದಕ್ಕೆ ನಾನು ಉತ್ತರವನ್ನು ಕೊಡಲು ನಿಂತಿದ್ದೇನೆ. ಹೆಚ್ಚಿನ ಅಡಿಕೆಯ ಉತ್ಪಾದನೆಯಾದಾಗ, ಈ ಹೆಚ್ಚಿನ ಅಡಿಕೆಯನ್ನು ಎಲ್ಲೆಲ್ಲಿ confrontation ಮಾಡಬೇಕೆಂದು ಹೊಸ ಹೊಸ innovations ಮುಂತಾದವುಗಳು ಆಯಿತು. ಆಗ ಇಂತಹದ್ದಕ್ಕೆಲ್ಲಾ ಅಡಿಕೆಗೆ ಹೋಗುವಂಥಾದ್ದು ಆಯಿತು. ಅಡಿಕೆಗೆ ಹೆಚ್ಚಿನ ಧಾರಣೆ ಸಿಗುತ್ತದೆ, ಅಡಕೆ ಬೆಳೆಗಾರರು automatic ಆಗಿ ಗುಟ್ಕಾ ತಯಾರಕರಿಗೆ ಅಡಿಕೆಯನ್ನು ಕೊಡುತ್ತಾರೆ, ಅದರಲ್ಲೇನು ಇಲ್ಲ. ನಾನು ಕೇಳುವಂಥಾದ್ದು ಮತ್ತು ಸನ್ಮಾನ್ಯ ನಾಣಯ್ಯನವರು ಹೇಳುವಂಥಾದ್ದು ಒಂದೇ. ಅಡಿಕೆ ಬೆಳೆಗಾರರು ಈ ಗುಟ್ಕಾವನ್ನು ನಿಷೇಧ ಮಾಡಬೇಕು. Nicotine and tobacco contents ಅನ್ನು ತೆಗೆಯಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಇದರಿಂದಾಗಿ ನೇರವಾಗಿ, ಪರೋಕ್ಷವಾಗಿ ಅಡಿಕೆ ಬೆಳೆಗಾರರಿಗೆ ಆಗಿರುವಂಥ ತೊಂದರೆಯ ಬಗ್ಗೆ ನಾವೇನು ಮಾಡಬಹುದು ಎಂಬುದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುವಂಥಾದ್ದು ನಮ್ಮ ಒಂದು ಆಗ್ರಹವಾಗಿದೆ. ನಮ್ಮ ನಾಯಕರು ಹೇಳಿದಾಗಲೂ ಸಹ ನಾನು ಹೇಳಿದೆ. ಗುಟ್ಕಾ ನಿಷೇಧಕ್ಕೆ ನಮ್ಮ ಸ್ವಾಗತವಿದೆ. ಸರ್ಕಾರದ ವಿರೋಧವಾಗಿ ನಾವು ಯಾವುದನ್ನು ಮಾತನಾಡುತ್ತಿಲ್ಲ. ಅಡಿಕೆ ಬೆಳೆಗಾರರ ಪರವಾಗಿ ಮಾತನಾಡುತ್ತೇವೆ ಎನ್ನುವಂಥಾದ್ದನ್ನು ಹೇಳುತ್ತೇವೆ ಹೊರತು ಬೇರೆ ಇನ್ನೇನನ್ನು ನಾವು ಹೇಳುತ್ತಿಲ್ಲ. ಎರಡನೆಯದಾಗಿ ಇನ್ನೊಂದು ಬಹಳ ಪ್ರಮುಖವಾದ ವಿಚಾರವೆಂದರೆ, ಅಡಿಕೆ ಧಾರಣೆಯಲ್ಲಿ

ಏರಿಳಿತವಾಗಲಿಲ್ಲವೇ ಎಂಬುದನ್ನು ಮಾನ್ಯ ನಾಣಯ್ಯನವರು ಪ್ರಸ್ತಾಪ ಮಾಡಿದರು. ಅಡಿಕೆ ಧಾರಣೆಯಲ್ಲಿ ಏರಿಳಿತವಾದಾಗ ಪ್ರತಿ ಬಾರಿಯೂ ಸಹ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅಡಿಕೆ ಬೆಳೆಗಾರರ ಸಹಾಯಕ್ಕೆ ಬಂದಿವೆ. ಇವತ್ತು ಅಡಕೆ ಬೆಲೆ ಕುಸಿತವಾಗಿದೆ. ಸರ್ಕಾರ ಅಡಿಕೆ ಬೆಳೆಗಾರರ ಸಹಾಯಕ್ಕೆ ಏಕೆ ಬರುತ್ತಿಲ್ಲ ಎಂಬ ಪ್ರಶ್ನೆಯನ್ನು ನಾವು ಕೇಳುತ್ತಿದ್ದೇವೆ. ಅಡಿಕೆ ಬೆಲೆ ಒಂದು ಕೆ.ಜಿ.ಗೆ 40 ರೂಪಾಯಿ ಆಗಿತ್ತು. ಇದು ಶ್ರೀ ಅಭಯಚಂದ್ರರವರಿಗೆ ಮತ್ತು ಶ್ರೀ ರಮಾನಾಥ ರೈರವರಿಗೆ ಗೊತ್ತಿದೆ. ಅಡಿಕೆ ಬೆಲೆ ಎಷ್ಟು ಕಡಿಮೆಯಾಗಿತ್ತು ಎಂಬುದು ಅವರಿಗೆ ಗೊತ್ತಿದೆ. ಆ ಸಂದರ್ಭದಲ್ಲಿ ನಾವು ದೊಡ್ಡ ಹೋರಾಟವನ್ನು ಮಾಡಿದ್ದೆವು. ಆಗ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವಿದ್ದು, ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು. ಆಗ ಅವರು ಅಡಿಕೆ ಬೆಳೆಗಾರರಾದ ನಮ್ಮನ್ನೆಲ್ಲಾ ಕರೆದು ತಕ್ಷಣ ಈ ಬಗ್ಗೆ ಚರ್ಚೆ ಮಾಡಿದರು. ನಾನು ಇವತ್ತು ಈ ಬಗ್ಗೆ ಆಗ್ರಹ ಮಾಡುತ್ತಿರುವಂಥಾದ್ದು ಏನೆಂದರೆ, ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ನಮ್ಮ ಹೋರಾಟ ಮತ್ತು ಅಡಿಕೆ ಬೆಲೆ ಕುಸಿತವನ್ನು ಕಂಡು ನಮ್ಮನ್ನೆಲ್ಲಾ ಬೆಂಗಳೂರಿಗೆ ಕರೆಸಿಕೊಂಡರು. ಎಲ್ಲಾ ಸಂಘ–ಸಂಸ್ಥೆಗಳನ್ನು, ಶಾಸಕರನ್ನು ಸೇರಿಸಿದರು. ಈ ಬಗ್ಗೆ ತಕ್ಷಣವೇ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಆಲೋಚನೆ ಮಾಡಿದರು. ಈ ಬಗ್ಗೆ ಕೇಂದ್ರಕ್ಕೆ ಒಂದು ನಿಯೋಗ ಹೋಯಿತು. ಅಡಿಕೆಗೆ ಬೆಂಬಲ ಬೆಲೆ ಎಂಬುದು ಘೋಷಣೆಯಾಗಿದ್ದು ಆ ಕಾಲದಲ್ಲಿ. ಆದುದರಿಂದ ನಾನು ಅವರನ್ನು ಅಭಿನಂದಿಸಲೇಬೇಕು. ಖಂಡಿತವಾಗಿಯೂ ಒಳ್ಳೆಯತನಕ್ಕೆ ನಾನು ಎಲ್ಲಿಯೂ ಏನನ್ನು ಹೇಳುವುದಿಲ್ಲ. ಇವತ್ತು ಏಕೆ ಸರ್ಕಾರ ಅದನ್ನು ಮಾಡುತ್ತಿಲ್ಲ. ಇಡೀ ದೇಶದಲ್ಲಿ ಅಡಿಕೆ ಬೆಳೆಯುವಂಥ ರಾಜ್ಯಗಳಲ್ಲಿ ಗುಟ್ಕಾ ನಿಷೇಧದಿಂದಾಗಿ ಅಲ್ಲಲ್ಲಿ ಗಲಾಟೆಗಳು ಆಗುತ್ತಿವೆ. ಕಳೆದ ಎರಡು–ಮೂರು ವರ್ಷಗಳಲ್ಲಿ ಸುಪ್ರೀಂ ಕೋರ್ಟ್‌ಗೆ ಈ ಕೇಸ್ ಹೋದ ನಂತರ ಇದು ಪ್ರಾರಂಭವಾಗಿದೆ. ಸಾಕಷ್ಟು ಸಂಘ–ಸಂಸ್ಥೆಗಳು ಇದರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಹೋದವು. ನೀವು ಸುಪ್ರೀಂ ಕೋರ್ಟ್‌ನ ನೋಟಿಸ್ ತೆಗೆದು ನೋಡಿದರೆ ಸಾಕು. ಇವರು

ಹೇಳಿದಂತೆ ದೊಡ್ಡ ದೊಡ್ಡ ಕಂಪನಿಯ ಲಾಬಿ ಇರುವುದನ್ನು ನಾವು ನೋಡಿದ್ದೇವೆ. ಆದರೆ ರೈತರ ವಿಚಾರವಾಗಿ ಲಾಬಿ ಮಾಡುವುದು ಬೇಡವೇ? ನಾವು ನೀವು ಎಲ್ಲರೂ ಸೇರಿ ರೈತರ ಪರವಾಗಿ ಲಾಬಿ ಮಾಡಬೇಕೆಂಬುದು ನನ್ನ ಒಂದು ಆಶಯವಾಗಿದೆ. ನಮ್ಮ ವಿಚಾರವೇನೆಂದರೆ, ನಾವು ಗುಟ್ಕಾದ ಪರವಾಗಿ ಲಾಬಿಯನ್ನು ಮಾಡುವುದು ಬೇಡ. ITC Cigarette Company ಯ ಪರವಾಗಿ ಲಾಬಿಯನ್ನು ಮಾಡುವುದು ಬೇಡ. ಈ ರಾಜ್ಯದ ಜನರು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ಅಂದರೆ ಅಡಿಕೆ ಬೆಳೆಗಾರರ ಪರವಾಗಿ ಲಾಬಿಯನ್ನು ಮಾಡಿ ಎನ್ನುವುದು ನನ್ನ ಆಶಯ, ಮತ್ತು ಆಗ್ರಹವಾಗಿದೆ. ಯಾವ ಅಧಿಕಾರಿಗಳಿಗೂ ಸಹ ಇದು ಅರ್ಥವಾಗುವುದಿಲ್ಲ. ಅಧಿಕಾರಿಗಳು ಸುಪ್ರೀಂ ಕೋರ್ಟ್‌ನಿಂದ ನೋಟಿಸ್ ಬಂತು ಎಂದ ತಕ್ಷಣ, 'ಸರ್, ತಕ್ಷಣ ಇದನ್ನು ಮಾಡಿಬಿಡೋಣ' ಎನ್ನುತ್ತಾರೆ. ನಿಮ್ಮನ್ನು, ನಮ್ಮನ್ನೆಲ್ಲಾ ಹಾದಿ ತಪ್ಪಿಸುವುದು ಅಧಿಕಾರಿಗಳೇ ಹೊರತು ಬೇರೆ ಯಾರೂ ಅಲ್ಲ. ಐಎಎಸ್ ಅಧಿಕಾರಿಗಳ ಒಂದು lobby ಇದೆಯಲ್ಲಾ ಅದಕ್ಕಿಂತ ದೊಡ್ಡ lobby ಬೇರೆ ಯಾವುದು ಇಲ್ಲ. ಯಾವ್ಯಾವ ಶಬ್ದವನ್ನು ಎಲ್ಲಿ ಸೇರಿಸಿ, ನಿಜವಾದ interpretation ನ ಹೊರಗಿಟ್ಟು ತೆಗೆದುಕೊಂಡು ಹೋಗಿ ಎಲ್ಲವನ್ನು ಮಾಡಬಹುದು ಎನ್ನುತ್ತಾರೆ. 26ನೇ ತಾರೀಖಿನವರೆವಿಗೂ ಕಾಲಾವಕಾಶವಿದೆ ಎಂದು ಇವರಿಗೆ ಗೊತ್ತಿಲ್ಲವೇ? ರಾಜ್ಯದಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆ ಅಧಿಕಾರಿಗಳಿಗೆ ಗೊತ್ತಿಲ್ಲವೇ? ಇದು ಏಕೆ ಆಗುತ್ತಿದೆ? ಎಲ್ಲೋ ನಮ್ಮನ್ನೆಲ್ಲಾ ಹಾದಿ ತಪ್ಪಿಸುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಮಾನ್ಯ ಎಸ್.ಆರ್. ಪಾಟೀಲ್‌ರವರು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿರುವುದರಿಂದ ಅವರು ಎಚ್ಚೆತ್ತುಕೊಳ್ಳಬೇಕು. ಆದಕಾರಣ latest technology ಯಲ್ಲಿ ಇವರ pulse ನ್ನೆಲ್ಲಾ ತಿಳಿದುಕೊಳ್ಳುವಂಥ ಕೆಲಸ-ಕಾರ್ಯಗಳನ್ನು ಮಾನ್ಯ ಸಚಿವರು ಮಾಡಬೇಕು. ಆಡಳಿತ ಪಕ್ಷದಲ್ಲಿ ಕುಳಿತಿರುವವರು ರೈತರನ್ನು ಮರೆತರೇ ಉದ್ಧಾರವಾಗುವುದಿಲ್ಲ ಎನ್ನುವುದನ್ನು ಅವರು ತಿಳಿದುಕೊಳ್ಳಬೇಕು.

**ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್:–** ಇಲ್ಲಿ ಕುಳಿತಿರುವ ಯಾರು ರೈತರಿಗೆ ದ್ರೋಹ ಮಾಡಿ ಉದ್ಧಾರವಾಗಲಿಲ್ಲ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಾನಂದಗೌಡರು ಇವತ್ತು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರು ಮುಖ್ಯಮಂತ್ರಿಗಳಾಗಿಯೂ ಸಹ 8–9 ತಿಂಗಳುಗಳ ಕಾಲ ಕೆಲಸವನ್ನು ಮಾಡಿದ್ದಾರೆ. I would like to ask him that, what has been your experience with the bureaucrats then.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಹೇಳಿದ ವಿಚಾರ ಒಂದೆರಡು ದಿನಗಳ ಕಾಲ ಈ ಸದನದಲ್ಲಿ ಚರ್ಚೆಯಾದರೆ ಇಡೀ ಆಡಳಿತ ಯಂತ್ರವನ್ನು ಅತ್ಯಂತ ಸರಿ ದಾರಿಗೆ ತರಲಿಕ್ಕೆ ಸಾಧ್ಯವಾಗುತ್ತದೆ. ತಾವು ಮುಂದಿನ ಅಧಿವೇಶನದಲ್ಲಿಯಾದರೂ ಇದಕ್ಕೆ ಅವಕಾಶವನ್ನು ಮಾಡಿಕೊಡಿ. Bureaucrats ನ್ನು ಇಲ್ಲಿ ಕೂರಿಸುವುದು ಬೇಡ. ನಾವು ಅವರ ಬಗ್ಗೆ ಚರ್ಚೆ ಮಾಡುವಾಗ ಅವರು ಒಳಗಡೆ ಇರಬಾರದು. ಹಲವಾರು ಜನ ಅದನ್ನು ನೋಟ್ ಮಾಡಿಕೊಂಡು ಮತ್ತೆ ಅದನ್ನು ಸೇರಿಸುತ್ತಾರೆ. ಆದಕಾರಣ ಆ ಚರ್ಚೆಗಳನ್ನು ಮಾಡುವಂಥ ಕೆಲಸವಾಗಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನದ ಬಗ್ಗೆ refer ಮಾಡಿದರು. ಅಂದರೆ high technology ಇದೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನವೆಂದರೆ, ನಾವು White collar people ಜೊತೆಯೇ ಇರುತ್ತೀರಿ ಎಂದು ಪರೋಕ್ಷವಾಗಿ ಹೇಳಿದರು. ನಾನದನ್ನು ಒಪ್ಪಿಕೊಳ್ಳುತ್ತೇನೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಏನಿದೆ, ಅದನ್ನು ಜನ ಸಾಮಾನ್ಯರ ಬದುಕಿನಲ್ಲಿ ಉಪಯೋಗವಾಗುವ ನಿಟ್ಟಿನಲ್ಲಿ ಯಾವರೀತಿ ಬಳಕೆ ಮಾಡಬೇಕು ಎಂಬ ಬಗ್ಗೆ ಚಿಂತನೆ ಮಾಡುವ ಅವಶ್ಯಕತೆ ಇದೆ. ಅದರಲ್ಲೂ ಜೈವಿಕ ತಂತ್ರಜ್ಞಾನ ರೈತರಿಗೆ ಉಪಯೋಗವಾಗುವ ವಿಜ್ಞಾನವಾಗಿದೆ. ಈ ವಿಜ್ಞಾನವನ್ನು ರೈತರ ಜೀವನದಲ್ಲಿ ತರುವುದಕ್ಕೆ ನಾನು

ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ . . .

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾನಾಯಕರ ಬಗ್ಗೆ ನನಗೆ ಗೌರವವಿದೆ. ಅವರು, ಸಕ್ಕರೆ ಕಾರ್ಖಾನೆ, ಕಬ್ಬು ಬೆಳೆಗಾರರು, ರೈತರು, ನೀರಾವರಿ ಈ ಎಲ್ಲ ವಿಷಯಗಳ ಬಗ್ಗೆ ತಜ್ಞರಾಗಿದ್ದಾರೆ. ನಾನು ಅವರ ಬಗ್ಗೆ ಯಾವತ್ತೂ ಬೇರೆ ರೀತಿಯಲ್ಲಿ ಮಾತನಾಡಿಲ್ಲ . . .

**ಶ್ರೀ ಎಸ್.ಆರ್. ಪಾಟೀಲ್:–** ನೀವು ಎಂದೂ ಸಹ ನನ್ನ ವಿಚಾರವಾಗಿ ಬೇರೆ ರೀತಿಯಲ್ಲಿ ಮಾತನಾಡುತ್ತೀರಿ ಅಥವಾ ಚುಚ್ಚಿ ಮಾತನಾಡುತ್ತೀರಿ ಎಂದು ನಾನು ಭಾವಿಸಿಲ್ಲ. ನನಗೂ ಕೂಡ ನಿಮ್ಮ ಬಗ್ಗೆ ಅಪಾರವಾದ ಗೌರವವಿದೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾನಾಯಕರಿಗೆ ಐಟಿ–ಬಿಟಿ ಬೇರೆ ಖಾತೆ ಕೊಡಬೇಕಾಗಿತ್ತು.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಗಳೆ, ಇವತ್ತಿನ ಆಧುನಿಕ ಪ್ರಪಂಚದಲ್ಲಿ, ಇವತ್ತಿನ ಪರಿಸ್ಥಿತಿಯಲ್ಲಿ Information Technology and Bio-Technology is the most powerful portfolio. ಹಣ ಮಾಡುವವರು ಅದು ದೊಡ್ಡ ಖಾತೆಯಲ್ಲ ಎಂದು ಹೇಳಬಹುದು ಅಷ್ಟೆ. ಮಾನ್ಯ ಸಭಾನಾಯಕರಿಗೆ ಹಣ ಮಾಡುವ ಆಸೆಯಿಲ್ಲ. Let him make use of it.

**ಸಭಾಪತಿಯವರು:–** ಈಗ ಮಾನ್ಯ ಕೃಷ್ಣಭಟ್‌ರವರು ಮಾತನಾಡುತ್ತಾರೆ.

**ಪ್ರೋ|| ಪಿ.ವಿ. ಕೃಷ್ಣಭಟ್ಟ:–** ಮಾನ್ಯ ಸಭಾಪತಿಗಳೆ, ಕಳೆದ ಕೆಲವು ವರ್ಷಗಳಲ್ಲಿ ಗುಟ್ಕಾದ ಬಳಕೆ ಹೆಚ್ಚು ವ್ಯಾಪಕವಾಗಿದ್ದರಿಂದ ಅಡಿಕೆಗೆ ಸ್ವಲ್ಪ ಜಾಸ್ತಿ ಬೆಲೆ ಬಂತು. ಆದರೆ ನಮ್ಮ ದೇಶದಲ್ಲಿ ನೂರಾರು ವರ್ಷಗಳಿಂದ ಅಡಿಕೆಯನ್ನು ಬೆಳೆಸುತ್ತಿದ್ದಾರೆ. ಗುಟ್ಕಾ ತಯಾರಿಕೆಯ ಉದ್ದೇಶವನ್ನಿಟ್ಟುಕೊಂಡು ಅಡಿಕೆಯನ್ನು ಬೆಳೆಸುತ್ತಿರಲಿಲ್ಲ. ಅಡಿಕೆ ನಮ್ಮ ಸಾಂಸ್ಕೃತಿಕ ಜೀವನದಲ್ಲಿ

ಹಾಸು–ಹೊಕ್ಕಾಗಿ ಬಂದಿರುವಂಥದ್ದಾಗಿದೆ. ಅದನ್ನು ಕೆಲವರು ಗುಟ್ಕಾ ತಯಾರಿಕೆಗೆ ಬಳಸಿಕೊಂಡರು. ಇದರಿಂದ ಆರೋಗ್ಯಕ್ಕೆ ಹಾನಿಯಾಗುತ್ತದೆ ಎಂದು ಹೇಳಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾದರೆ ಆ ಹಿನ್ನೆಲೆಯಲ್ಲಿ ಅಡಿಕೆ ಬೆಳೆ ಮೇಲೆ ದುಷ್ಪರಿಣಾಮ ಬೀರಬಾರದು. ಈ ನಿಟ್ಟಿನಲ್ಲಿ ಅಡಕೆಗೆ ಸರ್ಕಾರ ಭದ್ರತೆಯನ್ನು ಕೊಡುವ ಕೆಲಸ ಮಾಡಬೇಕಿತ್ತು. ಕೇಂದ್ರ ಸರ್ಕಾರ ಈ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಂಡಿಲ್ಲ ಮತ್ತು ರಾಜ್ಯ ಸರ್ಕಾರ ಬಹಳ ತರಾತುರಿಯಲ್ಲಿ ಇದನ್ನು ನಿಷೇಧ ಮಾಡುವ ನಿರ್ಣಯ ಕೈಗೊಂಡಿದೆ. ಇದು ದುರಾದೃಷ್ಟಕರವಾದ ಸಂಗತಿಯಾಗಿದೆ. ಮುಖ್ಯವಾಗಿ ಏನಾಗಬೇಕು ಎಂದರೆ, ಇದು tobacco ಗಿಂತ cancerous ಇದೆ, ಅದಕ್ಕೋಸ್ಕರವಾಗಿ ಇದನ್ನು ತಡೆಗಟ್ಟಬೇಕು ಎಂದು ಹೇಳುವುದಾದರೆ ನಿಶ್ಚಿತವಾಗಿ ಈ ಸದನ ಸದರಿ ವಿಚಾರಕ್ಕೆ ಒಕ್ಕೊರಲಿನಿಂದ ಒಪ್ಪಿಗೆ ಸೂಚಿಸಬೇಕು. ಗುಟ್ಕಾ ಎನ್ನುವುದರಲ್ಲಿ tobacco ಅಂಶ ಎಷ್ಟಿದೆ ಎಂಬುದನ್ನು ಕಂಡುಹಿಡಿಯಬೇಕು. ಆ ಟೊಬ್ಯಾಕೋವನ್ನು ಹೊರತುಪಡಿಸಿ, ಅಡಿಕೆ ಬೆಳೆಯನ್ನು, ಅದರ ಉಪಯೋಗವನ್ನು ಸಾರ್ವತ್ರಿಕರಣಗೊಳಿಸುವುದಕ್ಕೆ ಏನು ಮಾಡಬೇಕು ಎಂಬುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಬೇರೆ ರಾಜ್ಯಗಳು ಏನೋ ಒಂದು ತೀರ್ಮಾನು ತೆಗೆದುಕೊಂಡವು ಎಂದ ಮಾತ್ರಕ್ಕೆ ಪ್ರಚಾರ ಗಿಟ್ಟಿಸಲು ನಾವೂ ಕೂಡ ತರಾತುರಿಯಲ್ಲಿ ನಿರ್ಣಯಗಳನ್ನು ಮಾಡಿದರೆ ಕೋಟ್ಯಾಂತರ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬುದನ್ನು ಗಮನಿಸಬೇಕು. ಅಡಿಕೆ ಬೆಳೆಗಾರರ ರಕ್ಷಣೆಗಾಗಿ ಸರ್ಕಾರ ಇವತ್ತು ಅನೇಕ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಈಗಾಗುತ್ತಿರುವಂತಹ ಬದಲಾವಣೆಗಳು, ಅದರಲ್ಲೂ ವಿಶೇಷವಾಗಿ ಕೈಗಾರಿಕೀರಣದ ಹಿನ್ನೆಲೆಯಲ್ಲಿ ಅಡಕೆ ಬೆಳೆಗೆ ಅನೇಕ ಸಮಸ್ಯೆಗಳಿವೆ. ನೀರಿನ ಕೊರತೆ ಇದೆ. ಈಗಂತೂ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸಗಾರರು ಸಿಗುತ್ತಿಲ್ಲ. ಆದುದರಿಂದ mechanization ಮಾಡುವಂತಹ ಅವಶ್ಯಕತೆ ಇದೆ. ಮುಖ್ಯವಾಗಿ, ಅಡಿಕೆಯ ಪರ್ಯಾಯ ಉಪಯೋಗಗಳ ಬಗ್ಗೆ ಬಹಳ ದೊಡ್ಡದಾಗಿ ಸಂಶೋಧನೆಗಳಾಗಬೇಕಾಗಿದೆ. ಅನೇಕರು ಈಗಾಗಲೇ ಸಂಶೋಧನೆಯನ್ನು

ಮಾಡಿದ್ದಾರೆ. ಇತ್ತೀಚಿಗೆ ನಾನು ಶಿವಮೊಗ್ಗ ಜಿಲ್ಲೆಗೆ ಹೋಗಿದ್ದಾಗ ಅಲ್ಲಿನ ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಅಡಿಕೆ ಹೇಗೆ diabetes treatment ಗೆ ಸಹಕಾರಿಯಾಗುತ್ತದೆ ಎನ್ನುವುದರ ಬಗ್ಗೆ ಹೇಳಿದರು. ಅದೇರೀತಿ ಬಣ್ಣಗಳ ತಯಾರಿಕೆಯಲ್ಲಿ ಅಡಿಕೆ ಮುಖ್ಯವಾದಂಥ ingredient ಆಗಬಹುದು. ಹೀಗೆ ಅಡಿಕೆಯ ಪರ್ಯಾಯ ಉಪಯೋಗಗಳ ಬಗ್ಗೆ ಸಂಶೋಧನೆ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಶಿವಮೊಗ್ಗದಲ್ಲಿ ಕೃಷಿ ವಿಶ್ವವಿದ್ಯಾಲಯ ಆಗುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ. ಅಲ್ಲಿ ಅಡಿಕೆಗೆ ಸಂಬಂಧಪಟ್ಟ ಹಾಗೆ ವಿಶೇಷ ಸಂಶೋಧನೆಗೆ ಒತ್ತು ಕೊಡಬೇಕು. ಅಡಿಕೆಯ ಪರ್ಯಾಯ ಉಪಯೋಗಗಳ ಬಗ್ಗೆ ಸಂಶೋಧನೆ ಆಗಬೇಕು. ಅಡಕೆಯ ಉತ್ಪಾದನೆಗೆ ಇವತ್ತೇನು ಖರ್ಚಾಗುತ್ತಿದೆ, ಆ ಖರ್ಚನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಹೊಸ ಬಗೆಯ ಉಪಕರಣಗಳು, ಹೊಸ ಬಗೆಯ ಸಾಧನ-ಸಲಕರಣೆಗಳನ್ನು ರೈತರಿಗೆ ಒದಗಿಸುವಂತಾಗಬೇಕು. ಎಲ್ಲಕಿಂತ ಮಿಗಿಲಾಗಿ ಸರ್ಕಾರ ರಾಜ್ಯದಲ್ಲಿರುವ ಎಲ್ಲಾ ಅಡಿಕೆ ಬೆಳೆಗಾರರಿಗೆ ಒಂದು ಭರವಸೆಯನ್ನು ತುಂಬಬೇಕು. ಇವತ್ತಿನ ದಿನ ಅವರು ಹತಾಶರಾಗುತ್ತಿದ್ದಾರೆ, ಭವಿಷ್ಯದ ಚಿಂತೆ ಏನು ಎನ್ನುವ ಭಯ ಅವರಲ್ಲಿ ಆವರಿಸಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ, ನಿಮ್ಮ ಬಲಕ್ಕೆ ನಾವು ನಿಂತುಕೊಳ್ಳುತ್ತೇವೆ, ಯಾವುದೇ ಸಮಸ್ಯೆಗಳಿಗೆ ತುತ್ತಾಗದಂತೆ ರಕ್ಷಣೆ ಕೊಡುತ್ತೇವೆ ಎನ್ನುವ ದಿಟ್ಟವಾದ, ಸ್ಪಷ್ಟವಾದ ಭರವಸೆಯ ಮಾತನ್ನು ಹೇಳಬೇಕು. ಈ ದಿಸೆಯಲ್ಲಿ ಸರ್ಕಾರ ಗಮನಹರಿಸುತ್ತದೆಂದು ಭಾವಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಈಗ ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ಮಾತನಾಡುತ್ತಾರೆ. ಮುಂದೆ ಇನ್ನೂ ಮೂರ್‍ನಾಲ್ಕು ಜನ ಸದಸ್ಯರು ಮಾತನಾಡುವವರಿದ್ದಾರೆ, ಅಲ್ಲದೇ ಊಟದ ಸಮಯ ಕೂಡ ಆಗಿದೆ. ಹಾಗಾಗಿ ಒಂದೈದು ನಿಮಿಷ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಗಳೆ, ಈಗಾಗಲೇ 2 ಗಂಟೆಯಾಗಿದೆ. ಭೋಜನದ ನಂತರ ಈ ಚರ್ಚೆಯನ್ನು ಮುಂದುವರೆಸೋಣ.

**ಸಭಾಪತಿಯವರು:–** ಈಗ ಸದನವನ್ನು 3.15 ಗಂಟೆಯವರೆಗೆ ಮುಂದೂಡುತ್ತೇನೆ.

**(2 ಗಂಟೆ 09 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ 3 ಗಂಟೆ 37 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**ನಿಯಮ 68ರ ಅಡಿಯಲ್ಲಿ ಗುಟ್ಕಾ ನಿಷೇಧ ಮತ್ತು ಅಡಕೆ ಬೆಳೆಗಾರರ ಸಮಸ್ಯೆ ಕುರಿತು ಮುಂದುವರೆದ ಚರ್ಚೆ**

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಗುಟ್ಕಾ ನಿಷೇಧದ ವಿಚಾರದಲ್ಲಿ ಈಗಾಗಲೇ ಭಾರತೀಯ ಜನತಾ ಪಕ್ಷ ಮತ್ತು ಇತರೆ ಪ್ರತಿಪಕ್ಷದ ಅನೇಕ ಸದಸ್ಯರು ಸ್ಪಷ್ಟವಾಗಿ ತಮ್ಮ ಮಾತುಗಳನ್ನು ಹೇಳಿ ಆಗಿದೆ. ಗುಟ್ಕಾ ನಿಷೇಧದ ಬಗ್ಗೆ ನಮ್ಮಲ್ಲಿ ಗೊಂದಲ ಏನೂ ಇಲ್ಲ. ಆದರೆ, ಅದಕ್ಕೆ ಬೇಕಾದ ಅಡಕೆಯನ್ನು ಯಾರು ಸರಬರಾಜು ಮಾಡುತ್ತಾರೆ ಆ ಅಡಿಕೆ ಬೆಳೆಗಾರರ ಸಮಸ್ಯೆಯ ಬಗ್ಗೆ ನಿಮ್ಮ ಯೋಚನೆ ಏನು ಎಂಬುದು ನಮ್ಮೆಲ್ಲರ ಮುಂದಿರುವ ಬಹು ದೊಡ್ಡ ಪ್ರಶ್ನೆಯಾಗಿದೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ತಾವು ಒಂದು ವಿಚಾರದ ಬಗ್ಗೆ ಆಗಿಂದಾಗ್ಗೆ ಹೇಳುತ್ತಿರುತ್ತೀರಿ. ಆಡಳಿತ ಪಕ್ಷದವರು ಅವರಿಗೆ ಬೇಕಾಗಿರತಕ್ಕಂಥ ಕೋರಂ ಅನ್ನು ಮಾಡಿಕೊಂಡು ಸದನವನ್ನು ನಡೆಸಬೇಕು.

**ಸಭಾಪತಿಯವರು:–** ಹೌದು.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷವನ್ನು ಸೇರಿಸಿಕೊಂಡು ಅವರು ಕೋರಂ ಮಾಡುವುದಾದರೆ ಅದು ಸರಿಯಾಗುವುದಿಲ್ಲ. ಆ ರೀತಿ ಮಾಡುವುದಾದರೆ ಆಡಳಿತ ಪಕ್ಷವಾಗಿ ಅವರು ಏಕೆ ಅಲ್ಲಿ ಇರಬೇಕು? ಅಲ್ಲಿ 4 ಜನ ಸಚಿವರಿದ್ದಾರೆ. ನಾವು ಇಲ್ಲದೇ ಹೋದರೆ ಕೋರಂ ಇಲ್ಲವೆಂದು ಸದನವನ್ನು ಮುಂದುವರಿಸುವುದ

ಕ್ಕಾಗುವುದಿಲ್ಲ. ಈ ಪರಿಸ್ಥಿತಿ ನಿರ್ಮಾಣ ಮಾಡುವುದಾದರೆ ಅದು ಸರಿಯಾಗುವುದಿಲ್ಲ. ಹೊಸದಾಗಿ ಆಡಳಿತಕ್ಕೆ ಬಂದ ಹುರುಪಿನಲ್ಲಿ ನಿಮಗೆ ಇಂತಹ ಪರಿಸ್ಥಿತಿ ನಿರ್ಮಾಣವಾಗಬೇಕೇನು? ದಯವಿಟ್ಟು ಇಂತಹ ಪರಿಸ್ಥಿತಿ ಬರುವುದು ಬೇಡ. ಮಾನ್ಯ ಸಭಾಪತಿಯವರು 2 ಗಂಟೆಗೆ ಊಟಕ್ಕೆ ಸದನವನ್ನು ಮುಂದೂಡಿದ್ದಾರೆ. ನಾವೆಲ್ಲರೂ 3–15 ಕ್ಕೆ ಬಂದೆವು.

**ಡಾ|| ಎ.ಹೆಚ್. ಶಿವಯೋಗಿ ಸ್ವಾಮಿ:–** ನಾವು ಆ ಕಡೆ ಇದ್ದಾಗ ನಮ್ಮನ್ನು ತಾವು ಎಷ್ಟು ಕಾಡುತ್ತಿದ್ದಿರಿ.

**ಶ್ರೀ ಯಂ.ಸಿ. ನಾಣಯ್ಯ:–** ಆಗ ನಿಮ್ಮ ಪರಿಸ್ಥಿತಿಯೂ ಕೂಡ ಅಲ್ಲಿ ಅದೇ ರೀತಿ ಇತ್ತು.

**Sri S.R. PATIL (Leader of the House):-** Mr. Chairman Sir, we will take care. We have Strictly instructed them to be present in time.

**ಡಾ|| ಎ.ಹೆಚ್. ಶಿವಯೋಗಿ ಸ್ವಾಮಿ:–** ಅದಕ್ಕೇ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ.

**ಶ್ರೀ ಯಂ.ಸಿ. ನಾಣಯ್ಯ:–** ನಿಮ್ಮ ಸರ್ಕಾರ ಹೊಸದಾಗಿ ಬಂದಿದೆ. ನಿಮ್ಮ ಹನಿಮೂನ್ ಪೀರಿಯಡ್ಡೇ ಇನ್ನೂ ಮುಗಿದಿಲ್ಲ. ಅಷ್ಟಾದರೂ ಉತ್ಸಾಹ ಬೇಡವೇನು?

**ಶ್ರೀ ಎಸ್.ಆರ್. ಪಾಟೀಲ್:–** ಹೊಸದಾಗಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಭರಾಟೆಯಲ್ಲಿ ಬಹಳಷ್ಟು ಜನರು ಬಂದು ಸಚಿವರು ಶಾಸಕರನ್ನು ಭೇಟಿ ಆಗುವುದು ಇವೆಲ್ಲವೂ ಆಗುತ್ತಿದೆ.

**ಶ್ರೀ ಯಂ.ಸಿ. ನಾಣಯ್ಯ:–** ಯಾರನ್ನೂ ಭೇಟಿ ಮಾಡುವುದು? ಸದನಕ್ಕೆ ಬಂದು, ಈ ಸದನದಲ್ಲಿ ಕುಳಿತು ಕಲಿಯಬೇಕು. ಹೊಸದಾಗಿ ಸರ್ಕಾರ ಅಧಿಕಾರಕ್ಕೆ ಬಂದಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಸದನಕ್ಕೆ ಬರಬೇಕು ಅದರಲ್ಲಿ no excuse.

**ಶ್ರೀ ಯಂ.ಸಿ. ನಾಣಯ್ಯ:-** ಹೊಸ ಸರ್ಕಾರ ರಚನೆಯಾಗಿದೆ ನಿಮ್ಮ ಸಚಿವರು ಈ ಸದನಕ್ಕೆ ಬರಬೇಕು. ನಿಮ್ಮನ್ನೂ ಸೇರಿಸಿ 4 ಜನರು ಇದ್ದೀರಿ. ದಯವಿಟ್ಟು ಆ ರೀತಿ ಮಾಡಬೇಡಿ. ತಪ್ಪಾಗುತ್ತದೆ.

**Sri. S.R. PATIL:-** Mr. Chairman Sir, we have already instructed. ಈ ಸದನಕ್ಕೆ ಗೌರವವನ್ನು ಕೊಡಲೇಬೇಕಾಗುತ್ತದೆ.

**ಶ್ರೀ ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಜನಗಳು ಮನೆಯ ಹತ್ತಿರ ಬರುವುದು ಬೇಡ ಎನ್ನುವುದಕ್ಕಾಗುವುದಿಲ್ಲ. ಆದರೆ ಸದನ ನಡೆಯುವಾಗ ಸದನಕ್ಕೆ ಗೌರವವನ್ನು ಕೊಡಬೇಕು. ಸದನವು priority ಆಗಬೇಕು. ಜನಗಳನ್ನು ಸಾಯಂಕಾಲ ಮನೆ ಹತ್ತಿರ ಬರುವುದಕ್ಕೆ ಹೇಳಬೇಕು. ಅವರಿಗೆ ಏನು ಬೇಕು ಅದನ್ನು ಮಾಡಲಿ. ಆದರೆ, ನಾಳೆಯಿಂದ ಈ ರೀತಿಯಾಗಿ ನಡೆಯುವುದಿಲ್ಲವೆಂದು ಸಭಾನಾಯಕರು ಒಪ್ಪಿಕೊಂಡಿದ್ದಾರೆ. ನಾಳೆಯಿಂದ ಈ ರೀತಿಯಾಗಿ ನಡೆಯದಂತೆ ನೋಡಿಕೊಂಡರೆ ಪ್ರಾಯಶಃ ಎಲ್ಲಾ ಸರಿಯಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮನೆಗೆ ಹೋದರೆ ಬಹಳಷ್ಟು ಜನರು ನಮ್ಮನ್ನು ಭೇಟಿ ಮಾಡಲು ಬರುತ್ತಾರೆ. ಅವರು ಬಂದಾಗ ಅವರನ್ನು ಬಿಟ್ಟು ಬರುವುದು ಸಮಸ್ಯೆಯಾಗುತ್ತದೆ. ಆಗ ಸದನಕ್ಕೆ ಬರುವುದು ತಡವಾಗುತ್ತದೆಂದು ನಾನು ಸದನವನ್ನು ಮಧ್ಯಾಹ್ನ 1 ಗಂಟೆ 30 ನಿಮಿಷಕ್ಕೆ ಮುಂದೂಡಿದಾಗಿನಿಂದ ಮನೆಗೆ ಹೋಗದೇ ಸದನದ ಮೊಗಸಾಲೆಯಲ್ಲಿಯೇ ಕುಳಿತುಕೊಂಡಿದ್ದೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ(ವಿರೋಧ ಪಕ್ಷದ ಸಚೇತಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾ ನಾಯಕರಲ್ಲಿ ಏನು seriousness ಆದೆ ಅದು ಅವರ ಪಕ್ಷದ ಸದಸ್ಯರಲ್ಲಿ ಮತ್ತು ಮಂತ್ರಿಗಳಲ್ಲಿಯೂ ಇರಬೇಕು.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ಈಗ ಸರ್ಕಾರದವರು ಸಭಾ ನಾಯಕರನ್ನು ಮಾಡಿಯಾಯಿತು. ಅದು ಕೂಡ ಮಾಡಬೇಕೋ ಬೇಡವೋ ಎನ್ನುವಂತಹ ಬಹಳ ದೊಡ್ಡ ಜಿಜ್ಞಾಸೆ ಕೂಡ ಆಯಿತು. ಕಡೆಗೆ ಸಭಾ ನಾಯಕನಾಗಬೇಕಾದರೆ ಮಂತ್ರಿಯಾಗಿರಬೇಕೆಂದು ಇರುವುದರಿಂದ ಶ್ರೀ ಎಸ್.ಆರ್. ಪಾಟೀಲ್‌ರವರು ಮಂತ್ರಿಗಳಾದರು. ಇಲ್ಲದೇ ಹೋದರೆ ಅವರು ಮಂತ್ರಿಗಳಾಗುತ್ತಿರಲಿಲ್ಲ. ಎರಡನೆಯದಾಗಿ ಸರ್ಕಾರದ ಮುಖ್ಯ ಸಚೇತಕರನ್ನು ಮಾಡದೇ ಇರುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಇವತ್ತು ಆಗಬಹುದು.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ಸರ್ಕಾರದ ಮುಖ್ಯ ಸಚೇತಕರನ್ನು ಮಾಡಲಿ, so thst they (Government) can give the responsibility to him.

**Sri. S.R. PATIL(Leader of the House):-** Mr. Chairman Sir, by tomorrow it will happen.

**Sri. M.C. NANAIAH:-** If you don't do that, it's an insult this House.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಇವತ್ತು ಅಥವಾ ನಾಳೆ ಸರ್ಕಾರ ಮುಖ್ಯ ಸಚೇತಕರನ್ನು ನೇಮಕ ಮಾಡುತ್ತದೆ.

**ಸಭಾಪತಿಯವರು:-** ಮಾನ್ಯ ಯಂ.ಸಿ. ನಾಣಯ್ಯನವರು ಪ್ರಸ್ತಾಪ ಮಾಡಿರತಕ್ಕಂತಹ ವಿಷಯವನ್ನು ಇನ್ನೊಂದು ಹದಿನೈದು ಜನರು ಬಂದಮೇಲೆ ಹೇಳಿದ್ದರೆ ಒಳ್ಳೆಯದಾಗುತ್ತದೆ. ಈಗ ಏನಾಗುತ್ತದೆ ಎಂದರೇ, ಯಾರು ಮುಂಚಿತವಾಗಿ ಸದನಕ್ಕೆ ಬಂದಿರುತ್ತಾರೆ ಅವರಿಗೆ ನಾವು sermon

ಮಾಡುತ್ತೇವೆ. ಬರದೇ ಇರುವಂತಹ ಸದಸ್ಯರಿಗೆ ಈ ವಿಷಯ ತಲುಪುವುದೇ ಇಲ್ಲ.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಬರದೇ ಇರುವವರಿಗೆ ವಿಷಯವನ್ನು ತಲುಪಿಸಿಸುವಂತಹ ಕೆಲಸವನ್ನು ತಾವು ಮಾಡಿಬಿಡಿ. ಅಂದರೆ ತಡವಾಗಿ ಬಂದವರಿಗೆ ಹೇಳಿಬಿಡಿ.

**ಸಭಾಪತಿಯವರು:–** ಇಲ್ಲ. ಸಭಾ ನಾಯಕರನ್ನು ಕರೆಯುತ್ತೇನೆ. ಅವರು ಹೇಳುತ್ತಾರೆ. ಇನ್ನೊಂದು ಸ್ವಲ್ಪ ಜನರು ಬರಲಿ ಆಮೇಲೆ ಮಾತನಾಡೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಗುಟ್ಕಾ ನಿಷೇಧದ ಹಿನ್ನಲೆಯಲ್ಲಿ ಅಡಿಕೆ ಬೆಳೆಗೆ ಪರ್ಯಾಯ ವ್ಯವಸ್ಥೆಯನ್ನು ನೀವು ಏನು ಮಾಡಿದ್ದೀರಿ ಎನ್ನುವಂತಹ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಿದರೆ, ಸರ್ಕಾರ ಸಮರ್ಪಕವಾದಂತಹ ಉತ್ತರವನ್ನು ಕೊಡುತ್ತಿಲ್ಲ. ನಮಗೆಲ್ಲಾ ಆಸೆ ಮತ್ತು ಒಂದು ವಿಶ್ವಾಸ ಏನಿತ್ತು ಎಂದರೆ, ಹೊಸದಾಗಿ ಸರ್ಕಾರ ರಚನೆಯಾಗಿದೆ ಆನೇಕ ಕನಸುಗಳನ್ನು ಈ ಸರ್ಕಾರದ ಬಗ್ಗೆ ನಮ್ಮ ಜಿಲ್ಲೆಯ ಮತ್ತು ರಾಜ್ಯದ ಎಲ್ಲಾ ರೈತರು ಕಂಡಿದ್ದರು. ಅವರ ಹೊಸ ಬದುಕಿಗೆ ಏನಾದರೂ ಒಂದು ಭರವಸೆಯನ್ನು ಸರ್ಕಾರ ಕೊಡಬಹುದು ಎನ್ನುವಂತಹ ಆಸೆ ಇತ್ತು. ದುರಾದೃಷ್ಟಕ್ಕೆ ಅಧಿಕಾರಕ್ಕೆ ಬಂದಿರುವಂತಹ ಸರ್ಕಾರ ಗುಟ್ಕಾ ನಿಷೇಧವನ್ನು ಬಹಳ ಗಡಿಬಿಡಿಯಿಂದ ಮಾಡಿದ ಪರಿಣಾಮ ಅಡಕೆ ಬೆಳೆಗೆ ಪರ್ಯಾಯ ಮಾರುಕಟ್ಟೆಯನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ವಿಶೇಷವಾಗಿ ಗುಟ್ಕಾ ತಯಾರು ಮಾಡುವಂತಹ ಕಾರ್ಮಿಕರುಗಳಿದ್ದಾರೆ. ಆ ಕಾರ್ಮಿಕರಿಗೆ ಬದಲಿ ವ್ಯವಸ್ಥೆಗಳೇನು ಎನ್ನುವುದನ್ನು ಸರ್ಕಾರ ಯೋಚನೆ ಮಾಡಿಲ್ಲ. ಚಿಕ್ಕೋಡಿಯಲ್ಲಿ ಒಂದು ಕಾರ್ಮಿಕರ ಸಭೆ ನಡೆಯುತ್ತದೆ. ಆ ಸಭೆಯಲ್ಲಿ, ಸಾವಿರಾರು ಕಾರ್ಮಿಕರು, 'ಗುಟ್ಕಾ ನಿಷೇಧವನ್ನು ಮಾಡಿದ್ದರಿಂದಾಗಿ ನಾವು ನಿರುದ್ಯೋಗಿಗಳಾಗಿದ್ದೇವೆ' ಎನ್ನುವಂತಹ ಮಾತುಗಳನ್ನು ಹೇಳಿದರು. ಅದರಲ್ಲಿ

ಕಾರ್ಮಿಕ Shahir Yadwan ಎಂಬಾತ ಸರ್ಕಾರದ ವಿರೋಧ ಘೋಷಣೆಯನ್ನು ಕೂಗುತ್ತಾ ಮೈ ಮೇಲೆ ಸೀಮೆಎಣ್ಣೆಯನ್ನು ಸುರಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾನೆ ಎನ್ನುವಂತಹ ಫೋಟೋಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅಂದರೆ ಗುಟ್ಕಾ ತಯಾರಿಕಾ ಫ್ಯಾಕ್ಟರಿಯಲ್ಲಿ ಅವನು ಕಾರ್ಮಿಕನಾಗಿದ್ದ. ಗುಟ್ಕಾವನ್ನು ಮಾರಾಟ ಮಾಡುವವನ ಸ್ಥಿತಿ, ಆ ಕಾರ್ಮಿಕರಿಗೆ ಬದಲಿ ವ್ಯವಸ್ಥೆಯನ್ನು ಸರ್ಕಾರ ಏನು ಮಾಡಿದೆ ಎಂದು ಕೇಳಿದರೆ ಸದ್ಯಕ್ಕಂತೂ ಸರ್ಕಾರದ ಈಗಿನ ಪರಿಸ್ಥಿತಿಯಲ್ಲಿ ಯಾವುದೇ ಉತ್ತರ ಕೊಡುವಂತಹ ವ್ಯವಸ್ಥೆಗಳು ಕಂಡು ಬರುತ್ತಿಲ್ಲ. ಅಡಿಕೆ ಬೆಳೆ ಬಗ್ಗೆ ಮಾತನಾಡುವಾಗ ರಾಜ್ಯದಲ್ಲಿ ವಾರ್ಷಿಕ 4,81,845 ಎಕರೆ ಪ್ರದೇಶದಲ್ಲಿ ಅಡಕೆ ಬೆಳೆಯನ್ನು ಬೆಳೆಯಲಾಗುತ್ತದೆ ಮತ್ತು 2.5 ಲಕ್ಷ ಕುಟುಂಬಗಳು ಈ ಅಡಕೆ ಬೆಳೆಯನ್ನು ಕೃಷಿಯನ್ನಾಗಿ ರೂಪಿಸಿಕೊಂಡಿದೆ. ವಾರ್ಷಿಕ ಸುಮಾರು 2.28 ಮೆಟ್ರಿಕ್ ಟನ್ ಅಡಕೆಯನ್ನು ರಾಜ್ಯದಲ್ಲಿ ಉತ್ಪಾದನೆ ಮಾಡಲಾಗುತ್ತದೆ. ಈ 2.58 ಲಕ್ಷ ಮೆಟ್ರಿಕ್ ಟನ್ ಅಡಕೆಯಲ್ಲಿ ಪಾನ್ ಪರಾಗ್ ಮತ್ತ ಗುಟ್ಕಾ ನಿಷೇಧ ಮಾಡಿದ್ದರಿಂದ ಶೇಕಡ 45ರಷ್ಟು ಅಡಿಕೆಗೆ ಬದಲಿ ಮಾರುಕಟ್ಟೆ ಒದಗಿಸಲು ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಶಿವಮೊಗ್ಗದ APMC ಯಲ್ಲಿ ಒಂದು ಸಭೆ ನಡೆಯುತ್ತದೆ. ಶಿವಮೊಗ್ಗ APMC ಬಂದರಲ್ಲೇ ವಾರ್ಷಿಕ 6 ರಿಂದ 6.5 ಲಕ್ಷ ಚೀಲ ಅಡಿಕೆ ಮಾರಾಟವಾಗುತ್ತದೆ. ಸುಮಾರು 700 ಕೋಟಿ ರೂಪಾಯಿಗಳು ಅಡಿಕೆ ವ್ಯವಹಾರವಾಗುತ್ತದೆ. ಈಗ ಆ ಮಂಡಿಯಲ್ಲಿರುವಂತಹ ಎಲ್ಲಾ ವ್ಯಾಪರಸ್ಥರು ಒಟ್ಟಾಗಿ ಮುಂದೆ ನಮ್ಮ ಬದುಕಿಗೆ ದಾರಿ ತೋರಿಸಿ ಎನ್ನುವಂತಹ ವಾದವನ್ನು ಮಂಡಿಸುತ್ತಿದ್ದಾರೆ. ಅದಕ್ಕೆ ರಾಜ್ಯ ಸರ್ಕಾರದ ಹತ್ತಿರ ಉತ್ತರ ಇದೆಯೇ ಎಂದು ಕೇಳಿದರೆ ಅವರ ಹತ್ತಿರ ಉತ್ತರ ಇಲ್ಲ. ಎರಡು ಕೋಟಿ ಕುಟುಂಬಗಳು ಈ ಅಡಿಕೆಯಿಂದ ಬರುವ ಬೇರೆ ಬೇರೆ ಉತ್ಪಾದನೆಗಳನ್ನು, ವ್ಯವಸ್ಥೆಗಳನ್ನು ನಂಬಿಕೊಂಡು ಬದುಕುತ್ತಿವೆ ಎನ್ನುವಂತಹ ವಾದ ಇದೆ. ಈ ಬೆಳೆಗಾರರ ಸ್ಥಿತಿಯನ್ನು ತಾವು ದಯಮಾಡಿ ಗಮನಿಸಬೇಕು. ಪುತ್ತೂರಿನಲ್ಲಿ, ಸುಳ್ಯಾದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಅಡಕೆ ಬೆಳೆದಂತಹ ರೈತರ ಸಾಲದ ಹೊರೆ

ಹೆಚ್ಚಾಗಿ ಅವರು ಚಳವಳಿಯನ್ನು ಮಾಡುವುದಕ್ಕೆ ಇಳಿದಿದ್ದಾರೆ. ತಾವು ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿಯನ್ನು ಮತ್ತು ಸಾಲವನ್ನು ಮನ್ನಾ ಮಾಡಿ ಎಂದು ಕೇಳುತ್ತಿದ್ದಾರೆ. ಅವರ ಬೇಡಿಕೆಗೆ ಇವತ್ತು ಗಾಯದ ಮೇಲೆ ಬರೆ ಎಳೆದಂತಹ ಅನುಭವವಾಗುತ್ತಿದೆ. ಒಂದು ಕಡೆ ಅಡಿಕೆ ಬೆಳೆಗಾರರು ಸಾಲವನ್ನು ಮನ್ನಾ ಮಾಡಿ ಎಂದು ಕೂಗುತ್ತಿದ್ದರೆ, ನಮಗೆ ನೆರವು ಕೊಡಿ ಎಂದು ಮಾರಾಟಗಾರರು ಆಸೆಗಣ್ಣಿನಿಂದ ಹೊಸ ಸರ್ಕಾರ ನಮಗೇನಾದರು ಒಂದು package ನ್ನು ಘೋಷಣೆ ಮಾಡಬಹುದೆಂದು ಯೋಚಿಸುತ್ತಿದ್ದರೆ ಸರ್ಕಾರ ಅದರ ಬಗ್ಗೆ ಗಮನವನ್ನು ಕೊಡುತ್ತಿಲ್ಲ. ಬದಲಾಗಿ ಗುಟ್ಕಾ ನಿಷೇಧ ಮಾಡುವುದರ ಮೂಲಕ ಅಡಕೆ ಬೆಳೆಗಾರರನ್ನು ಮತ್ತೊಂದು ಅತಂತ್ರ ಸ್ಥಿತಿಗೆ ತರುವಂತಹ ವಾತಾವರಣ ಇವತ್ತಿನ ದಿವಸ ನಿರ್ಮಾಣವಾಗಿದೆ. ಆದ್ದರಿಂದ ನಾನು ತಮ್ಮ ಮುಖಾಂತರ ವಿನಂತಿ ಮಾಡುವುದೇನೆಂದರೆ, ಸರ್ಕಾರ ಗುಟ್ಕಾ ನಿಷೇಧ ಮಾಡುತ್ತದೆಂದು ಗೊತ್ತಾದಾಗ ನಾವು ಯೋಚನೆ ಮಾಡಿದ್ದು ಏನೆಂದರೆ, ಈ ಸರ್ಕಾರ ಬಹುಶಃ 2.5 ಲಕ್ಷ ಅಡಿಕೆ ಬೆಳೆಯುವಂತಹ ರೈತರ ಸಾಲವನ್ನು ಪೂರ್ಣ ಮನ್ನಾ ಮಾಡುತ್ತದೆ ಮತ್ತು ಶೂನ್ಯ ಬಡ್ಡಿ ದರದಲ್ಲಿ ಅವರಿಗೆ ಹೊಸದಾಗಿ ಸಾಲವನ್ನು ಕೊಡುವುದರ ಮೂಲಕ ಎಲ್ಲಾ ಅಡಕೆ ಬೆಳೆಗಾರರ ಸಮಸ್ಯೆಯನ್ನು ಪರಿಹಾರ ಮಾಡಿ ಗುಟ್ಕಾ ನಿಷೇಧ ಮಾಡುವುದರ ಮೂಲಕ ಒಂದು ಹೊಸ ಕ್ರಾಂತಿಕಾರಿ ಹೆಜ್ಜೆಯನ್ನು ಮುಂದಿಡುತ್ತದೆಂದು ಯೋಚನೆ ಮಾಡಿದ್ದೆವು. ಆದರೆ ಸರ್ಕಾರ ಬರೀ ಗುಟ್ಕಾ ನಿಷೇಧವನ್ನು ಮಾಡಿತು. ಅಡಕೆ ಬೆಳೆಗಾರರು ಬೆಳೆಯುವಂತಹ ಶೇಕಡ 50 ರಷ್ಟು ಅಡಿಕೆಗೆ ಬೇಡಿಕೆ ಇಲ್ಲದೇ ಇರುವಂತಹ ವಾತಾವರಣವನ್ನು ನಿರ್ಮಾಣ ಮಾಡಲಾಯಿತು. 'ನಾನು ನನ್ನ ಕೆಲಸವನ್ನು ಮಾಡಿದ್ದೇನೆ. ವಿರೋಧ ಪಕ್ಷದವರು ಇದೊಂದು ವಿಷಯವನ್ನು ತೆಗೆದುಕೊಂಡು ರಾಜಕಾರಣವನ್ನು ಮಾಡುತ್ತಿದ್ದಾರೆಂದು ಮಾನ್ಯ ಆರೋಗ್ಯ ಮಂತ್ರಿಗಳು ಹೇಳುತ್ತಿದ್ದಾರೆ. 'ಗುಟ್ಕಾ ನಿಷೇಧ ಮಾಡದೇ ಬೇರೆ ದಾರಿ ಇಲ್ಲ. ಹಾಗಾಗಿ ನಾವು ಗುಟ್ಕಾ ನಿಷೇಧ ಮಾಡುತ್ತಿದ್ದೇವೆ. ಎಂತಹ ಪರಿಸ್ಥಿತಿಯನ್ನು ಕೂಡ ನಾವು ಎದುರಿಸುವುದಕ್ಕೆ ಸಿದ್ದರಿದ್ದೇವೆ' ಎನ್ನುವಂತಹ ಮಾತುಗಳನ್ನು ಹೇಳಿದ್ದಾರೆ. ಗುಟ್ಕಾ ನಿಷೇಧದ

ಬಗ್ಗೆ ಅವರು ಆನೇಕ ಕಾರಣಗಳನ್ನು ಕೊಡುತ್ತಾರೆ. ನಾನು ಅದರ ಬಗ್ಗೆ ಉಲ್ಲೇಖ ಮಾಡುವುದಿಲ್ಲ ಅದರ ಜೊತೆಯಲ್ಲಿ ಪತ್ರಿಕೆಯಲ್ಲಿ ಹೇಳಿಕೆಯನ್ನು ಸಹ ಕೊಟ್ಟಿದ್ದಾರೆ. ದಿನಾಂಕ 1.6.2013ರ " ಸಂಯುಕ್ತ ಕರ್ನಾಟಕ" ಪತ್ರಿಕೆಯ ಸಂಪಾದಕೀಯದಲ್ಲಿ;

> " ಗುಟ್ಕಾ ನಿಷೇಧ ಇದೊಂದು ರೀತಿಯಲ್ಲಿ ನಿರ್ಧಾರ. ನಿಷೇಧ ಮಾಡುವುದು ಬಿಡುವುದು ಸರ್ಕಾರದ ವಿವೇಚನೆಗೆ ಬಿಟ್ಟಿದ್ದು ಎನ್ನುವುದು ನಿರ್ವಿವಾದ. ಆದರೆ ತರಾತುರಿ ನಿರ್ಧಾರ ಏಕೆ? ಸ್ವಲ್ಪ ಸಮಯ ತಡೆದಕೊಂಡಿದ್ದರೆ ಸರ್ಕಾರದ ಗಂಟು ಏನು ಹೋಗುತ್ತಿತ್ತು? ಹಠಾತ್ ನಿರ್ಧಾರದಿಂದ ಯಾವ ಪುರುಷಾರ್ಥ ಸಾಧನೆಯಾಗುತ್ತದೆ? ಸರ್ಕಾರ ಈ ವಿಚಾರದಲ್ಲಿ ಶೂನ್ಯವಾಗಿ ವರ್ತಿಸಿದೆಯೇ? ಇಂತಹ ಹತ್ತಾರು ಪ್ರಶ್ನೆಗಳನ್ನು ಕೇಳುವುದು ಸಹಜ. ಆರೋಗ್ಯ ಇಲಾಖೆ ಸಚಿವರಾದ ಶ್ರೀ ಯು.ಟಿ. ಖಾದರ್‌ರವರು ಗುಟ್ಕಾ ನಿಷೇಧದ ವಿಚಾರದಲ್ಲಿ ಅತೀ ಅವಸರದಲ್ಲಿ ಪ್ರಸ್ತಾವನೆಯನ್ನು ಪಡೆದುಕೊಂಡು ತರಾತುರಿಯಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸುವುದು ಕೂಡ ಹಲವು ಅನುಮಾನಗಳಿಗೆ ಎಡೆ ಮಾಡಿದೆ. ಅಂತೂ ಮಾನ್ಯ ಮುಖ್ಯಮಂತ್ರಿಗಳು ಮತ್ತು ಆರೋಗ್ಯ ಮಂತ್ರಿಗಳು ತೆಗೆದುಕೊಂಡಂತಹ ತೀರ್ಮಾನಕ್ಕೆ ಸಚಿವ ಸಂಪುಟದ ಸರ್ವಾನುಮತದ ತೀರ್ಮಾನ ಇರಲಿಲ್ಲ ಎಂಬ ಸತ್ಯ ಗುಟ್ಟಾಗಿ ಇರುವುದಿಲ್ಲ. ಗುರುವಾರದಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಕೆಲವು ಸಚಿವರು ಇಂತಹ ಅವಸರದ ತೀರ್ಮಾನದ ಬಗ್ಗೆ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದಾರೆಂದು ಹೇಳಲಾಗುತ್ತಿದೆ. ಅಡಿಕೆ ಬೆಳೆಗಾರರು ಅಧಿಕ ಸಂಖ್ಯೆಯಲ್ಲಿರುವ ಕ್ಷೇತ್ರದಲ್ಲಿ ಸ್ಪರ್ಧಿಸುವ ಸಚಿವರು ಆತುರದ ನಿರ್ಧಾರದ ಬದಲು ಅಲ್ಪ ಸಮಯವಾದರು ಕಾಯ್ದು ನೋಡಬಹುದಿತ್ತು ಎನ್ನುವುದರಲ್ಲಿ ವ್ಯಕ್ತಪಡಿಸಿದ್ದಾರೆ. ಅವರೆಲ್ಲರೂ ವಾಸ್ತವವನ್ನು ಅರಿತು ಮಾತನಾಡಿದ್ದಾರೆ

ಎನ್ನುವುದರಲ್ಲಿ ಅನುಮಾನ ಇಲ್ಲ. ಆದರೆ, ಗುಟ್ಕಾ ನಿಷೇಧದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ತೀರ್ಮಾನಕ್ಕೆ ಒಳಗಾಗಿ ಅಂಟಿಕೊಂಡ ಹಿನ್ನೆಲೆಯಲ್ಲಿ ಈ ಸಚಿವರುಗಳ ವಿರೋಧ ಅರ್ಥಹೀನವಾದುದ್ದು ನಿರೀಕ್ಷಿತ. ಅಷ್ಟೇ ಅಲ್ಲ. ಆರೋಗ್ಯ ಸಚಿವರಾದ ಶ್ರೀ ಯು.ಟಿ. ಖಾದರ್‌ರವರು ಮಾನ್ಯ ಮುಖ್ಯಮಂತ್ರಿಗಳ ನಿರ್ಧಾರವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದರ ಹಿಂದೆ ಗುಟ್ಕಾ ವಿರೋಧ ಲಾಬಿಯ ಕೈವಾಡ ಇದೆ ಎಂಬ ಅನುಮಾನು ಬರುವಂತಾಗಿದೆ. ಈ ವಿಷಯದಲ್ಲಿ ಸಿಗರೇಟ್ ಲಾಬಿ ಬಹಳ ಪ್ರಭಾವ ಬೀರಿದೆ ಎಂಬ ಆತಂಕ ಇದೆ. ಅಡಿಕೆ ಬೆಳೆಗಾರರ ಗುಮ್ಮಾನಿಯಲ್ಲಿ ಹುರುಳಿಲ್ಲ ಎನ್ನಲಾಗುವುದು. ಗುಟ್ಕಾ ನಿಷೇಧದಿಂದ ರಾಜ್ಯದ ಅಡಕೆ ಬೆಳೆಗಾರರ ಮೇಲೆ ಯಾವುದೇ ಪ್ರತಿಕೂಲವಾಗುವುದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಆರೋಗ್ಯ ಸಚಿವರು ಮೊಂಡುವಾದವನ್ನು ಮಾಡುತ್ತಿದ್ದಾರೆಂದರೆ ತಪ್ಪಾಗುವುದಿಲ್ಲ. ಏನೇ ಇರಲಿ ಪ್ರಸ್ತುತ ಸನ್ನಿವೇಶದಲ್ಲಿ ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ಪರ್ಯಾಯ ಮಾರ್ಗೋಪಾಯವನ್ನು ಕಂಡು ಹಿಡಿಯಬೇಕು." ಎನ್ನುವುದು ಪ್ರತಿಕೆಯವರ ವಾದವಾಗಿದೆ.

ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಶ್ರೀ ಯಂ.ಸಿ. ನಾಣಯ್ಯನವರು ಸರ್ಕಾರ ಇನ್ನು ಹನಿಮೂನ್ ವ್ಯವಸ್ಥೆಯಲ್ಲಿದೆ ಎಂದು ಹೇಳಿದರು. ನಮ್ಮಲ್ಲಿ ಒಂದು ವಿಶೇಷ ಇದೆ. ಹನಿಮೂನ್ ಆಗುವುದಕ್ಕೆ ಮುಂಚೆ ಮದುವೆ ಮಾಡುತ್ತಾರೆ. ಮದುವೆಗೆ ಮುಂಚೆ ನಿಶ್ಚಿತಾರ್ಥ ಮಾಡುತ್ತಾರೆ. ನಿಶ್ಚಿತಾರ್ಥ ಸಮಯದಲ್ಲಿ ಚಿಗುರು ಎಲೆ ಮತ್ತು ಕೆಂಪು ಅಡಿಕೆಯನ್ನು ಕೊಡುವಂತಹ ಪದ್ಧತಿ ಇದೆ. ಆ ರೀತಿಯಾಗಿ ಕೊಡುವಾಗ ನಮ್ಮ ಹೆಣ್ಣನ್ನು ಯಾವುದೇ ಕಾರಣಕ್ಕೂ ಗಂಡಿನ ಕಡೆಯವರು ಕೈ ಬಿಡಬಾರದು ಎನ್ನುವಂತಹ ಮಾತನ್ನು ಹೇಳುತ್ತಾರೆ. ಆ ಭರವಸೆಯ ಮೇಲೆ ತಾಂಬೂಲಗಳ ವಿಲೇವಾಗುತ್ತದೆ. ಮೊನ್ನೆ ನಡೆದಂತಹ ಚುನಾವಣೆಯಲ್ಲಿ

ಕರ್ನಾಟಕ ರಾಜ್ಯದ 7.5 ಕೋಟಿ ರೈತಾಪಿ ವರ್ಗದವರು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ರೈತರ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಿದೆವು. ಬೇರೆ ಬೇರೆ ಯೋಜನೆಗಳನ್ನು ತೆಗೆದುಕೊಂಡು ಬಂದರೂ ಕೂಡ ಅವರಿಗೆ ಹೊಸ ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರದ ಬಗ್ಗೆ ಆಸೆ ಮತ್ತು ವಿಶ್ವಾಸ ಇತ್ತು. ನಮಗೇನಾದರು ಜನಪರ ಕೆಲಸಗಳನ್ನು ಮಾಡುತ್ತಾರೆನೋ ಎನ್ನುವಂತಹ ನಂಬಿಕೆ ಇತ್ತು. ಆ ನಂಬಿಕೆಯ ಆಧಾರದ ಮೇಲೆ ನಮ್ಮ ಪಕ್ಷದ ಸರ್ಕಾರ ಇದ್ದಾಗ ನಾವು ಅಷ್ಟೊಂದು ಪ್ರಗತಿಪರ ಕೆಲಸವನ್ನು ಮಾಡಿದರು ಕೂಡ ಕರ್ನಾಟಕ ರಾಜ್ಯದ ವರ್ಗದವರು ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟವಾದಂತಹ ಬಹುಮತವನ್ನು ನೀಡಿದರು. ಪರಿಣಾಮ ಆ ರೈತಾಪಿ ವರ್ಗದವರನ್ನು ಕಾಂಗ್ರೆಸ್ ಪಕ್ಷದ ಸರ್ಕಾರದವರು ಕೈಬಿಟ್ಟಿರಲ್ಲವೇ? ನಿಶ್ಚಿತಾರ್ಥವನ್ನು ಮುರಿದೇ ಬಿಟ್ಟರು, ಅವರನ್ನು ಅನಾಥರನ್ನಾಗಿ ಮಾಡಿಬಿಟ್ಟರು. ನಮ್ಮ ಜಿಲ್ಲೆಯವರಾಗಿ ಮಂತ್ರಿಗಳಾಗಿರುವಂತಹ ಶ್ರೀ ವಿನಯ್‌ಕುಮಾರ್ ಸೊರಕೆಯವರು ಗುಟ್ಕಾ ನಿಷೇಧದ ಬಗ್ಗೆ ಏನು ಮಾತನಾಡುತ್ತಿಲ್ಲ. ನಾವು ರೈತರ ಮೇಲೆ ಆಣೆ ಮಾಡಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದು ಹೌದು. ರೈತರ ಪರವಾಗಿ ಕೆಲಸ ಮಾಡಿದ್ದೆವು. 16 ಲಕ್ಷ ರೈತರ ಸಾಲವನ್ನು ಮನ್ನಾ ಕೂಡ ಮಾಡಿದ್ದೆವು.

**ಶ್ರೀ ವಿನಯ್‌ಕುಮಾರ್ ಸೊರಕೆ(ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೆ, ಅದೇ ರೈತರ ಮೇಲೆ ಬಿಜೆಪಿ ನೇತೃತ್ವದ ಸರ್ಕಾರ ಗುಂಡಿನ ಪ್ರಯೋಗವನ್ನು ಮಾಡಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ನಾನು ಮಾತನಾಡುವಾಗ ಯಾರು ಮಧ್ಯೆ ಪ್ರವೇಶ ಮಾಡಬಾರದು. ಮಧ್ಯೆ ಪ್ರವೇಶ ಮಾಡುವುದಿಲ್ಲವೆಂದು ಆಡಳಿತ ಪಕ್ಷದ ಕಡೆಯಿಂದ ಹೇಳಿದ್ದಾರೆ. ಅವರು ಹೇಳಿದ ಮಾತನ್ನು ಉಳಿಸಿಕೊಳ್ಳಬೇಕೆನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಅನುಕೂಲವಾಗಲಿ ಎಂದು ಕೆಲವೊಂದು ಸಲ ಮಧ್ಯೆ ಪ್ರವೇಶ ಮಾಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ ನನಗೆ ಅನುಕೂಲವಾಗುವುದು ಬೇಡ. ನನಗೆ ಏನೆಂದರೆ, ಆ ಅಡಿಕೆ ಬೆಳೆಗಾರರು ಸರ್ಕಾರದ ಮೇಲೆ ವಿಶ್ವಾಸವನ್ನು ಇಟ್ಟಿದ್ದರು, ಆದರೆ ಇವತ್ತು ಅಡಿಕೆ ಬೆಳೆಗಾರಿಗೆ ಕಷ್ಟವಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ಮಾತು ಹೇಳದೇ ಮಾಡುವವನು ಉತ್ತಮ. ಹೇಳಿ ಮಾಡುವವನು ಮಾಧ್ಯಮ. ಹೇಳಿ ಮಾಡದೇ ಇರುವವನು ಅದಮ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರ ಮೇಲೆ ನಾವು ವಿಶ್ವಾಸವನ್ನು ಇಟ್ಟಿದ್ದೇವೆ. ಆದರೆ ನಂಬಿಕೆಗೆ ದ್ರೋಹವನ್ನು ಮಾಡಿದವರು ಯಾರು?

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದ ಸರ್ಕಾರ ಹೇಳಿದೆ ಗುಟ್ಕಾ ನಿಷೇಧ ಮಾಡಿಬಿಟ್ಟಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಆರು ಕೋಟಿ ಹನ್ನೊಂದು ಲಕ್ಷ ಜನರ ಆರೋಗ್ಯದ ಬಗ್ಗೆ ಚಿಂತನೆಯನ್ನು ಮಾಡಿ, ಹೇಳದೇ ಗುಟ್ಕಾ ನಿಷೇಧ ಮಾಡಿದ್ದೇವೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದನ್ನು ಮಾಡಿದ್ದರಿಂದ ರೈತರ ಗತಿ ಏನಾಯಿತ್ತೆಂದು ಹೇಳಬೇಕು.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೆ, ಅಡಿಕೆ ಬೆಳೆಗಾರರ ಬಗ್ಗೆ ಯಾವ ಕ್ರಮವನ್ನು ಕೈಗೊಂಡಿದ್ದೇವೆಂದು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳುತ್ತೇವೆ. ರೈತರನ್ನು ಈ ಸಂಕಷ್ಟದಿಂದ ಪಾರು ಮಾಡುವುದಕ್ಕೆ ಏನೇನು ಕ್ರಮವನ್ನು ಕೈಗೊಂಡಿದ್ದೇವೆ ಎನ್ನುವುದರ ಬಗ್ಗೆ ಸುದೀರ್ಘವಾದಂತಹ ಉತ್ತರವನ್ನು ವಿರೋಧ ಪಕ್ಷದವರ ಮನಸ್ಸಿಗೆ ತೃಪ್ತಿಯಾಗಿ ಅವರೇ ಸರ್ಕಾರದವರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ ಶಹಭಾಸ್ ಎನ್ನುವಂತಹ ರೀತಿಯಲ್ಲಿ ಉತ್ತರವನ್ನು ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಗುಟ್ಕಾ ನಿಷೇಧವನ್ನು ಮಾಡಿರುವುದರ ಬಗ್ಗೆ ನಾವು ವಾದ ಮಾಡುತ್ತಿಲ್ಲ. ಗುಟ್ಕಾವನ್ನು ಪೂರ್ಣ ನಿಷೇಧ ಮಾಡಿದ್ದಕ್ಕೆ ಸ್ವಾಗತ ಮಾಡಿದಂತಹ ಏಕೈಕ ರಾಜಕೀಯ ಪಕ್ಷ ನಮ್ಮದು. ನಾವು ಏನು ಕೇಳುತ್ತಿರುವುಂದರೆ ಗುಟ್ಕಾವನ್ನು ತಯಾರು ಮಾಡುವುದಕ್ಕೆ ಪೂರೈಕೆ ಮಾಡುತ್ತಿರುವಂತಹ ಅಡಕೆಗೆ ಬದಲಿ ಮಾರುಕಟ್ಟೆ ವ್ಯವಸ್ಥೆಯನ್ನು ಸರ್ಕಾರ ಏನು ಮಾಡಿದೆ?

**ಶ್ರೀ ವಿನಯಕುಮಾರ್ ಸೊರಕೆ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ವಿ. ಸದಾನಂದಗೌಡರು ಅಡಿಕೆ ಬೆಳೆಗಾರರು. ನಾನು ಕೂಡ ಅಡಿಕೆ ಕೃಷಿಕ. ಒಮ್ಮೆ ಅಡಕೆ ಮರವನ್ನು ಕಡಿಯುವಂತಹ ಸಂದರ್ಭದಲ್ಲಿ ಶ್ರೀ ವಾರಣಾಸಿ ಸುಬ್ಬರಾಯ ದತ್ತರವರ ನೇತೃತ್ವದಲ್ಲಿ CAMPCO ಸಹಕಾರಿ ಸಂಸ್ಥೆಯನ್ನು ನಿರ್ಮಾಣ ಮಾಡಿದರು. ಅದು ಇಡೀ ಏಷ್ಯಾ ಖಂಡದಲ್ಲಿಯೇ ಪ್ರಥಮ ಸಹಕಾರಿ ಸಂಸ್ಥೆಯಾಗಿ ಮುಂದೆ ಬಂತು. ಅಡಿಕೆ ಬೆಳೆಗಾರರ ರಕ್ಷಣೆಯನ್ನು ಮಾಡುವುದಕ್ಕೋಸ್ಕರವಾಗಿ ಅದನ್ನು ಸ್ಥಾಪನೆ ಮಾಡುವಂತಹ ಕೆಲಸ ಕಾರ್ಯವಾಯಿತು. ಆದರೆ ಇವತ್ತು ಒಂದು ರೀತಿಯಲ್ಲಿ ಆ CAMPCO ಸಂಸ್ಥೆ ಅಡಿಕೆ ಬೆಳೆಗಾರರ ರಕ್ಷಣೆ ಎಷ್ಟರ ಮಟ್ಟಿಗೆ ಮಾಡುತ್ತಿದೆ? ಇವತ್ತು ಒಂದು ಕೆ.ಜಿ. ಅಡಿಕೆಗೆ 35 ರೂಪಾಯಿಗಳ ಬೆಲೆ ಬಂದಾಗ ಆ ಸಮಯದಲ್ಲಿ ಯಾವುದೇ ರೀತಿಯ ಸಹಕಾರಕ್ಕೆ CAMPCO ಸಂಸ್ಥೆ ಮುಂದೆ ಬರಲಿಲ್ಲ. ಇಂತಹ ಸಂದರ್ಭದಲ್ಲಿ ಅದೊಂದು ವ್ಯಾಪಾರಿ ಸಂಸ್ಥೆಯಾಗಿ ಬದಲಾದ ಸಂದರ್ಭಗಳನ್ನು ನಾವು ಕಂಡೆವು. ಇವತ್ತು ಗುಟ್ಕಾ ನಿಷೇಧ ಮಾಡಿದ್ದರಿಂದ ಅಡಿಕೆ ಬೆಳೆಗಾರರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ಈಗ ಅಡಿಕೆ ಮಾರುಕಟ್ಟೆ ಬಹಳ ಸೂಕ್ಷ್ಮವಾಗಿರುವಂಥದ್ದು ಆಗಿದೆ. ಕೆಲವು ಸಂದರ್ಭದಲ್ಲಿ ಆ ರೀತಿಯಾದಂತಹ statement ಬರುವಾಗ ಅಡಿಕೆ ಬೆಲೆ ಏನಾದರೂ ಶಾಶ್ವತವಾಗಿ ಉಳಿದಿದ್ದರೆ, ಇವತ್ತು ಏನು wild areca ನಮ್ಮ ದೇಶಕ್ಕೆ ಬರುತ್ತದೆ. ಅದಕ್ಕೆ 110% ತೆರಿಗೆಯನ್ನು ಕೇಂದ್ರ ಸರ್ಕಾರ ಹಾಕಿದ ಕಾರಣ ನಮ್ಮ ಅಡಕೆಗೆ ಬೆಲೆ ಜಾಸ್ತಿಯಾಗುವುದಕ್ಕೆ ಅವಕಾಶವಾಗಿದೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಶ್ರೀ ವಿನಯಕುಮಾರ್ ಸೊರಕೆಯವರು ನನ್ನ ಆತ್ಮೀಯ ಸ್ನೇಹಿತರು. ಅವರು CAMPCO ಸಂಸ್ಥೆ ಅಡಕೆ ಬೆಳೆಗಾರರ ನೆರವಿಗೆ ಬರಲಿಲ್ಲ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಖಂಡಿತ ಸರಿಯಾದುದ್ದಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಲ್ಲೆ. ನಾನು CAMPCO ಸಂಸ್ಥೆಯ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಇಂತಹ ನಾನು ಆಗಲೇ ಉಲ್ಲೇಖ ಮಾಡಿದ್ದೇನೆ. ಮತ್ತೆ ಅದನ್ನು ನಾನು ನನ್ನ record set right ಮಾಡುವುದಕ್ಕೆ ಮಾತ್ರ ಹೇಳುತ್ತಿದ್ದೇನೆ. ಸಮಸ್ಯೆಗಳು ಬಂದಾಗಲೆಲ್ಲ. ಇಡೀ ಅಡಕೆ ಬೆಳೆಗಾರರ ನೇತೃತ್ವದಲ್ಲಿ ಬರೀ ದೊಡ್ಡ ಹೋರಾಟ ನಡೆಯಿತು. ಮಾನ್ಯ ಸಭಾಪತಿಯವರೇ ನಿಮಗೂ ಕೂಡ ಅದು ಗೊತ್ತಿದೆ ಎಂದು ನಾನು ಭಾವಿಸುತ್ತಿದ್ದೇನೆ. ನಾನು ಸುಮಾರು 50,000 ಜನರ ಒಂದು ದೊಡ್ಡ ರ್‍ಯಾಲಿಯನ್ನು ತೆಗೆದುಕೊಂಡು ಮೂರು ದಿವಸಗಳ ಕಾಲ ಪಾದಯಾತ್ರೆ ಮಾಡುವಂತಹ ಕಾರ್ಯವನ್ನು ಮಾಡಿದ್ದೇನೆ. ನಿಜವಾಗಿಯೂ ನಾನು ಮತ್ತೆ ಹೇಳುವುದೇನೆಂದರೆ, ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ತಕ್ಷಣ ಇದರ ಗಂಭೀರತೆಯನ್ನು ಅರಿತುಕೊಂಡು ಸಭೆ ಕರೆದಿದ್ದರು. ಒಳ್ಳೆಯದನ್ನು ನಾವು ಒಪ್ಪಿಕೊಳ್ಳಲೇಬೇಕು. ಆ ತಕ್ಷಣ ನಾವೆಲ್ಲರೂ ಸರ್ಕಾರದ ಮೇಲೆ ಒತ್ತಡವನ್ನು ಹಾಕಿದ್ದೆವು. ಒತ್ತಡ ಎಂದರೆ, ಅಡಕೆ ಬೆಳೆಗಾರರ ಹೋರಾಟದಿಂದ ಆಯಿತು.

**ಶ್ರೀ ವಿನಯ್‌ಕುಮಾರ್ ಸೊರಕೆ:–** ಮಾನ್ಯ ಸಭಾಪತಿಯವರೇ, ಶಾಸಕರುಗಳು ಮತ್ತು ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳು ಕೂಡ ಅದರಲ್ಲಿ ಭಾಗಿಗಳಾಗಿದ್ದರು.

**ಶ್ರೀ ಡಿ.ವಿ ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಶಾಸಕರುಗಳು ಮತ್ತು ಲೋಕಸಭೆಯ ಸದಸ್ಯರು ಆ ರ್‍ಯಾಲಿಯಲ್ಲಿ ಭಾಗವಹಿಸಿರಲಿಲ್ಲ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ. ಕೃಷ್ಣರವರು meeting ಕರೆದಾಗ ಅವರುಗಳನ್ನು ಕರೆದಿದ್ದರು ಅಷ್ಟೆ. ಆದರೆ ಅದರ ನೇತೃತ್ವವನ್ನು CAMPCO ವಹಿಸಿಕೊಂಡಿತ್ತು. CAMPCO ಇದನ್ನು

ದೆಹಲಿಗೆ ತೆಗೆದುಕೊಂಡು ಹೋಗಿ, ನಾನು ಈಗ ಸರ್ಕಾರದ ಆದೇಶವನ್ನು ತೆಗೆದುಕೊಂಡು ಬಂದಿದ್ದೇನೆ. ಬೆಳಿಗ್ಗೆ ನಾನು ಹೇಳಿದ ಮಾತುಗಳಿಗೆ ಅಧಿಕೃತವಾದಂತಹ ದಾಖಲೆಗಳನ್ನು ಒದಗಿಸುತ್ತಿದ್ದೇನೆ. ಅಡಿಕೆಗೆ 35% ಆಮದು ಶುಲ್ಕ ಇತ್ತು. ಕಳಪೆ ಅಡಕೆಯು ನಮ್ಮ ದೇಶಕ್ಕೆ ಬೇರೆ ಬೇರೆ ದೇಶಗಳಿಂದ ಬರುತ್ತಿತ್ತು. SAARC country ಯ agreement ಅದು ಒಂದು ರೀತಿಯಲ್ಲಿ ಪರೋಕ್ಷವಾಗಿ mutual trade transactions ಗೆ ಪೂರಕವಾಗಿ ಕೆಲಸ ಮಾಡುತ್ತಿತ್ತು. ಇಂತಹ ಸಂದರ್ಭದಲ್ಲಿ ಇದನ್ನು ನಿಲ್ಲಿಸಬೇಕೆಂದು ಹೇಳಿದ್ದಕ್ಕೆ 35% ಇದ್ದಂತಹ ತೆರಿಗೆಯನ್ನು 108%ಗೆ ಅಂದಿನ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಹೆಚ್ಚಿಸಿ ಆಮದನ್ನು ನಿಲ್ಲಿಸುವಂತಹ ಪ್ರಯತ್ನವನ್ನು ಮಾಡಿತು. ಇವತ್ತು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಇವತ್ತು SAARC agreement ಪ್ರಕಾರ ನಾವು 108% ಆಮದು ಶುಲ್ಕವನ್ನು ಹಾಕಿದ್ದರೂ ಕೂಡ ನೆರೆಯ ಬಾಂಗ್ಲಾ ದೇಶ ಮತ್ತು ಮಲೇಷಿಯಾ ದೇಶಗಳಿಂದ ನಮ್ಮ ದೇಶಕ್ಕೆ ಕಳಪೆ ಅಡಕೆ ಬರುತ್ತಿದೆ. CAMPCO ದವರು ನಿರಂತರವಾಗಿ trade organizations ಜೊತೆಯಲ್ಲಿ ಸಂಪರ್ಕದಲ್ಲಿ ಇದ್ದುಕೊಂಡು ಈ ಆಮದನ್ನು ನಿಲ್ಲಿಸಬೇಕು. ಕಳಪೆ ಅಡಕೆ ನಮ್ಮ ದೇಶಕ್ಕೆ ಬರಬಾರದು. ನಮ್ಮ C.F.T.R.I. ಮುಖಾಂತರ . . .

**ಶ್ರೀ ವಿನಯಕುಮಾರ ಸೊರಕೆ:–** ಮಾನ್ಯ ಸಭಾಪತಿಯವರೆ, ಆ CAMPCO ಸಂಸ್ಥೆಯವರು ಎಷ್ಟು ಅಡಿಕೆಯನ್ನು ಖರೀದಿ ಮಾಡಬಹುದು?

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, CAMPCO ಸಂಸ್ಥೆ purchase ಮಾಡುವುದಿಲ್ಲ. ಅದು ನಮ್ಮ ರೈತರ ಪರವಾಗಿ ನಿಂತಿದೆ ಎಂದು ಹೇಳುವಂಥದ್ದು. ನಮ್ಮ ರಾಜ್ಯದಲ್ಲಿ ಬೆಳೆದಂತಹ ಅಡಕೆಯಲ್ಲಿ CAMPCO ದವರು 10% ನಿಂದ 20% ವರೆಗೆ ಖರೀದಿ ಮಾಡಬಹುದು. ಆದರೆ ಅದು ರೈತರ ಪರವಾಗಿರುವಂತಹ ಒಂದು ಸಂಸ್ಥೆ. ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ. It is a multi- state co-operative society. ಕೇರಳ

ರಾಜ್ಯ ಮತ್ತು ಕರ್ನಾಟಕ ರಾಜ್ಯದ ಜಂಟಿ ಸಹಯೋಗದೊಂದಿಗೆ ನಡೆಯುತ್ತಿರುವಂಥದ್ದು. ಕೇರಳ ರಾಜ್ಯದಲ್ಲಿಯೂ ಕೂಡ ಕಾಂಗ್ರೆಸ್ ನೇತೃತ್ವದ ಸರ್ಕಾರ ಇದೆ. ಹಿಂದೆ ಬೇರೊಂದು ಪಕ್ಷದ ಸರ್ಕಾರ ಅಧಿಕಾರದಲ್ಲಿತ್ತು. ಆದರೆ CAMPCO ಸಂಸ್ಥೆ ಅಡಕೆ ಬೆಳೆಗಾರರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಎಲ್ಲಾ ಸಂದರ್ಭದಲ್ಲಿಯೂ ಕೂಡ ಪ್ರಯತ್ನಪಟ್ಟಿದೆ. ಎರಡನೆಯದಾಗಿ, ಆ ಸಂದರ್ಭದಲ್ಲಿ ಅಡಕೆ ಆಮದಿಗೆ 108% ತೆರಿಗೆಯನ್ನು ವಿಧಿಸಿದ್ದು ಅಟಲ್ ಬಿಹಾರಿ ವಾಜಪೇಯಿ ನೇತೃತ್ವ ಕೇಂದ್ರ ಸರ್ಕಾರ ಅವರು ಮಾಡಿದಂತಹ ಅದೇಶವನ್ನು ಕೂಡ ತೆಗೆದುಕೊಂಡು ಬಂದಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದವರು ಸಕಾಲದಲ್ಲಿ ಪ್ರವೇಶ ಮಾಡಿದ್ದರಿಂದ ಅಡಕೆ ಬೆಳೆಗಾರರಿಗೆ ಒಳ್ಳೆಯದಾಗಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ 2012ನೇ ಏಪ್ರಿಲ್ ತಿಂಗಳಿನಿಂದ ಡಿಸೆಂಬರ್ 2012ನೇ ಇಸವಿಯವರೆಗೆ 5,32,000 ಕ್ವಿಂಟಾಲ್‌ನಷ್ಟು ಅಡಕೆಯನ್ನು ಬಾಂಗ್ಲಾ ದೇಶದಿಂದ ನಮ್ಮ ದೇಶ ಅಮದು ಮಾಡಿಕೊಂಡಿದೆ. ನೇಪಾಳ ದೇಶದಿಂದ 83,000 ಕ್ವಿಂಟಾಲ್ ಮತ್ತು ಶ್ರೀಲಂಕಾ ದೇಶದಿಂದ 19,000 ಕ್ವಿಂಟಾಲ್, ಬರ್ಮ ದೇಶದಿಂದ 33,000 ಕ್ವಿಂಟಾಲ್, ಥೈಲ್ಯಾಂಡ್‌ನಿಂದ 32,000 ಕ್ವಿಂಟಾಲ್ ಹೀಗೆ ಆಗಾಧ ಪ್ರಮಾಣದಲ್ಲಿ ವಿದೇಶದಿಂದ ಅಡಕೆಯನ್ನು ಅಮದು ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾದರೆ ನಮ್ಮ ರಾಜ್ಯದಲ್ಲಿರುವಂತಹ, ನಮ್ಮ ದೇಶದಲ್ಲಿರುವಂತಹ ಅಡಕೆಗೆ ಬೆಲೆ ಯಾವ ರೀತಿ ಹೆಚ್ಚಾಗುತ್ತದೆ? ಕಳೆದ 9 ತಿಂಗಳಲ್ಲಿ ಇಷ್ಟೊಂದು ಆಗಾಧ ಪ್ರಮಾಣದ ಅಡಕೆಯನ್ನು ಆಮದು ಮಾಡಿಕೊಂಡರೆ ಅಡಕೆ ಬೆಳೆಗಾರರಿಗೆ ಯಾವ ರೀತಿಯ ರಕ್ಷಣೆ ನೀಡಿದಂತಾಗುತ್ತದೆ? ತಮ್ಮ ಮುಖಾಂತರ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತೆಗೆದುಕೊಂಡು ಬಂದು ಯಾವುದೇ ಕಾರಣಕ್ಕೂ ವಿದೇಶದಿಂದ ಅಡಕೆಯನ್ನು ಆಮದು ಮಾಡಿಕೊಳ್ಳುವುದು ನಿಲ್ಲಿಸಬೇಕೆಂದು ಆಗ್ರಹ ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಅನೇಕ ಹಿರಿಯ ಸದಸ್ಯರುಗಳು ಬಹಳಷ್ಟು ವಿಚಾರಗಳನ್ನು ಹೇಳಿರುವುದರಿಂದ

ಕೊನೆಯದಾಗಿ ನಾನು ಹೇಳುವುದೇನೆಂದರೆ, ರಾಸಾಯನಿಕ ಮತ್ತು ವಿಷಪೂರಿತ ಅಂಶವನ್ನು ಒಳಗೊಂಡ ಈ ಗುಟ್ಕಾ ಪ್ಯಾಕೆಟ್‌ಗಳನ್ನು ನಿಷೇಧ ಮಾಡುವುದರ ಬಗ್ಗೆ ನಮ್ಮದು ಯಾರದು ತಕರಾರು ಇರಲಿಲ್ಲ. ಆದರೆ ಗುಟ್ಕಾ ತಯಾರಿಕೆಗೆ ಬೇಕಾದಂತಹ ಶೇಕಡ 50ರಷ್ಟು ಅಡಕೆ ವಿನಿಯೋಗವಾಗುವುದರಿಂದ ಅಡಕೆ ಬೆಳೆಯುವ ರೈತರಿಗೆ ತಕ್ಷಣ ಪ್ಯಾಕೇಜ್‌ನ್ನು ಸರ್ಕಾರ ಘೋಷಣೆ ಮಾಡಬೇಕು. ಆ 2.5 ಲಕ್ಷ ಅಡಕೆ ಬೆಳೆಯುವ ರೈತರ ಸಾಲವನ್ನು ಮನ್ನಾ ಮಾಡಬೇಕು ಮತ್ತು ಹೊಸದಾಗಿ ಅವರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ಕೊಡಬೇಕು. ಅಡಕೆ ಬೆಳೆಗಾರರಿಗೆ ನಾವು ಇದ್ದೇವೆ ಎನ್ನುವಂತಹ ವಿಶ್ವಾಸವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಆಗ್ರಹವನ್ನು ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಂದು ಜವಾಬ್ದಾರಿಯುತವಾದ ಸರ್ಕಾರದ ಬಹಳ ಪ್ರಮುಖವಾದ ಕೆಲಸವೆಂದರೆ, ಸಾರ್ವಜನಿಕರ ಬದುಕನ್ನು ಉತ್ತಮಗೊಳಿಸುವುದಾಗಿರುತ್ತದೆ. ಇದು ನಮ್ಮೆಲ್ಲರಿಗೂ ಗೊತ್ತಿರುವಂತಹ ವಿಚಾರವೇ ಆಗಿದೆ. ಈ ನಾಡಿನೊಳಗೆ ಗುಟ್ಕಾ ನಿಷೇಧ ಆಗಿರುವುದನ್ನು ನಾವು ಸಹ ಸ್ವಾಗತ ಮಾಡುತ್ತಿದ್ದೇವೆ. ಅಡಕೆ ಬೆಳೆಗಾರರ ಪರಿಸ್ಥಿತಿ ಏನಾಗುತ್ತಿದೆ ಎಂಬ ಬಗ್ಗೆ ಈ ಸದನದೊಳಗೆ ಒಂದು ಗಂಭೀರವಾದ ಚರ್ಚೆ ನಡೆಯಬೇಕೆಂಬ ಉದ್ದೇಶದಿಂದ ಈ ದಿವಸ ತಾವು ಆ ವಿಷಯದ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ ಎಂದು ನಾನು ಭಾವಿಸಿದ್ದೇನೆ.

ಅಡಿಕೆ ಬೆಳೆಯಲ್ಲಿ ಎರಡು ರೀತಿ ಇವೆ. ಈಗಷ್ಟೇ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಕೃಷಿ ಜಮೀನಿನಲ್ಲಿ ಬೆಳೆಯತಕ್ಕಂಥದ್ದು ಒಂದು ರೀತಿ ಇದ್ದರೆ ಕಾಡಿನಲ್ಲಿ ಬೆಳೆಯತಕ್ಕಂಥದ್ದು ಇನ್ನೊಂದು ರೀತಿಯದಾಗಿರುತ್ತದೆ. ನಮ್ಮ ರಾಜ್ಯದಲ್ಲಿರುವುದು ಕಾಡಿನಲ್ಲಿ ಬೆಳೆಯತಕ್ಕಂತಹ ಅಡಿಕೆ ಅಲ್ಲ, ಹೀಗಾಗಿ ಅಡಿಕೆ

ಕೃಷಿಯಲ್ಲಿ ತೊಡಗಿದಂತಹ ರೈತ ಪ್ರಥಮವಾಗಿ ಒಂದು ಬೆಳೆಯನ್ನು ನೋಡಬೇಕಾದರೆ ಸುಮಾರು ಹತ್ತು ವರ್ಷಗಳ ಕಾಲ ಶ್ರಮ ಪಟ್ಟಿರುತ್ತಾನೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಎರಡು ರೀತಿಯ ಬೆಳೆಗಾರರಿದ್ದಾರೆ. ಅಂದರೆ ಸಾಂಪ್ರದಾಯಿಕವಾಗಿ ಅಡಿಕೆಯನ್ನೇ ಬೆಳೆಯುತ್ತಿರುವಂತಹ ರೈತರಿದ್ದಾರೆ, ಜೊತೆಗೆ ಬೇರೆ ಬೇರೆ ಬೆಳೆಗಳನ್ನು ಬೆಳೆಯುವವರು, ಉದಾಹರಣೆಗೆ ಭತ್ತವನ್ನು ಬೆಳೆಯತಕ್ಕಂತಹ ರೈತ ಕೂಡ ಇವೊತ್ತಿನ ದಿವಸ ಆ ಜಮೀನಿನಲ್ಲಿ ಅಡಿಕೆ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾನೆ. ಭತ್ತದ ಕೃಷಿ ಲಾಭದಾಯಕವಾಗಿಲ್ಲ ಎಂಬ ಕಾರಣಕ್ಕೋಸ್ಕರ ರೈತ ಅಡಿಕೆ ಕೃಷಿಗೆ ಮುಂದಾಗಿದ್ದಾನೆ. ಭತ್ತದ ಕೃಷಿ ಅವಲಂಬಿಸಿರುಬವಂತಹ ರೈತರಿಗೆ ಬೇಸಾಯಕ್ಕೆ ತಗುಲಿದ ಖರ್ಚನ್ನು ಕಳೆದರೆ ಲಾಭ ಉಳಿಯುವುದಿಲ್ಲ. ವರ್ಷದಲ್ಲಿ ಎರಡು ಬೆಳೆ ಬೆಳೆಯುವಂತಹ ರೈತರಿಗೆ ಕೂಡ ಸಾಗುವಳಿಗೆ ಮಾಡಿದಂತಹ ಖರ್ಚು ಕೂಡ ಹುಟ್ಟುತ್ತಿಲ್ಲ. ಹೀಗಾಗಿ ಬಹಳ ಆಶಾದಾಯಕ ಮನೋಭಾವದಿಂದ ಆ ಕೃಷಿಯ ತಮ್ಮ ಭತ್ತದ ಜಮೀನನ್ನು ಅಡಕೆ ಜಮೀನನ್ನಾಗಿ ಪರಿವರ್ತಿಸಿದ್ದಾರೆ. ಆದರೆ ಅಡಿಕೆ ಬೆಳೆ ಹತ್ತು ವರ್ಷಗಳ ಶ್ರಮದ ನಂತರವೇ ಫಲ ನೀಡುವುದು, ಜೊತೆಗೆ ಅದು ಬೇರೆ ಬೇರೆ ರೀತಿಯ ತೊಂದರೆ  ತಾಪತ್ರಯಗಳಿಗೆ ಕೂಡ ಒಳಗಾಗುತ್ತಿದೆ. ಅಷ್ಟೇ ಅಲ್ಲದೆ ಅಡಿಕೆ ತೋಟಗಳಲ್ಲಿ ಕೆಲಸ ಮಾಡತಕ್ಕಂತಹ ಕಾರ್ಮಿಕರ ಕೊರತೆ ಇದೆ. ಅಡಿಕೆ ಬೆಳೆಗೆ ಸಗಣಿ ಗೊಬ್ಬರ ಬೇಕಾಗುತ್ತದೆ, ಇವೊತ್ತಿನ ದಿವಸ ಅದು ಕೂಡ ಸಿಕ್ಕುವುದಿಲ್ಲ. ಅದಕ್ಕೋಸ್ಕರ ರೈತ ಬೇರೆ ಬೇರೆ ಗೊಬ್ಬರಗಳನ್ನು ತಂದಿಟ್ಟುಕೊಳ್ಳುತ್ತಾನೆ, ಆದರೆ ಅದನ್ನು ಗಿಡಗಳ ಬುಡಕ್ಕೆ ಹಾಕಬೇಕಾದರೆ ಕಾರ್ಮಿಕರು ಸಿಗುತ್ತಿಲ್ಲ. ಜೊತೆಗೆ ಅಡಿಕೆ ಬೆಳೆಗೆ ಹೊಸ ಹೊಸ ರೋಗಗಳು ಕೂಡ ಕಾಣಿಸಿಕೊಳ್ಳುತ್ತಿವೆ. ಸುಮಾರು ಎಂಟು-ಹತ್ತು ವರ್ಷಗಳ ಸತತ ಶ್ರಮದ ಫಲವಾಗಿ ಬೆಳೆದು ನಿಂತ ಅಡಿಕೆ ಮರಗಳು ರೋಗದ ಬಾಧಗೆ ತುತ್ತಾದರೆ ಅದರ ತಲೆಯೇ ಒಣಗಿ ಕೆಳಗೆ ಬಿದ್ದು ಹೋಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಆ ರೈತ ತನ್ನ ಮನೆಯ ಮಗುವೇ ಸತ್ತು ಹೋಯಿತೇನೋ ಎಂಬಂತೆ ದುಃಖ

ಪಡುತ್ತಾನೆ. ಶೇಕಡ 60ರಷ್ಟು ಅಡಿಕೆ ಬೆಳೆಗಾರರು ಈ ರೀತಿಯ ಸಂಕಷ್ಟದಲ್ಲಿದ್ದಾರೆ.

ಮಾನ್ಯ ಸಭಾಪತಿಯವರೇ, ಎಲ್ಲ ಬೆಳೆಗಾರರು ಕೂಡ ಒಂದಲ್ಲಾ ರೀತಿಯ ಬವಣೆಯಲ್ಲಿದ್ದಾರೆ ಎಂಬುದನ್ನು ನಾನು ಸಹ ಒಪ್ಪುತ್ತೇನೆ. ಅದಕ್ಕಾಗಿಯೇ ಈ ಸದನದಲ್ಲಿ ತೊಗರಿ ಬೆಳೆಗಾರರ ಬಗ್ಗೆ, ಆಲೂಗಡ್ಡೆ ಬೆಳೆಯುವ ರೈತರ ಬಗ್ಗೆ, ಭತ್ತ ಬೆಳೆಯುವಂತಹ ರೈತರ ಬಗ್ಗೆ ಚರ್ಚೆ ಮಾಡಿದ್ದೇವೆ. ಅದೇರೀತಿ ಇವೊತ್ತಿನ ದಿವಸ ಅಡಿಕೆ ಬೆಳೆಗಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ದಿವಸ ನಮ್ಮ ಮುಂದಿರುವಂತಹ ಪ್ರಶ್ನೆ ಎಂದರೆ ಗುಟ್ಕಾ ರದ್ದು ಮಾಡಬೇಕು ಅಥವಾ ಮಾಡಬಾರದು ಎಂಬುದಲ್ಲ, ಸಂಕಷ್ಟದಲ್ಲಿರುವಂತಹ ಅಡಿಕೆ ಬೆಳೆಗಾರರೇನಿದ್ದಾರೆ ಅವರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಹೀಗಾಗಿ ನಮ್ಮ ಶಿವಮೊಗ್ಗ ಜಿಲ್ಲೆಯ ರೈತರು 'ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ, ರೈತರಿಗೆ ಅನುಕೂಲವಾಗುವಂತಹ ಒಳ್ಳೆಯ ಯೋಜನೆಗಳನ್ನು ರೂಪಿಸಲಾಗುತ್ತದೆ' ಎನ್ನುವಂತಹ ನಿರೀಕ್ಷೆಯಲ್ಲಿದ್ದರು.

ಸರ್ಕಾರ ಅನೇಕ ಹೊಸ ಹೊಸ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದು ಅವುಗಳ ಬಗ್ಗೆ ಬೇರೆ ಸಂದರ್ಭಗಳಲ್ಲಿ ವಿಚಾರ ಮಾಡೋಣ. ಆದರೆ ಇವೊತ್ತಿನ ದಿವಸ ಈ ಹೊಸ ಸರ್ಕಾರದಲ್ಲಿ ರೈತರ ಬಗ್ಗೆ ಏನಾದರೂ ಹೊಸ ಆಲೋಚನೆಗಳ ಬಗ್ಗೆ ಚಿಂತನೆಗಳನ್ನು ನಡೆಸಲಾಗುತ್ತಿದೆಯೇ ಎಂದರೆ, ಬಹುಶಃ ರೈತರನ್ನು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ ಎನ್ನುವಂತಹ ತೀರ್ಮಾನಕ್ಕೆ ಬರಬೇಕಾಗುತ್ತದೆ. ಏಕೆಂದರೆ ಸರ್ಕಾರ ಈ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ರೈತರ ಜೊತೆಗೆ ಚರ್ಚೆ ನಡೆಸಬೇಕಾಗಿತ್ತು. ಆದರೆ ಅಂತಹ ಯಾವುದೇ ಚರ್ಚೆ ಆಗಿಲ್ಲ. ಅಡಿಕೆ ಬೆಳೆಗಾರರು ಎದುರಿಸುತ್ತಿರುವಂತಹ ಸಮಸ್ಯೆಗಳೇನು ಎಂಬುದರ ಬಗ್ಗೆ ಸರ್ಕಾರದಲ್ಲಿ ಗಂಭೀರವಾದಂತಹ ಚಿಂತನೆ ಆಗಬೇಕಾಗಿತ್ತು. ಆದರೆ ಅದು ಆಗಲಿಲ್ಲ. ಆ ಕಾರಣಕ್ಕೋಸ್ಕರ ಅದರ ಅಂಕಿಅಂಶಗಳ ಬಗ್ಗೆ ನಾನೀಗ ವಿಶ್ಲೇಷಣೆ

ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಸರ್ಕಾರದವರಲ್ಲಿ ನನ್ನ ಒತ್ತಾಯಪೂರ್ವಕ ವಿನಂತಿ ಏನೆಂದರೆ, ಅಡಿಕೆ ಬೆಳೆಗಾರರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕಾದಂತಹ ಅವಶ್ಯಕತೆ ಖಂಡಿತವಾಗಿಯೂ ಇದೆ. ಇಲ್ಲದೆ ಹೋದರೆ ಇವೊತ್ತಿನ ದಿವಸ ರೈತ ತನ್ನ ಭತ್ತದ ಗದ್ದೆಯನ್ನು ಅಡಿಕೆ ತೋಟವನ್ನಾಗಿ ಮಾರ್ಪಡಿಸಲು ಸುಮಾರು ಹತ್ತು–ಹದಿನೈದು–ಇಪ್ಪತ್ತು ವರ್ಷಗಳ ಕಾಲ ಏನು ಶ್ರಮ ಪಟ್ಟಿರುತ್ತಾನೆ ಅದು ನಿರರ್ಥಕವಾಗುತ್ತದೆ. ಅಂದರೆ ಸರ್ಕಾರ ತೆಗೆದುಕೊಂಡಿರುವಂತಹ ಈ ನಿರ್ಧಾರವೇನಿದೆ ಇದರಿಂದಾಗಿ ಅಷ್ಟು ಶ್ರಮಪಟ್ಟು ಬೆಳೆಸಿದಂತಹ ಅಡಿಕೆ ಮರಗಳನ್ನು ಕಡಿದು ಹಾಕಿ ರೈತರು ಭತ್ತ ಅಥವಾ ಇನ್ನಿತರ ಬೆಳೆಗಳನ್ನು ಬೆಳೆಯಬೇಕಾಗುತ್ತದೆ. ಒಟ್ಟಿನಲ್ಲಿ ಸರ್ಕಾರದ ಈ ನಿರ್ಧಾರದಿಂದ ರೈತನಿಗೆ ನೆಮ್ಮದಿ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗುವ ಸಂದರ್ಭ ಇರುವುದರಿಂದ ದಯಮಾಡಿ ಸರ್ಕಾರ ಆ ರೈತರ ನೆರವಿಗೆ ಬರಬೇಕಾಗುತ್ತದೆ.

ಸರ್ಕಾರ ಈ ತೀರ್ಮಾನವನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಅಡಕೆ ಬೆಳೆಗಾರರ ಬಗ್ಗೆ ಕೂಡ ಏನಾದರೊಂದು ತೀರ್ಮಾನ ತೆಗೆದುಕೊಂಡಿದ್ದರೆ ಬಹುಶಃ ನಾವು ಕೂಡ ಸರ್ಕಾರಕ್ಕೆ ಶಹಭಾಷ್‌ಗಿರಿಯನ್ನು ಕೊಡಬಹುದಾಗಿತ್ತು. ಆದರೆ ಅಡಕೆ ಬೆಳೆಗಾರರ ಬಗ್ಗೆ ಯಾವುದೇ ಯೋಚನೆ ಮಾಡದೆ ಸರ್ಕಾರ ಈ ತೀರ್ಮಾನವನ್ನೇನು ತೆಗೆದುಕೊಂಡಿದೆ ಇದು ಅವಸರದ ತೀರ್ಮಾನವಾಗಿದೆ. ಈ ವಿಚಾರವನ್ನು ಈಗಾಗಲೇ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಆದೇಶ ಏನಿತ್ತು ಎನ್ನುವುದನ್ನು ಕೂಡ ಉಲ್ಲೇಖ ಮಾಡಿದ್ದಾರೆ. ಈ ವಿಷಯದಲ್ಲಿ ನಮ್ಮ ಸದನದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟು, ಅಡಕೆ ಬೆಳೆಗಾರರ ಬಗ್ಗೆ ಸಹ ಚಿಂತನೆ ನಡೆಸಿ ಅನಂತರ ಸುಪ್ರೀಂ ಕೋರ್ಟ್‌ನ ಮುಂದೆ ನಾವು ಹೋಗಿದ್ದರೆ ಬಹಳ ಸೂಕ್ತವಾಗುತ್ತಿತ್ತು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ದಯಮಾಡಿ ಸರ್ಕಾರ ಅಡಕೆ ಬೆಳೆಗಾರರ ಬಗ್ಗೆ ಗಂಭೀರವಾಗಿ ಆಲೋಚನೆ

ಮಾಡಬೇಕಾದಂತಹ ಅವಶ್ಯಕತೆ ಇರುವುದರಿಂದ ತಕ್ಷಣ ಅವರ ನೆರವಿಗೆ ಧಾವಿಸಬೇಕಾಗಿದೆ.

ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಈಗಷ್ಟೇ ಪ್ರಸ್ತಾಪ ಮಾಡಿರುವಂತೆ ಅಡಿಕೆ ಬೆಳೆಗಾರರ ಸಾಲ ಮನ್ನಾ ಆಗಬೇಕಾಗುತ್ತದೆ. ನಮ್ಮಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅಡಿಕೆ ಬೆಳೆಗಾರರಿದ್ದಾರೆ. ಬೇರೆ ಬೆಳೆಗಾರರಿಗೆ ಮರುಸಾಲ ಕೊಡುವುದಾದರೆ ಅಡಿಕೆ ಬೆಳೆಗಾರರಿಗೆ ಸಹ ಮರುಸಾಲವನ್ನು ನೀಡಬೇಕಾಗುತ್ತದೆ. ಶೇಕಡಾ 1 ಅಥವಾ 2ರ ಬಡ್ಡಿ ದರದಲ್ಲಿ ರೈತರಿಗೆ ಎಷ್ಟು ಸಾಲದ ಅವಶ್ಯಕತೆ ಇದೆಯೋ ಅಷ್ಟನ್ನು ಕೊಟ್ಟು, ಅವರನ್ನು ಬದುಕಿಸುವ ಅವಶ್ಯಕತೆ ಇದೆ. ಅದರ ಜೊತೆಗೆ ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಿಸುವ ಅವಶ್ಯಕತೆ ಕೂಡ ಇರುವುದರಿಂದ ಸರ್ಕಾರ ಕೂಡಲೇ ಬೆಂಬಲ ಬೆಲೆಯನ್ನು ಘೋಷಿಸುವಂತಹ ಕ್ರಮಕ್ಕೆ ಮುಂದಾಗಬೇಕೆಂದು ಒತ್ತಾಯ ಮಾಡುತ್ತಾ, ಈ ಸಂದರ್ಭದಲ್ಲಿ ಅಡಿಕೆ ಬೆಳೆಗಾರರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಗುಟ್ಕಾ ನಿಷೇಧದ ಬಗ್ಗೆ ಇದುವರೆಗೆ ನಮ್ಮ ಸದನದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಆದರೆ, ಎಲ್ಲಿಯೋ ಒಂದು ಕಡೆ ಏತಕ್ಕೆ ಇದನ್ನು ವಿಶೇಷ ನಿಲುವಳಿಯಾಗಿ ತರುವಂತಹ ಪ್ರಯತ್ನ ಮಾಡಿದರು, ತಾವು ಅದಕ್ಕೆ ಅನುಮತಿ ನೀಡಿ ನಿಯಮ 68ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಆಲೋಚನೆ ಮಾಡಿದ್ದೀರಿ ಎನ್ನುವುದರ ಬಗ್ಗೆ ವಿಚಾರ ಮಾಡುವುದಾದರೆ, ನಾನು ಗುಟ್ಕಾ ನಿಷೇಧದ ವಿಚಾರವಾಗಿ ಪತ್ರಿಕೆಯಲ್ಲಿ ವರದಿಯಾಗಿರುವಂತಹ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸಾಮಾನ್ಯವಾಗಿ ಯಾವುದಾದರೂ ಸಾಮಾಜಿಕ ವಿಷಯ ಇದ್ದರೆ ಅದರ ಬಗ್ಗೆ ಪತ್ರಿಕಾ ಮಾಧ್ಯಮದವರು ಯಾವ ರೀತಿ ಸ್ಪಂದಿಸುತ್ತಾರೆ ಎಂಬುದಕ್ಕೆ ಕಳೆದ ಮೂರು–

ನಾಲ್ಕು ದಿವಸಗಳ ಅವಧಿಯಲ್ಲಿ ಈ ರಾಜ್ಯದ ಎಲ್ಲ ಪತ್ರಿಕೆಗಳಲ್ಲಿ ವರದಿಯಾಗಿರುವಂತಹ ಲೇಖನಗಳನ್ನು ಅವಲೋಕಿಸಬಹುದಾಗಿದೆ.

ಮಾನ್ಯ ಸಭಾಪತಿಯವರೇ, ನನ್ನ ಮನಸ್ಸಿಗೆ ಬಹಳ ಮುಟ್ಟಿದಂತಹ ಪತ್ರಿಕೆಯ ಲೇಖನವೊಂದು ಏನು ಹೇಳುತ್ತದೆ ಎಂದರೆ, **“ಗುಟ್ಕಾ ಹೆಸರಿನಲ್ಲಿ ಅಡಿಕೆಗೆ ಏಕೆ ಕೊಲೆಗಾರರ ಪಟ್ಟ”** ಎನ್ನುವಂತಹ ಶೀರ್ಷಿಕೆಯ ಅಡಿಯಲ್ಲಿ ಕಾಲೇಜು ಪ್ರಾಧ್ಯಾಪಕರೊಬ್ಬರು ಬರೆದಿರುವಂತಹ ಲೇಖನ ಇದಾಗಿದೆ. ‘ಗುಟ್ಕಾ ನಿಷೇಧ’ ಎಂದು ಹೇಳಿದಾಗ ನಾವು ಯಾರು ಕೂಡ ಗುಟ್ಕಾ ಮತ್ತು ಅದರಲ್ಲಿರುವಂತಹ ರಾಸಾಯನಿಕಗಳು, ಅದು ಆರೋಗ್ಯದ ಮೇಲೆ ಬೀರುವಂತಹ ಪರಿಣಾಮಗಳ ಬಗ್ಗೆ ಚರ್ಚೆಯನ್ನೇ ಮಾಡುತ್ತಿಲ್ಲ. ಖಂಡಿತವಾಗಿಯೂ ಆ ಎಲ್ಲ ಅಂಶಗಳ ಬಗ್ಗೆ ನಮ್ಮ ಸದನದಲ್ಲಿ ಚರ್ಚೆ ಆಗಬೇಕಾಗಿದೆ. ಆದರೆ ಇದರ ಹಿಂದೆ ಲಕ್ಷಾಂತರ ಜನ ಅಡಿಕೆ ಬೆಳೆಗಾರರ ಆತಂಕ ಏನಿದೆ, ಅವರ ನೋವೇನಿದೆ, ಆ ಜನರಜೀವನದ ಸಮಸ್ಯೆಗಳೇನಿವೆ ಇವುಗಳ ಬಗ್ಗೆ ಎಲ್ಲಿಯೂ ಕೂಡ ವಿಮರ್ಶೆ ಮಾಡದೆ ಸರ್ಕಾರ ಕಳೆದ ವರ್ಷ ಆಗಸ್ಟ್ ತಿಂಗಳಿನಲ್ಲಿ ಬಂದಂತಹ ಸುಪ್ರೀಂ ಕೋರ್ಟ್‌ನ ಆದೇಶವನ್ನಿಟ್ಟುಕೊಂಡು ತೆಗೆದುಕೊಂಡಿರುವಂತಹ ಈ ತೀರ್ಮಾನವೇನಿದೆ ಇದು ಬಹಳ ಆತಂಕದ ವಿಷಯವಾಗಿದೆ. ಏಕೆಂದರೆ, ಈ ಸದನವನ್ನು ನಡೆಯಿಸಲು ದಿನಾಂಕವನ್ನು ನಿರ್ಣಯ ಮಾಡಿರುವಂಥದ್ದು ಕೂಡ ಇದೇ ಸರ್ಕಾರವೆ. ಇಂತಹ ದಿನಾಂಕದಿಂದ ಸದನ ನಡೆಯುತ್ತದೆ ಎನ್ನುವಂತಹ ವಿಚಾರ ಅವರಿಗೆ ಗೊತ್ತಿತ್ತು, ಈ ರೀತಿ ಗೊತ್ತಿದ್ದಾಗ್ಯೂ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಸರ್ಕಾರವೇ ನಿರ್ಧಾರವನ್ನು ತೆಗೆದುಕೊಂಡಿರುವಂಥದ್ದು ಸರಿಯಲ್ಲ. ಇದರ ಬಗ್ಗೆ ಸೂಕ್ಷ್ಮವಾಗಿ ಆಲೋಚನೆ ಮಾಡಿದರೆ ಇದು ಬಹುಶಃ ಹಕ್ಕುಚ್ಯುತಿಯ ಪ್ರಶ್ನೆಯಾಗಿ ಪರಿಣಮಿಸುತ್ತದೆ. ಹಕ್ಕುಚ್ಯುತಿ ನಿರ್ಣಯವನ್ನು ಸರ್ಕಾರದ ವಿರುದ್ಧ ಯಾರಾದರೂ ಮಂಡಿಸಬಹುದು. ಆದರೆ ಹಕ್ಕುಚ್ಯುತಿಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ನಾವೇನಾದರೂ ಚರ್ಚೆ ಮಾಡಿದರೆ ಅಡಿಕೆ ಬೆಳೆಗಾರರ ಸಮಸ್ಯೆ ಏನಿದೆ, ಅವರ ಆತಂಕ ಏನಿದೆ ಈ ವಿಚಾರ ಎಲ್ಲಿಯೋ ಒಂದು ಬದಿಗೆ ಸೇರಿಹೋಗುತ್ತದೆ ಎನ್ನುವಂತಹ ಕಾರಣಕ್ಕಾಗಿ ನಾವು ಆ

ವಿಚಾರವನ್ನು ಮುಂದಿಟ್ಟುಕೊಳ್ಳುತ್ತಿಲ್ಲ. ಆದರೆ, ಸರ್ಕಾರ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ದಿಢೀರನೆ ಈ ನಿರ್ಣಯವನ್ನು ತೆಗೆದುಕೊಳ್ಳುವಂತಹ ಅವಶ್ಯಕತೆ ಏನಿತ್ತು? ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಉಲ್ಲೇಖ ಮಾಡಿದ್ದಾರೆ. ಜೂನ್ 23ನೇ ತಾರೀಖಿನವರೆಗೆ ಇದಕ್ಕೆ ಸಾಕಷ್ಟು ಸಮಯಾವಕಾಶವಿತ್ತು. ಹೀಗಾಗಿ ಈ ಅಧಿವೇಶನದಲ್ಲಿ ನಾವು ಈ ವಿಚಾರದ ಬಗ್ಗೆ ಚರ್ಚೆ ಮಾಡಬಹುದಾಗಿತ್ತು.

ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ತಿಳಿಸಿರುವಂತೆ ಅಡಿಕೆ ಬೆಳೆಯುವಂತಹ ಭಾಗಗಳಿಂದ ಬಂದಿರುವಂತಹ ಸುಮಾರು 80 ಜನ ಪ್ರತಿನಿಧಿಗಳು ಈ ಸದನದಲ್ಲಿದ್ದೇವೆ. ನಮ್ಮನ್ನು ಸರ್ಕಾರ ವಿಶ್ವಾಸಕ್ಕೆ ತೆಗೆದುಕೊಳ್ಳಬಹುದಾಗಿತ್ತು. ತಾವೇ ಉಲ್ಲೇಖ ಮಾಡಿರುವಂತೆ CAMPCO ಮತ್ತು MAMCO ಸಂಸ್ಥೆಗಳಿವೆ. ಕಳೆದ ಮೂರು-ನಾಲ್ಕು ದಶಕಗಳಿಂದ ಅಡಿಕೆ ಬೆಳೆಗಾರರ ಪರವಾಗಿ ಕೆಲಸ ಮಾಡಿರುವಂತಹ ಸಂಸ್ಥೆಗಳ ಅನುಭವ ಇದೆ, ಅಡಿಕೆ ಬೆಳೆಗಾರರ ಸಮಸ್ಯೆಗಳ ಬಗ್ಗೆ ಅವರಿಗೆ ಮಾಹಿತಿ ಇದೆ. ಲಕ್ಷಾಂತರ ಮೆಟ್ರಿಕ್ ಟನ್‌ಗಳಷ್ಟು ಅಡಿಕೆ ಆಮದಾಗುತ್ತಿರುವಂತಹ ಸಂದರ್ಭದಲ್ಲಿ ಇದುವರೆಗೆ ಮಾತನಾಡಿದಂತಹ ಮಾನ್ಯ ಸದಸ್ಯರೆಲ್ಲರೂ ಉಲ್ಲೇಖ ಮಾಡಿರುವ ಪ್ರಕಾರ ಎಲ್ಲಿಯೋ ಒಂದು ಕಡೆ ಗುಟ್ಕಾದಲ್ಲಿ ಅಡಿಕೆ ಬಹಳ ದೊಡ್ಡ ಪ್ರಮಾಣದಲ್ಲಿ ಉಪಯೋಗವಾಗುತ್ತದೆ ಎನ್ನುವಂತಹ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು, ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡಿದ್ದೀರಿ, **"ತೋಟಗಾರಿಕೆ ಮಾರುಕಟ್ಟೆಯ ಇಡೀ ವ್ಯವಸ್ಥೆಯನ್ನು ರೈತರ ಅಗತ್ಯತೆಗಳಿಗೆ ಹೆಚ್ಚು ಸ್ಪಂದನಶೀಲವನ್ನಾಗಿ ಮಾಡಿಕೊಂಡಿದೆ"** ಎಂಬುದಾಗಿ ಸರ್ಕಾರ ತಿಳಿಸಿದೆ. ಆ ರೀತಿ ಇದು ರೈತರ ಅಗತ್ಯಗಳಿಗೆ ಸ್ಪಂದನಶೀಲವಾದಂತಹ ಸರ್ಕಾರವಾಗಿದ್ದರೆ ಈ ಯಾವ ಸಂಗತಿಗಳನ್ನು ಕೂಡ ಗಮನಕ್ಕೆ ತರದೆ ಏಕಾಏಕಿಯಾಗಿ ಗುಟ್ಕಾ ಬ್ಯಾನ್ ಮಾಡುವ ಮೂಲಕ ಅಡಿಕೆ ಬೆಳೆಗಾರರಿಗೆ ಇಂತಹ ಸಂಕಷ್ಟದ ಪರಿಸ್ಥಿತಿಯನ್ನು ತಂದೊಡ್ಡುತ್ತಿರಲಿಲ್ಲ. ಪತ್ರಿಕೆಗಳಲ್ಲಿ ಈ ವಿಚಾರವಾಗಿ ಪ್ರಕಟವಾಗುತ್ತಿರುವಂತಹ ಲೇಖನಗಳನ್ನು ಓದಿದರೆ ರಾಜ್ಯದ ಅಡಿಕೆ ಬೆಳೆಗಾರರು ಎಷ್ಟು ಆತಂಕಕ್ಕೆ ಒಳಗಾಗಿದ್ದಾರೆ,

ಅವರು ಎಷ್ಟು ಗಾಬರಿಗೊಂಡಿದ್ದಾರೆ ಎಂಬುದು ಯಾರಿಗಾದರೂ ಸ್ಪಷ್ಟವಾಗಿ ಗೋಚರವಾಗುತ್ತದೆ.

ಈಗಾಗಲೇ ರೈತರು ಅಡಿಕೆ ಬೆಳೆ ಬಿಟ್ಟು ಬೇರೆ ಬೆಳೆ ಬೆಳೆಯುವುದಕ್ಕೆ ಆಲೋಚನೆ ಮಾಡುತ್ತಿದ್ದಾರೆ. ಈ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಕೂಡಲೇ ತಾವು ಅಡಿಕೆ ಬೆಳೆಗಾರರ ಪರವಾಗಿ ಒಂದು ವಿಶೇಷ ಸಮಾವೇಶ ಮಾಡಿ ಒಂದು package announce ಮಾಡಬೇಕು. ಪತ್ರಿಕೆಗಳಲ್ಲಿ ಅಡಿಕೆ ಬೆಳೆಗಾರ ಬಗ್ಗೆಯೇ ಒಂದು article ಬಂದಿತ್ತು. ಏನೆಂದರೆ, 'ಅಡಿಕೆ ಬೆಳೆಗಾರ ನೆರವಿಗೆ ಧಾವಿಸಬೇಕಾದ ಮುಖ್ಯಮಂತ್ರಿಗಳು' ಅದಾದ ನಂತರ ಮಾನ್ಯ ಆರೋಗ್ಯ ಸಚಿವರು, ಗುಟ್ಕಾ ನಿಷೇಧದಿಂದ ಅಡಿಕೆ ಬೆಳೆಗಾರರಿಗೆ ಯಾವುದೇ ರೀತಿಯಾದಂತಹ ತೊಂದರೆ ಆಗುವುದಿಲ್ಲ' ಅನ್ಯಾಯವಾಗುವುದಿಲ್ಲವೆಂದು ಏನೇ ಸಮಸ್ಯೆ ಬಂದರೂ ನಾವು ಧಾವಿಸುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ, ಈಗಾಗಲೇ ಅಡಕೆ ಬೆಳೆಗಾರರಿಗೆ ಬಹಳಷ್ಟು ಹಾನಿಯಾಗಿದೆ.

**ಶ್ರೀ ಕೆ. ಪ್ರತಾತಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ಗುಟ್ಕಾ ನಿಷೇಧ ಮಾಡಿರುವಂಥದ್ದನ್ನು ಹಾಗೂ ರೈತರಿಗೆ ಪ್ರೋತ್ಸಾಹ ಬೆಲೆ ಕೊಡುವಂಥದ್ದನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವೆ, ಆದರೆ ಅಡಕೆ ಬೆಲೆ ಕಡಿಮೆ ಆದರೆ ಏನು ಮಾಡಬೇಕು ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತಹ ವಿಷಯಕ್ಕೆ ಪೂರಕವಾಗಿ ಪತ್ರಿಕೆಯಲ್ಲಿ ಪ್ರಕಟಗಾಗಿರುವುದನ್ನು ಓದುತ್ತೇನೆ. 'ಗುಟ್ಕಾ ನಿಷೇಧ ತೋಟಗಾರಿಕೆಗೆ ತಲೆ ನೋವು' 'ಅಡಿಕೆ ಬೆಳೆಗಾರರ ನೆರವಿಗೆ ಧಾವಿಸಲು ತೋಟಗಾರಿಕೆ ಇಲಾಖೆಗೆ ಸಿ.ಎಂ. ಸೂಚನೆ' ಆದರೆ ಈ ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿಯೇ ಇದರ ಬಗ್ಗೆ ಆಲೋಚನೆ ಮಾಡಬೇಕಾಗಿತ್ತಲ್ಲವೆ? ಅಡಿಕೆ ಬೆಳೆಗಾರರಿಗೆ ತೊಂದರೆಯಾಗಿರುವುದರಿಂದ ಈ ರೀತಿ ಬರೆದಿದ್ದಾರೆ ಅಲ್ಲವೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೊಬ್ಬರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಅಡಿಕೆ ಬೆಳೆಗಾರರು ಸಹ ಆಗಿದ್ದರು ಆಗ ಈ ಕೆಲಸವನ್ನು ಏಕೆ ಮಾಡಲಿಲ್ಲ ಎಂದು ಮಾನ್ಯ ಸಚಿವರೊಬ್ಬರು ಕೇಳುತ್ತಿದ್ದರು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನನ್ನ ನಂತರದ ಮುಖ್ಯಮಂತ್ರಿಯಾಗಿದ್ದಂತಹ ಮಾನ್ಯ ಜಗದೀಶ್‌ಶೆಟ್ಟರ್‌ರವರು ಇದ್ದಾಗ ಈ ಪತ್ರಗಳು ಸುಪ್ರೀಂ ಕೋರ್ಟಿನಿಂದ ಬಂದದ್ದು. ಈ ಸಂದರ್ಭದಲ್ಲಿ, ಯಾವುದೋ ಒಂದು ಉತ್ತರವನ್ನು, affidavit ಗಳನ್ನು ಕೊಡುವುದಕ್ಕೆ ಬದಲು ರಾಜ್ಯದ ಎಲ್ಲಾ ಅಡಿಕೆ ಬೆಳೆಯುತ್ತಿರುವಂತಹ ಪ್ರದೇಶದ ಜನಪ್ರತಿನಿಧಿಗಳು ಮತ್ತು ಅಡಿಕೆ ಬೆಳೆಗಾರರ ಜೊತೆ ವ್ಯವಹಾರ ಮಾಡುವಂತಹ ಸಂಘ ಸಂಸ್ಥೆಗಳ ಜೊತೆ ಸೇರಿಕೊಂಡು ಸಮಾಲೋಚನೆ ಮಾಡಿಯೇ ನಾವು ಇದಕ್ಕೆ ಉತ್ತರಗಳನ್ನು ಕೊಡಬೇಕೆಂಬ ನಿಶ್ಚಯವನ್ನು ಮಾಡಿದ್ದೆವು. ಆನಂತರ ಚುನಾವಣೆ ಘೋಷಣೆ ಆಯಿತು. ಚುನಾವಣೆ ಘೋಷಣೆ ಆದಮೇಲೆ ಯಾವುದನ್ನು ಮಾಡುವಂತಹ ಪರಿಸ್ಥಿತಿಯಲ್ಲಿ ನಾವು ಇರಲಿಲ್ಲ. ಅಡಿಕೆ ಬೆಳೆಗಾರರು ಕಾಂಗ್ರೆಸ್ ಸರ್ಕಾರ ಬಂದರೆ ನಮಗೆ ಹೆಚ್ಚು ಪ್ರಯೋಜನ ಆಗಬಹುದು ಎಂದು ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. ನಾನು ಕೇಳುವುದು ಇಷ್ಟೆ. ನಿಜ ನಾವು ಮಾಡಲಿಲ್ಲ. ನಾವು ಮಾಡಲಿಲ್ಲವೆಂದೇ ಜನರು ನಮ್ಮನ್ನು ಅಲ್ಲಿಂದ ಇಲ್ಲಿಗೆ (ವಿರೋಧ ಪಕ್ಷದ ಸ್ಥಾನಕ್ಕೆ) ಕಳಿಸಿದರು. ಆದರೆ, ಈಗ ಅವರು, 'ನೀವೇ ಮಾಡಲಿಲ್ಲ ಎಂದ ಮೇಲೆ ನಾವು ಏಕೆ ಮಾಡಬೇಕು' ಎಂದು ಕೇಳುವುದರಲ್ಲಿ ಏನರ್ಥವಿದೆ? ಅವರನ್ನು ಆಡಳಿತ ಪಕ್ಷವಾಗಿ ಕಳುಹಿಸಿರುವುದು ಅವರು ಮಾಡಲಿ ಎಂದು. ಮಾನ್ಯ ಸಭಾನಾಯಕರೆ, ಜನರು ನಮ್ಮನ್ನು ಇಲ್ಲಿಗೆ ಕರೆಸಿಕೊಂಡದ್ದೆ ಜನರ ಕೆಲಸ ಮಾಡಬೇಕೆಂದು ತಾವು ಹೇಳಿದ್ದೀರಿ. ಆದರೆ, ನೀವು ಅಲ್ಲಿಗೆ ಹೋದ ಕೂಡಲೇ ಇವರೆಲ್ಲರನ್ನೂ ಮರೆತು ಮಾನ್ಯ ಶ್ರೀನಿವಾಸ ಪೂಜಾರಿ ಅವರು ಏನು ವೀಳ್ಯ ಕೊಟ್ಟರಲ್ಲ ಆ ವೀಳ್ಯಕ್ಕೆ ನೀವು ಕೈ ಕೊಟ್ಟರಲ್ಲ ಇದು ಸರಿಯೇ? ಆ ರೀತಿ ಆಗಬಾರದಾಗಿತ್ತು. ನಾನು ನಿಖರವಾಗಿ ಹೇಳಿದೆ ನಿಮಗೆ 25ನೇ

ತಾರೀಖಿನವರೆವಿಗೆ ಕಾಲಾವಕಾಶವಿತ್ತು ಅಲ್ಲದೆ ಕೇಸ್ ಇದ್ದಿದ್ದು ಜುಲೈ 27ನೇ ತಾರೀಖಿಗೆ. ಇದರ ಮಧ್ಯದಲ್ಲಿ ಒಂದು ಸಭೆ ಕರೆಯಬಹುದಾಗಿತ್ತಲ್ಲವೆ? ಅಂದರೆ ನಮ್ಮನ್ನು ಮರೆಯುವಂತಹ ಪ್ರಯತ್ನ ಮಾಡಿದ್ದು ಸರಿ ಅಲ್ಲ ಎಂದು ನಾನು ಹೇಳುತ್ತಿರುವುದು.

**ಶ್ರೀ ವಿನಯಕುಮಾರ್ ಸೊರಕೆ(ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಅಡಿಕೆ ಬೆಳೆಗಾರರಾಗಿದ್ದಂತಹವರು, ತಮಗೆ ಮುಖ್ಯಮಂತ್ರಿ ಆಗುವಂತಹ ಅವಕಾಶ ಸಿಕ್ಕಿತ್ತು. ತಾವು ವಿರೋಧ ಪಕ್ಷದಲ್ಲಿದ್ದಂತಹ ಸಂದರ್ಭದಲ್ಲಿ ಅಡಿಕೆ ಬೆಳೆಗಾರರಿಗೋಸ್ಕರ ಹೋರಾಟವನ್ನು ಮಾಡಿದ್ದಿರಿ. ಅದರ ಪ್ರತಿಫಲವಾಗಿ ಮಾನ್ಯ ಎಸ್.ಎಂ. ಕೃಷ್ಣಾರವರ ಸರ್ಕಾರ ಸ್ಪಂದಿಸಿ ಅಡಿಕೆ ಬೆಳೆಗಾರರಿಗೆ ಬೆಂಬಲ ಬೆಲೆ ಕೊಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ತಾವು ಮುಖ್ಯ ಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ ಸುಳ್ಯ, ಪುತ್ತೂರು, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಎಲ್ಲಾ ಕಡೆಯಲ್ಲಿಯೂ ಅಡಕೆಗೆ ಕೊಳೆ ರೋಗ ಮತ್ತು ಹಳದಿ ರೋಗ ಬಂದು ಅಡಿಕೆ ಬೆಳೆ ನಾಶ ಆಗುವಂತಹ ಪರಿಸ್ಥಿತಿ ಬಂತು. ಆಗ ಅಡಿಕೆ ಬೆಳೆಗಾರು ನಮ್ಮ ರಕ್ಷಣೆಗೆ ಬರಬೇಕೆಂದು ತಮಗೆ ಸಾಕಷ್ಟು ಅರ್ಜಿಗಳನ್ನು ಕೊಟ್ಟಿದ್ದಾರೆ. ಗುಟ್ಕಾಗೆ ಕರಿಗೋಟು, ಅಡಕೆಯನ್ನು ಉಪಯೋಗ ಮಾಡುತ್ತಾರೆ. ಗುಟ್ಕಾ ಆರೋಗ್ಯಕ್ಕೆ ಹಾನಿಕಾರಕ, ಅದನ್ನು ರದ್ದುಮಾಡಬೇಕಾದಂತಹ ಅವಶ್ಯಕತೆ ಇದೆ ಎನ್ನುವಂತಹ ಮಾತನ್ನು ತಾವು ಒಪ್ಪಿಕೊಳ್ಳುತ್ತೀರಿ. ಆದರೆ ಗುಟ್ಕಾ ರದ್ದಾದ ಕೂಡಲೇ ಇಡೀ ಅಡಕೆ ಬೆಳೆಗೆ ಧಕ್ಕೆ ಆಗಿದೆ ಎಂದು ಏತಕ್ಕೆ ಆತಂಕ ಪಡುತ್ತಿದ್ದೀರಿ?

**ಶ್ರೀ ಆರ್.ಕೆ ಸಿದ್ದರಾಮಣ್ಣ:-** ಆತಂಕ ಏಕೆ ಸೃಷ್ಟಿ ಆಯಿತು ಎಂದರೆ, ನಿಮ್ಮ mercy order ಮೇಲೆ ಈ ಆತಂಕ ಸೃಷ್ಟಿ ಆಯಿತು.

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಾನೇನೋ ಒಂದು ಪಾಯಿಂಟ್ ಹೇಳುತ್ತಾರೆ ಎಂದು ತಿಳಿದುಕೊಂಡಿದ್ದೆ.

ಆದರೆ ಇದು ಬೇರೆ ಕಡೆಗೆ ಹೋಗುತ್ತಿದ್ದೆ. ಆದುದರಿಂದ ನಾನು yield ಆಗುವುದಿಲ್ಲ.

**ಶ್ರೀ ವಿನಯ್‌ಕುಮಾರ್ ಸೊರಕೆ:–** ಮಾನ್ಯ ಸಭಾಪತಿಯವರೇ, ಈಗ ಕೊಳೆ ರೋಗವಾಗಲಿ, ಹಳದಿ ರೋಗವಾಗಲಿ, ಪ್ರಕೃತಿ ವಿಕೋಪದಿಂದ ಅಡಿಕೆ ಬೆಳೆಗಾರರಿಗೆ ಆಗುವಂತಹ ನಷ್ಟವಾಗಲಿ ಎಲ್ಲವೂ ಕೂಡ ಈಗ ಉದ್ಭವ ಆದಂತಹ ಸಮಸ್ಯೆ ಅಲ್ಲ. ಹಿಂದಿನ ಸರ್ಕಾರ ಇದ್ದಾಗಲೂ ಸಹ ಆ ಸಮಸ್ಯೆ ಉದ್ಭವ ಆಗಿತ್ತು. ಇಂತಹ ಸಂದರ್ಭದಲ್ಲಿ ಇವತ್ತು ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಗುಟ್ಕಾ ನಿಷೇಧ ಮಾಡುವಂತಹ ಒಂದು ಅವಕಾಶ ಸಿಕ್ಕಿತು, ಅದೇ ರೀತಿ ಅಡಿಕೆ ಬೆಳೆಗಾರರಿಗೆ ಇರುವಂತಹ ತೊಂದರೆಯ ಬಗ್ಗೆಯೂ ಸಹ ಎರಡೂ ಸದನದಲ್ಲಿಯೂ ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕಿತು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡುವಂತಹ ಅವಕಾಶವನ್ನು ನಾವೇ ಮಾಡಿಕೊಂಡಿರುವುದು. ಮಾನ್ಯ ಸಚಿವರಿಗೆ ಅಡಕೆ ಬಗ್ಗೆ ಇನ್ನಷ್ಟು ವಿಚಾರಗಳನ್ನು ವಿಮರ್ಶೆ ಮಾಡಬೇಕೆಂಬ ಮನಸ್ಥಿತಿ ಇದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಹಳದಿ ರೋಗದ ಬಗ್ಗೆ ಅಧ್ಯಯನ ಮಾಡುವುದಕ್ಕೆ Horticulture University ಯ ನೇತೃತ್ವದಲ್ಲಿ ಒಂದು ತಂಡವನ್ನು ಕಳಿಸಲಾಗಿತ್ತು. ಶೃಂಗೇರಿ ಮತ್ತು ಸಂಪಾಜೆ ಭಾಗದಲ್ಲಿ ಇದರ ಅಧ್ಯಯನ ನಡೆಯಿತು. ಬೇಕಾದರೆ ಶ್ರೀಮತಿ ಮೋಟಮ್ಮನವರನ್ನೇ ಕೇಳಿ. ಆ ಸಂದರ್ಭದಲ್ಲಿ 'ಬೇಗ ಬೇಗ ಅಧ್ಯಯನ ವರದಿಕೊಡಿ' ಎಂದು ಅವರು ನನ್ನ ಮೇಲೆ ಜೋರು ಮಾಡಿದ್ದರು. ಮಾನ್ಯ ಮೋಟಮ್ಮನವರೇ ನೀವೇ ಸ್ವಲ್ಪ ಹೇಳಿ. ನಿಮಗೆ ಹುಷಾರು ಇಲ್ಲದೆ ಇರಬಹುದು ಆದರೆ ಸತ್ಯ ಹೇಳಬಹುದಲ್ಲವೆ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಪ್ರಸ್ತಾಪ ಮಾಡಿರುವಂತಹ ವಿಷಯ ಸರಿಯಾಗಿದೆ. ಆದರೆ, ಮುಂದೆ ಏನು

ಮಾಡಬಹುದು, ಹೇಗೆ ಮಾಡಬಹುದು ಎಂಬುದರ ಬಗ್ಗೆ ಸಲಹೆ ಕೊಡಿ. ಆ ರೀತಿ ಸಲಹೆ ಕೊಡುವುದನ್ನು ಬಿಟ್ಟು ಕೇವಲ ಟೀಕೆ ಮಾಡುತ್ತಾ ಹೋದರೆ ಏನು ಪ್ರಯೋಜನವಾಗುತ್ತದೆ? ನೀವು ಮುಖ್ಯಮಂತ್ರಿಗಳಾಗಿದ್ದಾಗ ನಾವು ಕೂಡ ಅಡಿಕೆ ಬಗ್ಗೆ 'ಘೋರಕ್‌ಚಂದ್' ವರದಿಯನ್ನು ಜಾರಿಗೆ ತನ್ನಿ ಎಂದು ಹೋರಾಟ ಮಾಡಿದ್ದೇವೆ, ನೀವು ಕೂಡ ಒಂದು ನಿಯೋಗವನ್ನು ಕರೆದುಕೊಂಡು ಹೋಗಿದ್ದೀರಿ. ಆ ಸಮಯದಲ್ಲಿ ನಾವು ಸಹ ಪ್ರಧಾನ ಮಂತ್ರಿಯವರನ್ನು ಹಾಗೂ ಆರ್ಥಿಕ ಸಚಿವರನ್ನು ಭೇಟಿ ಆಗಿದ್ದೇವೆ. ಅದರ ಬಗ್ಗೆ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ, ಈಗ ಮುಂದೆ ಏನು ಮಾಡಬಹುದು, ಯಾವ ರೀತಿ ಪರಿಹಾರ ಕೊಡಬಹುದು ಎಂಬುದರ ಬಗ್ಗೆ ಹೇಳಿ. ಸರ್ಕಾರ ಅದಕ್ಕೆ ಬದ್ಧವಾಗಿದೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಮೋಟಮ್ಮನವರು ಹೇಳುವುದು ಸರಿ ಇದೆ. ಏಕೆಂದರೆ ಸದನಗಳಲ್ಲಿ ಯಾವಾಗಲೂ constructive criticism criticism ಇರಬೇಕು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೇವಲ criticism ಮಾತ್ರ ಮಾಡುವುದಲ್ಲ, ಆ criticismಗೆ ನಿಮ್ಮ ಕಡೆಯಿಂದ ಏನು ಪರಿಹಾರ ಸೂತ್ರಗಳು ಇವೆ ಎಂಬುದನ್ನು ತಾವು ತಿಳಿಸಬೇಕು. ನಾನು ಬೆಳಿಗ್ಗೆ ಹಲವಾರು ಸೂತ್ರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ನಾನು ಹೇಳುವಂತಹ ಸಮಯದಲ್ಲಿ ಮಾನ್ಯ ವಿನಯಕುಮಾರ್ ಸೊರಕೆ ಅವರು ಇರಲಿಲ್ಲ. ನಾನು ಸುದೀರ್ಘವಾಗಿ ಇದರ ಬಗ್ಗೆ ಮಾತನಾಡಿದ್ದೇನೆ. ನಾವೂ ನೀವೂ ಹಾಗೂ ಇಡೀ ಅಡಿಕೆ ಬೆಳೆಗಾರರು ಸೇರಿದಂತೆ ಒಂದು ಸಭೆ ಕರೆದು ಅಲ್ಲಿ ಸುದೀರ್ಘವಾದಂತಹ ಚರ್ಚೆ ಮಾಡೋಣ. ಗುಟ್ಕಾಗೆ ಬೇಕಾದಂತಹ ಕಚ್ಚಾವಸ್ತು ಅಡಕೆ. ಗುಟ್ಕಾ ನಿಷೇಧದಿಂದಾಗಿ ಅಡಿಕೆ ನಿಷೇಧ ಆಗುವಂಥದ್ದು ಇದೆ. ಏಕೆಂದರೆ ನಿನ್ನೆಯಿಂದ ಆಹಾರ ಇಲಾಖೆಯವರು ಎಲ್ಲಾ ಕಡೆಗೆ ಹೋಗಿ ರೈಡ್ ಮಾಡಿದ್ದಾರೆ. ಅವರು ಕೇವಲ ಗುಟ್ಕಾ ಅಂಗಡಿಗಳನ್ನು ರೈಡ್ ಮಾಡಿಲ್ಲ, ಪಾನ್ ಮಸಾಲ ಮಾರುವಂತಹ ಅಂಗಡಿಗಳನ್ನು ಸಹ ಬಂದ್ ಮಾಡಿ ಅವರನ್ನು ಬೀದಿಗೆ ಹಾಕುವಂತಹ ಕೆಲಸವನ್ನು ಅಧಿಕಾರಿಗಳು ಮಾಡಿದ್ದಾರೆ. ಈ ರೀತಿ ಆಗಬಾರದು ಎನ್ನುವ ಕಾರಣಕ್ಕೋಸ್ಕರ ಅಡಕೆ

ಬೆಳೆಗಾರರ ಸಭೆ ಕರೆಯಬೇಕೆಂದು ತಿಳಿಸಿದ್ದು. ನಾವು ಈಗಾಗಲೇ ಇದರ ಬಗ್ಗೆ ನಾಲ್ಕು ಸೂತ್ರಗಳನ್ನು ತಿಳಿಸಿದ್ದೇವೆ. ಅದನ್ನು ಮತ್ತೊಮ್ಮೆ ಹೇಳುತ್ತೇನೆ.

ಮೊದಲನೆಯದಾಗಿ, ಅಡಿಕೆಗೆ ಪರ್ಯಾಯವಾದಂತಹ ವ್ಯವಸ್ಥೆಗಳನ್ನು ಅಂದರೆ ಅದರ ಉತ್ಪನ್ನಗಳಿಗೆ ಬೇರೆ ಬೇರೆ ವ್ಯವಸ್ಥೆ ಮಾಡಬೇಕು. ಮೂಡಿಗೆರೆಯಲ್ಲಿ ಅಡಿಕೆ ತಟ್ಟೆಯನ್ನು ತಯಾರು ಮಾಡುತ್ತಾರೆ ಅದನ್ನು ತಾವು ನೋಡಿರಬಹುದು. ಅಂಥವರಿಗೆ ಸ್ವ-ಉದ್ಯೋಗ ಮಾಡುವುದಕ್ಕೆ ಬದಲಿ ವ್ಯವಸ್ಥೆ ಮಾಡಬೇಕು. ಏಕೆಂದರೆ, ನಾಳೆ ದಿವಸ ಅಡಕೆ ತೋಟವೇ ನಶಿಸಿ ಹೋದರೆ ಏನಾಗಬಹುದು? ಇನ್ನು ಸೋಗೆ ಮುಖಾಂತರ ಸಾವಯುವ ಕೃಷಿ ಮಾಡುವಂಥದ್ದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಸಣ್ಣ ಸಣ್ಣ ಪೆಟ್ಟಿಗೆ ಅಂಗಡಿಗಳಲ್ಲಿ ಪಾನ್ ಮಸಾಲ ಮಾಡಿ ಮಾರಾಟ ಮಾಡಿ ಜೀವನ ಮಾಡುವಂತಹ ಲಕ್ಷಾಂತರ ಜನರಿಗೆ, ಯಾವುದೇ ಉದ್ಯೋಗ ಇಲ್ಲದವರಿಗೆ ಈ ಒಂದು ಗದಾಪ್ರಹಾರದಿಂದ ಅವರನ್ನು ಹೊರಗೆ ತರುವಂತಹ ಕೆಲಸ ಮಾಡಬೇಕು. ಇದಕ್ಕಾಗಿ 'ತರಾತುರಿ' ಯಲ್ಲಿ ಕೈಗೊಂಡಂತಹ ನಿರ್ಧಾರ ಸರಿ ಅಲ್ಲ. ಇವತ್ತು ನಾಳೆ ಇನ್ನೂ ಎರಡು ದಿನ ಸದನ ನಡೆಯುತ್ತದೆ, ಹಾಗಾಗಿ ನಾಳೆ ಸಾಯಂಕಾಲ ಎಷ್ಟು ಹೊತ್ತಿಗೆ ಸಭೆ ಸೇರೋಣವೆಂದು ಇವತ್ತೇ ಹೇಳಿ, ಸಂಘ ಸಂಸ್ಥೆಗಳನ್ನು ಕರೆದು ಬೇಕಾದರೆ ರಾತ್ರಿ ಇಡೀ ಚರ್ಚೆ ಮಾಡೋಣ, ಚರ್ಚೆ ಮಾಡಿ ಬದಲಿ ವ್ಯವಸ್ಥೆಯನ್ನು ಮಾಡೋಣ. ಮಾನ್ಯ ವಿನಯ್‌ಕುಮಾರ್ ಸೊರಕೆ ಅವರು ನಾನು ಮುಖ್ಯಮಂತ್ರಿಯಾಗಿದ್ದಾಗ ಏನು ಮಾಡಿದ್ದೀರಿ ಎಂದು ಕೇಳಿದರು.

**ಶ್ರೀ ವಿನಯಕುಮಾರ್ ಸೊರಕೆ:-** ಮಾನ್ಯ ಸಭಾಪತಿಯವರೇ, ನಾನು ಸಮಸ್ಯೆಯ ಬಗ್ಗೆ ಹೇಳಿದ್ದು.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ನಾನು ಮುಖ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಸಮಸ್ಯೆಗೆ ಪರಿಹಾರವನ್ನು ನೀಡುತ್ತಲೇ ಬಂದಿದ್ದೇನೆ. ಹಳದಿ ರೋಗದ ಬಗ್ಗೆ ಅಧ್ಯಯನಕ್ಕಾಗಿ ವಿಶೇಷ ತಂಡವನ್ನು ನಮ್ಮ Horticulture University ಯಿಂದ ಕಳಿಸಿಕೊಟ್ಟಿದ್ದೆ. ಆ

ರೋಗದ ಬಗ್ಗೆ ಅವರು ಅಧ್ಯಯನ ಮಾಡಿದ್ದಾರೆ. ಎರಡನೆಯದಾಗಿ, ಇದರಿಂದಾಗಿ ಯಾರ್ಯಾರು ತೊಂದರೆಗೆ ಒಳಗಾಗಿ ಪರಿಹಾರ ನೀಡಬೇಕೆಂದು ಅರ್ಜಿ ಹಾಕಿದ್ದರು ಅಂಥವರಿಗೆ ಒಂದು ಎಕರೆಗೆ ಹದಿನೈದು ಸಾವಿರ ರೂಪಾಯಿಗಳನ್ನು ಕೊಡುವಂತಹ ಕೆಲಸ ಕಾರ್ಯಗಳನ್ನು ಶೃಂಗೇರಿಯ ಭಾಗದಲ್ಲಿ ಮಾಡಿದ್ದೇವೆ. ಬೇಕಾದರೆ ಇದರ ಬಗ್ಗೆ ತಮಗೆ ಅಂಕಿ–ಅಂಶಗಳನ್ನು ಕೊಡಬಲ್ಲೆ.

ಮೂರನೆಯದಾಗಿ, ನಾವು ಮಾಡಿದ ದೊಡ್ಡ ಕೆಲಸ ಏನೆಂದರೆ ಇದಕ್ಕೆ ಪರ್ಯಾಯ ವ್ಯವಸ್ಥೆಯಾಗಿ National Horticulture Mission ನಿಂದ ನಮ್ಮ ರಾಜ್ಯದ ತೋಟಗಾರಿಕೆ ಇಲಾಖಾ ಕಾರ್ಯದರ್ಶಿ ಮತ್ತು ಕೃಷಿ ಇಲಾಖೆಯ ಕಾರ್ಯದರ್ಶಿಯವರು ನಮ್ಮ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಜೊತೆಯಲ್ಲಿ ಎರಡು ಬಾರಿ ಸಭೆ ನಡೆಸಿದ್ದರು. ನಾವೇನೂ ಸುಮ್ಮನೆ ಕುಳಿತಿರಲಿಲ್ಲ. ನನ್ನ ಅಧಿಕಾರವಧಿಯಲ್ಲಿ ಮತ್ತು ಅದಕ್ಕಿಂತ ಮೊದಲು ಅಡಿಕೆಯ ಧಾರಣೆ ಚೆನ್ನಾಗಿತ್ತು. ಅಂತಹ ಸಂದರ್ಭದಲ್ಲಿ ನಾವು ಈ ರೀತಿಯ ಚರ್ಚೆಗಳನ್ನು ಮಾಡುವುದಿಲ್ಲ. ಸಾಮಾನ್ಯವಾಗಿ ಧಾರಣೆಗಳು ಕುಸಿದು ನಮಗೆ ತೊಂದರೆ ಆದ ಸಂದರ್ಭದಲ್ಲಿ ಮಾತ್ರ ನಾವು ಮಧ್ಯೆ ಪ್ರವೇಶ ಮಾಡುವ ಕೆಲಸ ಮಾಡಿದ್ದೇವೆ. ಹಾಗಾಗಿ ನಾವು ನಿರಂತರವಾಗಿ ಅಡಕೆ ಬೆಳೆಗಾರರ ಪರವಾಗಿ ನಿಂತಿದ್ದೇವೆ. ಆದರೆ, ನಮಗಿಂತ ಹೆಚ್ಚಿನ ಅನುಕೂಲತೆಗಳನ್ನು ನೀಡಬಹುದೆಂದು ಜನರು ನಿಮಗೆ ಮತವನ್ನು ಹಾಕಿದ್ದಾರೆ. ಆದರೆ, ನೀವು ಕೈ ಕೊಟ್ಟಿದ್ದೀರಿ ಅದನ್ನು ಬಿಟ್ಟು ಬೇರೆ ಏನನ್ನು ಮಾಡಿಲ್ಲ. ಗುಟ್ಕಾ ನಿಷೇಧದ ನಂತರ ಅಡಿಕೆ ಧಾರಣೆ ಹೇಗೆ ಕುಸಿದಿದೆ ಎನ್ನುವ ಮಾರುಕಟ್ಟೆಯ ಅಂಕಿಅಂಶಗಳನ್ನು ನಾನು ಬೆಳಿಗ್ಗೆ ಸದನದಲ್ಲಿ ಹೇಳಿದ್ದೆನು, ಆ ಸಂದರ್ಭದಲ್ಲಿ ಮಾನ್ಯ ವಿನಯಕುಮಾರ ಸೊರಕೆಯವರು ಸದನದಲ್ಲಿ ಇರಲಿಲ್ಲ. ಈಗಲೂ ಸಹ ego ಬಿಟ್ಟು, ಈಗಾಗಲೇ ಆದೇಶ ಹೊರಡಿಸಲಾಗಿದೆ ಏನೂ ಮಾಡಲು ಸಾಧ್ಯವಿಲ್ಲ ಎನ್ನುತ್ತಾ ಈ ವಿಚಾರವನ್ನು ego problem ಆಗಿ ತೆಗೆದುಕೊಳ್ಳುವ ಪ್ರಯತ್ನವನ್ನು ಸರ್ಕಾರ ಮಾಡಬಾರದು. ಆಡಳಿತ ನಡೆಸುವವರು ಒಂದಷ್ಟು ಸೌಜನ್ಯದಿಂದ ಮತ್ತು ಆದಂತಹ ತಪ್ಪನ್ನು ತಿದ್ದುಕೊಳ್ಳುವಂತಹ ಪ್ರಯತ್ನಗಳನ್ನು

ಮಾಡಬೇಕೆಂಬುದು ನನ್ನ ವಿನಂತಿ, ಅದನ್ನು ಸರ್ಕಾರ ಮಾಡಬೇಕೆನ್ನುವುದು ನನ್ನ ಆಗ್ರಹ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲಿ ನಿಶ್ಚಿತಾರ್ಥ, ತಾಂಬೂಲ ಬದಲಾವಣೆ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ನಮ್ಮ ನಾಣಯ್ಯನವರು 6 ತಿಂಗಳ ಕಾಲ ಸರ್ಕಾರಕ್ಕೆ 'ಹನಿಮೂನ್ ಕಾಲ' ಎಂದು ಹೇಳಿದರು. ನಮ್ಮ ವಿಪಕ್ಷ ನಾಯಕರು 'ರೈತರಿಗೆ ಬರೆ ಎಳೆದಿರುವುದಾಗಿ' ಹೇಳಿದರು. ಹೇಗೆ ಸರ್ಕಾರ ಆರು ತಿಂಗಳ ಕಾಲ ಹನಿಮೂನ್ ಮಾಡುತ್ತದೆಯೋ ಹಾಗೆ ಅವರನ್ನು ಆರಿಸಿ ಕಳುಹಿಸಿರುವ ರೈತರು ಸಹ ಹನಿಮೂನನ್ನು ಆಚರಿಸಬೇಕಲ್ಲವೇ? ಮಧ್ಯರಾತ್ರಿಯಲ್ಲಿ ಯಾರಿಗೂ ತಿಳಿಯದ ಹಾಗೆ ಗುಟ್ಕಾ ನಿಷೇಧವನ್ನು ಸರ್ಕಾರ ಘೋಷಣೆ ಮಾಡಿದೆ. ಇದರಿಂದ ರಾಜ್ಯದಲ್ಲಿರುವ ಅಡಿಕೆ ಬೆಳೆಗಾರರೆಲ್ಲರೂ ಆತಂಕಕ್ಕೆ ಒಳಗಾಗಿದ್ದಾರೆ. ನಾವು ಗುಟ್ಕಾ ನಿಷೇಧಕ್ಕೆ ವಿರೋಧ ವ್ಯಕ್ತ ಮಾಡುತ್ತಿಲ್ಲ. ಆದರೆ ಇದನ್ನು ಮಾಡುವ ಮೊದಲು ಅಡಕೆ ಬೆಳೆಗಾರರ ಬಗ್ಗೆ ಗಂಭೀರವಾಗಿ ಆಲೋಚಿಸಿ, ಎಲ್ಲರನ್ನೂ ಸಂಪರ್ಕಿಸಿ ಈ ಕೆಲಸವನ್ನು ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈ ಸರ್ಕಾರ ಮಾತಿಗೆ ಮೊದಲು 'ಆರೋಗ್ಯ' ಎನ್ನುವ ಪದವನ್ನು ಬಳಕೆ ಮಾಡುತ್ತದೆ, ಈ ಸರ್ಕಾರಕ್ಕೆ ಆರೋಗ್ಯದ ಬಗ್ಗೆ ಪ್ರಾಮಾಣಿಕವಾಗಿ ಕಾಳಜಿ ಇದ್ದರೆ ಇದೇ ಮುಖ್ಯಮಂತ್ರಿಗಳು ಕಡಿಮೆ ದರದ ಮದ್ಯದ ಬಗ್ಗೆ ಮಾತನಾಡುತ್ತಿರಲಿಲ್ಲ. ಆರೋಗ್ಯದ ಬಗ್ಗೆ ಇಷ್ಟೊಂದು ಕಾಳಜಿ ಇರುವ ಸರ್ಕಾರ ಅದನ್ನು ಏಕೆ ಬ್ಯಾನ್ ಮಾಡಲಿಲ್ಲ.

(ಗೊಂದಲ)

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:–** ಮದ್ಯದ ವಿಚಾರ ಬಂದಾಗ ನಿಮಗೆ ಏಕೆ ಕಿಕ್ ಹೊಡೆಯುತ್ತಿದೆ?

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಸಿಗರೇಟನ್ನು ಬ್ಯಾನ್ ಮಾಡಬೇಕೆ ಬೇಡವೇ ಎನ್ನುವುದನ್ನು ಹೇಳಿ.

**ಶ್ರೀ ಮಾನೆ ಶ್ರೀನಿವಾಸ:–** ಈಗ ಗುಟ್ಕಾ ಬ್ಯಾನ್ ಆಗಿರುವುದನ್ನು ಸ್ವಾಗತ ಮಾಡಿ, ನಂತರ ಒಂದೊಂದಾಗಿ ಎಲ್ಲವೂ ಬ್ಯಾನ್ ಆಗುತ್ತವೆ.

**ಶ್ರೀಮತಿ ಭಾರತಿ ಶೆಟ್ಟಿ:–** ಈ ಸರ್ಕಾರಕ್ಕೆ ಆರೋಗ್ಯದ ಬಗ್ಗೆ ಅಷ್ಟು ಕಾಳಜಿ ಇದ್ದಲ್ಲಿ ಮದ್ಯವನ್ನು ಬ್ಯಾನ್ ಮಾಡಲಿ.

(ಗೊಂದಲ)

**ಶ್ರೀ ಅಲ್ಲಮಪ್ರಭು ಪಾಟೀಲ್:–** ಮಾನ್ಯ ಸಭಾಪತಿಗಳೇ, ಅಡಿಕೆ ಬೆಳೆಗಾರರ ಬಗ್ಗೆ ಬಹಳ ಚೆನ್ನಾಗಿ ಚರ್ಚೆ ನಡೆದಿದೆ. ಆ ಬೆಳೆಗಾರರಿಗೆ ಸಹಾಯ ಮಾಡುವ ಮಾತನ್ನು ಕೂಡ ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ಪುನಃ ವಿಷಯಾಂತರ ಮಾಡುವ ಕೆಲಸವನ್ನು ಶ್ರೀ ಗಣೇಶ್ ಕಾರ್ಣಿಕ್‌ರವರು ಮಾಡಬಾರದು.

**ಶ್ರೀ ಆರ್.ವಿ. ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಗಳೇ, ಈಗ ಸರ್ಕಾರ ಗುಟ್ಕಾ ನಿಷೇಧ ಮಾಡಿದ್ದಕ್ಕೆ ಅಡಿಕೆ ಬೆಳೆಗಾರರ ವಿಚಾರ ಎತ್ತಿದ್ದಾರೆ, ಸಿಗರೇಟು ಬ್ಯಾನ್ ಮಾಡಿದರೆ ತಂಬಾಕು ಬೆಳೆಗಾರರ ವಿಚಾರ ತರುತ್ತಾರೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ನಿಮ್ಮ ಸರ್ಕಾರಕ್ಕೆ ಬದ್ಧತೆ ಇದ್ದಲ್ಲಿ, ಸಿಗರೇಟನ್ನು ಬ್ಯಾನ್ ಮಾಡಿ.

**ಸಭಾಪತಿಯವರು:–** ಈಗ ಸದ್ಯಕ್ಕೆ ಅಡಿಕೆ ಬೆಳೆಗಾರರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಅಲ್ಲಮಪ್ರಭು ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ ಗುಲ್ಬರ್ಗಾ ಮತ್ತು ಬಿಜಾಪುರ ಭಾಗದಲ್ಲಿ ಹೆಣ್ಣು ನೋಡಲು ಹೋದಾಗ ಗುಟ್ಕಾ ತಿನ್ನುತ್ತಾನೆ ಎಂದು ತಿಳಿದರೆ ಯಾರು ಹೆಣ್ಣನ್ನು ಕೊಡುವುದಿಲ್ಲ. ಈ ಹಿನ್ನೆಲೆಯಲ್ಲಿ ಗುಟ್ಕಾ ನಿಷೇಧಕ್ಕೆ ನಮ್ಮೆಲ್ಲರ ಬೆಂಬಲವನ್ನು ವ್ಯಕ್ತಪಡಿಸುತ್ತಾ, ನಾವು ನೀವೆಲ್ಲರೂ ಸೇರಿ ಅಡಿಕೆ ಬೆಳೆಗಾರರ ಸಲುವಾಗಿ ಕೆಲಸವನ್ನು

ಮಾಡೋಣ. ನಮ್ಮ ಮುಖ್ಯಮಂತ್ರಿಗಳು ಅಡಕೆ ಬೆಳೆಗಾರರಿಗೆ ತೊಂದರೆ ಆದಲ್ಲಿ ಅವರ ಸಹಾಯಕ್ಕೆ ನಿಲ್ಲುವುದಾಗಿ ಹೇಳಿದ್ದಾರೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಗಳೇ, ಸರ್ಕಾರ ಒಳ್ಳೆಯ ಕೆಲಸ ಮಾಡಿದರೆ ಅವರಿಗೆ ಒಳ್ಳೆಯ ಹೆಸರು ಬಂದುಬಿಡುತ್ತದೆ ಎನ್ನುವುದು ಅವರ ಚಿಂತನೆಯಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೇ, ಸರ್ಕಾರ ಆರೋಗ್ಯದ ಬಗ್ಗೆ ವಿಶೇಷವಾಗಿ ಕಾಳಜಿಯನ್ನು ಮಾಡಿದ್ದರಿಂದ ನಾನು ಈ ವಿಚಾರವನ್ನು ಉಲ್ಲೇಖಿಸಿದ್ದೆನು. ಇಲ್ಲಿ ಸುಪ್ರೀಂ ಕೋರ್ಟಿನ ಆದೇಶವನ್ನೇ ಉಲ್ಲಂಘನೆ ಮಾಡಿದ್ದಾರೆ. ಏಕೆಂದರೆ, ಆ ದೇಶದಲ್ಲಿ ತಂಬಾಕು ಮತ್ತು ನಿಕೋಟಿನ್‌ನ ಉಲ್ಲೇಖವೂ ಇದೆ. ಈ ಆದೇಶದನ್ವಯ ಸಿಗರೇಟನ್ನು ಕೂಡ ಬಂದ್ ಮಾಡಬೇಕಾಗಿತ್ತು. ಗುಟ್ಕಾವನ್ನು ಮಾತ್ರ ಏಕೆ ಬ್ಯಾನ್ ಮಾಡಲಾಗಿದೆ? ಇದರ ಹಿಂದೆ ಏಕೆ ಲಾಬಿ ಇರಬಾರದು? ಅಂದರೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಹೇಳಿರುವುದನ್ನು....

**ಶ್ರೀ ಆರ್.ವಿ. ವೆಂಕಟೇಶ್:–** ಎಲ್ಲವನ್ನೂ ಒಂದೇ ಸಲಕ್ಕೆ ಮಾಡಲು ಸಾಧ್ಯವಿಲ್ಲ.

(ಗೊಂದಲ)

**ಸಭಾಪತಿಯವರು:–** ಯಾರಾದರೂ ಸದಸ್ಯರು ಮಾತನಾಡುವಾಗ ಮಧ್ಯೆ ಯಾರು ಮಾತನಾಡಬಾರದು. ಸದಸ್ಯರು ಮಾತನಾಡುವುದನ್ನು ಕೇಳಲು ತಯಾರಿಲ್ಲದಿದ್ದರೆ, ಸರ್ಕಾರದ ತೀರ್ಮಾನವನ್ನು ಕೇಳಿ ನಾನು ಸದನವನ್ನು ಮುಂದೂಡುತ್ತೇನೆ. ಸದನದ ಮಾತುಗಳನ್ನು ಕೇಳುವುದಕ್ಕೆ ತಯಾರಿಲ್ಲವೆಂದರೆ ಸದನ ನಡೆಸಲು ನನಗೆ ಕಷ್ಟ ಆಗುತ್ತದೆ. ಪ್ರತಿಯೊಬ್ಬರಿಗೂ ಮಾತನಾಡಲು ಅವಕಾಶ ದೊರೆಯುತ್ತದೆ. ಆಗ ನೀವು ಮಾತನಾಡಿ, ಚರ್ಚೆಯ ಮಧ್ಯೆ ಬಾಯಿ ಹಾಕಬೇಕು, ಚರ್ಚೆಯ ಸೊಗಡು ಇರಬೇಕು ಅದೆಲ್ಲಾ ಸರಿ. ಆದರೆ ಯಾರನ್ನೂ ಸಹ ಮಾತನಾಡಲಿಕ್ಕೆ ಬಿಡದಿರುವುದು ಸರಿಯಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೇ, ಸುಪ್ರೀಂ ಕೋರ್ಟಿನ ಆದೇಶ ಏನನ್ನು ಹೇಳುತ್ತದೆ ಎಂದರೆ ಗುಟ್ಕಾ ಒಂದು ಆಹಾರ ಪದಾರ್ಥ ಆಗಿದ್ದರೂ ಸಹ ಅದರಲ್ಲಿ ತಂಬಾಕು ಮತ್ತು ನಿಕೋಟಿನ್ ಇರುವುದರಿಂದ ಅದನ್ನು ಬ್ಯಾನ್ ಮಾಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ. ಹಿರಿಯ ಸದಸ್ಯರಾದ ಮಾನ್ಯ ನಾಣಯ್ಯನವರು ಸುಪ್ರೀಂ ಕೋರ್ಟಿನ ಆದೇಶದಲ್ಲಿ ಸಿಗರೇಟಿನ ಬಗ್ಗೆ ಉಲ್ಲೇಖ ಇಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ ಸಿಗರೇಟಿನಲ್ಲಿ ತಂಬಾಕು ಮತ್ತು ನಿಕೋಟಿನ್ ಇದೆ ಎನ್ನುವ ವಿಚಾರ ನಮ್ಮೆಗೆಲ್ಲರಿಗೂ ತಿಳಿದಿದೆ. ಇದನ್ನು ಆಧಾರವಾಗಿಟ್ಟುಕೊಂಡು ಜನರ ಆರೋಗ್ಯದ ಬಗ್ಗೆ ಕಾಳಜಿ ಇರುವ ಸರ್ಕಾರ ಸಿಗರೇಟನ್ನು ಏಕೆ ಬ್ಯಾನ್ ಮಾಡುತ್ತಿಲ್ಲ? ಅದಕ್ಕೂ ಸಹ ಸುಪ್ರೀಂ ಕೋರ್ಟಿನ ಆದೇಶವನ್ನು ಕಾಯುತ್ತಿದೆಯೇ? ಇದನ್ನು ಈಗ ಬ್ಯಾನ್ ಮಾಡಲು ಸಾಧ್ಯವಿಲ್ಲವೇ?

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಗಳೇ, ಈ ಸಂದರ್ಭದಲ್ಲಿ ನನ್ನ ಹೆಸರನ್ನು ಉಲ್ಲೇಖ ಮಾಡಿರುವ ಹಿನ್ನಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ನಾವಿಲ್ಲಿ ವಿಷಯವನ್ನು ವಿಷಯಾಂತರ ಮಾಡಿಕೊಂಡು ಹೋಗುತ್ತಿದ್ದೇವೆ. ಇವತ್ತು ಸುಪ್ರೀಂ ಕೋರ್ಟಿನವರು ಈ ತೀರ್ಮಾನವನ್ನು ನೀಡಬೇಕಾದ ಹಿನ್ನೆಲೆ, ಏನೆಂದರೆ ರಾಜಸ್ಥಾನ ಸರ್ಕಾರದವರು ಗುಟ್ಕಾ ನಿಷೇಧ ಮಾಡಿದ ಹಿನ್ನಲೆಯಲ್ಲಿ ಅಲ್ಲಿನ ಅಂಕುರ ಗುಟ್ಕಾ ಕಂಪನಿ ಎನ್ನುವವರು ರಾಜಸ್ಥಾನದ ಹೈಕೋರ್ಟಿನಲ್ಲಿ ಒಂದು ರಿಟ್ ಪಿಟಿಷನ್ ಅನ್ನು ಫೈಲ್ ಮಾಡಿದ್ದರು. ಹೈಕೋರ್ಟಿನವರು ಅದನ್ನು uphold ಮಾಡಿ ಗುಟ್ಕಾ ಬ್ಯಾನ್ ಮಾಡಿರುವ ಸರ್ಕಾರದ ಉದ್ದೇಶ ಸರಿಯಾಗಿದೆ ಎಂದು ತೀರ್ಪನ್ನು ನೀಡಿದರು. ನಂತರ ಈ ವಿಚಾರ Special Leave Petition ಪ್ರಕಾರ 2007ರಲ್ಲಿ ಸುಪ್ರೀಂ ಕೋರ್ಟಿಗೆ ಹೋಯಿತು. ಈ ಸಂದರ್ಭದಲ್ಲಿ ಇಡೀ ದೇಶದಲ್ಲಿನ ಸುಮಾರು 25-30 ಗುಟ್ಕಾ ತಯಾರು ಮಾಡತಕ್ಕ ಕಂಪನಿಗಳು ಸುಪ್ರೀಂ ಕೋರ್ಟಿಗೆ ಹೋದವು. 2012 ನೇ ಇಸವಿಯಲ್ಲಿ ಸುಪ್ರೀಂ ಕೋರ್ಟ್ ಒಂದು ಆದೇಶವನ್ನು ನೀಡಿತು.

(4.30 ಗಂಟೆ)

ಆ ಸಂದರ್ಭದಲ್ಲಿ ಪ್ಲಾಸ್ಟಿಕ್‌ಗಳಲ್ಲಿ ಪಾನ್ ಮಸಾಲವನ್ನು ಕೊಡುತ್ತಿದ್ದು, Pollution Control Board ನವರು ಪ್ಲಾಸ್ಟಿಕ್‌ನಲ್ಲಿ ಬರುವ content, that itself is a chemical ಎಂದು ಬ್ಯಾನ್ ಮಾಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕೆಂದು ಪ್ರಶ್ನೆ ಬಂತು. ಆಗ Superme Court ultimately took the decision. ನಾನು ಆಗಲೇ ಹೇಳಿದ್ದೇನೆ. Paan masala as well as gutka ಮತ್ತು ಅದರ ಜೊತೆ ಪ್ಲಾಸ್ಟಿಕ್ ಕಂಟೈನರ್‌ಗಳೆಲ್ಲವನ್ನು ಬ್ಯಾನ್ ಮಾಡಬೇಕು ಎನ್ನುವ ಅಂತಿಮ ತೀರ್ಮಾನಕ್ಕೆ ಬಂತು. ಸುಪ್ರೀಂಕೋರ್ಟ್ ಈ ತೀರ್ಮಾನವನ್ನು ಮಾಡದಿದ್ದರೆ ರಾಷ್ಟ್ರದ ಉದ್ದಗಲಕ್ಕೂ ಯಾವುದೇ ರಾಜ್ಯ ಸರ್ಕಾರ ಗುಟ್ಕಾವನ್ನು ಬ್ಯಾನ್ ಮಾಡುತ್ತಿರಲಿಲ್ಲ. Because this is a commercial proposition. ಇದರಲ್ಲಿ ಬಹಳ ದೊಡ್ಡದಾದ ಲಾಬಿ ಇದೆ. ಮಾನ್ಯ ಸಭಾಪತಿಯವರೇ, ನಮ್ಮ ರಾಷ್ಟ್ರದಲ್ಲಿರುವ ದೊಡ್ಡ ಲಾಬಿಗಳು ತಮಗೆ ಗೊತ್ತಿದೆ. ಅದರಲ್ಲಿ this gutka is also one of the most powerful lobbies. ಶಿಕ್ಷಣದ ಲಾಬಿ, ಜ್ಯೂಟ್ ಲಾಬಿ, ಮಟ್ಕಾ ಲಾಬಿಗಳಂತೆ ಇದೂ ಒಂದು ಲಾಬಿಯಾಗಿದೆ. ನಮ್ಮ ಸರ್ಕಾರ ಏಕೆ ಮಾಡಬೇಕಾಗಿ ಬಂತು ಎಂಬುದನ್ನು ದಯವಿಟ್ಟು ಕೇಳಿ, ಇದನ್ನು ಮಾನ್ಯ ಸದಾನಂದಗೌಡರು ಒಪ್ಪುತ್ತಾರೆ ಎಂದು ಭಾವಿಸುತ್ತೇನೆ. ಇದು ನಿನ್ನೆ-ಇವತ್ತು ಬಂದಿಲ್ಲ. It has been there since more than about four, five years. ಇದು ನಾಲ್ಕೈದು ವರ್ಷಗಳಿಂದ ಬಂದಿರುವ ವಿಚಾರವಾಗಿದ್ದು, every now and then, ರಾಜ್ಯ ಸರ್ಕಾರವು ಅಟೆಂಡ್ ಆಗಿ we want four weeks time, six weeks time, eight weeks time ಎಂದು Supreme Court ನಿಂದ ಸಮಯವನ್ನು ತೆಗೆದುಕೊಂಡು ಕೊನೆಗೆ ಯಾವ ರಾಜ್ಯ ಸರ್ಕಾರವು ಇದನ್ನು ಮಾಡಲು ಪ್ರಯತ್ನ ಮಾಡದಿದ್ದಾಗ they gave a directive. 'By such and such a time all the Chief Secretaries are hereby directed to file the affidavit or else we will take action against you' ಎಂದು ಬಂದ ಕೂಡಲೇ ಇವರು ಜಾಗೃತರಾದರು. ನಮ್ಮ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಒಂದು ಪತ್ರ ಬಂದಿದೆ. ಅದರಲ್ಲಿ ದಿನಾಂಕ

25/6/2013ರವರೆಗೆ ಡೆಡ್‌ಲೈನ್ ಅನ್ನು ಸುಪ್ರೀಂಕೋರ್ಟ್ ಫಿಕ್ಸ್ ಮಾಡಿದೆ. ಈ ಡೆಡ್‌ಲೈನ್ ಬಂದಾಗ ಶ್ರೀಮಾನ್ ಸದಾನಂದಗೌಡರು, ಶ್ರೀ ಜಗದೀಶ್ ಶೆಟ್ಟರ್ ಹಾಗೂ ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಇದು ನಿನ್ನೆ–ಮೊನ್ನೆ ಬಂದಿಲ್ಲ. ಆದರೆ, ಇವರು ದಿನಾಂಕ 25/6/2013ರವರೆಗೆ ಸಮಯ ಇದ್ದಿದ್ದರಿಂದ ಎಲ್ಲರನ್ನು ಕರೆದು ಚರ್ಚೆ ಮಾಡಬಹುದಾಗಿತ್ತು ಎಂದು ಕೇಳುತ್ತಿದ್ದಾರೆ. ಇನ್ನು ನಾನು ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಮೇ 8ನೇ ತಾರೀಖಿನವರೆಗೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇತ್ತು. ನಂತರ ರಾಜೀನಾಮೆ ಕೊಟ್ಟು ಹೊರ ಬಂದರು. ಬಹುಶಃ ಅವರೇ ಅಧಿಕಾರದಲ್ಲಿ ಇದ್ದಿದ್ದರೆ What decision you would have taken regarding this? Please tell me. ಅವರ ಜೊತೆ ಇದ್ದ ಅಧಿಕಾರಶಾಹಿಯವರೇ ಇಂದೂ ಇದ್ದಾರೆ. ಸುಪ್ರೀಂಕೋರ್ಟ್‌ನವರು ದಿನಾಂಕ 25/6/2013ರೊಳಗೆ ಮಾಡಬೇಕೆಂದು ನಿರ್ದೇಶನ ಕೊಟ್ಟಿದ್ದಾರೆ. ಅದನ್ನು ಫೈಲ್ ಮಾಡಲೇಬೇಕಾಗುತ್ತದೆ. ಗುಟ್ಕಾ, ಪಾನ್‌ಮಸಾಲ ಮತ್ತು ಪ್ಲಾಸ್ಟಿಕ್ ಕಂಟೈನರ್ ಬ್ಯಾನ್ ಮಾಡಲೇಬೇಕು. File the affidavit ಎಂದು ಕೊನೆಗೆ ಒಂದು ಪದವನ್ನು ಉಪಯೋಗಿಸುತ್ತಾರೆ. ಅದೇನೆಂದರೆ, If you don't do this, you will be at parade and we will have to initiate proceedings against you. ಈ ಸಂದರ್ಭದಲ್ಲಿ ಸರ್ಕಾರದ ಮೇಲೆ, ಆರೋಗ್ಯ ಸಚಿವರಾದ ಶ್ರೀಯುತ ಖಾದರ್ ಅವರ ಮೇಲೆ ಹೇಳುವುದಲ್ಲ. ultimately, any civilized Government will have to accept the decision of the Supreme Court. ನಮ್ಮ ಸರ್ಕಾರ ಅಸ್ತಿತ್ವದಲ್ಲಿದ್ದರೂ ಅದನ್ನೇ ಮಾಡಬೇಕಾಗಿತ್ತು. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದರೆ you had no other alternative but to do this. But the only thing is, ಇವತ್ತು ಬೆಲೆ ಇನ್ನು ಕಡಿಮೆಯಾದರೆ, the total volume of arecanut that would be used in the formation of gutka. To that extent, ಅದಕ್ಕೆ ಮಾರುಕಟ್ಟೆಯನ್ನು ಎಲ್ಲಿ ಕಂಡುಹಿಡಿಯುವುದು ಎನ್ನುವುದೇ ನನ್ನ ಪ್ರಶ್ನೆ.

ಇನ್ನು ಸಿಗರೇಟ್ ಬ್ಯಾನ್ ಮಾಡುವ ಬಗ್ಗೆ ನಾಳೆ ಯಾರಾದರೂ ಸುಪ್ರೀಂಕೋರ್ಟ್‌ಗೆ ಹೋಗಿ ಸುಪ್ರೀಂಕೋರ್ಟ್‌ನವರು ಸಿಗರೇಟ್ ಬ್ಯಾನ್ ಮಾಡಿ ಎಂದು ಹೇಳಿದರೆ ಮಾತ್ರ ಆಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ ಎನ್ನುವ ಸತ್ಯವನ್ನು ಅರಿತುಕೊಳ್ಳೋಣ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಆಚೆ ಕಾಂಗ್ರೆಸ್ ಹಾಗೂ ಈಚೆ ಬಿಜೆಪಿ ಮಧ್ಯದಲ್ಲಿರುವವರು ಮಾನ್ಯ ನಾಣಯ್ಯನವರು ಆಗಿದ್ದಾರೆ. ಆದ್ದರಿಂದ ಯಾವುದೇ ಚರ್ಚೆಗಳು ಬಂದಾಗಲೂ ಯಾವರೀತಿ ಸೂಟ್ ಆಗುತ್ತದೋ, ಆ ರೀತಿ ವಾದಗಳನ್ನು ಮಂಡಿಸುತ್ತಾರೆ.

(ಗೊಂದಲ)

ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಇದು ಬಿಜೆಪಿ ಸರ್ಕಾರ ಇದ್ದಾಗಲೇ ಬಂತು. ಆಗ ಬಿಜೆಪಿ ಸರ್ಕಾರಕ್ಕೆ ಅಡಕೆ ಬೆಳೆಗಾರರ ಬಗ್ಗೆ ನಿರಂತರವಾಗಿ ಮಾಡುತ್ತಿರುವ ಕೆಲಸ ಕಾರ್ಯಗಳ ಹಿನ್ನೆಲೆಯಲ್ಲಿ ಇದನ್ನು ಕೂಡ ಒಂದು wide discussions ಮಾಡಿ, affidavit file ಮಾಡಬೇಕೆಂಬ ಉದ್ದೇಶ ಇತ್ತು. ಆದರೆ ನಮ್ಮ ಉದ್ದೇಶದ ಬಗ್ಗೆ ಮಾನ್ಯ ನಾಣಯ್ಯನವರಿಗೆ ಅರಿವಿಲ್ಲ. ಅವರ ಕಾಲದಲ್ಲಿ ಏಕೆ ಮಾಡಿಲ್ಲ ಎಂದು ಹೇಳಲಿ. ನಮ್ಮ ಕಾಲದಲ್ಲಿ ಮಾಡಿಲ್ಲ ಎಂಬುದಕ್ಕೆ ನಾನು ಕಾರಣಗಳನ್ನು ಕೊಡುತ್ತಿದ್ದೇನೆ. ಏಕೆಂದರೆ ರೆಕಾರ್ಡ್ ಸರಿಹೋಗಬೇಕು. ಆರೋಪಗಳನ್ನು deviate ಮಾಡಿಕೊಂಡು ಪುನಃ ಯು ಟರ್ನ್ ಮಾಡಿಕೊಂಡು ನಮ್ಮ ಕಡೆ ತೆಗೆದುಕೊಂಡು ಹೋಗಬಾರದು. ನಾವು ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೆವು. ಇದರ ಬಗ್ಗೆ ಚರ್ಚೆ ಮಾಡಿಬೇಕೆಂದು ಇದ್ದೆವು. ಆದರೆ ಚುನಾವಣೆ ಘೋಷಣೆಯಾಗಿ ಆ ಕಾರ್ಯಗಳನ್ನು ಮಾಡಲು ಆಗಲಿಲ್ಲ. ನಂತರ ಜನಾದೇಶ ಬೇರೆಯಾಗಿ ಬಿಜೆಪಿ ಸಾಕು, ಅವರಿಗೂ ಆಡಳಿತ ಮಾಡಲು ಕೊಡಿ ಎಂದು ಕಾಂಗ್ರೆಸ್ ಪರವಾಗಿ ಆಯಿತು. ನಾವು ಮಾಡಲಿಲ್ಲ ಎನ್ನುವುದು ಸರಿ, ಆದರೆ, ನಂತರ ಅಧಿಕಾರಕ್ಕೆ ಬಂದವರು

ಅದನ್ನು ಮಾಡಬೇಕೆಂಬುದು ನಮ್ಮ ಆಶಯ. ಮಾನ್ಯ ನಾಣಯ್ಯನವರು ಹೇಳಿದ್ದನ್ನೆ taken for granted ಎಂದು ತೆಗೆದುಕೊಂಡು ನಾವು ಮಾಡಿಲ್ಲ, ನಾವು ಮಾಡಿಲ್ಲವೆಂದರೆ ಅವರು ಮಾಡಬಾರದೆಂದು ಇದೆಯೇ? ನಮ್ಮ ಮೂಲ ವಾದವೇ ಇದು. Right from the beginning we are telling that, we are conceding the order issued by the Government. ಗುಟ್ಕಾ ಬ್ಯಾನ್ ಮಾಡಿರುವುದನ್ನು ಸ್ವಾಗತ ಮಾಡುತ್ತಿದ್ದೇವೆ ಎಂದು ಹೇಳಿದ್ದೇನೆಯೇ ಹೊರತು ವಿರೋಧ ಮಾಡುತ್ತಿದ್ದೇವೆಂದು ಹೇಳುತ್ತಿಲ್ಲ. ರೈತರ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದೇನೆಯೇ ಹೊರತು ಗುಟ್ಕಾ ನಿಷೇಧದ ಬಗ್ಗೆ ಮಾತನಾಡುತ್ತಿಲ್ಲ. ಇದನ್ನು ನಾವು ಅಥವಾ ಕಾಂಗ್ರೆಸ್ ಮಾತ್ರವಲ್ಲ, ಒಂದು ವೇಳೆ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದರೂ ಮಾಡಲೇಬೇಕು. ಅವರು ಅಧಿಕಾರಕ್ಕೆ ಬರುವ chances ಇಲ್ಲ, ಆದರೂ ಕೂಡ ಹೇಳಿದೆ. ಏಕೆಂದರೆ ಕಡತಕ್ಕೆ ತಪ್ಪು ಹೋಗಬಾರದು, ನಾವು ಗುಟ್ಕಾ ನಿಷೇಧದ ಬಗ್ಗೆ ಹೇಳಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಭಾಗದಿಂದ ಮಾತನಾಡಿರುವ ನಾವೆಲ್ಲರೂ ಗುಟ್ಕಾ ಬ್ಯಾನ್ ಬಗ್ಗೆ ಮಾತನಾಡಿಲ್ಲ ಆದರೆ, ಅಡಿಕೆ ಬೆಳೆಗಾರರ ರಕ್ಷಣೆಗೆ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದೇ ಏಕಾಏಕಿ ನಿರ್ಣಯ ತೆಗೆದುಕೊಂಡಿರುವುದರಿಂದ ಅವರು ಆತಂಕಕ್ಕೆ ಒಳಗಾಗಿದ್ದಾರೆ. ಅವರ ಆತಂಕ ಪರಿಹಾರ ಮಾಡಲು ಏನು ಮಾಡಬೇಕೆಂಬ ನಿರ್ಣಯ ಮಾಡಲು ಹೇಳುತ್ತಿದ್ದೇವೆ. ಕೊನೆಗೆ ಮೂರ್‍ನಾಲ್ಕು ಸಲಹೆಗಳನ್ನು ಕೊಡುತ್ತೇನೆ. ಮೊದಲನೆಯದಾಗಿ, ಅವರಿಗೆ ಕೊಟ್ಟಿರುವ ಸಾಲವನ್ನು ಮನ್ನಾ ಮಾಡಬೇಕು. ಎರಡನೆಯದಾಗಿ, ಹಳದಿ ರೋಗದಿಂದ ಅಥವಾ ಬೇರೆ ಕಾರಣದಿಂದ ತೊಂದರೆಗೊಳಗಾದಾಗ ಹೊಸ ವ್ಯವಸ್ಥೆ ಕಲ್ಪಿಸಲು ಒಂದು ಪ್ಯಾಕೇಜ್ ಘೋಷಣೆ ಮಾಡಬೇಕು. ಮೂರನೆಯದಾಗಿ, ಹಳದಿ ರೋಗಕ್ಕೆ ಸಂಬಂಧಪಟ್ಟಂತೆ ಶೃಂಗೇರಿಯಲ್ಲಿ ಒಂದೆರಡು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಸಂಸ್ಥೆಯನ್ನು ಪ್ರಾರಂಭ ಮಾಡಿದ್ದಾರೆ, ಅಲ್ಲಿ ವಿಶೇಷವಾದ ಅಧ್ಯಯನ ನಡೆಸಿ ಹಳದಿ ರೋಗಕ್ಕೆ ಕಾರಣಗಳೇನು? ಅದನ್ನು ಹೇಗೆ

ನಿಯಂತ್ರಣ ಮಾಡಬೇಕು ಎಂಬ ಬಗ್ಗೆ ಒತ್ತು ಕೊಟ್ಟು ಕ್ರಮ ತೆಗೆದುಕೊಳ್ಳಬೇಕು. ನಾನು ಅಡಕೆ ಬೆಳೆಗಾರರ ರಕ್ಷಣೆಗೆ ಮಾಡಬೇಕಾದ ಕೆಲಸಗಳ ಬಗ್ಗೆ ಹೇಳುತ್ತಿದ್ದೇನೆ. ಇದನ್ನು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದು, ಆ ಕೆಲಸವನ್ನು ಮಾಡಬೇಕು. ಇನ್ನು ನಾಲ್ಕನೆಯದಾಗಿ, what is the industrial use of areca? ಎಂಬುದರ ಬಗ್ಗೆ ಸಂಶೋಧನೆ ಆಗಿಲ್ಲ. ಅದರಲ್ಲಿ ವೈದ್ಯಕೀಯ, ಆರೋಗ್ಯಕ್ಕೆ ಸಂಬಂಧಪಟ್ಟ ಅಂಶಗಳು ಇವೆ. ಅದನ್ನು industrial purpose ಗೆ ಹೇಗೆ ಉಪಯೋಗ ಮಾಡಬಹುದು ಎಂಬಿತ್ಯಾದಿ ವಿಷಯಗಳ ಬಗ್ಗೆ ವಿಸ್ತೃತವಾದ ಅಧ್ಯಯನ ನಡೆಸಿ ಅಡಿಕೆ ಬೆಳೆಗಾರರಿಗೆ ಪೂರಕವಾಗುವ ಯಾವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು ಎಂಬ ಬಗ್ಗೆ ಅಧ್ಯಯನ ಅಥವಾ ಸಂಶೋಧನೆ ಮಾಡುವುದಕ್ಕೆ ವಿಶೇಷ ಕ್ರಮ ಕೈಗೊಳ್ಳಬೇಕು. ಕೊನೆಯದಾಗಿ, ಲಕ್ಷಾಂತರ ಟನ್‌ಗಳ ಅಡಿಕೆ ಆಮದಾಗುತ್ತಿದ್ದು, ನಮ್ಮ ಅಡಿಕೆ ಬೆಳೆಗಾರರು ಬೆಳೆದ ಅಡಿಕೆಗೆ ಒಳ್ಳೆಯ ಬೆಲೆ ಸಿಗುತ್ತಿಲ್ಲ. ಆದರೆ ಎಲ್ಲೋ ಒಂದು ಕಡೆ ಆಮದು ಸುಂಕವನ್ನು ಜಾಸ್ತಿ ಮಾಡಿ ಎಂದು ಹೇಳುವುದನ್ನು ಹೊರತುಪಡಿಸಿ, ಅವಶ್ಯಕತೆಯಿರುವ ಅಡಕೆಯನ್ನು ನಾವೇ ಬೆಳೆಯುತ್ತಿರುವುದರಿಂದ ಮತ್ತು ನಮಗೆ ಅಗತ್ಯವಿಲ್ಲದೇ ಇರುವುದರಿಂದ ಸಂಪೂರ್ಣವಾಗಿ ಅಡಕೆ ಆಮದನ್ನು ಬ್ಯಾನ್ ಮಾಡಬೇಕು. ಇದನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಒಟ್ಟಿಗೆ ಮಾತನಾಡಿ ಮಾಡಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀಮತಿ ತಾರಾ ಅನೂರಾಧ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅಡಕೆ ಬೆಳೆಗಾರರ ಸಂಕಷ್ಟಗಳನ್ನು ಮಾನ್ಯ ಸಭಾನಾಯಕರು ಸವಿಸ್ತಾರವಾಗಿ ಸರ್ಕಾರದ ಮುಂದೆ ಇಟ್ಟಿದ್ದಾರೆ. ಅಡಿಕೆ ಬೆಳೆಯಿಂದ ಬೇರೆ ರೀತಿಯ ಅಡಿಕೆ ತಾಟು, ಸೋಪು, face wash, ಶಾಂಪುಗಳನ್ನು ಸಹ ತಯಾರು ಮಾಡಬಹುದಾಗಿದೆ. ಇವುಗಳಿಗೆ ಸರ್ಕಾರವು ಒಳ್ಳೆಯ ಬೆಲೆಗಳನ್ನು ನಿಗದಿಪಡಿಸಬಹುದು. ಎಲ್ಲಾ ಸರ್ಕಾರಗಳು ರೈತರ ಪರವಾದ ಸರ್ಕಾರ ಎಂದು ಹೇಳುತ್ತಲೇ ಬಂದಿವೆ. ಪ್ರತಿ ಹೊಸ ಸರ್ಕಾರ ಬಂದಾಗಲೂ ಇದನ್ನೇ ಹೇಳುತ್ತವೆ. ಏಕೆಂದರೆ ರೈತರು ನಮ್ಮ ದೇಶದ

ಬೆನ್ನೆಲುಬಾಗಿದ್ದಾರೆ. ಒಬ್ಬ ಅಧಿಕಾರಿ ಆತನ ಮಗನು ಆತನಿಗಿಂತ ಉನ್ನತ ಅಧಿಕಾರದಲ್ಲಿ ಇರಬೇಕೆಂದು ಬಯಸುತ್ತಾನೆ. ಒಬ್ಬ ಸಿನಿಮಾ ಕಲಾವಿದ ಆತನ ಮಕ್ಕಳು ಸಿನಿಮಾ ಕ್ಷೇತ್ರದಲ್ಲಿ ಒಳ್ಳೆಯ ಹೆಸರು ಮಾಡಬೇಕೆಂದು ಬಯಸುತ್ತಾರೆ. ಆದರೆ ಒಬ್ಬ ರೈತ ಆತನ ಮಗ ರೈತನಾಗಬೇಕೆಂದು ಬಯಸುವುದಿಲ್ಲ. ಅಂತಹ ಸ್ಥಿತಿಯನ್ನು ತಂದಿಟ್ಟಿದ್ದೇವೆ ಎನ್ನುವುದು ನನ್ನ ಭಾವನೆ.

ಸನ್ಮಾನ್ಯ ಸಭಾಪತಿಯವರೇ, ಅಧಿಕಾರಕ್ಕೆ ಬಂದಂತಹ ಎಲ್ಲ ಸರ್ಕಾರಗಳು ರೈತರಿಗೆ ಅನುದಾನಗಳನ್ನು ಮತ್ತು ಸಾಲಗಳನ್ನು ಕೊಟ್ಟು ಕೊಟ್ಟು ಕೆಲವು ರೈತರು ಬೆಳೆ ಬೆಳೆಯುವುದನ್ನೇ ಮರೆತು ಹೋಗಿದ್ದಾರೆ. ರೈತ, ತನ್ನ ಮಗನನ್ನು ಕೂಡ ರೈತನನ್ನಾಗಿ ಮಾಡಬೇಕು ಎನ್ನುವ ಪರಿಸ್ಥಿತಿಯನ್ನು ಹೊಸ ಸರ್ಕಾರ ನಿರ್ಮಾಣ ಮಾಡಬೇಕು ಎನ್ನುವಂತಹ ಆಶಯ ಮತ್ತು ಕನಸು ನನ್ನದಾಗಿದೆ. ರಾಜ್ಯ ಸರ್ಕಾರ ಗುಟ್ಕಾ ನಿಷೇಧಿಸಿರುವುದನ್ನು ನಾವೆಲ್ಲರೂ ಸ್ವಾಗತಿಸುತ್ತೇವೆ. ಗುಟ್ಕಾದಲ್ಲಿ ಇರುವಂತಹ ವಿಷ ಆರೋಗ್ಯಕ್ಕೆ ಎಷ್ಟು ಹಾನಿಕಾರಕ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಸಿಗರೇಟು ಕೂಡ ಅದಕ್ಕಿಂತ ಹಾನಿಕಾರಕ ಎಂದು ಗೊತ್ತಿದ್ದರೂ ಸಹ ಧೂಮಪಾನ ಮಾಡುತ್ತಾರೆ. ಸಿನಿಮಾಗಳಲ್ಲಿ ಧೂಮಪಾನ ಮಾಡುವಂತಹ ಸನ್ನಿವೇಶಗಳು ಬಂದಾಗ 'ಧೂಮಪಾನ ಆರೋಗ್ಯಕ್ಕೆ ಹಾನಿಕಾರ' ಎಂದು ಸಬ್ ಟೈಟಲ್ ಹಾಕುತ್ತೇವೆ ಅಥವಾ ಸಿನಿಮಾ ಪ್ರಾರಂಭ ಆಗುವುದಕ್ಕೂ ಮುಂಚೆ ಅಂದರೆ ಟೈಟಲ್ ಕಾರ್ಡ್‌ಗೂ ಮೊದಲೇ, 'ಸೆನ್ಸಾರ್ ಬೋರ್ಡ್ ಆದೇಶದ ಪ್ರಕಾರ ಧೂಮಪಾನ ಮತ್ತು ಮದ್ಯಪಾನ ಆರೋಗ್ಯಕ್ಕೆ ಹಾನಿಕಾರ' ಎನ್ನುವಂತಹ ಸಬ್ ಟೈಟಲ್ ಹಾಕುತ್ತಿದ್ದೇವೆ. ಈ ಎಲ್ಲ ಕ್ರಮವನ್ನು ತೆಗೆದುಕೊಂಡರೂ ಸಹ ಎಲ್ಲೋ ಒಂದು ಕಡೆ ಮತ್ತೇ ಮತ್ತೇ ಅವುಗಳನ್ನು ಪ್ರೋತ್ಸಾಹಿಸುತ್ತಾ ಬರುತ್ತಿದ್ದೇವೆ. ಆದ್ದರಿಂದ ಸಿಗರೇಟ್ ನಿಷೇಧದ ಬಗ್ಗೆ ಸುಪ್ರೀಂ ಕೋರ್ಟಿನ ಆದೇಶ ಬೇಗ ಬರಲಿ, ಸಿಗರೇಟ್ ನಿಷೇಧವಾಗಲಿ, ಇದರಲ್ಲಿ ನನ್ನ ಸ್ವಾರ್ಥ ಕೂಡ ಇದೆ ಎಂದು ಹೇಳಿ, ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಇ.ಕೃಷ್ಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ..........

**ಸಭಾಪತಿಯವರು:–** ಮಾನ್ಯ ಕೃಷ್ಣಪ್ಪನವರೇ, ನಿಮಗೂ ಸಹ ಮಾತನಾಡಲು ಅವಕಾಶವನ್ನು ನೀಡುತ್ತೇನೆ. ತಮ್ಮ ಹೆಸರು ಕೊನೆಗೆ ಬಂದಿತು. ಯಾರ ಹೆಸರು ಪಟ್ಟಿಯಲ್ಲಿ ಬಂದಿತ್ತೋ ಅವರಿಗೆ ಮೊದಲು ಅವಕಾಶವನ್ನು ನೀಡುತ್ತಿದ್ದೇನೆ. ಆಮೇಲೆ ನಿಮಗೆ ಕೊಡುತ್ತೇನೆ. ಎಲ್ಲ ಸದಸ್ಯರಿಗೂ ಈ ವಿಚಾರದ ಬಗ್ಗೆ ಮಾತನಾಡಲು ಅವಕಾಶವನ್ನು ನೀಡುತ್ತೇನೆ. ಈ ಸದನ ಇರುವುದೇ ಮಾತನಾಡುವುದಕ್ಕೆ ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ನೀಡದಿದ್ದರೆ, ಇಲ್ಲಿ ನಾನು ಸಭಾಪತಿಯಾಗಿ ಯಾಕೆ ಕುಳಿತುಕೊಳ್ಳಬೇಕು ಹೇಳಿ.

**ಶ್ರೀ ಘೊಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಸನ್ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶವನ್ನು ನೀಡಿಲ್ಲ.

**ಸಭಾಪತಿಯವರು:–** ತಾವು ಕೇಳಲಿಲ್ಲ. ಆಡಳಿತ ಪಕ್ಷದವರ ಬಗ್ಗೆ ಹೇಳಬೇಕಾದರೆ, ಮಾನ್ಯ ಸಭಾ ನಾಯಕರು ಬಂದು ನಿಮ್ಮೆಲ್ಲರ ಪರವಾಗಿ ಒಂದೆರಡು ಮಾತುಗಳನ್ನು ಆಡುತ್ತಾರೆ. ಸಭಾ ನಾಯಕರು ಬಂದ ಮೇಲೆ ಅವರಿಗೆ ಮಾತನಾಡಲು ಅವಕಾಶವನ್ನು ನೀಡುತ್ತೇನೆ. ನಿಮ್ಮೆಲ್ಲರ ಪರವಾಗಿ ಅವರು ಎರಡು ಮಾತುಗಳನ್ನು ಆಡುತ್ತಾರೆ. ಆಮೇಲೆ ನಿಮಗೆ ಅವಕಾಶವನ್ನು ನೀಡುತ್ತೇನೆ.

**ಶ್ರೀ ಘೊಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಸನ್ಮಾನ್ಯ ಸಭಾಪತಿಯವರೇ, ನಾನು ಅಡಕೆ ಬೆಳೆಗಾರರು ಇರುವಂತಹ ಕ್ಷೇತ್ರದಿಂದ ಬಂದಿದ್ದೇನೆ. ದಯವಿಟ್ಟು ನನಗೆ ಮಾತನಾಡಲು ಅವಕಾಶವನ್ನು ನೀಡಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಎಲ್ಲ ಸದಸ್ಯರಿಗೂ ಮಾತನಾಡಲು ಅವಕಾಶವನ್ನು ನೀಡಿ. ಮಾನ್ಯ ಕೃಷ್ಣಪ್ಪನವರು ಮತ್ತು ಮಾನ್ಯ ಘೊಟ್ನೆಕರ್‌ರವರು ಮಾತನಾಡಿದ ಮೇಲೆ ಮಾನ್ಯ ಸಭಾ ನಾಯಕರಿಗೆ ಅವಕಾಶವನ್ನು ನೀಡಿ. ಏಕೆಂದರೆ ಸಭಾ ನಾಯಕರು ಮಾತನಾಡಿದ ನಂತರ ಬೇರೆಯವರು ಮಾತನಾಡುವಂತಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರು ಉತ್ತರವನ್ನು ನೀಡುವುದಿಲ್ಲ. ಸಚಿವರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಮಾತನಾಡುವುದಕ್ಕೂ ಮುಂಚೆ ನಮಗೆ ಅವಕಾಶವನ್ನು ನೀಡಿ.

**ಸಭಾಪತಿಯವರು:-** ಮಾನ್ಯ ಘೋಟ್ನೆಕರ್‌ರವರೇ, ನಾನು ಹೇಳಿದಂತಹ ಮಾತುಗಳನ್ನು ನೀವು ಅರ್ಥ ಮಾಡಿಕೊಂಡಿಲ್ಲ. ಮಾನ್ಯ ಸಭಾ ನಾಯಕರು ನನ್ನ ಮೂಲಕ ತಮಗೆಲ್ಲ ಏನೋ ಒಂದು ಸಂದೇಶ ಕೊಡುವವರು ಇದ್ದಾರೆ. ಅದರ ನಂತರ ನಾನು ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಕೆ.ಮೋನಪ್ಪ ಭಂಡಾರಿ(ವಿಧಾನ ಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಲೆನಾಡು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭತ್ತವನ್ನು ಬೆಳೆಯುತ್ತಿದ್ದರು. ಆ ಭಾಗಗಳಲ್ಲಿ ಭತ್ತದ ಬೆಳೆಯೇ ಪ್ರಮುಖವಾದ ಬೆಳೆಯಾಗಿತ್ತು. ಮಾನ್ಯ ಸದಸ್ಯರು ಹೇಳಿದಂತೆ ಕಾಲಕ್ರಮೇಣ ಬೇರೆ ಬೇರೆ ಕಾರಣಗಳಿಂದ ಭತ್ತ ಬೆಳೆಯುವುದು ಕಷ್ಟ ಸಾಧ್ಯ ಎನ್ನುವ ಸನ್ನಿವೇಶ ಒದಗಿ ಬಂದ ಕಾರಣ ಅದಕ್ಕೆ ಪರ್ಯಾಯ ಬೆಳೆಯನ್ನಾಗಿ ಅಡಿಕೆ ಬೆಳೆಯನ್ನು ಬೆಳೆಯುವಂತಹ ಕಾರ್ಯವನ್ನು ನಮ್ಮ ರೈತರು ಪ್ರಾರಂಭ ಮಾಡಿದ್ದಾರೆ. ಒಮ್ಮೆ ಅಡಿಕೆ ಸಸಿಯನ್ನು ನೆಟ್ಟು ಅದು ಮರವಾಗಿ ಬೆಳೆದ ನಂತರ, ಬೆಳೆಯ ವಿನ್ಯಾಸವನ್ನು ಬದಲಾವಣೆ ಮಾಡಿಕೊಂಡು ಪರ್ಯಾಯ ಬೆಳೆಯನ್ನು ಬೆಳೆಯುವುದು ಕಷ್ಟಕರವಾದ ಸಂಗತಿಯಾಗಿದೆ. ಪ್ರಸ್ತುತ ದಕ್ಷಿಣ ಕನ್ನಡ, ಉಡುಪಿ ಮತ್ತು ಮಲೆನಾಡಿನ ಜನರ ಜೀವಾಳವೇ ಅಡಕೆ ಬೆಳೆಯಾಗಿದೆ. ಬಹಳ ವರ್ಷಗಳಿಂದ ಅಡಿಕೆ ಬೆಳೆಯನ್ನು ಬೆಳೆಸುತ್ತಾ ಅದನ್ನು ಪೋಷಣೆ ಮಾಡುತ್ತಾ, ಅದರಿಂದ ನಮಗೆ ಲಾಭ ಬರುತ್ತದೆ, ನಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಬಹುದು ಮತ್ತು ಜೀವನ ಉತ್ತಮಗೊಳ್ಳಬಹುದು

ಎನ್ನುವ ಕಾರಣಕ್ಕಾಗಿ ನಮ್ಮ ರೈತರು ಅಡಕೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಒಮ್ಮಲೇ ಗುಟ್ಕಾ ನಿಷೇಧ ಆದೇಶ ಹೊರಬಂದ ಕೂಡಲೇ ಅಡಿಕೆ ಬೆಳೆಯುವಂತಹ ರೈತಾಪಿ ಜನರು ಕಂಗಾಲಾಗಿ ಗೊಂದಲಕ್ಕೆ ಸಿಕ್ಕಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯ ಸರ್ಕಾರ ಅವಸರದಿಂದ ಕೈಗೊಂಡ ನಿರ್ಣಯವೇ ಇದಕ್ಕೆ ಕಾರಣವಾಗಿದೆ. ವಿಶೇಷವಾಗಿ ನಮ್ಮ ಭಾಗದ ಜನತೆ ಬದಲಾವಣೆಯ ಅಪೇಕ್ಷೆಯಿಂದ ತಮ್ಮ ಮತವನ್ನು ಬೇರೊಂದು ಪಕ್ಷದವರಿಗೆ ಕೊಟ್ಟು ಗೆಲ್ಲಿಸುವಂತಹ ಕೆಲಸವನ್ನು ಮಾಡುವ ಮೂಲಕ ಹೊಸದೊಂದು ಆಯಾಮ ಬರಬಹುದು ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಆದರೆ, ನನಗೆ ಬೇಸರವನ್ನುಂಟು ಮಾಡಿದ ಸಂಗತಿಯೆಂದರೆ, ನಮ್ಮ ಜಿಲ್ಲೆಯಿಂದ ಆಯ್ಕೆಯಾದ ಆರೋಗ್ಯ ಸಚಿವರು ಅವರು ಈ ಬಗ್ಗೆ ಗಮನಹರಿಸಲಿಲ್ಲ. ಪತ್ರಿಕೆಗಳಲ್ಲಿ ಈ ವಿಚಾರ ಪ್ರಕಟವಾದಾಗ ಮಾನ್ಯ ಮುಖ್ಯಮಂತ್ರಿಗಳಿಗೆ, ನಮ್ಮ ರೈತರ ಭಾವನೆಗಳನ್ನು, ಎಷ್ಟು ಜನ ರೈತರು ಈ ಬೆಳೆಯನ್ನು ಬೆಳೆಯುತ್ತಿದ್ದಾರೆ, ಗುಟ್ಕಾ ನಿಷೇಧ ಮಾಡುವುದರಿಂದ ಆಗುವಂತಹ ನಷ್ಟ ಏನು ಮತ್ತು ಹಾನಿ ಏನು ಎನ್ನುವುದರ ಬಗ್ಗೆ ತಿಳಿಸಿದ್ದರೆ ಅವರು ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದರು. ಈ ನಿಟ್ಟಿನಲ್ಲಿ ನಮ್ಮ ಆರೋಗ್ಯ ಸಚಿವರು ವಿಫಲರಾಗಿದ್ದಾರೆಂದು ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ಅವರ ವಿಫಲತೆಯೇ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಆ ಒಂದು ಆದೇಶವನ್ನು ಹೊರಡಿಸುವುದಕ್ಕೆ ಕಾರಣವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಗುಟ್ಕಾದಲ್ಲಿ ಅಡಿಕೆಯ ಅಂಶ ಶೇಕಡಾ 80ರಷ್ಟು ಇದೆ ಎಂದು ಹೇಳುತ್ತಾರೆ. ಆ ಶೇಕಡಾ 80ರಷ್ಟು ಅಡಕೆಯಲ್ಲಿ ಯಾವುದೇ ದೋಷವಿಲ್ಲ, ಅದರಿಂದ ಯಾವುದೇ ರೀತಿಯ ಹಾನಿಯುಂಟಾಗುವುದಿಲ್ಲ. ಬದಲಿಗೆ ಅಡಿಕೆಯ ಜೊತೆಗೆ ಉಪಯೋಗಿಸುವಂತಹ ನಿಕೋಟಿನ್ ಮತ್ತಿತರೆ ರಾಸಾಯನಿಕಗಳು ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತವೆ ಎನ್ನುವುದು ಬೇರೆ ಬೇರೆ ಸಂಶೋಧನೆಗಳಿಂದ ಕಂಡುಬರುತ್ತಿದೆ. ಕೈಬೆರಳಿಗೆ ಗಾಯವಾದರೇ ಕೈ ಬೆರಳನ್ನೇ ತೆಗೆದು ಹಾಕುವಂತಹ ಅವಸರದ ನಿರ್ಣಯವನ್ನು ರಾಜ್ಯ ಸರ್ಕಾರ

ತೆಗೆದುಕೊಂಡಿದೆ ಅದರ ಪರಿಣಾಮ ನೇರವಾಗಿ ರೈತನ ಮೇಲಾಗಿದೆ ಎನ್ನುವುದು ಬಹಳ ಸ್ಪಷ್ಟವಾಗಿದೆ. ಏಕೆಂದರೆ ರೈತ ಈ ದೇಶದ ಅವಿಭಾಜ್ಯ ಅಂಗವಾಗಿದ್ದಾನೆ. ರೈತ ಇಲ್ಲದಿದ್ದರೆ ಏನೂ ಇಲ್ಲ. ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೆ ನಾವು ಬದುಕುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಇಂತಹ ರೈತನ ಬಗ್ಗೆ ಕಾಳಜಿ ವಹಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ. ಆದರೆ, ಈ ಜವಾಬ್ದಾರಿಯನ್ನು ಮರೆತು ರಾಜ್ಯ ಸರ್ಕಾರ ಇಂತಹ ಒಂದು ಕ್ರಮಕ್ಕೆ ಕೈ ಹಾಕಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಣ್ಣನವರು ಹೇಳಿದಂತಹ ಮಾತುಗಳನ್ನು ನಾನು ಪುನಃ ಹೇಳುತ್ತಿದ್ದೇನೆಂದು ಅವರು ತಪ್ಪು ತಿಳಿದುಕೊಳ್ಳಬಾರದು. ಒಂದು ಅಡಿಕೆ ತೋಟವನ್ನು ಬೆಳೆಸುವುದಕ್ಕೆ ಬಹಳ ಸಮಯ ಬೇಕಾಗುತ್ತದೆ. ಭತ್ತ, ಗೋಧಿ ಅಥವಾ ಅಲೂಗಡ್ಡೆ ಇತ್ಯಾದಿ ದವಸ ಧಾನ್ಯಗಳನ್ನು ಬೆಳೆಸುವುದು ಸುಲಭ, ಇವು ಒಮ್ಮೆ ಹಾಕಿದರೆ ಮೂರು ತಿಂಗಳಿಗೆ ಮುಗಿದು ಹೋಗುತ್ತವೆ. ನಂತರ ಬೇರೆ ಬೇರೆ ರೀತಿಯ ಬೆಳೆಗಳನ್ನು ಬೆಳೆಸಬಹುದಾಗಿದೆ. ಆದರೆ, ಅಡಕೆ ಬೆಳೆ ಇದಕ್ಕೆ ವ್ಯತಿರಿಕ್ತವಾಗಿರುವುದು. ಅಡಕೆ ಬೆಳೆಗಾಗಿ ಸುಮಾರು 8–10 ವರ್ಷಗಳ ಕಾಲ ಕಾಯಬೇಕಾಗಿದೆ. ಅನಂತರವೇ ಅದರ ಫಲ ಸಿಗುತ್ತದೆ, ರೈತ ಒಳ್ಳೆಯ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಆದೇಶವನ್ನು ಒಪ್ಪಿಕೊಂಡು ರೈತ ಒಮ್ಮೆಲೇ ತಾನು ಬೆಳೆದ ಬೆಳೆಯನ್ನು ತೆಗೆದು ಹಾಕಿದರೆ ಮುಂದಿನ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ರೈತ ಈಗಾಗಲೇ ಭತ್ತದ ಗದ್ದೆಯನ್ನು ಅಡಕೆ ತೋಟವನ್ನಾಗಿ ಪರಿವರ್ತನೆ ಮಾಡಿದ್ದಾನೆ. ಈ ರೀತಿಯ ಸಂದರ್ಭ ಬಂದಾಗ ರೈತ ಮುಂದಿನ ಆಲೋಚನೆಯನ್ನು ಮಾಡುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ರೈತ ಸಾಲಸೋಲ ಮಾಡಿ ಅಡಕೆ ಸಸಿಯನ್ನು ನೆಟ್ಟು ಅದನ್ನು ಬೆಳಸಿ ಅಡಿಕೆ ತೋಟವನ್ನಾಗಿ ಪರಿವರ್ತನೆ ಮಾಡಿದ್ದಾನೆ. ಒಂದು ಕಡೆ ಸಾಲಗಾರರು, ಮತ್ತೊಂದು ಕಡೆ ಕೈ ಸಾಲ ಇದರ ಜೊತೆಗೆ ಬ್ಯಾಂಕ್ ಮತ್ತು ಸೊಸೈಟಿ ಸಾಲ ಹೀಗೆ ಎಲ್ಲ ಕಡೆಗಳಿಂದ ರೈತ ಸಾಲವನ್ನು ಪಡೆದುಕೊಂಡಿದ್ದಾನೆ. ಈಗಾಗಲೇ ಅಡಕೆ ಬೆಲೆ ಒಂದು

ಕ್ವಿಂಟಾಲ್‌ಗೆ ಎರಡು ಸಾವಿರ ರೂಪಾಯಿಗಳಷ್ಟು ಕುಸಿತ ಕಂಡಿದೆ. ಈ ಬೆಲೆ ಕುಸಿತದಿಂದಾಗಿ ರೈತ ಕಂಗಾಲಾಗಿದ್ದಾನೆ. ಈಗ ಇಂತಹ ಸನ್ನಿವೇಶವನ್ನು ಸರ್ಕಾರ ನಿರ್ಮಾಣ ಮಾಡಿದರೆ, ಉತ್ತರ ಕರ್ನಾಟಕದಲ್ಲಿ ಸಾಲದ ಬಾಧೆಯನ್ನು ತಾಳಲಾರದೇ ರೈತ ಆತ್ಮಹತ್ಯೆ ಮಾಡಿಕೊಂಡಂತಹ ಘಟನೆಗಳು ಮಲೆನಾಡು, ಕರಾವಳಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಆಗಬಹುದು ಎನ್ನುವಂತಹ ಸಂಶಯ ನನ್ನನ್ನು ಕಾಡುತ್ತಿದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ರಾಜಕಾರಣ ಮಾಡುವುದಕ್ಕೂ ಒಂದು ಇತಿಮಿತಿ ಇರಬೇಕಾಗುತ್ತದೆ. ಅವರು ಈ ರೀತಿ ಪ್ರಚೋದನೆ ಮಾಡುವುದು ಬೇಡ.

**ಸಭಾಪತಿಯವರು:–** ಮಾನ್ಯ ಪತ್ರಾಪಚಂದ್ರ ಶೆಟ್ಟಿಯವರೇ, ಅವರನ್ನು ಮಾತನಾಡುವುದಕ್ಕೆ ಬಿಡಿ. ನಿಮಗೂ ಮಾತನಾಡಲು ಅವಕಾಶವನ್ನು ನೀಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ತಾವು ಅವಕಾಶವನ್ನು ಕೊಡದಿದ್ದರೂ ಸರಿ ಆದರೆ, ಅವರು ಈ ರೀತಿ ಮಾತನಾಡುವುದು ಸರಿಯಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಕೆ.ಮೋನಪ್ಪ ಭಂಡಾರಿ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಅನಿಸಿಕೆಯನ್ನು ನಾನು ಹೇಳುತ್ತಿದ್ದೇನೆ. ಅವರು ಯಾಕೆ ಮಧ್ಯೆ ಬಾಯಿ ಹಾಕಬೇಕು? ಮೊದಲಿಗೆ ನಾನು ರೈತ ಅನಂತರ ವಕೀಲ. ಇದರ ಬಗ್ಗೆ ಸಂಶಯಬೇಡ. ಅಡಿಕೆ ಬಗ್ಗೆ ಶಾಸ್ತ್ರಗಳು ಸಹ ಬಹಳ ಪ್ರಾಧ್ಯಾನ್ಯತೆಯನ್ನು ಕೊಡುತ್ತವೆ. ಅದರ ಬಗ್ಗೆಯೂ ಪ್ರಸ್ತಾಪವಾಗಿದೆ. ದೇವರ ಪೂಜೆ ಕಾರ್ಯ ಆದಂತಹ ಸಂದರ್ಭದಲ್ಲಿ ಎಲೆ, ಅಡಿಕೆ ಹಾಗೂ ಒಂದೂವರೆ ರೂಪಾಯಿ ಕಾಣಿಕೆ ಇಡಲೇಬೇಕಾಗುತ್ತದೆ. ಇದು ನಮ್ಮ ಸಂಪ್ರದಾಯವಾಗಿದೆ. ಈ ಭಾಗದಲ್ಲಿಯೂ ಕೂಡ ಆ ಸಂಪ್ರದಾಯವಿದೆ ಎಂದು ನಾನು ಭಾವಿಸುತ್ತೇನೆ.

ತೆಂಗಿನ ಕಾಯಿಯಷ್ಟೇ ವಿಶೇಷವಾದ ಮತ್ತು ಪವಿತ್ರವಾದ ವಸ್ತು ಅಡಿಕೆಯಾಗಿದೆ.

ಇದು ಪವಿತ್ರವಾದಂಥ ಒಂದು ವಸ್ತು. ಅದು ಮನುಷ್ಯನ ಆರೋಗ್ಯಕ್ಕೆ ಹಾನಿಕರವಾಗುತ್ತದೆ ಎಂಬುದು ನಂಬಲು ಅಸಾಧ್ಯವಾದಂಥಾದ್ದು. ಈಗಲೂ ಕೂಡ ಎಲೆ–ಅಡಿಕೆಯನ್ನು ತಿನ್ನುತ್ತಾರೆ. ಬಹಳ ಕಾಲದಿಂದ ಅಂದರೆ ನಮ್ಮ ಹಿರಿಯರೆಲ್ಲಾ ಎಲೆ–ಅಡಿಕೆಯನ್ನು ತಿಂದೇ ಬದುಕಿದವರು. ಎಲೆ–ಅಡಿಕೆ ಇಲ್ಲದೇ ಯಾವುದೂ ಇಲ್ಲ. ಊಟವಾದ ನಂತರ ಎಲೆ–ಅಡಕೆಯನ್ನು ಹಾಕಲೇಬೇಕು. ಅಂತಹ ಎಲೆ–ಅಡಿಕೆಯನ್ನು ತಿಂದವರು ಯಾರಿಗೂ ಸಹ ಕ್ಯಾನ್ಸರ್ ಬರಲಿಲ್ಲ. ಮಾನ್ಯ ಕೃಷ್ಣಭಟ್ಟರವರು ಬೇರೆ ಬೇರೆ ಉಲ್ಲೇಖಗಳನ್ನು ಮಾಡಿದರು. ಹಳ್ಳಿಗಳಲ್ಲಿ ನಡೆಯುವ ಪ್ರಾಯೋಗಿಕ ವ್ಯವಸಾಯದ ಬಗ್ಗೆ ಪರಾಂಬರಿಸಿದರೆ ನೂರಾರು ವರ್ಷಗಳಿಂದ ಎಲೆ–ಅಡಕೆಯನ್ನು ಹಾಕುತ್ತಿದ್ದಾರೆ. ಹಾಗಾದರೆ ಅವರುಗಳು ಯಾರಿಗೂ ಏಕೆ ಕ್ಯಾನ್ಸರ್ ಬರಲಿಲ್ಲ? ಈಗ ಅಡಕೆಯಿಂದ ಕ್ಯಾನ್ಸರ್ ಬಂದಿದೆ ಎಂದರೆ ಅದು ತಪ್ಪು ಎನ್ನುವುದು ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಆದಕಾರಣ ಅಡಿಕೆ ಒಂದು ರೀತಿಯ ವಿಶೇಷವಾದ ವಸ್ತು ಎಂದು ನಾನು ಈಗಾಗಲೇ ಹೇಳಿದೆ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅಡಿಕೆಯಿಂದ ಬೇರೆ ಬೇರೆ ವಸ್ತುಗಳನ್ನು ತಯಾರು ಮಾಡಲಿಕ್ಕೆ ಆಗುತ್ತದೆ. ಅದೇ ರೀತಿ ಸದಸ್ಯರಾದ ತಾರಾ ಅನುರಾಧರವರು ಹೇಳಿದ ಹಾಗೆ ಬೇರೆ ಬೇರೆ ಪರಿಮಳ ದ್ರವ್ಯಗಳನ್ನು ಅದರಿಂದ ತಯಾರು ಮಾಡಲಿಕ್ಕೆ ಆಗುತ್ತದೆ. ಇದರ ಬಗ್ಗೆ ಆಲೋಚನೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಅದಕ್ಕೆ ಆದ್ಯತೆಯನ್ನು ಕೊಡಬೇಕು. ಇದರಲ್ಲಿ ಎರಡು ಅಂಶಗಳಿವೆ. ಒಂದು ಅಡಿಕೆ ಬೆಳೆಗಾರರಿಗೆ ಉತ್ತೇಜನವನ್ನು ಕೊಟ್ಟ ಹಾಗಾಗುತ್ತದೆ. ಎರಡನೆಯದಾಗಿ, ಬೇರೆ ಬೇರೆ ರೀತಿಯ ಸಣ್ಣ ಉದ್ದಿಮೆದಾರರು ಜೀವನೋಪಾಯಕ್ಕಾಗಿ ಸಣ್ಣ ಸಣ್ಣ ಉದ್ಯಮಗಳನ್ನು ಸ್ಥಾಪನೆ ಮಾಡಿಕೊಂಡು ಜೀವನ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ ಮೂಲಕ ಲಕ್ಷಾಂತರ ಜನರಿಗೆ ಉದ್ಯೋಗವನ್ನು ಕೊಡಲಿಕ್ಕೂ ಸಾಧ್ಯವಾಗಬಹುದು. ಈ ನಿಟ್ಟಿನಲ್ಲಿ ಸರ್ಕಾರ ಆಲೋಚನೆ ಮಾಡಬೇಕು. ಆ ಮೂಲಕ ಈಗಾಗಲೇ

ಕಂಗಾಲಾದ ರೈತನಿಗೆ ಒಂದು ರೀತಿಯ ಪ್ರೋತ್ಸಾಹವನ್ನು ಕೊಡಬೇಕು. ಈಗಾಗಲೇ ಕಾರ್ಮಿಕರ ವಿಷಯವನ್ನು ಹೇಳಿದರು. ಅದನ್ನು ನಾನು ಕೂಡ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಗುಟ್ಕಾ ನಿಷೇಧದ ಬಗ್ಗೆ ಆದೇಶವಾದ ತಕ್ಷಣ ನಮ್ಮ ಆರೋಗ್ಯ ಸಚಿವರು ಯಾವುದೋ ಒಂದು ಕಾರ್ಯಕ್ರಮದಲ್ಲಿ ಹೇಳಿದಂತಹ ಮಾತುಗಳು "ಗುಟ್ಕಾ ನಿಷೇಧ ಕಟ್ಟುನಿಟ್ಟು ಮತ್ತು ಗುಟ್ಕಾ ಕಂಪನಿಯ ಪರ ವಾದ ಬೇಡ" ಎಂಬ ಶಿರೋನಾಮೆಯ ಅಡಿಯಲ್ಲಿ ಪತ್ರಿಕೆಗಳಲ್ಲಿ ವರದಿಯಾಗಿದೆ.

ಅದರ ಜೊತೆಗೆ ಅವರೇನು ಹೇಳುತ್ತಾರೆಂದರೆ, ಗುಟ್ಕಾ ನಿಷೇಧದ ವಿರುದ್ಧ ಟೀಕೆ ಮಾಡುವವರಿಗೆ ಕಾಯ್ದೆಯ ಮೂಲಕ ಸೂಕ್ತ ಕ್ರಮ ನೀಡಲಾಗುತ್ತದೆ. ಗುಟ್ಕಾ ಕಂಪನಿಯ ಪರ ಜನಪ್ರತಿನಿಧಿಗಳು ಮಾತನಾಡುವುದು ಬೇಸರದ ಸಂಗತಿ, ಈ ಬಗ್ಗೆ ಜನಪ್ರತಿನಿಧಿಗಳು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂಬುದಾಗಿ ಹೇಳುತ್ತಿದ್ದಾರೆ. ಇದರರ್ಥ ಯಾರು ರೈತರ ಪರವಾಗಿ ಮಾತನಾಡಿದ್ದಾರೆ ಅವರು ಗುಟ್ಕಾದ ಪರವಾಗಿ ಮಾತನಾಡುವ ರೀತಿಯಲ್ಲಿ ಇದೆ ಎಂಬುದಾಗಿ ಸನ್ಮಾನ್ಯ ಸಚಿವರು ಆ ಮಾತನ್ನು ಹೇಳುವಂಥಾದ್ದು ಬಹಳ ವಿಷಾದನೀಯ ಮತ್ತು ದುಃಖಕರವಾದ ವಿಚಾರವೂ ಕೂಡ ಆಗಿದೆ. ಅವರೂ ಸಹ ಒಬ್ಬ ಜನಪ್ರತಿನಿಧಿಯಾಗಿ ಇನ್ನೊಬ್ಬ ಜನಪ್ರತಿನಿಧಿಯ ಭಾವನೆಯನ್ನು ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದಾಗಿತ್ತು. ಜನಪ್ರತಿನಿಧಿಗಳೆಲ್ಲರೂ ಗುಟ್ಕಾ ಕಂಪನಿಯ ಪರವಾಗಿ ನಿಲ್ಲುತ್ತಿದ್ದಾರೆ ಎಂಬುವಂತಹ ಮಾತನ್ನು ಆಡಿದ್ದು ಬಹಳ ಖೇದಕರವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಈಗಾಗಲೇ ಎಲ್ಲರೂ ಸಾಕಷ್ಟು ವಿಚಾರಗಳನ್ನು ಮಾತನಾಡಿದ್ದಾರೆ. ನಾನೂ ಸಹ ಅದನ್ನೇ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಸರ್ಕಾರ ಈ ಬಗ್ಗೆ ಸೂಕ್ತವಾದ ಪರಿಹಾರವನ್ನು ರೈತರಿಗೆ ಘೋಷಣೆ ಮಾಡಬೇಕು ಎಂದು ಕೇಳುತ್ತೇನೆ. ರೈತರು ಈಗಾಗಲೇ ಕಂಗಾಲಾಗಿದ್ದಾರೆ. ಸಾಲ ಮಾಡಿ ಅಡಿಕೆ ತೋಟಗಳನ್ನು ಮಾಡಿದ್ದಾರೆ. ಗುಟ್ಕಾ ನಿಷೇಧದಿಂದಾಗಿ ನಮ್ಮ ಅಡಕೆ

ಮರಗಳನ್ನು ಕಡಿದರೆ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಬಹುದು ಎಂಬ ಗೊಂದಲದಲ್ಲಿ ಅವರಿದ್ದಾರೆ. ಅವರಿಗೆ ಸೂಕ್ತವಾದ ಪರಿಹಾರವನ್ನು ಒದಗಿಸುವಲ್ಲಿ, ಅವರ ಮುಂದಿನ ಬೆಳವಣಿಗೆಗೆ ಇನ್ನು ಹೆಚ್ಚಿನ ಅಡಿಕೆ ಮರಗಳನ್ನು ಬೆಳೆಸಲು ಅವರಿಗೆ ಆದ್ಯತೆಯನ್ನು ಮತ್ತು ಪ್ರೋತ್ಸಾಹವನ್ನು ಕೊಡುವ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಾ, ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

**ಶ್ರೀ ಇ.ಕೃಷ್ಣಪ್ಪ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಿನ್ನೆಯಿಂದಲೂ ನಾನು ಗುಟ್ಕಾ ನಿಷೇಧದ ಬಗ್ಗೆ ಚರ್ಚೆಯನ್ನು ಕೇಳುತ್ತಿದ್ದೇನೆ. ಸರ್ಕಾರದವರು ನಾವು ಗುಟ್ಕಾವನ್ನು ನಿಷೇಧ ಮಾಡಿದ್ದೇವೆ, ಅದನ್ನು ಸ್ವಾಗತ ಮಾಡಿ ಎನ್ನುತ್ತಾರೆ. ವಿರೋಧ ಪಕ್ಷದಲ್ಲಿರುವವರು, ನಾವಿದನ್ನು ಸ್ವಾಗತ ಮಾಡುತ್ತೇವೆ. ಆದರೆ, ನೀವು ಅಡಕೆ ಬೆಳೆಗಾರರ ಬಗ್ಗೆ ಚಿಂತನೆ ಮಾಡಿಲ್ಲವೆಂದು ಹೇಳುತ್ತಾರೆ. ನಾವು ಮೊದಲು ನಮ್ಮ ಸರ್ವೋಚ್ಚ ನ್ಯಾಯಾಲಯ ಹೊರಡಿಸಿರುವ ಆದೇಶವನ್ನು ಸ್ವಾಗತ ಮಾಡಬೇಕು. ನಿಜವಾಗಿ ಆತ್ಮಸಾಕ್ಷಿಯಾಗಿ ಗುಟ್ಕಾ ನಿಷೇಧ ಮಾಡುತ್ತೇವೆ ಎಂದರೆ ನಾವುಗಳು ಯಾರೂ ಸಹ ಒಪ್ಪುತ್ತಿರಲಿಲ್ಲ. ಒಂದು ಕಡೆ ಅಡಕೆ ಬೆಳೆಗಾರರು ಬೇಕು, ಇನ್ನೊಂದು ಕಡೆ ಕಾರ್ಖಾನೆಯವರು ಬೇಕು ಎಂದು ಹೇಳುತ್ತಿದ್ದರು. ಸರ್ವೋಚ್ಚ ನ್ಯಾಯಾಲಯ ಈ ರೀತಿಯ ಒಂದು ಆದೇಶವನ್ನು ಹೊರಡಿಸಿದೆ. ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ನಾವು ಸ್ವಾಗತ ಮಾಡಬೇಕು. ರೈತರ ಬಗ್ಗೆ ಮತ್ತು ಇದರ ಹಾನಿಕಾರಕಗಳ ಬಗ್ಗೆ ನಾವು ಮಾತನಾಡಿದೆವು. ರೈತರಿಗೆ ಆಗುವ ಸಮಸ್ಯೆ ಬಗ್ಗೆ ಹೇಳುತ್ತಿದ್ದರು. ಮಾನ್ಯ ಪ್ರತಾಪಚಂದ್ರ ಶೆಟ್ಟರು ಗುಟ್ಕಾ ಬಂತೋ ಆಗ ಅಡಕೆ ಬೆಲೆ ಒಂದು ವಾಣಿಜ್ಯ ಬೆಳೆಯಾಯಿತು. ಅತಿ ಹೆಚ್ಚಿನ ಅಡಕೆ ಉತ್ಪಾದನೆ ನಮ್ಮ ರಾಜ್ಯದಲ್ಲಿ ಪ್ರಾರಂಭವಾಯಿತು. ದೇಶದ ಶೇಕಡ 60ರಷ್ಟು ಅಡಕೆಯನ್ನು ನಾವು ನಮ್ಮ ರಾಜ್ಯದಲ್ಲಿ ಬೆಳೆಯಬೇಕಾದರೆ, ಅದು

ಒಂದು ವಾಣಿಜ್ಯ ಬೆಳೆ ಆಯಿತು. ಅಡಕೆ ಬೆಳೆ ಮೊದಲು ಇರಲಿಲ್ಲವೇ ಎಂದು ಈ ಬಗ್ಗೆ ಅಷ್ಟು ಹಗುರವಾಗಿ ಮಾತನಾಡುವುದು ತಪ್ಪು. ಈ ಅಡಕೆ ಉತ್ಪತ್ತಿಯನ್ನಿಟ್ಟುಕೊಂಡು ನಾವೇನು ಮಾಡುವುದಕ್ಕಾಗುವುದಿಲ್ಲ. ಬೇರೆ ಬೇರೆ ಉತ್ಪನ್ನಗಳನ್ನು ನಾವು ರಫ್ತು ಮಾಡಬಹುದು. ಇಡೀ ವಿಶ್ವದಲ್ಲಿಯೇ ಈ ಅಡಕೆಯನ್ನು ಬಳಕೆ ಮಾಡುವುದು ಕೇವಲ ನಮ್ಮ ಏಷ್ಯಾ ಖಂಡದಲ್ಲಿರುವ ದೇಶಗಳಲ್ಲಿ ಮಾತ್ರ. ನಮ್ಮ ಈ ಅಡಕೆ ಉತ್ಪನ್ನವನ್ನು ನಾವು ಮುಂದಕ್ಕೆ ಎಲ್ಲಿಗೆ ಕಳುಹಿಸಬೇಕು? ಇದು ತುಂಬಾ ದುಸ್ತರವಾದ ಕೆಲಸವಾಗುತ್ತದೆ. ರೈತರ ಹಿತ ಕಾಪಾಡಬೇಕೆಂದು ಹೇಳುತ್ತಾರೆ. ಸರ್ಕಾರ ಈಗ ಹೇಳಲಿ. ಇವತ್ತು ಅಡಕೆ ಧಾರಣೆ 2,000 ರೂಪಾಯಿಗಳಿಗೆ ಇಳಿದಿದೆಯಲ್ಲಾ, ಇನ್ನು 500 ರೂಪಾಯಿ ಕಡಿಮೆ ಮಾಡಿ ಧಾರಣೆಯನ್ನು ನಿಗದಿ ಮಾಡಿ. ಈಗ ತೊಗರಿ ಮಂಡಳಿ ಮತ್ತು ತಂಬಾಕು ಮಂಡಳಿ ಇದೆ. ಇವತ್ತಿನ ದಿವಸ ಅಡಕೆ ಬೆಳೆಗಾರರಿಗೆ ತೊಂದರೆಯಾಗಿದೆ. ಹಾಗಾಗಿ ಇದಕ್ಕಾಗಿ ಒಂದು ಮಂಡಳಿಯನ್ನು ರಚನೆ ಮಾಡಿ cut off rate ನಿಗದಿ ಮಾಡಿ. ಆ ಲಾಭ–ನಷ್ಟಗಳನ್ನು ಅವರು ಅಳತೆ ಮಾಡಿಕೊಳ್ಳುತ್ತಾರೆ. ಅದು ಒಂದು ಭಾಗವಾದರೆ, ಇನ್ನೊಂದು ಭಾಗದಲ್ಲಿ ಅಡಕೆ ವಾಣಿಜ್ಯ ಬೆಳೆಯಾದ ನಂತರ ಬಯಲು ಸೀಮೆಗಳಲ್ಲಿ ಸಿಕ್ಕಾಪಟ್ಟೆ ಅಡಕೆಯನ್ನು ಬೆಳೆಯುತ್ತಿದ್ದಾರೆ. ಇದರಿಂದಾಗಿ ಅಂತರ್ಜಲವೂ ಸಹ ಕುಸಿಯುತ್ತಿದೆ. ಅದಕ್ಕಾಗಿ ನಾವು ಹೊಗೆಸೊಪ್ಪಿಗೆ ಪಿರಿಯಾಪಟ್ಟಣ, ಅರಕಲಗೂಡು ಎಂದು ಏನು ಗಡಿಯನ್ನು ನಿಗದಿಗೊಳಿಸಿದ್ದೇವೆ. ಇವತ್ತು ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ, ಬಯಲುಸೀಮೆಯಲ್ಲಿ ಏನು ಈ ಅಡಕೆ ಬೆಳೆ ಇದೆ, ಅದಕ್ಕೊಂದು ಮಾನದಂಡ ಮಾಡಿ, ಎಕರೆಗೆ ಇಷ್ಟು ಎಂದು ಪರಿಹಾರವನ್ನು ಕೊಡಬೇಕು. ಏಕೆಂದರೆ ಗುಟ್ಕಾ ನಿಷೇಧವಾದ ನಂತರ ಅಡಕೆಯ ಬಳಕೆ ತುಂಬಾ ಕಡಿಮೆಯಾಗುತ್ತದೆ. ಅಡಕೆ ಬಳಕೆ ತುಂಬಾ ಕಡಿಮೆಯದಾಗ ಇವರಗಳು ಹೇಳಿದ ಹಾಗೆ ಮುಂದಿನ ದಿವಸಗಳಲ್ಲಿ ಶ್ರೀ ವಿನಯ್‌ಕುಮಾರ್ ಸೊರಕೆಯವರು ಮತ್ತು ನಮ್ಮ ಆರೋಗ್ಯ ಸಚಿವರು ಹೇಳಿದ ಹಾಗೆ ಅದನ್ನು ಮಾರಾಟ ಮಾಡುವುದು ಅಷ್ಟು ಸುಲಭವಲ್ಲ. ಅಡಕೆಯನ್ನು 100

ರೂಪಾಯಿಗೂ ತೆಗೆದುಕೊಳ್ಳುವವರು ಇಲ್ಲದ ಹಾಗೆ ಆಗುತ್ತಾರೆ. ಏಕೆಂದರೆ ದೇಶದ ಶೇಕಡ 60ರಷ್ಟು ಅಡಕೆಯನ್ನು ನಾವು ನಮ್ಮ ರಾಜ್ಯದಲ್ಲಿ ಬೆಳೆಯಬೇಕಾದರೆ, ಅಡಿಕೆಯಿಂದ ಸಣ್ಣಪುಟ್ಟ ಉಪ ಉತ್ಪನ್ನಗಳನ್ನು ಮಾಡುತ್ತೇವೆ. ಈ ಉಪ ಉತ್ಪನ್ನ ಎಷ್ಟು ಬಳಕೆಯಾಗುತ್ತದೆ? ಒಟ್ಟು ಅಡಕೆ ಬೆಳೆಯನ್ನು ಎಷ್ಟು ಎಕರೆಗಳಲ್ಲಿ ಬೆಳೆಯಲಾಗಿದೆ, ಮುಂದೆ ಅಡಕೆಯನ್ನು ಹಾಕುವುದಿಲ್ಲ. ಆದರೆ, ಬಯಲು ಸೀಮೆಗಳಲ್ಲಿ ಏನು ಅಡಕೆ ಬೆಳೆಗಾರರಿದ್ದಾರೆ ಅವರಿಗೆ ಪರಿಹಾರವನ್ನು ಕೊಡಬೇಕು. ಏಕೆಂದರೆ ಈಗ ಅಂತರ್ಜಲವೂ ಸಹ ಹೋಗುತ್ತಿದೆ. ಆ ಬೆಳೆಯಿಂದ ಲಾಭವು ಸಹ ಬರುವುದಿಲ್ಲ. ಅದಕ್ಕಿಂತಲೂ ಕೇವಲ ಎರಡು ಮೂರು ಜಿಲ್ಲೆಗಳಲ್ಲಿ ಮೊದಲಿನಿಂದ ಏನು ಅಡಕೆ ಬೇಸಾಯವನ್ನು ಮಾಡಿಕೊಂಡು ಬಂದಿದ್ದಾರೆ,......

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಪ್ಪನವರ ವಾದ ಯಾವ ಕಡೆ ಎನ್ನುವುದು ಗೊತ್ತಾಗಲಿಲ್ಲ.

**ಶ್ರೀ ಇ.ಕೃಷ್ಣಪ್ಪ:–** ನನ್ನ ವಾದ ಎರಡೂ ಕಡೆ ಇದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಒಂದು ಕಡೆ ನ್ಯಾಯಾಲಯದ ತೀರ್ಮಾನವನ್ನು ಸ್ವಾಗತ ಮಾಡುತ್ತಾರೆ, ಅದನ್ನು ಒಪ್ಪುತ್ತಾರೆ. ನ್ಯಾಯಾಲಯ ಮಾಡಿರತಕ್ಕಂಥ ತೀರ್ಮಾನವನ್ನು ಒಪ್ಪಬೇಕಾಗುತ್ತದೆ. ರೈತರಿಗೆ ಅನ್ಯಾಯವಾಗುತ್ತದೆ. ಈ ರೀತಿ ರೈತರಿಗೆ ಅನ್ಯಾಯವಾಗುವುದಕ್ಕೆ ಕಾಂಗ್ರೆಸ್ ಪಕ್ಷ ಕಾರಣವಲ್ಲ. ಆದ್ದರಿಂದ ರೈತರಿಗೆ ಪರಿಹಾರವನ್ನು ಕೊಡಲಿಕ್ಕೆ, ಬೆಂಬಲ ಬೆಲೆಯನ್ನು ಕೊಡಲಿಕ್ಕೆ ಯಾರ ವಿರೋಧವು ಇಲ್ಲ. ನಾವದನ್ನು ಸ್ವಾಗತ ಮಾಡುತ್ತೇವೆ. ಅದರಿಂದ ನಮಗೂ ಸಹ ಅನುಕೂಲವಾಗುತ್ತದೆ. ಆದರೆ, ಅವರು ಯಾರ ಮೇಲೋ ಗೂಬೆಯನ್ನು ಕೂರಿಸತಕ್ಕಂಥ ವ್ಯರ್ಥ ಪ್ರಯತ್ನವನ್ನು ಮಾಡುವುದು ಬೇಡ. ಅದೊಂದು ದ್ವಂಧ್ವ ವಾದವಾಗುತ್ತದೆ.

**ಶ್ರೀ ಇ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ನಾವು ಯಾವ ಸರ್ಕಾರವನ್ನು ಸಹ ದೂರುತ್ತಿಲ್ಲ. ರೈತರ ರಕ್ಷಣೆ ಮಾಡುವುದು, ಅವರ

ಹಿತವನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಾವು ಯಾರ ಮೇಲೂ ಸಹ ಕೆಸರು ಎರಚುವ ಕೆಲಸವನ್ನು ಮಾಡುತ್ತಿಲ್ಲ. ಅವರಿಗೆ ನಾವೇಕೆ ಹೇಳುತ್ತಿದ್ದೇವೆಂದರೆ, ಜವಾಬ್ದಾರಿ ಅವರ ಮೇಲಿದೆ, ಅಧಿಕಾರ ಅವರಲ್ಲಿದೆ, ಇದಕ್ಕೆ ಪರಿಹಾರವನ್ನು ಕಂಡು ಹಿಡಿಯುವ ಶಕ್ತಿ ಅವರಲ್ಲಿದೆ ಎಂದು ನಾವು ವಾದ ಮಾಡಬಹುದೇ ಹೊರತು ಇನ್ನೇನು ಹೇಳುತ್ತಿಲ್ಲ. ನಾನು ಒಂದು ಸಣ್ಣ ಸಲಹೆಯನ್ನು ನೀಡುತ್ತಿರುವುದೇನೆಂದರೆ, ಈ ತರಹ ಮಾಡಿದರೆ ಮುಂದಿನ ದಿವಸಗಳಲ್ಲಿ ಅವರ ಹಿತವನ್ನು ಕಾಪಾಡಬಹುದು ಎನ್ನುವುದು ನನ್ನ ಒಂದು ಅನಿಸಿಕೆಯೇ ಹೊರತು ತೀರ್ಮಾನಗಳು ಅವರಿಗೆ ಬಿಟ್ಟಿದ್ದು. ನಾವು ಎರಡು ದಿನಗಳಿಂದ ಈ ವಿಷಯವನ್ನು ಚರ್ಚೆ ಮಾಡಿ ನಾಳೆ, ನಾಡಿದ್ದು ಅಧಿವೇಶನ ಮುಗಿಸಿಕೊಂಡು ನಾವು ಹೋದ ರೈತರು ನೇಣು ಹಾಕಿಕೊಂಡು ಅವರ ಶವವನ್ನು ಹೊಳಲು ಗುಂಡಿ ತೋಡುವುದಕ್ಕಾಗಿ ಪರಿಹಾರವಾಗಿ 2,000 ಅಥವಾ 3,000 ಕೊಡುವುದಲ್ಲ ಇಲ್ಲಿರುವ ವಿಷಯ. ಇವತ್ತು ಅಥವಾ ನಾಳೆಯ ದಿವಸ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಇವತ್ತು ಏನು ಅಡಿಕೆ ಬೆಲೆ ಇದೆ ಅದಕ್ಕೆ cut off rate ನಿಗದಿಗೊಳಿಸಿ. ಒಂದೆರಡು ವರ್ಷಗಳ ಕಾಲ ಸರ್ಕಾರ ಅದನ್ನು ಭರಿಸಲಿ. ನಂತರ ಅಡಕೆ ಬೆಳೆಯುವ ಪ್ರಮಾಣ ಕಡಿಮೆಯಾಗುತ್ತದೆ. ಪೂರ್ಣವಾಗಿ ಲಾಭ ಬರುವಂಥ ಒಂದು ಮಾನದಂಡ ಬೇಡ. ಶೇಕಡ 10ರಷ್ಟು ನಷ್ಟ ಬರುವುದರಲ್ಲಿಯೇ ಇರಲಿ. ಆಗ ಕ್ರಮೇಣ ಅಡಕೆ ಪ್ರಮಾಣ ಕಡಿಮೆಯಾಗುತ್ತಾ ಬರುತ್ತದೆ. ಅಡಕೆ ಬಳಕೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಪಡಬೇಕು ಮತ್ತು ಉಪ ಉತ್ಪನ್ನಗಳನ್ನು ಮಾಡಿಸುವುದಕ್ಕೆ ಪ್ರಾರಂಭಿಸಬೇಕು. ಆಗ ರೈತರು ಬದುಕುತ್ತಾರೆ. ಇಲ್ಲವೆಂದರೆ ಅಡಕೆಗೆ 15,000 ರೂಪಾಯಿ ಬೆಲೆ ಏನಿದೆ, ಅದು 5,000 ರೂಪಾಯಿಗಳಿಗೂ ಅಲ್ಲ 2,000 ರೂಪಾಯಿಗಳಗೂ ಹೋಗುವುದಿಲ್ಲ. ಅಡಕೆ ಆಹಾರ ಪದಾರ್ಥವಲ್ಲ. ಅದೊಂದು ವಾಣಿಜ್ಯ ಬೆಳೆ. ಹೆಚ್ಚುವರಿ ಪದಾರ್ಥಗಳಿಂದಾಗಿ ಮುಂದಿನ ದಿವಸಗಳಲ್ಲಿ ಅದಕ್ಕೆ ಬೆಲೆ ಇಲ್ಲದಂತಾಗುತ್ತದೆ. ರೈತರು ಕೇವಲ ಒಂದಿಬ್ಬರಲ್ಲ, ಸಾಲಾಗಿ ನೇಣು ಹಾಕಿಕೊಂಡು ಸಾಯುವಂಥ ಪರಿಸ್ಥಿತಿ ಬರುತ್ತದೆ. ಅಡಕೆ ಬೆಳೆಗಾಗಿ ರೈತರು ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲವನ್ನು

ತೆಗೆದಿದ್ದಾರೆ, ಅದನ್ನು ಮನ್ನಾ ಮಾಡುವಂಥ ಪ್ರಯತ್ನ ಅಥವಾ ಅಡಕೆ ಬೆಲೆ ಕಡಿಮೆ ಮಾಡುವುದರ ಬಗ್ಗೆ ಸರ್ಕಾರ ಮುಂದಿನ ದಿವಸಗಳಲ್ಲಿ ಚಿಂತನೆ ಮಾಡಿ, ತೊಗರಿ ಮಂಡಳಿ, ತಂಬಾಕು ಮಂಡಳಿ, ಕಾಫಿ ಮಂಡಳಿ ಮತ್ತು ಚಹಾ ಮಂಡಳಿಯ ರೀತಿ ಅಡಕೆ ಬೆಳೆಗಾರರಿಗೆ ಸಂಬಂಧಿಸಿದ ಒಂದು ಮಂಡಳಿಯನ್ನು ರಚನೆ ಮಾಡುವುದರ ಜೊತೆಗೆ. ಅಡಕೆ ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸುವಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಈ ಚರ್ಚೆಯಲ್ಲಿ ಯಾರ ಮೇಲೆ ಯಾರೂ ಕೆಸರು ಎರೆಚಾಡದ ಹಾಗೆ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯುವ ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ನನಗೊಂದು ಚೀಟಿ ಕಳುಹಿಸಿದ್ದಾರೆ. ಅವರು ಅದರ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಆಡಳಿತ ಪಕ್ಷದ ಕೆಲವು ಗೌರವಾನ್ವಿತ ಸದಸ್ಯರು ಈ ಚೆರ್ಚೆಯಲ್ಲಿ ಭಾಗವಹಿಸಲು ನಮಗೂ ಅವಕಾಶ ಕೊಡಿ ಎಂದು ಕೇಳಿದಾಗ ಅವರಿಗೆ ನಾನೊಂದು ಮಾತು ಹೇಳಿದೆ. ಸಭಾನಾಯಕರು ಕಾಫಿಗೆ ಹೋಗಿದ್ದಾರೆ, ಅವರು ಬಂದ ಮೇಲೆ ನಿಮ್ಮನ್ನುದ್ದೇಶಿಸಿ, ಸಭೆ ಪ್ರಾರಂಭವಾದ ಸಮಯದಲ್ಲಿ ನಡೆದ ಘಟನೆಯ ಬಗ್ಗೆ ಎರಡು ಮಾತುಗಳನ್ನು ಹೇಳುವವರಿದ್ದಾರೆ, ನಂತರ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಹೇಳಿದೆ. ಮಧ್ಯಾಹ್ನ ಸಭೆ ಪ್ರಾರಂಭವಾದಾಗ ಮಾನ್ಯ ನಾಣಯ್ಯನವರು ಎತ್ತಿದ ವಿಷಯದ ಬಗ್ಗೆ ತಾವು (ಸಭಾನಾಯಕರು) ಬಹಳ ದುಃಖದಿಂದ ಮಾತನಾಡಿದ್ದಿರಿ. ಅದನ್ನು ಗೌರವಾನ್ವಿತ ಸದಸ್ಯರ ಗಮನಕ್ಕೆ ತಂದರೆ ಒಳ್ಳೆಯದಾಗುತ್ತದೆ ಎಂದು ನನಗನ್ನಿಸಿತು. ಬಹುಶಃ ತಮಗೆ ಸಂಕೋಚವಾಗುತ್ತಿರಬಹುದು. ನಾನೇ ಹೇಳುತ್ತೇನೆ.

ಭೋಜನ ಸಮಯದ ನಂತರ ಎಂದಿನಂತೆ ನಾನು ಕೋರಂ ಬೆಲ್ ಹಾಕಿಸುತ್ತೇನೆ . . . (ಈ ಹಂತದಲ್ಲಿ ಮಾನ್ಯ ನಾಣಯ್ಯನವರು ಸದನದ ಒಳಗೆ ಬಂದರು) ಮಾನ್ಯ ನಾಣಯ್ಯನವರೇ ಸದನಕ್ಕೆ ಬಂದರು. ಅವರೇ

ವಿಷಯವನ್ನು ಹೇಳಲಿ. ಮಾನ್ಯ ನಾಣಯ್ಯನವರೆ ತಾವು ಮಧ್ಯಾಹ್ನ ಏನು ಪ್ರಸ್ತಾಪ ಮಾಡಿದಿರೋ ಅದನ್ನು ಈಗ ಹೇಳಿದರೆ ಒಳ್ಳೆಯದು. ಆಡಳಿತ ಪಕ್ಷದ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ತಾವು ಹೇಳಬೇಕಾದ ವಿಚಾರವನ್ನು ಹೇಳಿದ ನಂತರ ಅವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಗಳೇ, ತಾವು ನಮ್ಮನ್ನು ಮಧ್ಯಾಹ್ನ 2 ಗಂಟೆಗೆ ಭೋಜನಕ್ಕೆಂದು ಕಳುಹಿಸಿ ಕೊಟ್ಟಿರಿ. ಭೋಜನಕ್ಕೆಂದು ಒಂದೂಕಾಲು ಗಂಟೆಯ ಸಮಯ ಕೊಟ್ಟಿದ್ದೀರಿ ಮತ್ತು ಮೂರುಕಾಲು ಗಂಟೆಗೆ ಸರಿಯಾಗಿ ತಾವೂ ಸದನಕ್ಕೆ ಬಂದ್ದೀರಿ. ಆಗ ಆಡಳಿತ ಪಕ್ಷದ ಕಡೆ ಮಾನ್ಯ ಎಸ್.ಆರ್. ಪಾಟೀಲ್‌ರವರು, ಮಾನ್ಯ ಘೋಟ್ನೇಕರ, ಮಾನ್ಯ ಪ್ರತಾಪ್‌ಚಂದ್ರ ಶೆಟ್ಟಿಯವರು ಮತ್ತೆ ಇನ್ನೊಬ್ಬರು ಒಟ್ಟು ನಾಲ್ಕು ಜನ ಮಾತ್ರ ಇದ್ದರು. ನಿಮಗೆ ಕೋರಂ ಆಗಬೇಕಾದರೆ 10 ಜನ ಇರಬೇಕು. ಸದನವನ್ನು

(5.00 ಗಂಟೆ)

ನಡೆಸಬೇಕಾದವರು ನೀವು. ಅಲ್ಲದೇ ನಿಮ್ಮದು ಹೊಸ ಸರ್ಕಾರ. ಹೊಸ ಸರ್ಕಾರಕ್ಕೆ 10 ಜನ ಶಾಸಕರನ್ನು ಸೇರಿಸಿ ಕೋರಂ ಇರುವ ಹಾಗೆ ನೋಡಿಕೊಳ್ಳಲು ಆಗದ ಪರಿಸ್ಥಿತಿ ಬಂತು. ಕೋರಂ ಆಗಿಸುವಂತಹ ಪರಿಸ್ಥಿತಿಯನ್ನು ನಾವುಗಳು ಏಕೆ ನಿರ್ಮಾಣ ಮಾಡಬೇಕು? ನಾವು ಕೂಡ ಹೊರಗಡೆ ಇರಬಹುದಿತ್ತು. ಸದನದಲ್ಲಿ ಬಂದು, ಕುಳಿತು, ಕೋರಂ ಮಾಡಿ ಚರ್ಚೆಯಲ್ಲಿ ಭಾಗವಹಿಸುವಂತಹ ಲವಲವಿಕೆ ಇಲ್ಲದೇ ಹೋದರೆ ಸದನವನ್ನು ಏಕೆ ನಡೆಸಬೇಕು? ಈ ಅಂಶವನ್ನು ಮಾನ್ಯ ಸಭಾಪತಿಯವರ ಗಮನಕ್ಕೆ ತಂದದ್ದು ನಿಜ. ಇನ್ನು ಮುಂದೆ ಇಂತಹ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ಮಾನ್ಯ ಸಭಾನಾಯಕರು ಕೂಡ ಅಭಿಪ್ರಾಯಪಟ್ಟರು.

ಮಾನ್ಯ ಸಭಾಪತಿಗಳೆ, ಈ ಸದನಕ್ಕೆ ಸಭಾನಾಯಕರೇ ಇಲ್ಲದ ಹಾಗಾಗುತ್ತಿತ್ತು. ಸಭಾನಾಯಕರು ಮಂತ್ರಿಯಾಗಿರಲೇಬೇಕು ಎಂಬ ನಿಯಮ ಇದ್ದುದರಿಂದ ಸಭಾನಾಯಕರಾದರು. ಮತ್ತೆ, ಸರ್ಕಾರದ ಪರವಾಗಿ ಮುಖ್ಯ

ಸಚೇತಕರಿರಬೇಕು. ಮುಖ್ಯ ಸಚೇತಕರಿದ್ದರೆ, ಕೋರಂ ಆಗಬೇಕು ಎನ್ನುವ ದೃಷ್ಟಿಯಿಂದ ಅವರು ಮಾನ್ಯ ಶಾಸಕರುಗಳನ್ನು ದೂರವಾಣಿ ಮುಖಾಂತರ ಮಾತನಾಡಿ ಕರೆಸುವುದು, ಲೌಂಜ್‌ಗೆ ಹೋಗಿ ಕರೆತರುವುದು ಮಾಡಬಹುದಾಗಿರುತ್ತದೆ. ಮಾನ್ಯ ವೆಂಕಟೇಶ್‌ರವರು ಈ ಭಾಗದಲ್ಲಿದ್ದಾಗ ಅಚ್ಚುಕಟ್ಟಾಗಿ ಆ ಕೆಲಸ ನಿರ್ವಹಿಸುತ್ತಿದ್ದರು. ಅವರನ್ನೇ ಸರ್ಕಾರದ ಮುಖ್ಯ ಸಚೇತಕರನ್ನಾಗಿ ಮಾಡಿ ಅಥವಾ ಬೇರೆಯವರನ್ನಾದರೂ ಮಾಡಿ. ಮಾನ್ಯ ಸಭಾನಾಯಕರೆ, ಅನ್ಯಥಾ ಭಾವಿಸಬೇಡಿ. ಮಾನ್ಯ ವೆಂಕಟೇಶ್‌ರವರಿಗೆ ಡೆಪ್ಯೂಟೇಷನ್ ಮೇಲೆ ಕೆಲಸ ಮಾಡುವುದಕ್ಕಾದರೂ ಅವಕಾಶ ಕೊಡಿ.

**Sri S.R.PATIL:-** We have taken it in good spirit. I have already made the statement . ಕೋರಂ ಕಡಿಮೆ ಇದ್ದದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. Henceforth it will not happen in the coming days, we will take care ಎಂದು ಹೇಳಿದ್ದೆವು. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಸದಕ್ಕೆ ಒಪ್ಪಿಕೊಂಡಿದ್ದಾರೆ.

**ಸಭಾಪತಿಯವರು:-** ಮಧ್ಯಾಹ್ನ ನಾನೊಂದು ವಿಷಯ ಪ್ರಸ್ತಾಪ ಮಾಡಿದ್ದೆ. ಮಾನ್ಯ ನಾಣಯ್ಯನವರು ಎದ್ದಾಗ ಆಡಳಿತ ಪಕ್ಷದಲ್ಲಿ 4 ಜನ ಮಾತ್ರ ಇದ್ದರು. ಬರದೇ ಇರುವವರ ಬಗ್ಗೆ ಅವರಿಲ್ಲದಿರುವಾಗ ಮಾತನಾಡುವುದು ಸರಿಯಲ್ಲ, ಅವರು ಬಂದಮೇಲೆ ಹೇಳಬೇಕು ಎಂದು ಹೇಳಿದ್ದೆ. ಆದರೆ ಅವರಲ್ಲಿ ಬಹಳ ಜನ ಬರಲೇ ಇಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಗಳು ಒಳ್ಳೆಯ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಬಂದಿರುವವರ ಎದುರುಗಡೆ, ಅವರು ಬರಲಿಲ್ಲ, ಇವರು ಬರಲಿಲ್ಲ ಎಂದು ಹೇಳುವ ಬದಲು, ಈಗ ಸದನಕ್ಕೆ ಬರದೇ ಇರುವವರು ಸದನದಲ್ಲಿದ್ದಾಗ ಸಭಾನಾಯಕರೇ ಒಂದು ಎಚ್ಚರಿಕೆಯನ್ನು ಕೊಟ್ಟರೆ ಒಳ್ಳೆಯದು ಎಂದು ಹೇಳಿದರು. ಈಗ ಕೂಡ ನಾವು ನಿರೀಕ್ಷೆ ಮಾಡುವುದು ಏನೆಂದರೆ, ಬಂದಿರುವವರಿಗೆ ಹೇಳಿದರೆ ಅವರ

ಮೂಲಕ ಸಂದೇಶ ಹೋಗುತ್ತದೆ. ನಾಳೆಯಿಂದ ಕೋರಂ ಆಗಬೇಕು ಎನ್ನುವ ದೃಷ್ಟಿಯಿಂದ ಸದನದಲ್ಲಿ ಇರಬೇಕು ಎಂದು ಹೇಳಿದರೆ ಒಳ್ಳೆಯದು.

**ಶ್ರೀ ಎಸ್.ಆರ್. ಪಾಟೀಲ್:-** ಈಗ ಅವರಿಗೆ ಅರ್ಥವಾಗಿಬಿಟ್ಟಿದೆ. ಮತ್ತೆ ಹೇಳುವ ಅವಶ್ಯಕತೆ ಇಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:-** ಕೆಲವರಿಗೆ ಶಂಖದಿಂದ ಬಂದರೆಯೇ ತೀರ್ಥ, ತಮ್ಮ ನಾಯಕರೇ ಹೇಳಬೇಕೆಂದು ಬಯಸುವವರು ಇರುತ್ತಾರೆ.

**ಶ್ರೀ ಯಂ.ಸಿ. ನಾಣಯ್ಯ:-** ಇವತ್ತಿನಿಂದ ವಿರೋಧ ಪಕ್ಷದ ನಾಯಕರು ಮತ್ತು ನಾವು ಒಂದು ತೀರ್ಮಾನಕ್ಕೆ ಬರುತ್ತೇವೆ. ಸದನದ ಒಳಗಡೆ ಆಡಳಿತ ಪಕ್ಷದವರು 10 ಜನ ಇದ್ದರೆ ಮಾತ್ರ ನಾವೂ ಬರುತ್ತೇವೆ. ಅವರು 10 ಜನ ಇಲ್ಲದೇ ಹೋದರೆ ನಾವು ಸದನಕ್ಕೆ ಬರುವುದಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಗಳೆ, ತಮ್ಮ ಕಳಕಳಿ, ಮಾನ್ಯ ವಿರೋಧ ಪಕ್ಷದ ನಾಯಕರ ಕಳಕಳಿ ಮತ್ತು ಹಿರಿಯರಾದ ಮಾನ್ಯ ನಾಣಯ್ಯನವರ ಕಳಕಳಿಗೆ ನಮ್ಮ ಬೆಂಬಲ ಇದೆ. ಇಲ್ಲಿ ಕೋರಂ ಇರಬೇಕು. ಒಳ್ಳೆಯ ವಿಚಾರಗಳು ಚರ್ಚೆ ಆಗಿ ಅದರಲ್ಲಿ ಎಲ್ಲರೂ ಭಾಗವಹಿಸಬೇಕು. ಕೋರಂ ಎಂಬುದು ಒಂದು ಪಕ್ಷಕ್ಕೆ ಸೀಮಿತವಾದುದಲ್ಲ. ಮಾನ್ಯ ಸದಾನಂದಗೌಡರು ತಮ್ಮ ಸದಸ್ಯರಿಗೆ, ಮಾನ್ಯ ನಾಣಯ್ಯನವರು ಅವರ ಸದಸ್ಯರಿಗೆ ಮತ್ತು ಸಭಾನಾಯಕರು ತಮ್ಮ ಶಾಸಕರಿಗೆ ತಿಳಿಹೇಳಿ ಸದನದ ಎಲ್ಲಾ ಕಲಾಪಗಳಲ್ಲಿ ಭಾಗವಹಿಸುವಂತೆ ಹೇಳಬೇಕು. ಅದುಬಿಟ್ಟು, ಆಡಳಿತ ಪಕ್ಷದ 10 ಜನ ಸದಸ್ಯರಿದ್ದರೆ ಮಾತ್ರ ನಾವು ಒಳಗೆ ಬರುತ್ತೇವೆ ಎಂದು ಹೇಳುವುದು ಸರಿಯಲ್ಲ.

**ಶ್ರೀ ಯಂ.ಸಿ. ನಾಣಯ್ಯ:-** ಅಂತಹ ಒಂದು ಸಂದೇಶ ಕೊಡಬೇಕೆಲ್ಲವೇ?

**ಶ್ರೀ ಬಸವರಾಜ ಹೊರಟ್ಟಿ:-** ತಿಳುವಳಿಕೆ ಬರಲಿ ಎಂದು ಹೇಳಿದೆವು.

**ಸಭಾಪತಿಯವರು:–** ಬಾರದವರಿಗೆ ತಿಳಿಸುವ ಜವಾಬ್ದಾರಿಯನ್ನು ಮಾನ್ಯ ಸಭಾನಾಯಕರು ಮತ್ತು ಇತರ ಹಿರಿಯ ನಾಯಕರು ಹೊರಬೇಕಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರು ಈ ಸದನದ custodian ಆಗಿರುತ್ತಾರೆ. ನಿಮ್ಮ ಆದೇಶವನ್ನು ಪಾಲಿಸಿ ಸದನದಲ್ಲಿ ಹೆಚ್ಚು ಕ್ರಿಯಾಶೀಲರಾಗಿ ಕೆಲಸ ಮಾಡಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಸದನಕ್ಕೆ ಒಂದು ವಿಷಯ ಹೇಳಬಯಸಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೆ, ನನಗೆ ನನ್ನ ಭಾವನೆಯನ್ನು ವ್ಯಕ್ತ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿರಿ, ಅದಕ್ಕಾಗಿ ಧನ್ಯವಾದಗಳು. ನಿನ್ನೆ ಕೇಂದ್ರ ಸಚಿವ ಸಂಪುಟ, Information Technology Incestment Region (ITIR) ಅನ್ನು, ಈ ದೊಡ್ಡದಾದ ಪ್ರಾಜೆಕ್ಟನ್ನು ರಾಜ್ಯದಲ್ಲಿ ಸ್ಥಾಪನೆ ಮಾಡುವ ದಿಸೆಯಲ್ಲಿ ಕ್ಲಿಯರೆನ್ಸ್ ಕೊಟ್ಟಿದೆ. ಇದರ ವಾರ್ಷಿಕ ಟರ್ನ್‌ಓವರ್ 2 ಲಕ್ಷ 1 ಸಾವಿರ ಕೋಟಿ ರೂಪಾಯಿಗಳು. ಇದಕ್ಕೆ 10500 ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳಲಿದ್ದು ಅದು ಚಿಕ್ಕಬಳ್ಳಾಪುರ–ದೊಡ್ಡಬಳ್ಳಾಪುರ ಜಿಲ್ಲೆ, ಬೆಂಗಳೂರಿನಿಂದ 44 ಕಿ.ಮೀ. ಅಂತರದಲ್ಲಿ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 14 ಕಿ.ಮೀ. ಅಂತರದಲ್ಲಿ ಈ ಒಂದು ಬೃಹತ್ ಯೋಜನೆ ಬರಲಿದ್ದು ಅದಕ್ಕೆ ಕೇಂದ್ರ ಸರ್ಕಾರ ಹಸಿರು ನಿಶಾನೆ ತೋರಿಸಿದೆ.

ಇದರ ಮುಖಾಂತರ ನಮ್ಮ ರಾಜ್ಯದಲ್ಲಿ employment ದೃಷ್ಟಿಯಿಂದ ಹೇಳುವುದಾದರೆ 'employment generation' ನಲ್ಲಿ direct employment ಮೂಲಕ 1.18 million ಜನರು. indirect employment ಮೂಲಕ 2.87 millon ಜನರು, ಅಂದರೆ totally 4.05 million people will get employment. ಅಂದರೆ, ಅಂದಾಜು 40 ಲಕ್ಷಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ದೊರೆಯುವಂತಹ ಈ ಬೃಹತ್ ಯೋಜನೆ ಏನಿದೆ ಅದಕ್ಕೆ ನಿನ್ನೆ ಕ್ಲಿಯರೆನ್ಸ್

ಸಿಕ್ಕಿದೆ. ' Total investment' ಎಷ್ಟಿದೆ ಎಂದರೆ, ಒಂದು ಲಕ್ಷ ಆರು ಸಾವಿರ ಕೋಟಿಯ ಬೃಹತ್ ಯೋಜನೆ. ಇದರ ಮುಖಾಂತರ ನಮ್ಮ ರಾಜ್ಯಕ್ಕೆ ದೊಡ್ಡದಾದಂತಹ ಸಹಾಯವಾಗುತ್ತದೆ. ಅಷ್ಟೆ ಅಲ್ಲ, ಕೇಂದ್ರ ಸರ್ಕಾರದವರು ಏಳು ಸಾವಿರ ಕೋಟಿಯಷ್ಟು ಹಣ ಈ Metro Rail Project clearance ಗೆ, ರಸ್ತೆಗಳಿಗೆ ಮತ್ತು ಮೂಲಭೂತ ಸೌಲಭ್ಯಗಳಿಗೂ ಕೂಡ ಹಣ ನೀಡುತ್ತಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಇದು Information Technology ಯಲ್ಲಿ ಒಂದು ದೊಡ್ಡದಾದಂತಹ ಹೆಜ್ಜೆ ಇದಕ್ಕಾಗಿ ಕೇಂದ್ರದ UPA ಸರ್ಕಾರದವರು ನಮಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಕೇಂದ್ರದ UPA ಸರ್ಕಾರದವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇದು 18 ವರ್ಷದಲ್ಲಿ ಎರಡು ಹಂತದಲ್ಲಿ ಆಗತಕ್ಕಂಥ ಪ್ರಾಜೆಕ್ಟ್. ನೇರವಾಗಿ ನಾನು ಆ ಇಲಾಖೆಯ ಜವಾಬ್ದಾರಿ ಹೊಂದಿರುವುದರಿಂದ, ನನಗೆ ಈ ಬಗ್ಗೆ ಆಸಕ್ತಿ ಇತ್ತು. ಆ ದೃಷ್ಟಿಯಿಂದ ಈ ವಿಚಾರವನ್ನು ಸದನದ ಮುಂದೆ ಮತ್ತೊಂದು ವಿಚಾರವೇನೆಂದರೆ, ನಮ್ಮ ಉತ್ತರ ಕರ್ನಾಟಕದಲ್ಲಿ ಬಾಂಬೆ-ಕರ್ನಾಟಕ, ಹೈದರಬಾದ್- ಕರ್ನಾಟಕದಲ್ಲಿರುವ ಧಾರವಾಡ ಮತ್ತು ಗುಲ್ಬರ್ಗಾದಲ್ಲಿರುವ High Court Circuit Bench ಗಳನ್ನು 'Permanent Bench' ಗಳನ್ನಾಗಿ ಪರಿವರ್ತನೆ ಮಾಡಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಆ ದೃಷ್ಟಿಯಿಂದ ಈ ಸಂದರ್ಭದಲ್ಲಿ ಕೇಂದ್ರದಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸುವಂತಹ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ನಿನ್ನೆ ರಾತ್ರಿ ಕ್ಯಾಬಿನೆಟ್ ಕ್ಲಿಯರೆನ್ಸ್ ಆದ ತಕ್ಷಣ ದೂರವಾಣಿ ಮುಖಾಂತರ ನನ್ನ ಜೊತೆಯಲ್ಲಿ ಮಾತನಾಡಿದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆ, ಮಾನ್ಯ ವೀರಪ್ಪಮೊಯ್ಲಿ, ಮಾನ್ಯ ಮುನಿಯಪ್ಪ, ಮಾನ್ಯ ರೆಹಮಾನ್ ಖಾನ್‌ರವರಿಗೆ ಮತ್ತು ಕೇಂದ್ರದ ಪ್ರಧಾನ ಮಂತ್ರಿಗಳಾದಂತಹ ಡಾ॥ ಮನಮೋಹನ್‌ಸಿಂಗ್‌ರವರಿಗೆ ಮತ್ತು ಅವರ ಸಂಪುಟ ಸದಸ್ಯರುಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುವುದರ ಜೊತೆಗೆ ಸುಪ್ರೀಂ ಕೋರ್ಟಿನ ಜಡ್ಜ್‌ಗಳಿಗೆ ಮತ್ತು ಹೈಕೋರ್ಟಿನ ಜಡ್ಜ್‌ಗಳಿಗೂ ಕೂಡ ಅಭಿನಂದನೆಯನ್ನು ಸಲ್ಲಿಸುತ್ತೇನೆ. Circuit Bench ಉತ್ತರ ಕರ್ನಾಟಕದ ಭಾಗದಲ್ಲಿ permanent

ಆಗಬೇಕೆನ್ನುವುದು ಬಹು ದಿನಗಳ ಬೇಡಿಕೆಯಾಗಿತ್ತು. ಕೇಂದ್ರ ಸರ್ಕಾರದವರು ಅವುಗಳನ್ನು 'Permanent Bench' ಆಗಿ ಪರಿವರ್ತನೆ ಮಾಡಿರುವಂತಹ ಸಂದರ್ಭದಲ್ಲಿ ಅವರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆ ಭಾಗದ ಜನರು ಬಹಳಷ್ಟು ದೂರ ಬೆಂಗಳೂರಿನವರೆಗೆ ಬರಬೇಕಾಗಿತ್ತು. ಈಗ 365 ದಿವಸವೂ ನ್ಯಾಯಾಲಯದ ಕಲಾಪಗಳು ನಡೆಯುವಂತಹ ಅವಕಾಶ ನಮಗೆ ದೊರಕಿದೆ. ಆಗ ಕೆಲವು ದಿನ ನಡೆಯುತ್ತಿತ್ತು, ಕೆಲವು ದಿನ ನಡೆಯುತ್ತಿರಲಿಲ್ಲ. ಈಗ 'Permanent Bench' ಆಗಿ ಗುಲ್ಬರ್ಗಾ, ಧಾರವಾಡದ Circuit Bench ಪರಿವರ್ತನೆ ಆಗಿದ್ದಕ್ಕೆ ಈ ಸಂತೋಷದ ಸುದ್ದಿಯನ್ನು ತಮ್ಮ ಮುಖಾಂತರ ಎಲ್ಲಾ ಸದಸ್ಯರೊಂದಿಗೆ ನಾನು ಹಂಚಿಕೊಳ್ಳುವುದಕ್ಕೆ ಖುಷಿ ಪಡುತ್ತಿದ್ದೇನೆ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ,......

**ಸಭಾಪತಿಯವರು:–** ಅವರು ಒಂದು ಹೇಳಿಕೆಯನ್ನು ಮಾಡಿ ಧನ್ಯವಾದಗಳನ್ನು ಹೇಳಿದ್ದಾರೆ, ಸಾಕು. ಇದು ಚರ್ಚೆಯ ವಿಷಯವಲ್ಲ. ತಾವು ಕುಳಿತುಕೊಳ್ಳಿ. ನೀವು ಧನ್ಯವಾದ ಹೇಳುವುದಾದರೆ ನಿಮಗೂ ಅವಕಾಶ ಕೊಡುತ್ತೇನೆ. ಸರ್ಕಾರದ ಹೇಳಿಕೆ ಮೇಲೂ ಚರ್ಚೆ ಮಾಡುತ್ತೇವೆಂದರೆ ಹೇಗೆ? ಡಾ॥ ಶಿವಯೋಗಿಸ್ವಾಮಿಯವರು ಮಾತನಾಡಲು ಅವಕಾಶ ಕೊಡಿ ಎಂದು ಬೆಳಿಗ್ಗೆಯಿಂದಲೂ ಕೇಳುತ್ತಿದ್ದಾರೆ. ಅವರು ಅಭಿನಂದನೆಯನ್ನು ಸಲ್ಲಿಸುವವರಿದ್ದಾರೆ. ಅದನ್ನು ಕೇಳೋಣ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ಸಿದ್ದರಾಮಯ್ಯನವರು ಗುಟ್ಕಾ ನಿಷೇಧದ ಬಗ್ಗೆ ಏನು ನಿರ್ಣಯ ತೆಗದುಕೊಂಡಿದ್ದಾರೆ ಅದೊಂದು ಸೂಕ್ತವಾದ ನಿರ್ಣಯ ಎಂದು ನಾವೆಲ್ಲಾ ಭಾವಿಸಿದ್ದೇವೆ. ಏಕೆಂದರೆ, ಈಗಾಗಲೇ ಸುಮಾರು 22 ರಾಜ್ಯಗಳಲ್ಲಿ ಈ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅವರೂ ಸಹ ಅಡಕೆ ಬೆಳೆ ಕುಸಿತ

ಕಂಡಾಗ ರೈತರ ಬೆಂಬಲಕ್ಕೆ ಬರುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ನಮ್ಮ ಸರ್ಕಾರ ಯಾವಾಗಲೂ ರೈತರ ಪರವಾಗಿ ಇದ್ದಂತಹ ಸರ್ಕಾರ. ಏಕೆಂದರೆ, 'ಉಳುವವನೇ ಭೂ ಒಡೆಯ' ಎಂದು ಹೇಳಿದಂತಹ ಸರ್ಕಾರ ಇದು. ಆದ್ದರಿಂದ ರೈತರ ಹಿತ ಕಾಪಾಡಲು ಯಾವಾಗಲೂ ಈ ಸರ್ಕಾರ ಹಿಂದೆ ಬೀಳುವುದಿಲ್ಲ. ಈಗಾಗಲೇ ಹಿಂದಿನ ಸರ್ಕಾರ ಎಲ್ಲೆಲ್ಲಿ ಶಾಲಾ-ಕಾಲೇಜುಗಳಿವೆ ಅಲ್ಲೆಲ್ಲ ಗುಟ್ಕಾ ನಿಷೇಧವನ್ನು ಹೇರಿತ್ತು. ಆದ್ದರಿಂದ ಈಗ ಅಡಕೆಯ ಬೆಲೆ ಕುಸಿದಿಲ್ಲ. ಈಗಾಗಲೇ ಗುಟ್ಕಾ ಬಗ್ಗೆ ಇಷ್ಟೊಂದು ಗಂಭೀರ ಚರ್ಚೆ ಮಾಡುವಾಗ ಇದರ ಲಾಭವನ್ನು ಏಜೆಂಟರು ತೆಗೆದುಕೊಳ್ಳುತ್ತಾರೆ. ಏಕೆಂದರೆ, ರೈತ ಗುಟ್ಕಾ ನಿಷೇಧದಿಂದ ಅಡಕೆ ಬೆಲೆ ಕುಸಿಯುತ್ತದೆ ಎಂದು ಹೇಳಿ ತಾನು ಇಟ್ಟಂಥ ಅಡಿಕೆಯೆಲ್ಲಾ ಮಾರುಕಟ್ಟೆಗೆ ತರುವಂತಹ ಪರಿಸ್ಥಿತಿ ಬರಬಹುದು. ಈ ರೀತಿಯ ಪರಿಸ್ಥಿತಿ ಬಂದ ಮೇಲೆ ಏನಾಗುತ್ತದೆ ಎಂದರೆ, ಏಜೆಂಟರು ಮಧ್ಯೆ ಪ್ರವೇಶ ಮಾಡಿ ಸಿಕ್ಕಾಪಟ್ಟೆ ಹೇಗೆ ಬರುತ್ತದೆ ಹಾಗೆ ಖರೀದಿ ಮಾಡುತ್ತಾರೆ. ಅಡಕೆ ಬೆಲೆ ಕುಸಿಯುವುದಕ್ಕೆ ಬೇರೆ ಬೇರೆ ಪಕ್ಷದವರು ಗುಟ್ಕಾದ ಬಗ್ಗೆ ಮಾತನಾಡುತ್ತಾರಲ್ಲಾ ಅವರೇ ಕಾರಣ ಎಂದು ನಾವು ಇವತ್ತು ಹೇಳಬಹುದು. ಆದ್ದರಿಂದ ಇಷ್ಟು ದೀರ್ಘವಾಗಿ ನಾವೆಲ್ಲಾ ಗುಟ್ಕಾ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಏಕೆಂದರೆ, ಈ ಗುಟ್ಕಾ ಎಷ್ಟು ಹಾನಿಕರ ಎಂಬುದರ ಬಗ್ಗೆ ನಮ್ಮ ಸಚಿವರು ಈಗಾಗಲೇ ಹೇಳಿದ್ದಾರೆ. ಗುಟ್ಕಾ ನಿಷೇಧದಿಂದ ಬೆಲೆ ಕುಸಿಯುತ್ತದೆ ಎಂದರೆ ಅದು ತಪ್ಪು. ಏಕೆಂದರೆ, ಗುಟ್ಕಾವನ್ನು Asian Paints ನಲ್ಲೂ ಉಪಯೋಗ ಮಾಡುತ್ತಿದ್ದಾರೆ. ಅದರ ಹೊರತಾಗಿ ತಮ್ಮ ಜಿಲ್ಲೆಯಲ್ಲಿ ತೋಟಗಾರಿಕಾ ಸೊಸೈಟಿ ಎಂದು ಒಂದು ಸೊಸೈಟಿ ಇದೆ. ಅವರು sweet supari ಮಾಡುತ್ತಿದ್ದಾರೆ. ಈ ವರ್ಷ 30 ಕೋಟಿ ರೂಪಾಯಿಗಳ ವ್ಯವಹಾರವಾಗಿದೆ. ಅಲ್ಲಿ ಸುಮಾರು 700-800 ಜನರು ಕೆಲಸ ಮಾಡುತ್ತಿದ್ದಾರೆ. ಅದೇ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಹೂಮಾಲೆಯನ್ನು ನಾವು ಯಾವ ರೀತಿ ಮಾಡುತ್ತಿದ್ದಾರೆ. ಅದೇ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಹೂಮಾಲೆಯನ್ನು ನಾವು ಯಾವ ರೀತಿ ಉಪಯೋಗಿಸುತ್ತೇವೆ ಅದೇ ಪ್ರಕಾರ ಈ ಅಡಕೆ ಮಾಲೆಯನ್ನು ಸಹ ಈಗ ತಯಾರು ಮಾಡುತ್ತಿದ್ದಾರೆ. ಈ ಅಡಕೆ

ಮಾಲೆ ಹಾಕಿಕೊಂಡಂತಹ ಜನರಿಗೂ ಕೂಡ ಗೌರವ ಹೆಚ್ಚಾಗುತ್ತದೆ. ಆದ್ದರಿಂದ ಅಡಕೆ ಮಾಲೆಯನ್ನು ಶಿರಸಿಯಲ್ಲಿ ಮಾಡುತ್ತಿದ್ದಾರೆ ಅದಕ್ಕೆ ಸಾಕಷ್ಟು ಬೇಡಿಕೆ ಬಂದಿದೆ. ಆದ್ದರಿಂದ ನಾನು ಒಂದು ಸಲಹೆ ಕೊಡುತ್ತೇನೆ. ಎಲ್ಲೆಲ್ಲಿ ಗುಟ್ಕಾ ಫ್ಯಾಕ್ಟರಿ ಇದೆ ಅಲ್ಲಿ sweet supari ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. Sweet supari ಮೇಲೆ 18 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. 6 ಪರ್ಸೆಂಟ್ Excise Duty ಇದೆ. ಆದ್ದರಿಂದ ಈ ತೆರಿಗೆಗಳನ್ನು ಕಡಿಮೆ ಮಾಡಿದರೆ ಇನ್ನಷ್ಟು sweet supari ಮಾಡುತ್ತಾರೆ. ಅದಕ್ಕೆ ಹೆಚ್ಚಿನ ಬೆಲೆಯನ್ನು ರೈತರಿಗೆ ಕೊಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ಗುಟ್ಕಾ ನಿಷೇಧದ ಬಗ್ಗೆ ನಮ್ಮ ಸರ್ಕಾರ ತೆಗೆದುಕೊಂಡಿರುವ ನಿರ್ಣಯ ಸೂಕ್ತವಾದ ನಿರ್ಣಯ ಎಂದು ಹೇಳಬಯಸುತ್ತೇನೆ.

ಇವತ್ತು ಅಡಕೆ ಬೆಳೆಗಾರರ ಜೊತೆಯಲ್ಲಿ ತಂಬಾಕು ಬೆಳೆಗಾರರ ಬಗ್ಗೆ ಕೂಡ ಇಂದು ಚಿಂತನೆ ಮಾಡುವುದು ಅಗತ್ಯ ಇದೆ. ತಂಬಾಕು ಬೆಳೆಗಾರರು ಎಲ್ಲಿ ಹೋಗಬೇಕು? ಇದರ ಬಗ್ಗೆ ಸಹ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಬಹುದು. ಗುಟ್ಕಾದ ಜೊತೆಗೆ ತಂಬಾಕು ಕೂಡ ಬರುತ್ತದೆ.

ಶ್ರೀ **ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಗುಟ್ಕಾದಲ್ಲಿ ಇರತಕ್ಕಂತಹ ತಂಬಾಕು, ನಿಕೋಟಿನ್ ಅನ್ನು ಬೇರ್ಪಡಿಸಿ ಅಡಕೆಗೆ ಗೌರವವನ್ನು ನಮ್ಮ ಸರ್ಕಾರ ತಂದು ಕೊಟ್ಟಿದೆ ಎಂದು ಹೇಳುತ್ತಿದ್ದಾರೆ.

ಶ್ರೀ **ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಹೌದು. ಗುಟ್ಕಾದಲ್ಲಿ ಇರತಕ್ಕಂತಹ ತಂಬಾಕು, ನಿಕೋಟಿನ್ ಅನ್ನು ಬೇರ್ಪಡಿಸಿ ಅಡಕೆಗೆ ಮಾನವನ್ನು ನಮ್ಮ ಸರ್ಕಾರ ತಂದು ಕೊಟ್ಟಿದೆ. ಇದಕ್ಕಾಗಿ ನೀವೆಲ್ಲರೂ ನಮ್ಮನ್ನು ಅಭಿನಂದಿಸಬೇಕಾಗಿದೆ. ಅದನ್ನು ಬಿಟ್ಟು ಈ ರೀತಿ ಹೇಳುವುದು ಸರಿಯಲ್ಲ. ಅಡಕೆ ಬೆಲೆ ಕುಸಿದ ಮೇಲೆ ನಮ್ಮ ಸರ್ಕಾರ ನೋಡುತ್ತದೆ. ಆದರೆ ಅಡಕೆ ಬೆಲೆ ಇನ್ನೂ ಕುಸಿದಿಲ್ಲ. ಆದರೆ ನಾವೇ ಆ ಅಡಕೆ ಬೆಲೆ ಕುಸಿಯುವ ಹಾಗೆ ಮಾಡಬಾರದು. ನಮ್ಮ ಈ ಅಡಕೆ ಬೆಳೆಗಾರರ **ಅಸಾಮಿ ಸಾಲವನ್ನು**

ತೆಗೆದುಕೊಂಡಿದ್ದರಿಂದ ಅವರಿಗೆ ಬಹಳ ತೊಂದರೆಯಾಗಿದೆ ಎಂದು ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಡಿ.ವಿ. ಸದಾನಂದಗೌಡರವರಿಗೆ ಮನವಿಯನ್ನು ಕೊಟ್ಟಿದ್ದೆವು. ರೈತರು ತಮ್ಮ ಒಂದು ಎಕರೆ ಅಡಕೆ ತೋಟವನ್ನು ಮಾರಿದರೂ ಕೂಡ ಅಸಾಮಿ ಸಾಲವನ್ನು ತೀರಿಸುವುದಕ್ಕಾಗುವುದಿಲ್ಲ. ಆದ್ದರಿಂದ ನಮ್ಮ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕೆಂದು ಮನವಿ ಮಾಡುತ್ತೇನೆ. ನಮ್ಮ ಸರ್ಕಾರ ಅಡಕೆ ಬೆಳೆಗಾರರ ಸಹಾಯಕ್ಕೆ ಬರಬೇಕು ಎಂದು ವಿನಂತಿಸುತ್ತೇನೆ. ಗುಟ್ಕಾ ನಿಷೇಧ ಮಾಡಿದ್ದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಸರ್ಕಾರದ ಪರವಾಗಿ ಯಾರು ಉತ್ತರವನ್ನು ಕೊಡುತ್ತಾರೆ? ಮಾನ್ಯ ಸಚಿವರು ಇದ್ದಾರೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿಗೆ ಮಾತನಾಡುವುದೇ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿಯೇ ಇದ್ದಾರೆ. ಗುಟ್ಕಾ ನಿಷೇಧದ ಬಗ್ಗೆ ಯಾರದ್ದೂ ವಿರೋಧ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಲ್ಲವೇ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಯಾರಾದರೂ ಉತ್ತರವನ್ನು ಕೊಡಲಿ ನನ್ನ ಅಭ್ಯಂತರವಿಲ್ಲ. ಆದರೆ ನೀವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಆ ರೈತರಿಗೆ ಅನುಕೂಲಕರವಾದ ಉತ್ತರವನ್ನು ಕೊಡುವುದಕ್ಕಾಗುತ್ತದೆಯೇ ಎಂದು ಕೇಳಬಯಸುತ್ತೇನೆ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿದೆ. ಆರೋಗ್ಯದ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ಉತ್ತರವನ್ನು ಕೊಡಬಹುದು. ನಾವೇನಾದರೂ ಈ ಗುಟ್ಕಾ ನಿಷೇಧದ ಬಗ್ಗೆ ನಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರೆ ಆಗ ಆರೋಗ್ಯ ಮಂತ್ರಿಗಳು ಉತ್ತರವನ್ನು ಕೊಡಬಹುದಿತ್ತು. ಆದರೆ ನಮ್ಮ ಕಡೆಯಿಂದ

ಯಾರೂ ಕೂಡ ಗುಟ್ಕಾ ನಿಷೇಧದ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತಿಲ್ಲ. ಆದರೆ, ಇದರ ಬದಲಿ ವ್ಯವಸ್ಥೆಗಳು ಆಗಬೇಕಾಗಿದೆ. ನಮ್ಮ ರೈತರು ಬೆಳೆದ ಅಡಕೆ ಬೆಲೆ ಕುಸಿತಕ್ಕೆ ಅಗತ್ಯವಾದ ಮಾರುಕಟ್ಟೆ ಸ್ಥಿರತೆಯನ್ನು ತರುವುದಕ್ಕೆ ಸರ್ಕಾರ ತಕ್ಷಣ ಏನು ಮಾಡುತ್ತದೆ ಎಂಬುದು ನಮ್ಮ ಮುಖ್ಯವಾದ ಪ್ರಶ್ನೆಯಾಗಿದೆ. ಮತ್ತು ಗುಟ್ಕಾ ನಿಷೇಧದಿಂದಾಗಿ ನೂರಾರು ಜನರು ನಿರುದ್ಯೋಗಿಗಳಾಗುವ ಸಂಭವವನ್ನು ಇಲ್ಲಿ ಉಲ್ಲೇಖ ಮಾಡಲಾಗಿದೆ. ಮತ್ತು ಆ ನಿರುದ್ಯೋಗ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಸರ್ಕಾರ ತಕ್ಷಣ ಏನು ಕ್ರಮವನ್ನು ಕೈಗೊಳ್ಳುತ್ತದೆ ಎಂಬುದರ ಬಗ್ಗೆ ನಮಗೆ ಮಾಹಿತಿಯನ್ನು ಕೊಡಬೇಕು. ಇವೆಲ್ಲದರಿಂದಾಗಿ ಆ ರೈತರು ಇಂದು ಸಾಲವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದೇ ಇರುವಂತಹ ಈ ಪರಿಸ್ಥಿತಿಯಲ್ಲಿ ಸಾಲವನ್ನು ಮನ್ನಾ ಮಾಡುವಲ್ಲಿ ಸರ್ಕಾರದ ನಿಲುವು ಏನು? ಇವೆಲ್ಲದರ ಬಗ್ಗೆ ನಮಗೆ ಉತ್ತರ ಬೇಕಾಗಿದೆ. ಅರ್ಥ ಖಾತೆಯನ್ನು ಹೊಂದಿರುವಂತಹ ಮಾನ್ಯ ಮುಖ್ಯಮಂತ್ರಿಗಳು ಇವೆಲ್ಲದಕ್ಕೂ ಉತ್ತರವನ್ನು ನೀಡಿದರೆ ಒಳ್ಳೆಯದು ಎಂದು ನಮ್ಮೆಲ್ಲರ ಭಾವನೆಯಾಗಿದೆ. ಗುಟ್ಕಾ ನಿಷೇಧದ ಬಗ್ಗೆ ನಮ್ಮಲ್ಲಿ ಏನೂ ವ್ಯತ್ಯಾಸ ಇಲ್ಲದೇ ಇರುವಂತಹ ಹಿನ್ನೆಲೆಯಲ್ಲಿ ಇವೆಲ್ಲದಕ್ಕೂ ಮಾನ್ಯ ಮುಖ್ಯಮಂತ್ರಿಗಳು ಬಂದ ನಂತರ ಇವತ್ತೋ ಇಲ್ಲವೇ ನಾಳೆಯೋ ಅವರಿಂದಲೇ ಉತ್ತರವನ್ನು ಕೊಡಿಸಬೇಕೆನ್ನುವುದು ನಮ್ಮೆಲ್ಲರ ವಿನಂತಿಯಾಗಿದೆ. ಇದು ಬಹಳ ಗಂಭೀರವಾದ ಪರಿಸ್ಥಿತಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಿರುವ ಆರೋಗ್ಯ ಸಚಿವರಾದ ಮಾನ್ಯ ಖಾದರ್ ಅವರು ತರಾತುರಿಯಲ್ಲಿ ಗುಟ್ಕಾ ನಿಷೇಧದ ನಿರ್ಧಾರವನ್ನು ತೆಗೆದುಕೊಂಡಿದ್ದು ಮಾತ್ರ ತಪ್ಪು ಎಂದು ಹೇಳಬಯಸುತ್ತೇನೆ. ಆ ಭಾಗದಿಂದ ಬಂದ ಸಚಿವರಿಗೆ ಈ ಅಡಕೆ ಬೆಳೆಗಾರರ ಬಗ್ಗೆ ಸ್ವಲ್ಪ ಗೊತ್ತಿರಬೇಕಾಗಿತ್ತು. ಆದರೆ ಸ್ವಲ್ಪ ಯುವಕರಾಗಿರುವ ಅವರು ಅಡಕೆ ತಿನ್ನುವುದಿಲ್ಲ, ವೀಳ್ಯ ಹಾಕುವುದಿಲ್ಲ. ಆದುದರಿಂದ ಅದರ ಬಗ್ಗೆ ಅವರಿಗೆ ಅಷ್ಟಾಗಿ ಪರಿಜ್ಞಾನ ಇಲ್ಲವೆಂದು ಅನ್ನಿಸುತ್ತದೆ. ಇಡೀ ರಾಜ್ಯದ 16 ಜಿಲ್ಲೆಗಳಲ್ಲಿ ಇರುವಂತಹ ಅಡಕೆ ಬೆಳೆಗಾರರ ಸಮಸ್ಯೆಯ ಬಗ್ಗೆ ಮತ್ತು ಇದರಲ್ಲಿ ಕೆಲಸ

ನಿರ್ವಹಿಸುತ್ತಿರುವ ನೂರಾರು ಕಾರ್ಮಿಕರು ತೊಂದರೆಗೆ ಒಳಗಾಗಿದ್ದಾರೆ. ನೂರಾರು ಜನ ಯುವಕ-ಯುವತಿಯರು ಕೆಲಸ ಕಳೆದುಕೊಳ್ಳುತ್ತಿರುವ ಪರಿಸ್ಥಿತಿ ಇದೆ. ಈ ಯುವಕ-ಯುವತಿಯರ ಭವಿಷ್ಯದ ಬಗ್ಗೆ ಸಾಲ ಮನ್ನಾದ ಬಗ್ಗೆ ವಿಶೇಷವಾಗಿ ಹೇಳಿಕೆಗಳು ಆಗಬೇಕಾಗಿದೆ ಮತ್ತು ಈ ಎಲ್ಲಾ ಸಭೆಗಳನ್ನು ಮಾನ್ಯ ಮುಖ್ಯಮಂತ್ರಿಗಳೇ ತೆಗೆದುಕೊಳ್ಳಬೇಕಾಗುತ್ತದೆ. ನಾಳೆ ಮಾನ್ಯ ಮುಖ್ಯಮಂತ್ರಿಯವರು ದೆಹಲಿಯಿಂದ ಇಲ್ಲಿಗೆ ಬರುತ್ತಾರೆಂದು ನಮಗೆ ಸುದ್ದಿ ಇದೆ. ನಾಳೆ ಅವರು ಇಲ್ಲಿಗೆ ಬಂದು ಉತ್ತರವನ್ನು ಕೊಡಬೇಕೆಂದು ನಮ್ಮೆಲ್ಲರ ಅಪೇಕ್ಷೆ ಇದೆ. ತಾವು ಅದನ್ನು ಮಾಡಬೇಕೆಂದು ನನ್ನ ವಿನಂತಿ.

(ಗೊಂದಲ)

**ಸಭಾಪತಿಯವರು:-** ಇಬ್ಬಿಬ್ಬರು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ.

**ಶ್ರೀ ಯು.ಟಿ. ಖಾದರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಇಲ್ಲಿ ನಾನು ಉತ್ತರದ ಬಗ್ಗೆ ಮಾತನಾಡುವುದಿಲ್ಲ. ಈ ಚರ್ಚೆಯಲ್ಲಿ ಆರೋಗ್ಯ ಮಂತ್ರಿಯಾದ ನಾನು ನಮ್ಮ ಇಲಾಖೆ ತೆಗೆದುಕೊಂಡಂತಹ ತರಾತುರಿಯ ತೀರ್ಮಾನಗಳು ಏನು ಇದೆ ಅದರ ಬಗ್ಗೆ ಮಾತನಾಡಬೇಕಾಗುತ್ತದೆ. ಅದರಿಂದಾಗಿ ಅವರಿಗೆ ಬಂದಿರುವ ಸಂಶಯಗಳ ಬಗ್ಗೆ ನನಗೂ ಕೂಡ ಮಾತನಾಡುವ ಕೆಲವು ಅಂಶಗಳು ಇವೆ. ನನ್ನ ಮಾತು ಏನು ಇದೆ, ಅದು ಉತ್ತರವೆಂದು ತೆಗೆದುಕೊಳ್ಳುವುದು ಬಿಡುವುದು ಅವರಿಗೆ ಬಿಟ್ಟದ್ದು. ನನ್ನ ಮಾತುಗಳನ್ನು ತಾವು ಉತ್ತರವೆಂದು ಪರಿಗಣಿಸಿಕೊಳ್ಳಬೇಡಿ. ಆ ರೀತಿ ತಿಳಿದುಕೊಳ್ಳಬೇಡಿ.

**ಶ್ರೀ ಡಿ.ವಿ. ಸದಾನಂದಗೌಡ:-** ಅವರ ಉತ್ತರದಿಂದ ಈ ಚರ್ಚೆ ಮುಗಿಯುವುದಿಲ್ಲ. ಅವರು ಉತ್ತರ ಕೊಡುವುದಾದರೆ ನಮ್ಮ ಅಭ್ಯಂತರವಿಲ್ಲ. ನಾವು ಯಾವ ಮಂತ್ರಿಗಳಿಗೂ ಕೂಡ ಉತ್ತರ ಕೊಡುವುದನ್ನು ತಡೆಯುವುದಕ್ಕೆ ಆಗುವುದಿಲ್ಲ. ಆದರೆ, ಇಲ್ಲಿಗೇ ಈ ಚರ್ಚೆ ಮುಗಿಯುವುದಿಲ್ಲ. ಈ ಚರ್ಚೆಗೆ ಸಮರ್ಪಕವಾದ ಉತ್ತರವನ್ನು ನಾಳೆ ಮಾನ್ಯ ಮುಖ್ಯಮಂತ್ರಿಗಳೇ ಕೊಡಬೇಕು.

ಇವರಿಬ್ಬರೂ ಉತ್ತರ ಕೊಟ್ಟರೆ ಒಳ್ಳೆಯದೇ. ಏಕೆಂದರೆ ಇವರು ಇವತ್ತು ಒಂದು ಹೇಳುವುದು ನಾಳೆ ಮಾನ್ಯ ಮುಖ್ಯಮಂತ್ರಿಗಳು ಇನ್ನೊಂದು ಹೇಳುವುದು ಆಗಬಾರದು. ಅದರ ಬದಲಿಗೆ ನಾಳೆ ಇಬ್ಬರೂ ಒಟ್ಟಿಗೆ ಕುಳಿತುಕೊಂಡು ಉತ್ತರ ಕೊಟ್ಟರೆ ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು ಇವೆಲ್ಲವನ್ನೂ ಬಹಳ ಚೆನ್ನಾಗಿ ನಿಭಾಯಿಸುತ್ತಾರೆ. ಆದಕಾರಣ ಅವರೊಬ್ಬರೇ ಉತ್ತರವನ್ನು ಕೊಟ್ಟರೂ ಕೂಡ ಅದನ್ನು ಇವರು ಒಪ್ಪಿಕೊಳ್ಳುತ್ತಾರೆ. ಇವರು ಉತ್ತರ ಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಈ ಚರ್ಚೆ ಇಲ್ಲಿಗೇ ಮುಗಿಯುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅವರಿಂದ ಉತ್ತರವನ್ನು ಕೊಡಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೆ, ತಾವು ಬಹಳ ಹಿರಿಯರು ಬಹಳ ಅನುಭವಸ್ಥರಾಗಿದ್ದೀರಿ. ಹಲವಾರು ಸಂದರ್ಭದಲ್ಲಿ ಇನ್ನೂ ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಅನುಮತಿಯನ್ನು ಪಡೆದು ಸಂಬಂಧಪಟ್ಟ ಇಲಾಖಾ ಸಚಿವರು ಉತ್ತರ ಕೊಟ್ಟಿದ್ದನ್ನು ತಾವು ನೋಡಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಅವರದ್ದೇ ಆದ ರೀತಿಯಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ತೀರ್ಮಾನವನ್ನು ಕೊಡುವ ಜವಾಬ್ದಾರಿ ತಮ್ಮದಾಗಿದೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ನನ್ನ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಈ ಚರ್ಚೆಯನ್ನು ಮತ್ತೆ ಮುಂದುವರಿಸುವುದು ಬಿಡುವುದು ತಮಗೆ ಬಿಟ್ಟಂತಹ ವಿಚಾರವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅದಕ್ಕೆ ಅವಕಾಶ ಇದೆ. ಆದುದರಿಂದ ತಾವೆಲ್ಲರೂ ಸಹಕರಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಈ ಚರ್ಚೆಗೆ ಯಾರು ಉತ್ತರ ಕೊಡಬೇಕೆಂದು ಸರ್ಕಾರ ನಿರ್ಣಯ ಮಾಡುತ್ತದೋ ಅದರಂತೆ ಅವರು ಉತ್ತರವನ್ನು ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೋ ಅಥವಾ ಸಭಾ ನಾಯಕರೋ ಇಲ್ಲವೇ ಇತರೆ ಸಚಿವರೋ ಇಲ್ಲಿ ಉತ್ತರವನ್ನು ಕೊಡುವುದು ನಡೆದು

ಬಂದಿರುವ ಪರಿಪಾಠವಾಗಿದೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಗಂಭೀರವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಚರ್ಚೆ ಮುಗಿಯುವುದು ಯಾವಾಗ ಎಂದರೆ, ಕೆಲವು ಬೇಡಿಕೆಗಳನ್ನು ನಾವು ಇಟ್ಟಿದ್ದೇವೆ ಆ ಬೇಡಿಕೆಗಳ ಬಗ್ಗೆ ಮಾನ್ಯ ಆರೋಗ್ಯ ಸಚಿವರು ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ. ಅವರು ಆರೋಗ್ಯದ ಬಗ್ಗೆ ಉತ್ತರವನ್ನು ಕೊಡಬಹುದಾಗಿದೆ. ಉದಾಹರಣೆಗೆ ಹೇಳುವುದಾದರೆ, ಸಾಲ ಮನ್ನಾ ಇಂತಹ ಬೇಡಿಕೆಗಳ ಬಗ್ಗೆ ವಿತ್ತ ಸಚಿವರು ಇಲ್ಲವೇ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡಬೇಕಾಗುತ್ತದೆ. ಈಗ ವಿತ್ತ ಖಾತೆ ಮಾನ್ಯ ಮುಖ್ಯಮಂತ್ರಿಯವರ ಬಳಿಯೇ ಇರುವುದರಿಂದ ಅವರೇ ಉತ್ತರವನ್ನು ನೀಡಬೇಕಾಗುತ್ತದೆ. ಆಗ ಈ ಚರ್ಚೆ ಮುಕ್ತಾಯವಾಗುತ್ತದೆ ಎಂದು ಅವರು ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಆರ್.ವಿ. ದೇಶಪಾಂಡೆ:–** ಆಗುವುದಿಲ್ಲ.

**ಶ್ರೀ ಯು.ಟಿ. ಖಾದರ್:–** ನಾವೂ ಕೂಡ ಸ್ವಲ್ಪವಾದರೂ ಕಲಿತಿದ್ದೇವೆ. ನಾನು ಆ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಇ.ಕೃಷ್ಣಪ್ಪ:–** ನಾವು ಅವರ ಉತ್ತರದ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿಯೇ ಇಲ್ಲ. ಅವರು ಏನು ಮಾಡಿದ್ದಾರೆ ಅದು ಸ್ವಾಗತಾರ್ಹವಾದದ್ದು.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಇಲ್ಲಿ ಜಂಟಿ ಜವಾಬ್ದಾರಿಕೆ ಇದೆ. ತಾವು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲದ ಸಂದರ್ಭದಲ್ಲಿ ಸಭಾ ನಾಯಕರು ಇಲ್ಲವೇ ಸಂಬಂಧಪಟ್ಟ ಇಲಾಖಾ ಸಚಿವರು ಉತ್ತರವನ್ನು ಕೊಡಬಹುದಾಗಿದೆ. ಈಗ ಮಾನ್ಯ ಆರೋಗ್ಯ ಸಚಿವರು ಇಲ್ಲಿ ನಡೆದಂತಹ ಎಲ್ಲಾ ರೀತಿಯ ಚರ್ಚೆಯಲ್ಲಿ ಭಾಗವಹಿಸಿ ಅದನ್ನು ನೋಟ್ ಮಾಡಿಕೊಂಡಿದ್ದಾರೆ. ಅವರು ಅವರ ಅಭಿಪ್ರಾಯವನ್ನು ಇಲ್ಲಿ

ಹೇಳಲಿ. ನಂತರ ನಿಮಗೆ ಅದರಿಂದ ತೃಪ್ತಿಯಾಗದೇ ಹೋದರೆ ಅದರ ಬಗ್ಗೆ ನಂತರ ಮಾತನಾಡೋಣ.

**ಶ್ರೀ ಆರ್.ವಿ. ವೆಂಕಟೇಶ್:-** ಅದು ಅವರ ಅಭಿಪ್ರಾಯ ಅಲ್ಲ. ಸರ್ಕಾರದ ಉತ್ತರ ಅದು.

(ಗೊಂದಲ)

**Sri VEERANNA MATHIKATTI:-** Mr. Chairman Sir, he is a part and parcel of the Government.

**ಶ್ರೀ ಡಿ.ವಿ. ಸದಾನಂದಗೌಡ:-** ನಿನ್ನೆ ಇದನ್ನು ಕೈಗೆತ್ತಿಕೊಂಡು ಮುಗಿಸೋಣ ಎಂದಾಗ.....

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಒಮ್ಮೆಲೇ ಎದ್ದು ನಿಂತರೆ ಹೇಗೆ?

(5.30 ಗಂಟೆ)

(ಗೊಂದಲ)

**ಶ್ರೀ ಸದಾನಂದಗೌಡ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಚರ್ಚೆ ಮುಂದುವರೆಯುವಾಗ ಒಂದು ಸಂಶಯ ವ್ಯಕ್ತವಾಗಿತ್ತು. ನಿನ್ನೆಯ ದಿವಸವೇ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿ ಸರ್ಕಾರದಿಂದ ಉತ್ತರವನ್ನು ಪಡೆದುಕೊಂಡು ಮುಗಿಸೋಣ ಎಂದಾಗ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾದರೆ ಇವತ್ತು ಚರ್ಚೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗುತ್ತಿದ್ದಾರೆ ಅವರು ಮತ್ತೆ ಸದನಕ್ಕೆ ಬಂದಮೇಲೆ ಚರ್ಚೆಯನ್ನು ಮುಗಿಸಿ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ತೆಗೆದುಕೊಳ್ಳುವುದು ಸೂಕ್ತ ಎನ್ನುವ ವಿಚಾರಗಳು ನಿನ್ನೆಯ

ದಿವಸ ಪ್ರಸ್ತಾಪವಾಗಿವೆ. ಇವತ್ತು ಆ ಚರ್ಚೆಗಳನ್ನು ನಾವುಗಳು ಮುಂದುವರೆಸಿದ್ದೇವೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಅಪೇಕ್ಷೆಸಿಟ್ಟಿದ್ದೇವೆ. ಏಕೆಂದರೆ, ಇದರಲ್ಲಿ ಬರುವಂಥದ್ದು ಎಲ್ಲಾ financial implications. ಯಾವುದೇ health implications ಅಲ್ಲ. ಏಕೆಂದರೆ ಆರೋಗ್ಯದ ಬಗ್ಗೆ ನಮ್ಮದು ಯಾವುದೇ ಅಭ್ಯಂತರವಿಲ್ಲ. ಅವರು ತೆಗೆದುಕೊಂಡಂತಹ ನಿರ್ಣಯ ಏನಿದೆ ಅದನ್ನು ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಏಕೆಂದರೆ ಸುಪ್ರೀಂ ಕೋರ್ಟ್ ಆದೇಶ ಇದುದ್ದರಿಂದ ನಾವು ತರಾತುರಿಯಿಂದ ಗುಟ್ಕಾವನ್ನು ನಿಷೇಧ ಮಾಡಬೇಕಾಯಿತು ಎಂದು ಹೇಳಿದ್ದಾರೆ. ಆ issue ವನ್ನು ಬಿಟ್ಟುಬಿಡಿ. ನಾವು ಮೂರ್‍ನಾಲ್ಕು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅದನ್ನು ನಾನು ಮತ್ತೆ ಮತ್ತೆ ನಿಮ್ಮ ಮುಂದೆ ಪ್ರಸ್ತಾಪ ಮಾಡುವುದಿಲ್ಲ. ಇದಕ್ಕೆ ಆರೋಗ್ಯ ಸಚಿವರು ಉತ್ತರವನ್ನು ಕೊಟ್ಟು ಪೂರೈಸುವುದಕ್ಕೆ ಸಾಧ್ಯ ಇದೆಯೇ? ಏಕೆಂದರೇ ನಾವು ಅಡಕೆ ಬೆಳೆಗಾರರ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಕೇಳುತ್ತಿದ್ದೇವೆ. ಏಕೆಂದರೆ ಈಗ ಅಡಕೆ ಬೆಳೆಗಾರರು ಪಡೆದಿರುವಂತಹ ಸಾಲವನ್ನು ವಾಪಸ್ಸು ಕಟ್ಟುವಂತಹ ಸಮಯವಾಗಿದೆ. ಕನಿಷ್ಠ ಅವರ ಸಾಲವನ್ನು ಮನ್ನಾ ಮಾಡದಿದ್ದರೂ ಕೂಡ ಬೇರೆ ಯಾವುದಾದರೂ ರೂಪದಲ್ಲಿ ಆ ರೈತರಿಗೆ ಸಹಕಾರಿಯಾಗುವಂತೆ ವ್ಯವಸ್ಥೆಗಳನ್ನು ಮಾಡಬೇಕು. ಇದರ ಬಗ್ಗೆ ಹಣಕಾಸು ಖಾತೆಯನ್ನು ಹೊಂದಿರುವಂತಹ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಬೇಕು. ಇವತ್ತಿನ ದಿವಸ ಗುಟ್ಕಾ ನಿಷೇಧವನ್ನು ಮಾಡಿದ್ದರಿಂದ ಇದನ್ನೇ ನಂಬಿಕೊಂಡು ಜೀವನ ಮಾಡುತ್ತಿದ್ದಂತಹ ಸಾವಿರಾರು ಯುವಕರಿಗೆ ಬದಲಿ ಉದ್ಯೋಗಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಯಾರು ಮಾಡಬೇಕು.? ಬದಲಿ ಬೆಳೆ ಅಂದರೆ ನಾಳೆ ಅಡಕೆ ಬೆಳೆ ಹೋಗುತ್ತದೆ ಎಂದಾದರೆ ಅಡಕೆ ಬೆಳೆಗಾರರು ಏನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಇದೆಲ್ಲದ್ದರೆ ಬಗ್ಗೆ ನಿರ್ದಿಷ್ಟವಾಗಿ ಉತ್ತರವನ್ನು ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಸೂಕ್ತವಾದಂತಹ ವ್ಯಕ್ತಿಗಳೆಂದು ನನಗೆ ಗೊತ್ತು. ನಾನು ಖಂಡಿತ procedure ಬಗ್ಗೆ

ಮಾತನಾಡುವುದಿಲ್ಲ. ಮೇಲ್ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಭಾ ನಾಯಕರು ಅಥವಾ ಬೇರೆ ಯಾರಾದರು ಮಂತ್ರಿಗಳು ಉತ್ತರ ಕೊಡಿ ಎಂದು ಹೇಳುವುದು ತಪ್ಪಲ್ಲ. ಅದು ಹಿಂದಿನಿಂದಲೂ ನಡೆದುಕೊಂಡು ಬಂದಿರುವಂತಹ ಉದಾಹರಣೆಗಳಿವೆ. ನಾನು ಇಲ್ಲವೆಂದು ಖಂಡಿತವಾಗಿ ಹೇಳುವುದಿಲ್ಲ. ಆದರೆ ನಿನ್ನೆಯ ದಿವಸ ಮತ್ತು ಇವತ್ತು ನಡೆದಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಹೆಸರು ಬಂದು ಅವರು ಸದನದಲ್ಲಿ ಚರ್ಚೆ ನಡೆಯುವಾಗ ಇದ್ದರೆ ಒಳ್ಳೆಯದು ಮತ್ತು ಅವರೇ ಉತ್ತರ ಕೊಟ್ಟರೆ ಒಳ್ಳೆಯದು ಎಂದು ಹೇಳಿದ್ದೇವೆ. ಅವರು ನಿನ್ನೆಯ ದಿವಸ ದೆಹಲಿಗೆ ಹೋಗುವ ಕಾರ್ಯಕ್ರಮ ಇದ್ದುದ್ದರಿಂದ ಅವರು ನಾಳೆ ವಾಪಸ್ಸು ಬರುವವರಿದ್ದಾರೆ, ನಾಳೆ ಚರ್ಚೆಯನ್ನು ಮುಗಿಸಿ ಎಲ್ಲವನ್ನು ಏಕಕಾಲದಲ್ಲಿ ಸಮಾಪ್ತಿ ಮಾಡುವುದು ಒಳ್ಳೆಯದು. ಇವತ್ತೊಂದು ಸಣ್ಣ ಮಟ್ಟದಲ್ಲಿ ಉತ್ತರವನ್ನು ಕೊಟ್ಟು, ಕೈ ತೊಳೆದುಕೊಳ್ಳುವಂತಹ ಪ್ರಯತ್ನಗಳು ನಡೆಯುವುದರಿಂದ ಆ ಯಾವುದೇ ಪರಿಹಾರಗಳನ್ನು ಮಾನ್ಯ ಸಚಿವರಿಂದ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ನಾಳೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದ ಮೇಲೆ ಅವರಿಂದಲೇ ಉತ್ತರವನ್ನು ಕೊಡಿಸಿ.

**ಶ್ರೀ ಯು.ಟಿ. ಖಾದರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಇವತ್ತು ಚರ್ಚೆಗೆ ಅವಕಾಶವನ್ನು ಕೇಳಿಕೊಳ್ಳುವಂತಹ ಸಮಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರ ಅಡಿಯಲ್ಲಿ ರಾಜ್ಯದಲ್ಲಿ ಗುಟ್ಕಾ ನಿಷೇಧದ ಬಗ್ಗೆ ಪ್ರಸ್ತಾಪಿಸಿದ ನಿಲುವಳಿ ಸೂಚನೆ ಎಂದು ಅವರು ಕೋರಿದ್ದಾರೆ. ಬಹುಶಃ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವನಾದ ನಾನು ಇದಕ್ಕೆ ಉತ್ತರವನ್ನು ಕೊಡಬೇಕಾಗಿದೆ ಈ ಚರ್ಚೆಯಲ್ಲಿ ಬೇರೆ ಬೇರೆ ಅಂಶಗಳು ಬಂದಿರಬಹುದು. ಅದಕ್ಕೆ ಹೇಗೆ ಪರಿಹಾರವನ್ನು ಕೊಡಬೇಕೆಂದು ನಾನು ಹೇಳುವುದಕ್ಕಾಗುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಪರಿಹಾರವನ್ನು ಕೊಡುವುದಾದರೆ ನನಗೆ ಬಹಳ ಸಂತೋಷ. ಮಾನ್ಯ ವಿರೋಧ ಪಕ್ಷದವರು ಬಹಳಷ್ಟು ಸಂಶಯಗಳನ್ನು

ವ್ಯಕ್ತಪಡಿಸಿದ್ದಾರೆ, ಬಹಳಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅಂತಹ ವಿಚಾರಗಳಿಗೆ ನಾಳೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಉತ್ತರವನ್ನು ಕೊಡಬಹುದು. ಆದರೆ, ಇವತ್ತು ನಿಯಮಾನುಸಾರ ಅವರು ನೋಟಿಸ್ ಬರೆದುಕೊಡುವುದು ಒಂದು, ಮಾತನಾಡುವುದು ಇನ್ನೊಂದು . . .

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಯಾವುದೇ ಒಂದು ವಿಷಯದ ಬಗ್ಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೋರಿ, ನಿಯಮದ ಪ್ರಕಾರ ತಮಗೆ ನೋಟಿಸ್ ಕೊಡುವಾಗ ಅದರ headlines ಬರೆಯುವಾಗ ಎಲ್ಲವನ್ನು ಬರೆದಿರುವುದಿಲ್ಲ. ನಾನು ತಮಗೆ ಕೊಟ್ಟಿರುವಂತಹ ನೋಟಿಸ್‌ನ್ನು ಓದಿ ಬಿಡುತ್ತೇನೆ. ನೋಟಿಸ್‌ನಲ್ಲಿ ವಿಷಯ ಎಂದು ಬರೆದು ಇಂತಹ ವಿಚಾರ ಎಂದು ಬರೆಯುವುದು. ನಂತರ ಆ ವಿಚಾರಗಳ, ಆ contents ಏನೆಂದು ಓದಿ. "ಗುಟ್ಕಾ ನಿಷೇಧದಿಂದ ಅಡಕೆ ಬೆಳೆಗಾರರಿಗೆ ಆಗಿರುವಂತಹ ಹಾನಿಯ ಬಗ್ಗೆ ಚರ್ಚೆ" ಎಂದು ನಾವು ಬಹಳ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದೇವೆ. ಇವರು ತಪ್ಪುವುದೇ ಇಲ್ಲಿ. ಇವರು ಬರೀ ವಿಷಯವನ್ನು ಮಾತ್ರ ಓದುತ್ತಾರೆ. ಪೂರ್ಣವಾಗಿ ಬರೆದಿರುವ ವಿಷಯವನ್ನು ಓದಬೇಕು. ಮಂತ್ರಿಗಳು ಅದನ್ನು ಸ್ವಲ್ಪ ಕಲಿತುಕೊಳ್ಳಬೇಕು. ಅವರು ನಾನು ಕೊಟ್ಟಿರುವಂತಹ ನೋಟಿಸ್‌ನ ಎರಡು ಪುಟಗಳನ್ನು ಪೂರ್ಣವಾಗಿ ಓದಬೇಕು. ಅದನ್ನು ಮಾಡದೇ ಇದ್ದರೆ ಈ ಪರಿಸ್ಥಿತಿಗಳಾಗುತ್ತದೆ. ಆದಕಾರಣ ಮಾನ್ಯ ಸಭಾ ನಾಯಕರಲ್ಲಿ ಮತ್ತು ತಮ್ಮ ವಿನಂತಿ ಮಾಡುವುದೇನೆಂದರೆ, ಗುಟ್ಕಾ ನಿಷೇಧದ ವಿಚಾರದಲ್ಲಿ ಆರೋಗ್ಯ ಸಚಿವರಿಂದ ನಾವು ಯಾವುದನ್ನು ನಿರೀಕ್ಷೆ ಮಾಡುವುದಿಲ್ಲ. ಏಕೆಂದರೆ, ಆರೋಗ್ಯ ಸಚಿವರು ಗುಟ್ಕಾ ನಿಷೇಧವನ್ನು ಮಾಡಿದ್ದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ತರಾತುರಿಯಲ್ಲಿ ಮಾಡಿದ್ದಾರೆ ಎನ್ನುವುದನ್ನು ಬಿಟ್ಟರೆ ಬೇರೆ ಯಾವುದನ್ನು ಹೇಳಲಿಲ್ಲ. ಆದರೆ ನಾವು ಅಡಕೆ ಬೆಳೆಗಾರರಿಗೆ ನೀಡುವ ಪರಿಹಾರ ಕಾರ್ಯಕ್ರಮಗಳ ಬಗ್ಗೆ financial implications ಗೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೇವೆ. ಸಾಲ ಮನ್ನಾ ಇರಬಹುದು ಅಥವಾ ಬದಲಿ ವ್ಯವಸ್ಥೆಗಳನ್ನು ಮಾಡುವುದಕ್ಕೆ ಇರುವಂತಹ

ಸಂಗತಿಗಳಿರಬಹುದು. ಇದೆಲ್ಲಾ ವಿಷಯಗಳು ಇರುವ ಕಾರಣ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟರೆ ಪ್ರಾಯಶಃ ನಮಗೂ ಸಮಾಧಾನವಾಗುತ್ತದೆ, ಅವರಿಗೂ ಸಮಾಧಾನವಾಗುತ್ತದೆ. ಇಡೀ ರಾಜ್ಯಕ್ಕೆ ಸಮಾಧಾನವಾಗುತ್ತದೆಂದು ನನ್ನ ಆಸೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ನನಗೆ ತಾವು 'ನೋಡಿ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗುವಂತಹ ವಿಚಾರ ಇದ್ದುದ್ದರಿಂದ ಅವರು ನಾಳೆಗೆ ದೆಹಲಿಯಿಂದ ವಾಪಸ್ಸು ಬಂದು ಇಲ್ಲಿ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆಯೋ ಅಥವಾ ಇಲ್ಲವೋ ಏನು ಎನ್ನುವುದರ ಬಗ್ಗೆ ನನಗೆ ಮನವರಿಕೆ ಮಾಡಿ' ಎಂದು ತಾವು ನನಗೆ ಆದೇಶ ಮಾಡಿದ್ದೀರಿ. ನಾನು ಮಧ್ಯಾಹ್ನ ಭೋಜನದ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ನೀವೇ ಸ್ವತಃ ನಮ್ಮ ಮೇಲ್ಮನೆಗೆ ಬಂದು ಗುಟ್ಕಾ ನಿಷೇಧದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಕೇಳಿದಂತಹ ಸಂದರ್ಭದಲ್ಲಿ 'ರಾತ್ರಿ ದೆಹಲಿಯಲ್ಲಿ ಮಹತ್ವದ ಸಭೆ ಇರುವುದರಿಂದ ಸಭೆಯನ್ನು ಮುಗಿಸಿಕೊಂಡು ಎಷ್ಟು ಹೊತ್ತಿಗೆ ಬೆಂಗಳೂರಿಗೆ ವಾಪಸ್ಸು ಆಗುತ್ತೇನೆ' ಎಂದು ಹೇಳುವುದು ಕಷ್ಟ ಎನ್ನುವಂತಹ ವಿಚಾರವನ್ನು ಹೇಳಿದರು. ಆ ವಿಚಾರವನ್ನು ತಮಗೆ ತಕ್ಷಣ ಹೇಳಿದೆ. ತಾವು ಏನು ಹೇಳಿದ್ದೀರಿ. ಆಯಿತು. ಮಾನ್ಯ ಮುಖ್ಯಮಂತ್ರಿಗಳು ಬರುವುದಿಲ್ಲ ಎನ್ನುವುದು ಗೊತ್ತಿತ್ತು. ಹಾಗಾಗಿಯೇ ತಾವು ಈ ವಿಷಯವನ್ನು ಕೈಗೆತ್ತಿಕೊಂಡಿದ್ದೀರಿ. ಅಂದರೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇದ್ದರೂ ಸಂಬಂಧಪಟ್ಟಂತಹ ಸಚಿವರಿಂದ ಉತ್ತರವನ್ನು ಪಡೆಯೋಣ ಎನ್ನುವಂತಹ ವಿಚಾರ ಇತ್ತು ಎನ್ನುವುದು ನನ್ನ ಭಾವನೆ. ಒಂದು ಪ್ರಶ್ನೆ ಇಲ್ಲಿ ಏನು ಬರುತ್ತದೆಂದರೆ ಸರ್ಕಾರ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಒಬ್ಬರೇ ಸರ್ಕಾರವೇ ಅಥವಾ ಯಾರೋ ಒಬ್ಬ ಸಚಿವ ಸಂಪುಟದ ಸದಸ್ಯರು ಸರ್ಕಾರವೇ? ಸರ್ಕಾರ ಎಂದರೆ ಸಾಮೂಹಿಕ ಹೊಣೆಗಾರಿಕೆ ಇರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ ಅಥವಾ ಸಂಬಂಧಪಟ್ಟಂತಹ ಸಚಿವರು ಉತ್ತರವನ್ನು ಕೊಡಲಿ, it is binding on the Government. ಸ್ವಲ್ಪ ನಾನು ಹೇಳುವುದನ್ನೂ

ಕೂಡ ವಿರೋಧ ಪಕ್ಷದವರು ಕೇಳಬೇಕು. I am asking for my academic interest. ಸರ್ಕಾರ ಎಂದರೆ ಏನು? The Council of Ministers itself is the Government. The Chief Minister alone will not be the Government; it is my Understanding.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ನಾವು ಇಲ್ಲಿ ಪ್ರಸ್ತಾಪ ಮಾಡಿರುವಂತಹ ಹಲವಾರು ವಿಷಯಗಳ ಬಗ್ಗೆ ಆರೋಗ್ಯ ಸಚಿವರು ಪರಿಹಾರವನ್ನು ಕೊಡುವುದಕ್ಕಾಗುತ್ತದೆಯೇ?

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಅಡಕೆ ಬೆಳೆಗಾರರ ಸಾಲ ಮನ್ನಾ ಮಾಡಬೇಕು ಎನ್ನುವಂತಹ ಆಗ್ರಹ ಇದೆ. ಮಾನ್ಯ ಆರೋಗ್ಯ ಮಂತ್ರಿಗಳು ಅಡಕೆ ಬೆಳೆಗಾರರ ಸಾಲ ಮನ್ನಾ ಮಾಡುತ್ತೇವೆಂದು ಒಪ್ಪಿಕೊಂಡು ಅದನ್ನು ಈಡೇರಿಸುವಂತಹ ಜವಾಬ್ದಾರಿ ಅವರಿಗಿದ್ದರೆ ಅವರು ಹೇಳಲಿ. ನಿಖರವಾದಂತಹ ಉತ್ತರ ನಮಗೆ ಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅಪಾರವಾದ ಅನುಭವವನ್ನು ಹೊಂದಿದ್ದಾರೆ. ತಾವು ಮುಖ್ಯಮಂತ್ರಿಯಾಗಿಯೂ ಕೂಡ ಅತ್ಯುತ್ತಮವಾಗಿ ಕೆಲಸ ಮಾಡಿದ್ದೀರಿ ಎನ್ನುವುದರಲ್ಲಿ ನನ್ನದು ಎರಡು ಮಾತಿಲ್ಲ. ಅಂತಹ ಸಂದರ್ಭದಲ್ಲಿ ಸಂಪುಟದ ಒಬ್ಬ ಸಚಿವರು ಇಲ್ಲಿ commitment ಮಾಡಿದರೆ, it is binding. Even "ನಾನು consider ಮಾಡುತ್ತೇನೆ" ಎಂದು ಹೇಳಿದರು ಕೂಡ ಅದು ಭರವಸೆಯಾಗುತ್ತದೆ. ಈಗ ಆ ಜವಾಬ್ದಾರಿಯನ್ನು ತೆಗೆದುಕೊಂಡು ಆರೋಗ್ಯ ಸಚಿವರು ಉತ್ತರ ಕೊಡಲಿ ಬಿಡಿ. what difference does it make? ಅವರು ಆರೋಗ್ಯ ಇಲಾಖೆಯ ಸಚಿವರಾಗಿದ್ದಾರೆ. ಗುಟ್ಕಾ ನಿಷೇಧ ಯಾರಿಗೆ ಸಂಬಂಧ ಇದೆ ನೀವೇ ಹೇಳಿ. ಅದು ಆರೋಗ್ಯ ಸಚಿವರಿಗೆ ಸಂಬಂಧಪಟ್ಟಿರುವಂಥದ್ದು. ಗುಟ್ಕಾ ನಿಷೇಧವನ್ನು ಅವರೇ ಮಾಡಿದ್ದಾರೆ ಅವರು ಬಹಳ ಉತ್ಸಾಹಿಗಳಾಗಿದ್ದಾರೆ.

(ಗೊಂದಲ)

**ಶ್ರೀ ಗೋ. ಮಧುಸೂಧನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ದಯಮಾಡಿ ನನ್ನ ಸಲಹೆಯನ್ನು ತೆಗೆದುಕೊಳ್ಳಲಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಬೇಕಾದರೆ ಶ್ರೀ ಡಿ.ಎಸ್. ವೀರಯ್ಯನವರಿಗೆ yield ಆಗುತ್ತೇನೆ. ಆದರೆ ಶ್ರೀ ಗೋ. ಮಧುಸೂದನ್‌ಗೆ yield ಆಗುವುದಿಲ್ಲ. ಅವರ ಸಲಹೆಯನ್ನು ತೆಗೆದುಕೊಂಡರೆ ನನಗೆ ಏನಾಗುತ್ತದೆಂದು ಗೊತ್ತಿದೆ.

**ಶ್ರೀ ಗೋ. ಮಧುಸೂಧನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ನಮ್ಮ ಮೈಸೂರಿನವರು. ಅವರನ್ನು ನಾವು ಬಹಳ ಚೆನ್ನಾಗಿ ಕಂಡಿದ್ದೇವೆ. ಸಭಾ ನಾಯಕರು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ವಿಷಯ ಹೇಳಿ, ಇದರಿಂದ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ರೈತರ ಬಗ್ಗೆ ಒಳ್ಳೆಯ ನಿರ್ಣಯ ತೆಗೆದುಕೊಂಡಂತಾಗುತ್ತದೆಂದು ಹೇಳಿದರೆ, ಅವರು ಅಡಕೆ ಬೆಳೆಗಾರರ ಹಳೆಯ ಸಾಲವನ್ನು ಕೂಡಾ ಮನ್ನಾ ಮಾಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಮಾತಿನ ಬಗ್ಗೆ ನನಗೆ ಅಪಾರವಾದಂತಹ ಗೌರವ ಇದೆ. ಬಹಳಷ್ಟು ಸಾರಿ ಇದನ್ನು ನಾನು ವ್ಯಕ್ತ ಮಾಡಿದ್ದೇನೆ. ಆರೋಗ್ಯ ಸಚಿವರಾದ ಶ್ರೀ ಯು.ಟಿ. ಖಾದರ್‌ರವರು ಸಂಪುಟದ ನೂತನ ಸಚಿವರಾಗಿ ಮಹತ್ತರವಾದಂತಹ ಆರೋಗ್ಯ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಅವರ ಇಲಾಖೆಗೆ ಸಂಬಂಧಪಟ್ಟಂತಹ ವಿಷಯದ ಬಗ್ಗೆ ವಿಶೇಷ ಚರ್ಚೆ ಮಾಡುವಂತಹ ಸಂದರ್ಭದಲ್ಲಿ, 'ನೀವು ಉತ್ತರವನ್ನು ಕೊಡುವುದು ಬೇಡ, ನಿಮ್ಮ ಉತ್ತರವನ್ನು ಕೇಳುವುದಿಲ್ಲ' ಎನ್ನುವುದು ಸರಿಯಲ್ಲ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ನಾವು ಅವರ ಉತ್ತರವನ್ನು ಕೇಳುವುದಿಲ್ಲವೆಂದು ಹೇಳಿಲ್ಲ. ಅವರು ಆರೋಗ್ಯ ಸಚಿವರಾಗಿ ಗುಟ್ಕಾವನ್ನು ತಿನ್ನುವುದರಿಂದ ಅನಾರೋಗ್ಯವಾಗುತ್ತದೆ

ಎನ್ನುವುದರ ಬಗ್ಗೆ ಉತ್ತರವನ್ನು ಕೊಡಬಹುದು. ಅಡಕೆ ಬೆಳೆಗಾರರ ಸಾಲ ಮನ್ನಾದ ಬಗ್ಗೆ ಅವರು ಯಾವ ರೀತಿಯಾಗಿ ಉತ್ತರವನ್ನು ಕೊಡುತ್ತಾರೆ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಏಕೆ ಆ ರೀತಿಯಾಗಿ ಕೊಡಬಾರದು? ಸರ್ಕಾರ ಎಂದರೆ ಏನು? what is the definition of Government? Tell me.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ಸಭಾ ನಾಯಕರು ಮತ್ತು ಆರೋಗ್ಯ ಸಚಿವರು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆಂದರೆ ತೆಗೆದುಕೊಳ್ಳಲಿ.

**Sri. S.R. PATIL:-** You give me the definition of Government? What is the definition of Government? The Council of Ministers is the Government . Not alone one minister or not alone the Chief Minister; I think so. ನಾನು ಹೇಳಿದ್ದರಲ್ಲಿ ಏನಾದರೂ ಬದಲಾವಣೆ ಇದ್ದರೆ ಹೇಳಬೇಕು. ನಿನ್ನೆಯ ದಿವಸ ಕೆಳಮನೆಯಲ್ಲಿ ಚರ್ಚೆ ಮಾಡಿ ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಸಚಿವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಆರೋಗ್ಯ ಸಚಿವರು ಕೆಳಮನೆಯಲ್ಲಿ ಅತ್ಯುತ್ತಮ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅವರನ್ನು ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಅಭಿನಂದಿಸಿದ್ದಾರೆ. "ಪ್ರಥಮ ಬಾರಿಗೆ ನೀವು ಆರೋಗ್ಯ ಸಚಿವರಾಗಿ ಅತ್ಯುತ್ತಮ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. I really congratulate you. You have done well" ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳಿಂದ ಅಭಿನಂದನೆಗಳನ್ನು ಪಡೆದಿದ್ದಾರೆ. ಅವರು ಯುವಕರಾಗಿದ್ದಾರೆ, ಉತ್ಸಾಹಕರಾಗಿದ್ದಾರೆ. ಕರಾವಳಿ ಭಾಗದಿಂದ ಬಂದಿರುವವರಾಗಿರುವುದರಿಂದ ನಮ್ಮ ಪತ್ರಿಪಕ್ಷದ ನಾಯಕರಿಗೆ ಮತ್ತೆ ಇನ್ನು ಹೆಚ್ಚು ಖುಷಿ ಎಂದು ಭಾವಿಸುತ್ತೇನೆ. ಆ ದೃಷ್ಟಿಯಿಂದ ಮಾನ್ಯ ಆರೋಗ್ಯ ಸಚಿವರು ಉತ್ತರವನ್ನು ಕೊಡಲಿ. ಆಮೇಲೆ ಅವರು ಕೊಟ್ಟಂತಹ ಉತ್ತರದಿಂದ ತೃಪ್ತಿಯಾಗದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಒಂದು ಕೆಲವು clarifications ಕೊಡುವಂತಹ ಪ್ರಸಂಗ ಬಂದರೆ ನಾವು ಮಾನ್ಯ

ಮುಖ್ಯಮಂತ್ರಿಗಳನ್ನು ಸದನಕ್ಕೆ ಕರೆದುಕೊಂಡು ಬಂದು ಅವರ ಕೈಯಿಂದಲೂ clarification ಕೊಡಿಸುತ್ತೇವೆ.

**ಶ್ರೀ ಕೃಷ್ಣ ಭೈರೇಗೌಡ(ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಹೇಳಿದ್ದನ್ನೇ ನಾನು ಕೂಡ ಹೇಳುವವನಿದ್ದೆ. ಮಾನ್ಯ ಆರೋಗ್ಯ ಸಚಿವರು ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತಾರೆ. ಸರ್ಕಾರದ ಪರವಾಗಿ ಉತ್ತರವನ್ನು ಕೊಡಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಇಲ್ಲಿ ಚರ್ಚೆ ನಡೆಯುವಂತಹ ಸಮಯದಲ್ಲಿ ನಾನಾ ವಿಚಾರಗಳನ್ನು ಎತ್ತಿದ್ದಾರೆ. ಆ ವಿಚಾರಗಳಲ್ಲಿ ಸರ್ಕಾರ ಯಾವುದನ್ನು ಮಾಡುವುದಕ್ಕೆ ತಯಾರಿದೆ. ಅವರ ಇಲಾಖೆಗೂ ಮೀರಿ ಯಾವ ವಿಚಾರಗಳನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ತಯಾರಿದೆ ಎನ್ನುವಂತಹ ವಿಚಾರವನ್ನು ಕೂಡ ಮಾನ್ಯ ಆರೋಗ್ಯ ಸಚಿವರು ತಿಳಿಸುತ್ತಾರೆ. ಹಾಗಾಗಿ ಆರೋಗ್ಯ ಸಚಿವರಿಗೆ ಉತ್ತರವನ್ನು ಕೊಡಲು ಅವಕಾಶ ಕೊಡಿ. ಅವರು ಉತ್ತರ ಕೊಡಲಿ. ಅವರ ಇಲಾಖೆಗೂ ಮೀರಿ ಇರತಕ್ಕಂತಹ ಕೆಲವು ಬದ್ಧತೆಯನ್ನು ಸರ್ಕಾರದ ಪರವಾಗಿ ಅವರು ಭರವಸೆಯನ್ನು ಕೊಡುತ್ತಾರೆ. ಅಲ್ಲಿಗೂ ಕೂಡ ಮಾನ್ಯ ವಿರೋಧ ಪಕ್ಷದವರಿಗೆ ಸಮಾಧಾನವಾಗಲಿಲ್ಲ ಎಂದರೆ, ಮಾನ್ಯ ಮುಖ್ಯಮಂತ್ರಿಗಳಿರುತ್ತಾರೆ. ಹೇಗೂ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಂತಹ ಸಮಯದಲ್ಲಿಯೂ ಮಾತನಾಡಲಿ. ದಯಮಾಡಿ ನಾನು ಹಿರಿಯರಲ್ಲಿ ಮನವಿ ಮಾಡುವುದೇನೆಂದರೆ, ಆರೋಗ್ಯ ಸಚಿವರು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಅವರ ಇಲಾಖೆಯ ವ್ಯಾಪ್ತಿಯನ್ನು ಮೀರಿ ಸರ್ಕಾರದ ಭರವಸೆ ಏನಿದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಾರೆ. ವಿರೋಧ ಪಕ್ಷದವರು ನಾಲ್ಕಾರು ಭರವಸೆಗಳನ್ನು ಸರ್ಕಾರ ಈಡೇರಿಸುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಅದು ಬೇರೆ ವಿಚಾರ. ಯಾವುದನ್ನು ಮಾಡುವುದಕ್ಕೆ ಸರ್ಕಾರ ತಯಾರಿದೆ ಎನ್ನವುದನ್ನು ಸಹಾ ಆರೋಗ್ಯ ಸಚಿವರು ಹೇಳುತ್ತಾರೆ. ಇಡೀ ಸರ್ಕಾರದ ಪರವಾಗಿ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿಯೂ ಕೂಡ ಹೇಳುತ್ತಾರೆ. ಅಲ್ಲಿಗೂ ವಿರೋಧ ಪಕ್ಷದವರಿಗೆ ಸಮಾಧಾನವಾಗಲಿಲ್ಲ ಎಂದರೆ

ಮುಂದೆ ಯೋಚನೆ ಮಾಡೋಣ. ದಯಮಾಡಿ ಆರೋಗ್ಯ ಸಚಿವರಿಗೆ ಉತ್ತರವನ್ನು ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಕಾನೂನು ಪುಸ್ತಕವನ್ನು ತೆಗೆಯುವುದು ಬೇಡ. ನಾನು ಸ್ವಲ್ಪ ಓದಿದೆ. ಅದು ಬೇಡ. ನಾವು ಸಭಾ ನಾಯಕರಿಗೆ ಗೌರವವನ್ನು ಕೊಟ್ಟು, ಅವರು ಹೇಳಿದಂತಹ ಮಾತಿಗೆ ಮನ್ನಣೆಯನ್ನು ಕೊಡುತ್ತೇವೆ. ಈಗ ಏನು ಆರೋಗ್ಯ ಸಚಿವರು ಉತ್ತರವನ್ನು ಏನು ಕೊಡುತ್ತಾರೆ ಕೊಡಲಿ. ನಮಗೆ ಸಮಾಧಾನವಾಗಲಿಲ್ಲ ಎಂದರೆ,

we will keep open the discussion for reply tomorrow by the Chirf Minister. ಉತ್ತರ ಪೂರ್ಣವಾಗುವುದಿಲ್ಲ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಮಂತ್ರಿಗಳಿಗೆ ಉತ್ತರವನ್ನು ಕೊಡುವುದಕ್ಕೆ ಅಥವಾ ಹೇಳಿಕೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೋಡೋಣ. ಬಹುಶಃ ಅವರು ಹೇಳುವಂತಹ ಉತ್ತರದಿಂದ ಭರವಸೆ ಸಿಗದಿದ್ದರೆ ನಾಳೆ ಮಾನ್ಯ ಮುಖ್ಯಮಂತ್ರಿಗಳು ಬರುವವರಿದ್ದಾರೆಂದು ಹೇಳುತ್ತಿದ್ದಾರೆ. ದಯವಿಟ್ಟು ಅವರು ಉತ್ತರವನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಿ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೆ, ದಿನಾಂಕ 30.05.2013 ರಂದು ರಾಜ್ಯ ವ್ಯಾಪ್ತಿ ತಂಬಾಕು ಅಥವಾ ನಿಕೋಟೀನ್ ಯುಕ್ತ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ಒಳಗೊಂಡ ತಂಬಾಕು ಉತ್ಪನ್ನಗಳನ್ನು ಉತ್ಪಾದಿಸಿ ಶೇಖರಿಸಿ ಮಾರಾಟ ಅಥವಾ ಸಂಗ್ರಹಿಸಿದ್ದನ್ನು ನಿಷೇಧಿಸಲಾಗಿದೆ. ಈ ರೀತಿ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ನಿಷೇಧಿಸಿದ್ದಕ್ಕೆ ಈ ಕೆಳಕಂಡ ಅಂಶಗಳು ಕಾರಣಗಳಾಗಿದೆ.

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ವಿಶೇಷ ಕಾರ್ಯದರ್ಶಿಯವರು ದಿನಾಂಕ 25.04.2012ರ ಸರ್ಕಾರಿ ಪತ್ರದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2011ರ

ಸೆಕ್ಷನ್ 2, 3, ಮತ್ತು 4ರ ಅನ್ವಯ ಯಾವುದೇ ಆಹಾರ ಪದಾರ್ಥದಲ್ಲಿ ನಿಕೋಟೀನ್ ಮತ್ತು ತಂಬಾಕು ಮಿಶ್ರಣವಾಗಿದ್ದಲ್ಲಿ ಅದನ್ನು ನಿಷೇಧಿಸಲು ಅವಕಾಶ ಕಲ್ಪಿಸಲಾಗಿದ್ದು ಅದರನ್ವಯ ರಾಜ್ಯ ಸರ್ಕಾರವು ಆಗತ್ಯ ಕ್ರಮವನ್ನು ಕೈಗೊಳ್ಳಲು ತಿಳಿಸಿರುತ್ತಾರೆ. ಕ್ಯಾನ್ಸರ್ ಪೆಶೆಂಟ್ ಅಂಡ್ ಏಡ್ಸ್ ಅಸೋಸಿಯೇಷನ್ ಮುಂಬಾಯಿ ಇವರು ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ:2366/2012ನ್ನು ದಾಖಲಿಸಿ ಸಾರ್ವಜನಿಕ ಹಿತಾಸಕ್ತಿ ಅನ್ವಯ ಆರೋಗ್ಯ ಸುರಕ್ಷತೆ ಮತ್ತು ಗುಣಮಟ್ಟದ ಕಾಯ್ದೆ ಅಡಿಯಲ್ಲಿ ತಂಬಾಕು ಮಿಶ್ರಿತ ಮತ್ತು ನಿಕೋಟೀನ್ ಯುಕ್ತ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ನಿಷೇಧಿಸುವಂತೆ ಕೋರಿದರು. ಶ್ರೀ ಎಸ್. ವಿಜಯಶಂಕರ್ ಅಂದಿನ ಅಡ್ವೋಕೇಟ್ ಜನರಲ್ ಅಂದರೆ ಹಿಂದಿನ ಸರ್ಕಾರದ ಅಡ್ವೋಕೇಟ್ ಜನರಲ್‌ರವರು ದಿನಾಂಕ 30.01.2013 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದಿರುವ ಪತ್ರದಲ್ಲಿ ರಾಜ್ಯದಲ್ಲಿ ಗುಟ್ಕಾ ನಿಷೇಧಿಸುವ ಬಗ್ಗೆ ಅಂತಿಮ ತೀರ್ಮಾನವನ್ನು ವಿಳಂಬವಿಲ್ಲದೇ ತೆಗೆಕೊಳ್ಳದಂತೆ ತಿಳಿಸಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಅಂಕೂಲ್ ಗುಟ್ಕಾ ಮತ್ತು ಮತ್ತಿತರು ಸಲ್ಲಿಸಿರುವ ಎಸ್.ಎಲ್.ಪಿ. ಅರ್ಜಿಗಳ ಸಂಖ್ಯೆ 160008/2007, ಆದೇ ರೀತಿ 161114/2007 ಇತರ ಅರ್ಜಿಗಳ ಕುರಿತು ದಿನಾಂಕ 03.05.2013ರ ಆದೇಶದಲ್ಲಿ ಗುಟ್ಕಾ ಮತ್ತು ಪಾನ್ ಮಸಾಲೆಗಳನ್ನು ತಯಾರಿಸುವುದು ಮತ್ತು ಮಾರಾಟ ಮಾಡುವುದನ್ನು ನಿಷೇಧಿಸುವ ಕುರಿತು ರಾಜ್ಯ ಸರ್ಕಾರವು ಆದೇಶವನ್ನು ಹೊರಡಿಸಿ ದಿನಾಂಕ: 25.06.2013ರ ಒಳಗೆ ಆದೇಶದ ಪ್ರತಿಯನ್ನು ಒದಗಿಸುವಂತೆ ನಿರ್ದೇಶನವನ್ನು ನೀಡಿರುತ್ತದೆ. ರಾಜ್ಯದಲ್ಲಿ ತಂಬಾಕು ಉತ್ಪನ್ನಗಳನ್ನು ನಿಷೇಧಿಸುವ ಕುರಿತು ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೇಲ್ತ್, ಬೆಂಗಳೂರು ಇವರು ಕರ್ನಾಟಕ ವಿಧಾನ ಸಭೆಯ ಅರ್ಜಿ ಸಮಿತಿಗೆ ಸಲ್ಲಿಸಿದ ಅರ್ಜಿಯ ಬಗ್ಗೆ ಈ ಸಮಿತಿಯ ಅಧ್ಯಕ್ಷರಾದ ಶ್ರೀ ಯೋಗೀಶ್ ಭಟ್, ಮಾಜಿ ಶಾಸಕರು ಹಾಗೂ ಅಂದಿನ ವಿಧಾನಸಭೆಯ ಅರ್ಜಿ ಸಮಿತಿಯ ಅಧ್ಯಕ್ಷರು ಪ್ರಸ್ತುತ ವಿಷಯದ ಬಗ್ಗೆ ಅಂತಿಮ

ತೀರ್ಮಾನವನ್ನು ಕೈಗೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ತಂಬಾಕು ಉತ್ಪನ್ನಗಳನ್ನು ನಿಷೇಧದಿಂದ ಉಂಟಾಗುವ ಸಾಧಕ–ಬಾಧಕಗಳ ಬಗ್ಗೆ ವರದಿ ಸಲ್ಲಿಸುವಂತೆ ಶಿಫಾರಸ್ಸು ಮಾಡಿದ್ದರು. ಅದರಂತೆ ದಿನಾಂಕ 07.03.2013ರ ಸರ್ಕಾರಿ ಆದೇಶದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ದಿನಾಂಕ: 21.05.2013 ರಂದು ಸಭೆ ನಡೆಸಿದ್ದು, ಸಭೆಯಲ್ಲಿ ತಂಬಾಕು ಉತ್ಪನ್ನವಾದ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ರಾಜ್ಯದಲ್ಲಿ ತಯಾರಿಸಿ ಮಾರಾಟ ಮಾಡುವ ಪ್ರಕ್ರಿಯೆಯನ್ನು ನಿಷೇಧಗೊಳಿಸಿದ್ದಲ್ಲಿ ಅಡಕೆ ಬೆಳೆಗಾರರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಏಕೆಂದರೆ ಸದರಿ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳು ಕಡಿಮೆ ದರ್ಜೆ ಅಡಕೆಯನ್ನು ವಿದೇಶಗಳಿಂದ ಆಮದು ಮಾಡಿಕೊಂಡು ಉಪಯೋಗಿಸುತ್ತಾರೆ ಎನ್ನುವಂತಹ ಅಂಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಇವರು ಸಮಿತಿಗೆ ಖಚಿತಪಡಿಸಿರುತ್ತಾರೆ. ಮುಂದುವರೆದು ರಾಜ್ಯದಲ್ಲಿ ಉತ್ತಮ ದರ್ಜೆಯ ಅಡಕೆಯನ್ನು ಬೆಳೆಯುತ್ತಿದ್ದು ಗುಟ್ಕಾ ಮತ್ತು ಪಾನ್ ಮಸಾಲಗಳ ನಿಷೇಧದಿಂದ ಅಡಕೆ ಬೆಲೆಯು ದಿಢೀರ್ ಕುಸಿತ ಉಂಟಾಗುವ ಸಂಭವ ಇರುವುದಿಲ್ಲ. ಬದಲಿಗೆ ಉತ್ತಮ ದರ್ಜೆಯ ಅಡಕೆಗೆ ಹೆಚ್ಚಿನ ಬೆಲೆಯನ್ನು ರೈತರು ಪಡೆಯುವ ಸಾಧ್ಯತೆ ಇದೆ. ಏಕೆಂದರೆ, ರಾಜ್ಯ ಸರ್ಕಾರವು ಅಡಕೆ ಬೆಳೆಯನ್ನು ನಿಷೇಧಗೊಳಿಸುವುದಿಲ್ಲ ಎನ್ನುವ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಹಾಗೂ ಅಂತಿಮವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ 03.05.2013ರ ನಿರ್ದೇಶನ ರಾಜ್ಯದಲ್ಲಿ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ಒಳಗೊಂಡ ತಂಬಾಕು ಉತ್ಪನ್ನಗಳ ತಯಾರಿಸಿ ಮಾರಾಟ ಮಾಡುವ ಪ್ರಕ್ರಿಯೆಯನ್ನು ನಿಷೇಧಿಸುವುದು ಅನಿವಾರ್ಯವಾಗಿದ್ದು ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ಸೂಕ್ತ ಆದೇಶ ಹೊರಡಿಸಿ ಮಾನ್ಯ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಉನ್ನತ ಮಟ್ಟದ

ಸಮಿತಿಯು ನಿರ್ಣಯಿಸಿತು. ಈಗಾಗಲೇ ಕೆಳಕಂಡ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಗುಟ್ಕಾ ಮತ್ತು ಪಾನ್ ಮಸಾಲಗಳಂತಹ ತಂಬಾಕು ಉತ್ಪನ್ನಗಳನ್ನು ನಿಷೇಧಿಸಲಾಗಿದೆ. ಮಧ್ಯಪ್ರದೇಶ, ಕೇರಳ, ಬಿಹಾರ್, ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ರಾಜಸ್ತಾನ, ಹರಿಯಾಣ, ಜಾರ್ಖಂಡ್, ಛತ್ತೀಸ್‌ಗಡ್, ಗುಜರಾತ್, ಪಂಜಾಬ್, ಉತ್ತರ ಖಂಡ, ನಿಜೋರಾಂ, ದೆಹಲಿ ಮತ್ತು ಸಿಕ್ಕೀಂ, ಆಂಧ್ರಪ್ರದೇಶ, ಒರಿಸ್ಸಾ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಣಿಪುರ್, ಅಸ್ಸಾಂ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ಛತ್ತೀಸ್‌ಗಡ್, ದಾದ್ರಾ ಮತ್ತು ನಗರ್ ಹವೇಲಿ, ಡಾಮನ್ ಮತ್ತು ಡಯು, ಅಂಡಮಾನ್ ಮತ್ತು ನಿಕೋಬಾರ್ ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಸಾರ್ವಜನಿಕ ಆರೋಗ್ಯವನ್ನು ಪರಿಗಣಿಸಿ ಅನಿವಾರ್ಯವಾಗಿ ಗುಟ್ಕಾ ಮತ್ತು ಪಾನ್ ಮಸಾಲ, ತಂಬಾಕು ಉತ್ಪನ್ನಗಳನ್ನು ನಿಷೇಧಿಸಿ 30.05.2013 ರಂದು ಆದೇಶವನ್ನು ಹೊರಡಿಸಿದೆ.

ಮಾನ್ಯ ಸಭಾಪತಿಯವರೇ, ಬಹುಶಃ ಇಂತಹ ಒಂದು ಆದೇಶವನ್ನು ಹೊರಡಿಸುವಂತಹ ಸಂದರ್ಭದಲ್ಲಿ ಜನ ಪ್ರತಿನಿಧಿಗಳಿಗೆ ಇದರ ಬಗ್ಗೆ ಸಂಶಯ ಬರುವುದು ಸ್ವಾಭಾವಿಕ. ಈ ಸಂಶಯವನ್ನು ಚರ್ಚೆ ಮಾಡಿ ಬಗೆಹರಿಸುವುದು ನಮ್ಮೆಲ್ಲರ ಕರ್ತವ್ಯ. ಅಂತಹ ಸಂದರ್ಭದಲ್ಲಿ ಇವತ್ತು ಬಹುಶಃ ಬೇರೆ ರೀತಿಯ ಚರ್ಚೆಯಾಗುವುದು ಸಾಕು. ಬಹುಶಃ ಪ್ರಪ್ರಥಮವಾಗಿ ಇದ್ದಂತಹ ಸಂಶಯದ ಬಗ್ಗೆ ಲಿಖಿತ ಉತ್ತರದಲ್ಲಿ ಹೇಳಿದ್ದೇನೆ. ನಾನು ಈಗ ಈ ಸಭೆಯನ್ನು ಅಭಿನಂದಿಸುತ್ತೇನೆ. ಏಕೆಂದರೆ ಗುಟ್ಕಾ ನಿಷೇಧ ಮಾಡಿ ತಾವುಗಳೆಲ್ಲರೂ ಅಭಿನಂದಿಸುವಂತಹ ಕೆಲಸವನ್ನು ಮಾಡಿದ್ದೇವೆ. ಹಿಂದೆ ಇದ್ದಂತಹ ಸರ್ಕಾರವೇ ಗುಟ್ಕಾ ನಿಷೇಧವನ್ನು ಮಾಡಬೇಕಾಗಿತ್ತು. ಅದನ್ನು ಮಾಡಿರಲಿಲ್ಲ. ಆದರೆ ಪ್ರಥಮದಲ್ಲಿಯೇ ಬಂದು ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಪಕ್ಷದ ಸರ್ಕಾರ ಗುಟ್ಕಾ ನಿಷೇಧ ಮಾಡಿದ್ದನ್ನು ಸ್ವಾಗತಿಸಿದ್ದಕ್ಕೆ ತಮ್ಮೆಲ್ಲರನ್ನು ಜನಸಾಮಾನ್ಯರ ಪರವಾಗಿ ಕರ್ನಾಟಕ ರಾಜ್ಯದ ಆರು ಕೋಟಿ ಜನರ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುವುದಕ್ಕೆ ಇಚ್ಚಿಸುತ್ತಿದ್ದೇನೆ. ಇವತ್ತಿನ

ದಿವಸ ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸುವುದರ ಜೊತೆಯಲ್ಲಿ ಈ ರಾಜ್ಯದ ಜನಸಾಮಾನ್ಯ ಮತ್ತು ಯಾವ ಜನಾಂಗದ ಆರೋಗ್ಯವನ್ನು ಕಾಪಾಡುವಂತಹ ದೃಷ್ಟಿಯಲ್ಲಿ ಜನಸಾಮಾನ್ಯರ ತಾಯಂದಿರ ಕಣ್ಣೀರನ್ನು ಒರೆಸುವಂತಹ ಕೆಲಸವನ್ನು ಈ ಕಾಂಗ್ರೆಸ್ ಪಕ್ಷದ ಸರ್ಕಾರ ಮಾಡಿದೆ ಎನ್ನುವುದನ್ನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ತಮ್ಮ ಮುಖಾಂತರ ಇಷ್ಟಪಡುತ್ತಿದ್ದೇನೆ.

ಇಂತಹ ಸಂದರ್ಭದಲ್ಲಿ ಚರ್ಚೆ ಮಾಡುವಂಥದ್ದು ಸ್ವಾಭಾವಿಕ. ಇವತ್ತಿನ ದಿವಸ ಮಾನ್ಯ ಸದಸ್ಯರುಗಳು ಸರ್ಕಾರ ಗುಟ್ಕಾ ನಿಷೇಧವನ್ನು ಜಾರಿಗೆ ತಂದಿರುವಂಥದ್ದನ್ನು ಸ್ವಾಗತಿಸುತ್ತೇವೆ. ಆದರೆ, ಇದನ್ನು ಬಹಳಷ್ಟು ಆತುರದಿಂದ ಹಾಗೂ ತರಾತುರಿಯಿಂದ ಜಾರಿ ಮಾಡಲಾಗಿದೆ ಎಂಬ ಮಾತನ್ನು ಹೇಳಿದರು. ಆದರೆ ಸರ್ಕಾರ ಇಷ್ಟು ಆತುರವಾಗಿ ಏಕೆ ನಿಷೇಧ ಮಾಡಲಾಯಿತು ಎಂದು ಅರ್ಥ ಮಾಡಿಕೊಳ್ಳಬೇಕು. 2011ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸ್ಪಷ್ಟವಾದ ನಿರ್ದೇಶನವನ್ನು ಕೊಟ್ಟಿದ್ದರೂ ಸಹ ಎರಡು ವರ್ಷ ಅದನ್ನು ಸುಮ್ಮನೆ ಪಕ್ಕದಲ್ಲಿಟ್ಟುಕೊಂಡು ಯಾವುದೇ ಒಂದು ಕ್ರಮವನ್ನು ಕೈಗೊಳ್ಳದೆ ಹಾಗೆಯೇ ಇಡಲಾಗಿತ್ತು. ಆದರೆ ನಮಗೆ ಅಂತಿಮವಾದ ನಿರ್ದೇಶನ ಬಂದಂತಹ ಸಂದರ್ಭದಲ್ಲಿ ಈ ತೀರ್ಮಾನವನ್ನು ತೆಗೆದುಕೊಳ್ಳಬೇಕಾದಂತಹ ಪರಿಸ್ಥಿತಿ ಬಂತು. ಬಹುಶಃ 2011ರಿಂದ ಇಲ್ಲಿಯವರೆಗೆ ಬಹಳಷ್ಟು ಸಮಯಾವಕಾಶವಿತ್ತು. ಆ ಸಮಯದಲ್ಲಿ ಅಡಕೆ ಬೆಳೆಗಾರರನ್ನು ಕರೆದು ಚರ್ಚಿಸಬಹುದಾಗಿತ್ತು. ಅವರಿಗೆ ಬೇಕಾದಂತಹ ವ್ಯವಸ್ಥೆ ಮಾಡಿ ಸುಪ್ರೀಂ ಕೋರ್ಟಿನ ಆದೇಶವನ್ನು ಸಹ ಪಾಲಿಸಲು ಅವಕಾಶವಿತ್ತು. ಆದರೆ ಹಿಂದಿನ ಸರ್ಕಾರ ಎರಡು ವರ್ಷದಿಂದ ಗುಟ್ಕಾ ನಿಷೇಧದ ಬಗ್ಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದಂತಹ ತೀರ್ಮಾನವನ್ನು ನಮ್ಮ ಸರ್ಕಾರ ಇವತ್ತಿನ ದಿವಸ ತೆಗೆದುಕೊಂಡಿದೆಯೆಂದು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ ಹಾಗೂ ನಮ್ಮ ಜನರ ಆರೋಗ್ಯ ಕಾಪಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ ಎಂಬ ಸಂದೇಶವನ್ನು ಸಹ ಕೊಟ್ಟಿದ್ದೇನೆ. ಇಂತಹ ಸಂದರ್ಭದಲ್ಲಿ ಗುಟ್ಕಾ ನಿಷೇಧದಿಂದ ಅಡಕೆ ಬೆಳೆಗಾರರಿಗೆ ತೊಂದರೆಯಾಗಿದೆ

ಎಂಬ ಮಾತು ಕೇಳಿಬರುತ್ತಿದೆ. ಹಾಗಾಗಿ ನಾನು ಇದರ ಬಗ್ಗೆ ಸ್ಪಷ್ಟೀಕರಣ ನೀಡಬಯಸುತ್ತೇನೆ. ಅಡಕೆಗೆ ಮತ್ತು ಗುಟ್ಕಾ ಯಾವುದೇ ರೀತಿಯಾದಂತಹ ಸಂಬಂಧವಿಲ್ಲ. ನಾವು ಕೇವಲ Nicotine ಮತ್ತು Tobacco ಅಂಶ ಇರುವಂತಹ ಅಡಕೆಗೆ ಮಾತ್ರ ನಿಷೇಧ ಮಾಡಿದ್ದೇವೆ ಹೊರತು ಅಡಕೆ ಅಥವಾ ಅಡಕೆಗೆ ಸಂಬಂಧಪಟ್ಟಂತಹ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ನಿಷೇಧ ಮಾಡಿಲ್ಲ. ಇವತ್ತಿನ ದಿವಸ ಹಲವಾರು ಗುಟ್ಕಾ ಕಂಪನಿಗಳು ನಿಷೇಧವನ್ನು ಸ್ವಾಗತಿಸಿವೆ. ಅಲ್ಲದೆ ಗುಟ್ಕಾ ತಯಾರಿಸುವುದನ್ನು ನಿಲ್ಲಿಸಿ ಸ್ವೀಟ್ ಸುಪಾರಿ ಅಥವಾ Nicotine ಮತ್ತು Tobacco ರಹಿತವಾದಂತಹ ಉತ್ಪನ್ನಗಳನ್ನು ನಾವು ತಯಾರು ಮಾಡುತ್ತೇವೆಂದು ತಿಳಿಸಿದ್ದಾರೆ ಹಾಗೂ ಇವುಗಳನ್ನು ಉತ್ಪಾದನೆ ಮಾಡುವುದಕ್ಕೆ ಈಗಾಗಲೇ ಪರವಾನಗಿಯನ್ನು ಸಹ ತೆಗೆದುಕೊಂಡಿದ್ದಾರೆ ಎಂಬ ವಿಷಯ ನಮ್ಮ ಗಮನಕ್ಕೆ ಬಂದಿದೆ. ಆದಕಾರಣ ಇವತ್ತಿನ ದಿವಸ ಅಡಕೆಗೆ ತೊಂದರೆ ಆಗುತ್ತಿದೆ ಎಂದು ಈ ರೀತಿಯ ಚರ್ಚೆ ಮಾಡಿದರೆ ಇದರಿಂದ ರೈತರಿಗೆ ಏನು ಪ್ರಯೋಜನ ಆಗುವುದಿಲ್ಲವೆಂದು ಜವಾಬ್ದಾರಿ ಸ್ಥಾನದಲ್ಲಿರುವಂತಹ ಜನಪ್ರತಿನಿಧಿಗಳೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಇದರ ಪ್ರಯೋಜನವನ್ನು ಮಾರುಕಟ್ಟೆಯಲ್ಲಿ ಬೇರೆಯವರು ಪಡೆಯುವುದಕ್ಕೆ ಪ್ರಯತ್ನ ಪಡುತ್ತಾರೆ. ಇವತ್ತಿನ ದಿವಸ ಗುಟ್ಕಾ ನಿಷೇಧದಿಂದಾಗಿ ಅಡಕೆ ಬೆಲೆ ತುಂಬಾ ಕಡಿಮೆಯಾಗುತ್ತಿದೆ ಇದರಿಂದಾಗಿ ಬಹಳಷ್ಟು ತೊಂದರೆಯಾಗುತ್ತದೆ ಎಂದು ಚರ್ಚೆ ನಡೆಯುತ್ತಿದೆ. ಆದರೆ, ಈ ಸಂದರ್ಭದಲ್ಲಿ, ಅಡಕೆ ಬೆಳೆಗಾರರು ಯಾರೂ ಸಹ ಎದೆಗುಂದದೆ ಧೈರ್ಯದಿಂದ ಇರಬೇಕೆಂದು ನಾನು ಮಾತ್ರ ಹೇಳುತ್ತಿಲ್ಲ, ನಮ್ಮ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರೂ ಸಹ ಈ ಮಾತನ್ನು ಹೇಳಿದ್ದಾರೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಸಲಿಚ್ಛಿಸುತ್ತೇನೆ. ಯಾವ ದಿವಸದಂದು ಸರ್ಕಾರ ಗುಟ್ಕಾ ಬ್ಯಾನ್ ಮಾಡಿತು ಆ ದಿವಸ ಗುಟ್ಕಾ ನಿಷೇಧದಿಂದ ರೈತರಿಗೆ ತಾತ್ಕಾಲಿಕವಾಗಿ ತೊಂದರೆಯಾಗಿದೆ ಹೊರತು ಶಾಶ್ವತವಾದಂತಹ ತೊಂದರೆ ಆಗುವುದಿಲ್ಲ ಆದುದರಿಂದ ರೈತರು

ಎದೆಗುಂದಬಾರದೆಂದು ನಮ್ಮ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರು "ಹೊಸ ದಿಗಂತ" ಪತ್ರಿಕೆಯಲ್ಲಿ ಹೇಳಿಕೆಯನ್ನು ನೀಡಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ, record set right ಆಗಬೇಕು. ಇವತ್ತು ಬೆಳಿಗ್ಗೆಯಿಂದ ಮಧ್ಯಾಹ್ನದವರೆವಿಗೂ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರು ಬಂದು ಸುಧೀರ್ಘವಾದಂತಹ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. 'ಈ ರೀತಿಯಾದಂತಹ ಯಾವುದೇ ಹೇಳಿಕೆಗಳನ್ನು ನಾನು ಕೊಡಲಿಲ್ಲ ಯಾವುದೋ ಒಂದು ಪತ್ರಿಕೆಯಲ್ಲಿ ನನ್ನ ಹೇಳಿಕೆ ತಿರುಚಿ ಬಂದಿದೆ' ಎಂದು ಅವರೇ ಸ್ವತಃ ನಮ್ಮಲ್ಲಿ ಬಂದು ಹೇಳಿದ್ದಾರೆ. ಇವತ್ತು ಬೆಳಿಗ್ಗೆ ನಾವು ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಅಧ್ಯಕ್ಷರ ಕಡತಗಳನ್ನು ಹಾಗೂ ಮಾರುಕಟ್ಟೆಯಲ್ಲಿ ಅಡಕೆಗೆ ಯಾವ ರೀತಿ ಬೆಲೆ ಕಡಿಮೆ ಆಗಿದೆ ಎಂಬ ದರಪಟ್ಟಿಯನ್ನು ಕ್ಯಾಂಪ್ಕೋ ಸಂಸ್ಥೆಯಿಂದಲೇ ತರಿಸಿಕೊಂಡಿದ್ದೇವೆ.

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ಈಗೇನು ಮಾನ್ಯ ವಿರೋಧ ಪಕ್ಷದ ನಾಯಕರು ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರು ಪತ್ರಿಕೆಯಲ್ಲಿ ನನ್ನ ಹೇಳಿಕೆ ತಿರುಚಿ ಬಂದಿದೆ ಎಂದು ಅವರೇ ಸ್ವತಃ ನಮ್ಮಲ್ಲಿಗೆ ಬಂದು ಹೇಳಿದ್ದಾರೆ ಎಂದು ತಿಳಿಸಿದರು ಅದು ನಮಗೆ ಗೊತ್ತಿಲ್ಲದಂತಹ ವಿಚಾರ. ಆದರೆ, ಇವತ್ತು ಅಡಕೆ ಬೆಲೆ ಕಡಿಮೆ ಆಗಿಲ್ಲವೆಂದು ಎ.ಪಿ.ಎಂ.ಸಿ. ಯಿಂದ ಅಧಿಕೃತವಾಗಿ ದರಪಟ್ಟಿ ಬಂದಿದೆ. ಸರಕು ಎಂಬುದರಲ್ಲಿ ಸರ್ಕಾರ ಯಾವತ್ತು ಗುಟ್ಕಾಗೆ ನಿಷೇಧ ಹೇರಿತು ಆ ದಿವಸ ಅಡಕೆಯ ಗರಿಷ್ಠ ಬೆಲೆ 26,826 ಇತ್ತು. ಬಹುಶಃ 4ನೇ ತಾರೀಖಿಗೆ ಅದರ ಮೇಲೆ 25,899/– ರೂಪಾಯಿಗೆ ಇಳಿದಿದೆ. ನಾನು ಈ ದರ ಪಟ್ಟಿಯನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ. ಅಥವಾ ಇದರ ಬಗ್ಗೆ ಸಂಬಂಧಪಟ್ಟಂತಹ ಎಪಿಎಂಸಿಯ ಅಧಿಕಾರಿಯವರ ಜೊತೆ ಚರ್ಚೆ ಮಾಡಿ ಇದರ ಸತ್ಯಾಸತ್ಯತೆಯನ್ನು ತಿಳಿಯುವಂತಹ ಅವಕಾಶ ತಮಗೆ ಇದೆ ಎಂದು ತಿಳಿಸುವುದಕ್ಕೆ ಬಯಸುತ್ತೇನೆ. ಆದಕಾರಣ ಇಂತಹ ಸಂದರ್ಭದಲ್ಲಿ ಆಕಾಶವೇ ಕಳಚಿ ನಮ್ಮ ತಲೆಯ ಮೇಲೆ

ಬಿದ್ದಿದೆ ಎನ್ನುವ ರೀತಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದರೆ ಯಾವುದೇ ರೀತಿಯಾದಂತಹ ಪರಿಹಾರ ಸಿಗುವುದಿಲ್ಲ. ಹಾಗಾಗಿ ಯಾವ ರೀತಿ ಪರಿಹಾರ ಕೊಡಬೇಕು ಎಂಬುದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಸನ್ಮಾನ್ಯ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮಾತನಾಡುವಂತಹ ಸಂದರ್ಭದಲ್ಲಿ ಇವತ್ತು ಗುಟ್ಕಾ ನಿಷೇಧ ಮಾಡುವುದರಿಂದ ಅಡಕೆಗೆ ಅವಮಾನ ಮಾಡಿದ್ದಾರೆಂದು ಹೇಳಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಇಡೀ ಕರ್ನಾಟಕದಲ್ಲಿ ಒಟ್ಟು ಉತ್ಪಾದನೆ ಆಗುವಂತಹ ಅಡಕೆಯ ಪೈಕಿ ಶೇಕಡ 45ರಿಂದ 50ರಷ್ಟು ಅಡಕೆ ಗುಟ್ಕಾ ಮತ್ತು ಪಾನ್ ಮಸಾಲಗಳಿಗೆ ಹೋಗುತ್ತಿದೆ. ಈಗ ಗುಟ್ಕಾ ನಿಷೇಧ ಮಾಡಿರುವುದರಿಂದ ಶೇಕಡ 45ರಷ್ಟು ಅಡಕೆಯನ್ನು ಬೆಳೆಯುವಂತಹ ರೈತರಿಗೆ ಯಾವ ರೀತಿ ಪುನರ್ ವಸತಿ, ಪುನರ್ ಮಾರುಕಟ್ಟೆಯ ವ್ಯವಸ್ಥೆ ಮತ್ತು ಅವರ ಸಮಸ್ಯೆಗಳನ್ನು  ಪರಿಹಾರ ಮಾಡುವುದಕ್ಕೆ ಸರ್ಕಾರ ಕೈಗೊಂಡಿರುವಂತಹ ಕ್ರಮಗಳಾದರು ಏನು ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ನಾವು 'ನಿಶ್ಚಿತಾರ್ಥ ಮಾಡುವಾಗ ವೀಳ್ಯ ಕೊಡುತ್ತೇವೆ' ಎಂಬ ಮಾತನ್ನು ಹೇಳಿದರು. ಖಂಡಿತವಾಗಿ ಆ ಸಂಸ್ಕೃತಿಯನ್ನು ಯಾರಿಂದಲೂ ತಡೆಯುವುದಕ್ಕೂ ಸಾಧ್ಯವಿಲ್ಲ, ಬಿಡುವುದಕ್ಕೂ ಸಾಧ್ಯವಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ರೈತರನ್ನು ಕೈ ಬಿಟ್ಟಿದ್ದೀರೆಂದು ನಾನು ಹೇಳಿದ್ದು. ಏಕೆಂದರೆ ಅಡಕೆ ಬೆಳೆಗಾರರು ನಿಮ್ಮನ್ನು ನಂಬಿದ್ದರು, ಉಡುಪಿ ಮತ್ತು ಚಿಕ್ಕಮಗಳೂರಿನಲ್ಲಿ ಲೋಕಸಭಾ ಚುನಾವಣೆ ನಡೆಯುವ ಸಂದರ್ಭದಲ್ಲಿ ತಾವು ಅಡಕೆ ಬೆಳೆಗಾರರ ಸಮಸ್ಯೆಯನ್ನು ಪರಿಹರಿಸುತ್ತೇವೆ, ರೈತರ ಪರವಾಗಿ ಹೋರಾಟ ಮಾಡುತ್ತೇವೆ, ನಿಮ್ಮ

ಸಮಸ್ಯೆಗಳನ್ನು ಪರಿಹರಿಸುತ್ತೇವೆ, ರೈತರಿಗೆ ನಾವಿದ್ದೇವೆಂದು ಆತ್ಮಸ್ಥೈರ್ಯ ತುಂಬಿದ್ದೀರಿ. ಅದರ ಆಧಾರದ ಮೇಲೆ ಆ ರೈತರೆಲ್ಲರೂ ನಿಮ್ಮನ್ನು ನಂಬಿದ್ದರು. ಈಗ ನೀವು ರೈತರನ್ನು ಕೈ ಬಿಟ್ಟಿದ್ದೀರೆಂದು ಹೇಳಿದ್ದು. ಇದರಲ್ಲೇನು ತಪ್ಪಿದೆ?

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ನಾವು ನಿಶ್ಚಿತಾರ್ಥ ದಿವಸದಂದು ಕೊಡುವಂತಹ ವೀಳ್ಯದಲ್ಲಿ ವಿಷರಹಿತವಾದಂತಹ ವೀಳ್ಯವನ್ನು ಕೊಡುತ್ತೇವೆ ಎಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಎಂಬ ಮಾತನ್ನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ. ಏಕೆಂದರೆ, ಗುಟ್ಕಾದಲ್ಲಿ ಅಡಿಕೆಯ ಜೊತೆಗೆ ಟೊಬ್ಯಾಕೋ ಮತ್ತು ನಿಕೋಟಿನ್ ಇದೆ ಅದರಿಂದಾಗಿ ಆರೋಗ್ಯಕ್ಕೆ ಹಾನಿಕಾರಕ ಎಂಬ ಕಳಂಕ ಏನಿತ್ತು, ಆ ಕಳಂಕವನ್ನು ನಾವು ಹೋಗಲಾಡಿಸಿದ್ದೇವೆ ಎಂಬ ಮಾತನ್ನು ಹೇಳಬಯಸುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿಷ ಕೊಟ್ಟಿದ್ದೀರೆಂದು ನಾವು ಹೇಳಲಿಲ್ಲ. ನಿಶ್ಚಿತಾರ್ಥದ ಸಮಯದಲ್ಲಿ ಚಿಗುರು ಎಲೆ ಮತ್ತು ಬೆಟ್ಟದ ಅಡಕೆ ಕೊಡುತ್ತೇವೆ. ಎಲೆ ಅಡಕೆ ಕೊಡುವ ಉದ್ದೇಶವೇನೆಂದರೆ ಆ ನಿಶ್ಚಿತಾರ್ಥ ವಿಶ್ವಾಸದ ಸಂಕೇತವಾಗಿದೆ. ಆ ವಿಶ್ವಾಸದ ಸಂಕೇತವಾಗಿ ಮತದಾರರು ಮೊನ್ನೆ ನಡೆದಂತಹ ಚುನಾವಣೆಯಲ್ಲಿ ತಮಗೆ ಮತ ನೀಡಿದರು. ಮತ ನೀಡಿದ ರೈತರನ್ನೇ ಈ ದಿವಸ ಕೈಬಿಟ್ಟಿದ್ದೀರೆಂದು ನಾವು ಹೇಳಿದ್ದು.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಾನಂದಗೌಡರು, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು, ನಮ್ಮ ಕಡೆಯಿಂದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟರು. ಶ್ರೀ ರಮಾನಾಥ್ ರೈ ಇವರೆಲ್ಲರೂ ಮಾತನಾಡುವುದನ್ನು ಕೇಳುತ್ತಿದ್ದರೆ ಇಲ್ಲಿ ಒಂದು ಯಕ್ಷಗಾನ ನಡೆಯುತ್ತಿದೆ ಎಂಬ ಭಾವನೆ ಉಂಟಾಗುತ್ತಿದೆ.

**ಶ್ರೀ ಡಿ.ವಿ. ಸದಾನಂದಗೌಡರು:–** ಮಾನ್ಯ ಸಭಾಪತಿಯವರೇ, ನಮಗೂ ಯಕ್ಷಗಾನ ಮಾಡಬೇಕು ಎಂಬ ಮನಸ್ಸು ಇದೆ. ಆದರೆ ಬೆಳೆಗಾರರಿಗೆ ಈ ರೀತಿ ತೊಂದರೆ ಉಂಟಾಗಿರುವಾಗ ಯಕ್ಷಗಾನ ಮಾಡುವುದು ಸರಿಯಲ್ಲ. ತಾವು ಒಂದು ಮಾತನ್ನು ಹೇಳಿದ್ದೀರಿ. ನಾನು record set right ಮಾಡುತ್ತಿದ್ದೇನೆ. ದಿನಾಂಕ:30/5/2013ರಂದು ತಮ್ಮ ಆದೇಶ ಬಂದಿರುವಂಥದ್ದು. ತಾವು ದಿನಾಂಕ 27/5/2013ರ ದರಪಟ್ಟಿ ಕೊಟ್ಟಿದ್ದೀರಿ. ಇದು ಸರಿಯಲ್ಲ. ನಿಮ್ಮ ಆದೇಶ ಹೊರಟಿರುವಂಥದ್ದು...

**ಶ್ರೀ ಯು.ಟಿ. ಖಾದರ್:–** ನಾನು ಎರಡು ಲಿಸ್ಟ್ ಅನ್ನು ಕೊಟ್ಟೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಖಾದರ್‌ರವರೇ, ಒಂದು ನಿಮಿಷ ನಾನು ಹೇಳುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಇಲ್ಲ ಭೈರೇಗೌಡರೆ, I am on record, I am not going beyond that, No, I am telling it. Let him rectify it. ಸರ್ಕಾರಿ ಆದೇಶ ಬಂದಿರುವುದು ದಿನಾಂಕ:30/5/2013ರಂದು. ಮಾನ್ಯ ಸಚಿವರು ದಿನಾಂಕ:27/5/2013ರ ಧಾರಣೆಯನ್ನು ಹೇಳಿದ್ದಾರೆ. ಆದರೆ, ಆದೇಶ ಬಂದಿರುವುದು 30ನೇ ತಾರೀಖು. ದಿನಾಂಕ:31/5/2013ರಂದು ಶಿವಮೊಗ್ಗದ ಮಾರುಕಟ್ಟೆಯ ಧಾರಣೆ ಈ ರೀತಿ ಇದೆ. ಗುಟ್ಕಾ ನಿಷೇಧ ಮಾಡುವುದಕ್ಕಿಂತ ಮೊದಲು ಬೆಟ್ಟದ ಅಡಕೆಗೆ 17,189/– ರೂಗಳಿಂದ 19,060/– ರೂಪಾಯಿಗಳಿತ್ತು. ಸರ್ಕಾರ 30ನೇ ತಾರೀಖಿನಂದು ಗುಟ್ಕಾ ನಿಷೇಧ ಮಾಡಿದ ನಂತರ 31ನೇ ತಾರೀಖಿಗೆ ಅಂದರೆ ಒಂದೇ ದಿವಸದಲ್ಲಿ 17,719/– ರೂಗಳಿಂದ 16,669/– ರೂಗಳಿಗೆ ಇಳಿದಿತ್ತು. ಅಂದರೆ ಒಂದೇ ದಿವಸದಲ್ಲಿ 2,000/– ರೂಪಾಯಿ ಕಡಿಮೆ ಆಗಿದೆ. ನಾನು ದಾಖಲೆಗಳ ಸಮೇತ ಹೇಳುತ್ತಿದ್ದೇನೆ. Don’t misguide the House. ಏಕೆಂದರೆ ಗುಟ್ಕಾ ನಿಷೇಧದ ಬಗ್ಗೆ ನಮ್ಮ ಯಾವುದೇ ಅಭ್ಯಂತರವಿಲ್ಲ. ಗುಟ್ಕಾ ನಿಷೇಧಕ್ಕೆ ನಮ್ಮ ಸಹಮತವನ್ನು ವ್ಯಕ್ತಪಡಿಸಿದ್ದೇವೆ. ಆದರೆ ಗುಟ್ಕಾ ನಿಷೇಧದಿಂದಾಗಿ ಒಂದೇ ದಿನದಲ್ಲಿ ಮಾರುಕಟ್ಟೆಯಲ್ಲಿ ಅಡಕೆ ಬೆಲೆ ಕಡಿಮೆಯಾಗಿದೆ ಇದರಿಂದಾಗಿ ಇಡೀ

ಅಡಕೆ ಬೆಳೆಗಾರರಿಗೆ ತೊಂದರೆಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(6.00 ಗಂಟೆ)

ಈಗ ಸಾಲ ಕಟ್ಟುವಂತಹ ಸಂದರ್ಭದಲ್ಲಿ ಬಂದಿದೆ. ಈ ವಿಷಯ ತಮಗೂ ಸಹ ತಿಳಿದಿದೆ. ಆದರೆ ನೀವು ಸಾಲ ತೆಗೆದುಕೊಂಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಜೂನ್ ತಿಂಗಳು ಸಾಲ ಕಟ್ಟುವಂತಹ ತಿಂಗಳು. ಮಾರುಕಟ್ಟೆಯಲ್ಲಿ ಈ ರೀತಿ ದಿಢೀರ್ ಆಗಿ ಬದಲಾವಣೆ ಆಗುವುದರಿಂದ ರೈತನ ಮೇಲೆ ಗಂಭೀರವಾದಂತಹ ಪರಿಣಾಮಗಳಾಗುತ್ತದೆ. ಆದಕಾರಣ ನೀವು ಉತ್ತರ ಕೊಟ್ಟರೆ ನಾವು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳಬೇಕು ಎಂಬ ಸಂಶಯ ವ್ಯಕ್ತಪಡಿಸಿದ್ದು, ಮಾರುಕಟ್ಟೆಯಲ್ಲಿ ಬೆಲೆ ಕುಸಿದಿರುವ ಕಾರಣ ಸಾಲ ಕಟ್ಟುವುದನ್ನು ನೀವು ಮುಂದೂಡುತ್ತೀರಾ ಅಥವಾ ಸಾಲ ಮನ್ನಾ ಮಾಡುತ್ತೀರಾ? ಇದನ್ನು ಹೇಳಬೇಕೆ ವಿನಾ ಕೇವಲ ಗುಟ್ಕಾದ ಬಗ್ಗೆ ಹೇಳುವುದು ನಮಗೆ ಅವಶ್ಯಕತೆ ಇಲ್ಲ. ಅಡಕೆ ಬೆಳೆಗಾರರ ಸಮಸ್ಯೆಯ ಬಗ್ಗೆ ನಾವು ಪ್ರತೀ ವರ್ಷ ಸದನದಲ್ಲಿ ಚರ್ಚೆ ಮಾಡುತ್ತೇವೆ. ಸದನ ನಡೆಯುತ್ತಿರುವಂಥ ಸಂದರ್ಭದಲ್ಲಿ ನೀವು ಸೌಜನ್ಯಕ್ಕಾದರು ಎಲ್ಲಾ ಸದಸ್ಯರುಗಳನ್ನು, ಕರೆದು ಮಾತನಾಡಿ ಆದೇಶ ಹೊರಡಿಸಬಹುದಾಗಿತ್ತಲ್ಲವೇ? ನಿಜ, ನಾವು ಎರಡು ವರ್ಷ ಆದರೂ ಈ ಕೆಲಸವನ್ನು ಮಾಡಲಿಲ್ಲ. ಕಾರಣ ಅಡಕೆ ಬೆಳೆಗಾರರಿಗೆ ತೊಂದರೆ ಆಗಬಾರದು, ಇದಕ್ಕೆ ಏನಾದರೂ ಪರ್ಯಾಲೋಚನೆ ಮಾಡಬೇಕು, ಕೋರ್ಟ್ ಆದೇಶದಲ್ಲಿ ಏನಾದರೂ ವ್ಯತ್ಯಾಸಗಳನ್ನು ಮಾಡಬಹುದೆ ಎಂಬ ದೃಷ್ಟಿಕೋನದಿಂದ ನಾವು ಮಾಡಲಿಲ್ಲ. ಆದಕಾರಣ ಇವತ್ತು ಏಕಾಏಕಿ ದಿಢೀರ್ ಎಂದು ಆದೇಶ ಹೊರಡಿಸಿ ಸುಪ್ರೀಂ ಕೋರ್ಟಿನಿಂದ ಶಹಭಾಷ್‌ಗಿರಿ ತೆಗೆದುಕೊಳ್ಳುತ್ತಿದ್ದೀರಲ್ಲ ಇದು ಸರಿಯೇ? ನೀವು ಸುಪ್ರೀಂ ಕೋರ್ಟಿನ ಆದೇಶವನ್ನು ಪಾಲನೆ ಮಾಡದಿದ್ದರೆ contempt ಆಗುತ್ತಿತ್ತು, ಅಧಿಕಾರಿಗಳು ಹೆದರುತ್ತಿದ್ದರು ಎಂದು ಹೇಳಿದ್ದೀರಿ. ಇವತ್ತು ಕಾಂಗ್ರೆಸ್ "ಗಡದ್ ದಿಲ್" ಎಂಬ ಶಹಭಾಷ್‌ಗಿರಿಯನ್ನು ತೆಗೆದುಕೊಳ್ಳುತ್ತೀರಾ?

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಅನಿಸಿಕೆಯನ್ನು ತಿಳಿಸಿದ್ದಾರೆ,

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಇದು ಅನಿಸಿಕೆ ಅಲ್ಲ, ದಾಖಲೆ. ನಿಮ್ಮ ಅನಿಸಿಕೆ ಯಾರಿಗೆ ಬೇಕು? 31ನೇ ತಾರೀಖಿನ ನಂತರ ಯಾವ ಧಾರಣೆ ಇದೆ ಎಂಬುದನ್ನು ಹೋಗಿ ನೋಡಿ, ತಮಗೆ ತಿಳಿಯುತ್ತದೆ.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, 27ನೇ ತಾರೀಖಿಗೆ ಯಾವ ಧಾರಣೆ ಇತ್ತು, ಅದೇ ರೀತಿ ನಿನ್ನೆ ದಿವಸ ಅಂದರೆ 4ನೇ ತಾರೀಖಿಗೆ ಯಾವ ಧಾರಣೆ ಇತ್ತು ಎಂಬುದನ್ನು ಎ.ಪಿ.ಎಂ.ಸಿ. ಅವರು ಕೊಟ್ಟಿರುವಂತಹ ಲಿಸ್ಟ್ ನೋಡಿ ತಿಳಿಸಿದ್ದೇವೆ.

**ಶ್ರೀ ಡಿ.ವಿ. ಸದಾನಂದಗೌಡ:-** ಅಗತ್ಯವಿಲ್ಲ. Let them place before the House.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೋಲಿಕೆಯನ್ನು ಕೊಟ್ಟರು. ತಾವು ಹಿರಿಯರಿದ್ದೀರಿ ಅವರು ಹೇಳುವುದನ್ನು ಸ್ವಲ್ಪ ಕೇಳಿಸಿಕೊಳ್ಳಿ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಅವರು ಹೇಳಿದ್ದು 27ನೇ ತಾರೀಖಿನದು. notification ಬಂದಿರುವುದು 30ನೇ ತಾರೀಖು.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 27ನೇ ತಾರೀಖು ಯಾವ ಬೆಲೆ ಇತ್ತು ಎಂದು ಹೋಲಿಕೆ ಮಾಡಿ ಹೇಳಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:–** ಬೇಕಾದರೆ ದಾಖಲೆಯನ್ನು ತೆಗೆದುನೋಡಿ. 25ನೇ ತಾರೀಖಿನಿಂದ ಗುಟ್ಕಾ ನಿಷೇಧ ಮಾಡಿರುವುದು ಎಂದು ದಾಖಲೆಯಲ್ಲಿ ಇಲ್ಲದೆ ಹೋದರೆ ನೀವು ಹೇಳಿದಂತೆ ಕೇಳುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಮಾನ್ಯ ಸಚಿವರು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದು ಖಂಡಿತವಾಗಿ ಸತ್ಯಕ್ಕೆ ದೂರವಾದಂತಹ ವಿಚಾರ. ಬೇಕಾದರೆ ದಾಖಲೆ ತೆಗೆದು ಓದಿಸಿ 27ನೇ ತಾರೀಖು ಏನು ದರ ಇತ್ತು ಮತ್ತು 4ನೇ ತಾರೀಖು ಏನು ದರ ಇತ್ತು ಎಂದು ಮೊದಲನೆ ಬಾರಿಗೆ ಹೇಳಿದ್ದಾರೆ. ಏಕೆಂದರೆ ಗುಟ್ಕಾ ಬ್ಯಾನ್ ಆಗುವುದಕ್ಕಿಂತ ಮೊದಲು ಏನು ಬೆಲೆ ಇತ್ತು, ಬ್ಯಾನ್ ಆದ ನಂತರ ಏನು ಬೆಲೆ ಇದೆ ಎಂದು ಒಂದು ಹೋಲಿಕೆ ಮಾಡಿ ಹೇಳಿದ್ದಾರೆ. ಬೇಕಾದರೆ ಮಾನ್ಯ ಸಭಾಪತಿಯವರೇ ತಾವು ದಾಖಲೆಯನ್ನು ತೆಗೆಸಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒದಗಿಸಿ ಕೊಡಿ. ಮಾನ್ಯ ಸಚಿವರು ತಪ್ಪು ಮಾಹಿತಿ ಕೊಡುವಂತಹ ಯಾವುದೇ ಕೆಲಸವನ್ನು ಮಾಡಿಲ್ಲ ಎಂಬ ವಿಚಾರ ದಾಖಲೆಗೆ ಹೋಗಬೇಕು.

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ನಾನು ಹೇಳಿರುವಂತಹ ಬೆಲೆ ಏನಿದೆ ಅದು ಶಿವಮೊಗ್ಗದ ಎ.ಪಿ.ಎಂ.ಸಿ. ಇಲಾಖೆಯಿಂದ ಬಂದಿರುವಂತಹ ಮಾಹಿತಿ.

(ಗೊಂದಲ)

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟಿನ ಬಗ್ಗೆ ನಮ್ಮ ಕಾಂಗ್ರೆಸ್ಸಿನ ನಾಯಕರು, ಸಚಿವರು ಬಹಳ ದೊಡ್ಡದಾದಂತಹ ಗೌರವವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ನಾನು ಖಂಡಿತ ಅವರನ್ನು ಅಭಿನಂದಿಸುತ್ತೇನೆ. ಅವರಿಗೆ ಜ್ಞಾಪಿಸಬೇಕಾಗಿರುವಂತಹ ವಿಷಯವೇನೆಂದರೆ, ಇತ್ತೀಚೆಗೆ ಸಿ.ಬಿ.ಐ. ಗೆ ಸಂಬಂಧಪಟ್ಟಂತೆ ನ್ಯಾಯಾಲಯದಿಂದ ನಿಮಗೆ ತಪರಾಕ್ ಹೊಡೆಯಿತು...

(ಗೊಂದಲ)

**ಶ್ರೀ ಗೋ. ಮಧುಸೂದನ್:-** ಸನ್ಮಾನ್ಯ ಪ್ರಧಾನ ಮಂತ್ರಿಯವರು ರಾಜೀನಾಮೆ ಕೊಡಬೇಕಾಗಿ ಬಂತು ಆದರೆ ಇವರು ಕೊಡಲಿಲ್ಲ.........

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರೈತರ ಹಿತಾಸಕ್ತಿಗೆ ವಿರೋಧವಾಗಿರುವ ಕೆಲಸ ಮಾಡುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಮುಂದುವರೆಸಿ.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವಂತಹ ಸಮಯದಲ್ಲಿ ಕೇಳುವಂತಹ ತಾಳ್ಮೆ ಇಲ್ಲದೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಮಾತನಾಡುವುದು ಸ್ವಾಭಾವಿಕ ಅದರ ಬಗ್ಗೆ ನಾನು ಹೇಳುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ನಾವು ಎರಡು ವರ್ಷ ಏಕೆ ಮಾಡಲಿಲ್ಲವೆಂದರೆ, ನಮ್ಮ ರಾಜ್ಯದ ಅಡಕೆ ಬೆಳೆಗಾರರಿಗೆ ತೊಂದರೆ ಆಗಬಾರದು ಎಂಬ ಕಾರಣದಿಂದ ಹಾಗೂ ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಬೇಕು ಎಂಬ ಕಾರಣದಿಂದ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳದೆ ಮುಂದಕ್ಕೆ ಹಾಕುತ್ತಾ ಬಂದೆವು ಎಂದು ತಿಳಿಸಿದರು. ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಒಂದು ಕಡೆಯಿಂದ ರಾಜ್ಯದ ಅಡಕೆ ಬೆಳೆಗಾರರಿಗೆ ತೊಂದರೆ ಆಗಬಾರದು ಎಂದು ನೋಡಿದರೆ ಮತ್ತೊಂದು ಕಡೆಯಿಂದ ಯುವಕರನ್ನು ಮತ್ತು ಜನಸಾಮಾನ್ಯರನ್ನು ಕ್ಯಾನ್ಸರ್ ರೋಗದಿಂದ ನಮ್ಮ ಸಮಾಜ ಕಳೆದುಕೊಂಡಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಮತ್ತೊಂದು ಕಡೆಯಿಂದ ಎರಡು ವರ್ಷದಿಂದ ಗುಟ್ಕಾದವರಿಗೆ ಲಾಬಿ ಮಾಡುವುದಕ್ಕೋಸ್ಕರ ಅವಕಾಶ ನೀಡಲಾಗಿತ್ತು ಎಂದು ಹೇಳಬಯಸುತ್ತೇನೆ.

(ಗೊಂದಲ)

**ಶ್ರೀ ಅಶ್ವಥ ನಾರಾಯಣ:–** ಹಾಗಾದರೇ ನೀವು ಸಿಗರೇಟ್ ಕಂಪನಿಯ ಲಾಬಿಗೆ ಒಳಗಾಗಿದ್ದೀರಾ?

(ಗೊಂದಲ)

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ಸಿಗರೇಟ್ ನಿಷೇಧ ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ಆದೇಶ ಬಂದರೆ ಅದನ್ನೂ ಸಹ ನಾಳೆಯಿಂದಲೇ ಜಾರಿಗೆ ತರುತ್ತೇವೆ.

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಿಗರೇಟ್‌ನಲ್ಲಿ ನಿಕೋಟಿನ್ ಅಂಶ ಇದೆ ತಾನೆ?

(ಗೊಂದಲ)

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಒಬ್ಬರಿಗಿಂತ ಹೆಚ್ಚು ಜನರು ಮಾತನಾಡಿದರೆ ಅದು ರೆಕಾರ್ಡಿಗೆ ಹೋಗುವುದಿಲ್ಲ. ಯಾರಾದರು ಒಬ್ಬರು ಮಾತನಾಡಿ. ಎಲ್ಲರೂ ಮಾತನಾಡಿದರೆ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಮಾನ್ಯ ಸಚಿವರು ಮೊದಲ ಬಾರಿಗೆ ಚೆನ್ನಾಗಿ ಉತ್ತರ ಕೊಡುತ್ತಿದ್ದಾರೆ. ಯಾರಾದರೂ ಒಬ್ಬರು ಮಾತನಾಡಿ, ಎಲ್ಲರೂ ಮಾತನಾಡಿದರೆ ಏನು ಮಾಡಲಿ?

**ಶ್ರೀ ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎ.ಪಿ.ಎಂ.ಸಿ. ಬೆಲೆ ಹೇಳಿದರು. ಯಾವ ಎ.ಪಿ.ಎಂ.ಸಿ.ದು ಎಂದು ತಿಳಿಸಬೇಕು. Misguide ಮಾಡುತ್ತಿದ್ದಾರೆ.

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಶಿವಮೊಗ್ಗಾದ ಎ.ಪಿ.ಎಂ.ಸಿ. ಯವರು ಕೊಟ್ಟಿರುವಂತಹ ಧಾರಣೆಯ ಬಗ್ಗೆ.

**ಶ್ರೀ ಅಶ್ವಥ್ ನಾರಾಯಣ:–** ಹಾಗಾದರೆ ಆ ಪೇಪರ್‌ನ ಟೇಬಲ್ ಮಾಡಿ.

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ಟೇಬಲ್ ಮಾಡುತ್ತೇನೆ. ಮಾನ್ಯ ಸದಸ್ಯರು ಕೇಳುವಂತಹ ಯಾವುದೇ ಪ್ರಶ್ನೆಗೆ ಉತ್ತರ ಕೊಡುವಂತಹ ಆತ್ಮವಿಶ್ವಾಸ ನಮಗಿದೆ ಎಂದು ತಮ್ಮ ಮೂಲಕ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮೊದಲು ಸಚಿವರು ಉತ್ತರ ಕೊಡಲಿ, ನಂತರ ಕ್ಲಾರಿಫಿಕೇಶನ್ ಕೇಳಲಿ. ಆದರೆ, ಈ ರೀತಿ ಮಧ್ಯದಲ್ಲಿ ಎದ್ದು ನಿಂತು ತೊಂದರೆ ಕೊಟ್ಟರೆ ಹೇಗೆ? This is not the way. ಮಾನ್ಯ ಸಚಿವರು ಕೆಲವು ವಿಚಾರಗಳನ್ನು ಹೇಳಬೇಕೆಂದು ಅವರದೇ ಆದ flow of thoughts ನಲ್ಲಿ ಇರುತ್ತಾರೆ. ಆದರೆ, ಮಧ್ಯದಲ್ಲಿ interfere ಆಗುವುದು ಸರಿಯಲ್ಲ. ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ವಿರೋಧ ಪಕ್ಷದವರಲ್ಲಿ ವಿನಂತಿಸುವುದೇನೆಂದರೆ, ಮಾನ್ಯ ಸಚಿವರು ಉತ್ತರ ಪೂರ್ತಿ ಮಾಡಲಿ, ಆನಂತರ ಬೇಕಾದಷ್ಟು ಕ್ಲಾರಿಫಿಕೇಶನ್ ಕೇಳಲಿ. ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಬೇಕಾದರೆ ನೂರು ಕ್ಲಾರಿಫಿಕೇಶನ್ ಕೇಳಲಿ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಹಿಂದಿನ ಸರ್ಕಾರದವರು ಗುಟ್ಕಾ ನಿಷೇಧ ಮಾಡುವುದಕ್ಕೆ ಎರಡು ವರ್ಷ ಏಕೆ ಮುಂದಕ್ಕೆ ಹಾಕಿದರು ಎಂದು ಮಾನ್ಯ ಸಚಿವರು ಕೇಳಿದರು. ಯಾವುದಕ್ಕೆ ಯಾರು ಏಜೆಂಟ್ ಆಗಿದ್ದರೋ ಅವರು ಅದನ್ನು ಮಾಡುತ್ತಾರೆ. ಎರಡು ವರ್ಷ ಸುಮ್ಮನೆ ಇದ್ದೀರಿ ಎಂದರೆ ಅದರ ಅರ್ಥ ಬೇರೆ ಇದೆ ಎಂದು

ಹೇಳಿದ್ದಾರೆ. ಅದರಲ್ಲಿ ತಪ್ಪೇನು ಇದೆ? "ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಏಕೆ ಮುಟ್ಟಿ ನೋಡಿಕೊಳ್ಳುತ್ತೀರಿ" ನೀವು?

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಗಳೇ, ನನ್ನ ಉದ್ದೇಶ ಏನೆಂದರೆ, ಈ ರೀತಿಯ ತೀರ್ಮಾನ ತೆಗೆದುಕೊಳ್ಳಲು ತಡವಾದ ಹಿನ್ನಲೆಯಲ್ಲಿ ಏನೇನು ಯಾವ ರೀತಿ ಪರಿಣಾಮಗಳಾಗಿದೆ ಎನ್ನುವುದನ್ನು ಹೇಳಿದ್ದೇನೆಯೇ ಹೊರತು ನಾನು ಯಾರನ್ನು ಬೆಟ್ಟು ಮಾಡಿ ತೋರಿಸಲಿಲ್ಲ. ಇವತ್ತು ಸಿಗರೇಟು ಸೇವನೆಯನ್ನು ಕೂಡ ನಿಷೇಧ ಮಾಡಬೇಕೆನ್ನುವುದರ ಬಗ್ಗೆ ಬಲವಾದ ಬೇಡಿಕೆ ಬಂದಿದೆ. ನಾನು ಸಭೆಯ ಮುಂದೆ ಹೇಳುವುದೇನೆಂದರೆ ಈ ರೀತಿಯ ಒಂದು ಆದೇಶ ಕೇಂದ್ರದಿಂದ ಬಂದ್ದಲ್ಲಿ ಯಾವುದೇ ರೀತಿಯ ವಿಳಂಬವನ್ನು ಮಾಡದೇ ಅದನ್ನು ಕೂಡ ನಿಷೇಧ ಮಾಡಲು ನಾವು ತಯಾರಿದ್ದೇವೆ ಎನ್ನುವ ಮಾತನ್ನು ಧೈರ್ಯದಿಂದ ಹೇಳಲಿಚ್ಚಿಸುತ್ತೇನೆ.

(ಗೊಂದಲ)

ಇವತ್ತು ಈ ಒಂದು ಗುಟ್ಕಾ ನಿಷೇಧದಿಂದ ಅಡಕೆ ಬೆಳೆಗಾರರಿಗೆ ತೊಂದರೆ ಆಗಿದೆ, ಅವರಿಗೆ ಬಹಳಷ್ಟು ನಷ್ಟ ಉಂಟಾಗಿದ್ದು, ಬಹಳ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ ಎನ್ನುವ ಮಾತಿನ ಜೊತೆಗೆ ಸಚಿವರು ಅಡಕೆ ಬೆಳೆಗಾರರಲ್ಲದ ಕಾರಣ ಅವರಿಗೆ ಅಡಕೆ ಬೆಳೆಯ ಬಗ್ಗೆ ಗೊತ್ತಿಲ್ಲ ಎನ್ನುವ ಮಾತನ್ನು ಹೇಳಿದರು. ನಾನು ಸದನಕ್ಕೆ ತಿಳಿಸುವುದೇನೆಂದರೆ, ನಾನು ದೊಡ್ಡ ಮಟ್ಟದಲ್ಲದಿದ್ದರೂ ಸಹ ಒಂದು ಸಣ್ಣ ಅಡಕೆ ತೋಟವನ್ನು ಹೊಂದುವಂತಹ ಅವಕಾಶವನ್ನು ದೇವರು ನನಗೆ ಕೊಟ್ಟಿದ್ದಾನೆ. ನಾನು ಕೇವಲ ಅಡಕೆ ತೋಟ ನೋಡಿ ಬರುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಇವತ್ತು ಮೊದಲ ಬಾರಿಗೆ ಮಾನ್ಯ ಸಚಿವರು ಸದನದಲ್ಲಿ ಉತ್ತರವನ್ನು ನೀಡುತ್ತಿದ್ದಾರೆ. ಅವರಿಗೆ ಮಾತನಾಡಲು

ಅವಕಾಶವನ್ನು ಕೊಡಿ. ಅವರ ಮಾತಿನ ಮಧ್ಯೆ ಬಾಯಿ ಹಾಕುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ, ಅದೇ ಜಾಸ್ತಿಯಾಗಬಾರದು.

**Sri. M.C. NANAIAH:-** Normally it is the convention of this House. When the Minister makes his first statement on the floor of the House. he should be heard and there should not be any interruptions. You can intervence in between but such he should be given full opportunity. ಮಾನ್ಯ ಸಚಿವರು ಹೇಳುತ್ತಿರುವುದರಲ್ಲಿ ಯಾವುದೇ ತಪ್ಪಿಲ್ಲ.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ನಾನು ಅಡಕೆ ತೋಟಕ್ಕೆ ಹೋಗಿ ಸುಮ್ಮನೆ ನೋಡಿಕೊಂಡು ಬರುವುದಿಲ್ಲ. ನಾವು ಸಣ್ಣವರಿರುವಾಗ ನಮ್ಮ ತೋಟಗಳಿಗೆ ಹೋಗಿ ಅಲ್ಲಿ ಕೆಲಸ ಮಾಡುವವರ ಜೊತೆಯಲ್ಲಿ ಕೆಲಸ ಮಾಡಿ, ಅಲ್ಲಿ ಮಧ್ಯಾಹ್ನ ಗಂಜಿ ಊಟವನ್ನು ಕೂಡ ಮಾಡಿದ್ದೇನೆ. ಆಗೆಲ್ಲಾ ಕೈಯಲ್ಲಿ ತಿರುಗಿಸುವ ಪಂಪ್ ಇತ್ತು, ಎಲೆಕ್ಟ್ರಿಕ್ ಪಂಪ್ ಇರಲಿಲ್ಲ. ಕೈಯಲ್ಲಿ ಪಂಪ್ ತಿರುಗಿಸುವುದು ಮತ್ತು ನೀರು ಬದಿಯಲ್ಲಿ ಹರಿದು ಹೋಗಲು ಕಟ್ಟೆ ಮಾಡುವುದು ಇದನ್ನೆಲ್ಲ ಮಾಡಿದ್ದೇನೆ. ಹೀಗಾಗಿ ಅಡಕೆ ಬೆಳೆಗಾರರ ಕಷ್ಟ ಏನೆಂಬುದು ನನಗೆ ಬಹಳ ಚೆನ್ನಾಗಿ ತಿಳಿದಿದೆ. ಕಳೆದ 5 ವರ್ಷಗಳಲ್ಲಿ ನಮ್ಮ ಅಡಕೆ ಬೆಳೆಗಾರರಲ್ಲಿ ಹಲವಾರು ಸಮಸ್ಯೆಗಳು ಬಂದಿವೆ, ಆ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿದ್ದುಕೊಂಡು ಅಡಕೆ ಬೆಳೆಗಾರರ ಸಮಸ್ಯೆಗಳ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದೇನೆ. ಆಗ ಯಾವುದೇ ದೊಡ್ಡ ಪ್ರಮಾಣದಲ್ಲಿ ಅಡಕೆ ಬೆಳೆಗಾರರಿಗೆ ಪರಿಹಾರ ದೊರೆಯಲಿಲ್ಲ. ಯಾವುದೇ ದೊಡ್ಡ ಉಪಕಾರ ಕೂಡ ಸರ್ಕಾರದಿಂದ ನಮಗೆ ಆಗ ದೊರೆಯಲಿಲ್ಲ. ಈಗ ನಮ್ಮ ಸರ್ಕಾರದ ಒಂದು commitment ಏನೆಂದರೆ ಅಡಕೆ ಬೆಳೆಗಾರರಿಗೆ ತೊಂದರೆ ಆಗಬಾರದೆನ್ನುವುದು, ನಮ್ಮ ರಾಜ್ಯದ ಯುವ ಜನಾಂಗ ಕ್ಯಾನ್ಸರ್ ಮುಂತಾದ ಕಾಯಿಲೆಗಳಿಂದ ನರಳಬಾರದು ಅವರನ್ನು ಕಳೆದುಕೊಳ್ಳಬಾರದೆನ್ನುವುದು ನಮ್ಮ ಸರ್ಕಾರದ ಉದ್ದೇಶ. ತಂಬಾಕು, ಗುಟ್ಕಾ ಮತ್ತು ನಿಕೋಟಿನ್ ಸೇವನೆ ಮಾಡಿರುವ ಕ್ಯಾನ್ಸರ್ ಪೀಡಿತರ ಪರಿಸ್ಥಿತಿ ಯಾವ

ರೀತಿಯಲ್ಲಿದೆ ಎಂದರೆ ನೀವೆಲ್ಲರೂ ಕಿದ್ವಾಯಿ, ನಿಮ್ಹಾನ್ಸ್ ಮತ್ತು ಇನ್ನಿತರ ಕ್ಯಾನ್ಸರ್ ಆಸ್ಪತ್ರೆಯಲ್ಲಿರುವ ರೋಗಿಗಳನ್ನು ನೋಡಿದಲ್ಲಿ ನಮ್ಮ ಕಣ್ಣಿನಲ್ಲಿ ನೀರು ಬರುತ್ತದೆ, ಹಾಗಾದಲ್ಲಿ ಅವರು ಮನುಷ್ಯರಲ್ಲ ಎಂದು ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ. ಇಂತಹ ವಾತಾವರಣದಲ್ಲಿ ಅವರ ತಂದೆತಾಯಿಗಳ ಪರಿಸ್ಥಿತಿ ಏನು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇದನ್ನೆಲ್ಲ ನೋಡಿಕೊಂಡು ಸುಪ್ರೀಂ ಕೋರ್ಟಿನ ಆದೇಶದ ರೀತ್ಯಾ ಗುಟ್ಕಾವನ್ನು ನಿಷೇಧ ಮಾಡಿದ್ದೇವೆ. ಅದೇ ರೀತಿಯಲ್ಲಿ ಅಡಕೆ ಬೆಳೆಗಾರರ ರಕ್ಷಣೆಯನ್ನು ಮಾಡುವುದು ಕೂಡ ನಮ್ಮ ಕರ್ತವ್ಯ. ಚುನಾವಣೆ ಆದ ನಂತರ ಅಡಕೆ ಬೆಳೆಗಾರರನ್ನು ಕೈ ಬಿಟ್ಟಿದ್ದೇವೆ ಎನ್ನುವ ಮಾತು ಸಹ ಕೇಳಿಬಂತು. ನಾನು ಇವತ್ತು ಈ ಸದನದಲ್ಲಿ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಯಾವುದೇ ಕಾರಣಕ್ಕೂ ಅಡಕೆ ಬೆಳೆಗಾರರ ಕೈ ಬಿಡುವುದಿಲ್ಲ. ಯಾರಾದರೂ ಅಡಕೆ ಬೆಳೆಗಾರರು ಕೆಳಕ್ಕೆ ಬಿದ್ದಲ್ಲಿ ಅವರನ್ನು ಕೈ ಹಿಡಿದು ಮೇಲೆತ್ತುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ ಎನ್ನುವ ವಿಶ್ವಾಸದ ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಏಕೆಂದರೆ, ಗುಟ್ಕಾ ಬರುವುದಕ್ಕೆ ಮುಂಚೆ ಕೂಡ ಅಡಕೆ ಬೆಳೆ ಇತ್ತು., ಗುಟ್ಕಾ ಬಂದ ತಕ್ಷಣ ಅಡಕೆಗೆ ಬೆಲೆ ಬರಲಿಲ್ಲ. ಅಡಕೆಗೆ ಬೆಲೆ ಇಲ್ಲದ ಸಂದರ್ಭದಲ್ಲಿ ನಮ್ಮ ರಾಜ್ಯದಿಂದ ನಿಯೋಗ ಹೋಗಿ ಶ್ರೀಮತಿ ಸೋನಿಯಾಗಾಂಧಿಯವರನ್ನು ಮತ್ತು ಮಾನ್ಯ ಮನಮೋಹನಸಿಂಗ್‌ರವರನ್ನು ಭೇಟಿ ಮಾಡಿದಾಗ ಮನಮೋಹನ ಸಿಂಗ್‌ರವರು 70 ಇದ್ದ ಆಮದು ತೆರಿಗೆಯನ್ನು 170 ಮಾಡಿದಾಗ ಅಡಕೆ ಬೆಲೆ ಹೆಚ್ಚಾಯಿತೆಯೇ ಹೊರತು ಗುಟ್ಕಾದಿಂದ ಅಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾವು ಈ ರೀತಿ ಚರ್ಚೆ ಮಾಡುವುದರ ಮೂಲಕ ರೈತರಲ್ಲಿ ಒಂದು ರೀತಿಯ ಗೊಂದಲವನ್ನು ಸೃಷ್ಟಿಸಿ, ಮಾರುಕಟ್ಟೆಯನ್ನು ನಿಯಂತ್ರಣ ಮಾಡುತ್ತಿರುವ ಮಧ್ಯವರ್ತಿಗಳು ಇದರ ಉಪಯೋಗ ಪಡೆಯುವಂತಹದ್ದಕ್ಕೆ ನಾವ್ಯಾರು ಸಹ ಅವಕಾಶವನ್ನು ಮಾಡಿಕೊಡಬಾರದು. ಇನ್ನು ಮುಂದೆ ಅಡಕೆ ಬೆಳೆಗಾರರಿಗೆ ಏನೇ ತೊಂದರೆ ಆದರೂ ಸಹ ಸರ್ಕಾರ ಅವರ ಬೆಂಬಲಕ್ಕೆ ಬಂದು ನಿಲ್ಲುತ್ತದೆ ಎನ್ನುವ ವಿಶ್ವಾಸ ನೀಡುತ್ತೇವೆ. ಮೊನ್ನೆಯ ದಿವಸ ಮಾನ್ಯ

ಮುಖ್ಯಮಂತ್ರಿಗಳು ರಾಜ್ಯದ ಜನತೆಯ ಆರೋಗ್ಯದ ದೃಷ್ಟಿಯಿಂದ ಜೊತೆಗೆ ಸುಪ್ರೀಂ ಕೋರ್ಟಿನ ಆದೇಶದ ಅನ್ವಯ ಗುಟ್ಕಾವನ್ನು ನಿಷೇಧಿಸುವ ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದರು. ಈ ಹಿನ್ನಲೆಯಲ್ಲಿ ಅಡಕೆ ಬೆಳೆಗಾರರಿಗೆ ಏನಾದರೂ ತೊಂದರೆ ಆದಲ್ಲಿ ಅವರ ಸಹಕಾರಕ್ಕೆ ಸರ್ಕಾರ ನಿಲ್ಲುತ್ತದೆ ಮತ್ತು ಅವರ ಜೀವನಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಮಾಡಿಕೊಡುತ್ತದೆ. ಇದರ ಜೊತೆಗೆ ಗೋರಕ್ ಸಿಂಗ್‌ರವರ ವರದಿಯನ್ನು ಅನುಷ್ಠಾನಗೊಳಿಸಲು ನಿಯೋಗವೊಂದು ದೆಹಲಿಗೆ ಹೋಗುವ ವ್ಯವಸ್ಥೆಯನ್ನು ಕೂಡ ಮಾಡಲಾಗಿದೆ. ಜವಾಬ್ದಾರಿ ಸ್ಥಾನದಲ್ಲಿರುವ ನಾವುಗಳೆಲ್ಲರೂ ನಮ್ಮ ರಾಜಕೀಯವನ್ನು ಬದಿಗಿಟ್ಟು ಕೆಲಸ ಮಾಡಬೇಕು, ಸಣ್ಣಪುಟ್ಟ ವ್ಯತ್ಯಾಸಗಳಿಂದ ರಾಜ್ಯಕ್ಕೆ ಯಾವುದೇ ಲಾಭ ಇಲ್ಲವೆನ್ನುವ ಹಿಂದಿನ ಅನುಭವ ಎಲ್ಲರಿಗೂ ಆಗಿದೆ. ಹಾಗಾಗಿ ರಾಜಕೀಯವನ್ನು ದೂರವಿಟ್ಟು ನಾವೆಲ್ಲರೂ ಒಗ್ಗಟ್ಟಿನಿಂದ ಅಡಕೆ ಬೆಳೆಗಾರರಿಗೆ, 'ನೀವೆಲ್ಲರೂ ವಿಶ್ವಾಸದಿಂದ ಇರಿ, ಯಾವುದಕ್ಕೂ ಎದೆಗುಂದದಿರಿ, ಈ ಸದನ ಮತ್ತು ಸರ್ಕಾರ ನಿಮ್ಮ ಜೊತೆಗಿದೆ' ಎನ್ನುವ ವಿಶ್ವಾಸವನ್ನು ಅವರಲ್ಲಿ ಮೂಡಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳುತ್ತಾ, ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಗುಟ್ಕಾ ನಿಷೇಧದ ಬಗ್ಗೆ ಮತ್ತು ಅದರ ಸಾಧಕ-ಬಾಧಕಗಳ ಬಗ್ಗೆ ಮಾತನಾಡಿದರು. ಅದು ನಿರೀಕ್ಷಿತ, ಅದನ್ನು ನಾವು ಹೊಸದೆಂದು ಹೇಳುವುದಿಲ್ಲ. ಏಕೆಂದರೆ ಈಗಾಗಲೇ ಗುಟ್ಕಾ ನಿಷೇಧ ಮಾಡಿದ್ದನ್ನು ಒಳ್ಳೆಯದೆಂದು ನಾವು ಹೇಳಿದ್ದೇವೆ. ನಮ್ಮ ಪ್ರಶ್ನೆ ಮತ್ತು ನಮ್ಮ ನೋಟಿಸ್‌ನಲ್ಲಿ ಪ್ರಸ್ತಾಪಿಸಿದಂತಹ ವಿಚಾರಗಳು ಬಹಳ ಸ್ಪಷ್ಟವಾಗಿವೆ. ನಾವು ಹೇಳಿರುವುದು ಗುಟ್ಕಾ ನಿಷೇಧ ಜಾರಿಗೆ ಬಂದದ್ದು, ಅಡಕೆ ಬೆಲೆ ದಿಢೀರ್ ಕುಸಿತದಿಂದ ಉಂಟಾದ ಬಗ್ಗೆ, ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಅಡಕೆ ಬೆಳೆಗಾರರು ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ,

ದಾವಣಗೆರೆಯಲ್ಲಿದ್ದಾರೆ. ಈ ಭಾಗದ ಜೀವನಾಡಿಯಾಗಿರುವ ಅಡಕೆ ಬೆಳೆಗಾರರ ಕೃಷಿಗೆ ಹೊಡೆತ ಬೀಳುವ ಆತಂಕದಿಂದ ರೈತರು ಕಂಗಲಾಗಿದ್ದಾರೆ. ಈ ದಿಢೀರ್ ಕುಸಿತದ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆಯುವುದಾಗಿ ಪ್ರಸ್ತಾಪಿಸಿಲಾಗಿದೆ. ಈಗ ನನ್ನ 2–3 ಪ್ರಶ್ನೆಗಳಿಗೆ ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ನೀಡಬೇಕು, ಆದರೆ ಅದನ್ನು ಅವರಿಂದ ಕೊಡಲು ಸಾಧ್ಯವಾಗುತ್ತಿಲ್ಲ. ಸಚಿವರು ನಾವು ರೈತರ ಜೊತೆ ಇದ್ದೇವೆ, ಅವರು ಮುಳುಗಿದರೆ ಅವರ ಕೈ ಬಿಡುವುದಿಲ್ಲ, ಒಂದು ಅವರ ಕೈ ಹಿಡಿಯುತ್ತೇವೆ, ಇಲ್ಲದಿದ್ದರೆ ಅವರನ್ನು ಎತ್ತುವ ಪ್ರಯತ್ನ ಮಾಡುತ್ತೇವೆ ಏನಾದರೂ ಒಂದು ಮಾಡುತ್ತೇವೆ ಎನ್ನುವ ಉತ್ತರವನ್ನು ನೀಡಿದ್ದಾರೆ. ನನಗೆ ಮಾನ್ಯ ಸಚಿವರು ನಿರ್ದಿಷ್ಟವಾದ 2–3 ಉತ್ತರಗಳನ್ನು ನೀಡಬೇಕು. ಇಲ್ಲದಿದ್ದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡಬೇಕು. ಒಂದು ಈ ಅಡಕೆ ಬೆಲೆಯ ಕುಸಿತದಿಂದ ನಷ್ಟ ಆಗಿರುವುದಕ್ಕೆ ಅಡಕೆ ಬೆಲೆಗಾರರ ಸಾಲವನ್ನು ಮನ್ನಾ ಮಾಡಬೇಕು, ಈ ಸಾಲ ಮನ್ನಾ ಮಾಡುವ ಜವಾಬ್ದಾರಿಯನ್ನು ಸರ್ಕಾರ ವಹಿಸುವುದೇ? ಎರಡನೆಯದಾಗಿ ಪುನಃ ಅವರಿಗೆ 0% ಹಾಗೆ ಸಾಲ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡುವುದೇ?; ಅಡಕೆ ಬೆಲೆ ಇಳಿಕೆ ಮತ್ತು ದಿಢೀರ್ ಕುಸಿತದಿಂದ ರೈತನಿಗೆ ಆಗುವ ನಷ್ಟಕ್ಕೆ ಬೇರೆ ಬೇರೆ ಪರಿಹಾರಗಳನ್ನು ನೀಡಿ ಅದನ್ನು ಸರಿದೂಗಿಸಲಾಗುವುದೇ? ಇನ್ನೂ ಮೂರನೆಯದಾಗಿ ಮಾನ್ಯ ಶ್ರೀನಿವಾಸ ಪೂಜಾರಿಯವರು ಇವತ್ತಿನ ಪತ್ರಿಕೆಯಲ್ಲಿನ ಸುದ್ದಿಯನ್ನು ಹೇಳಿದ ಹಾಗೆ ಗುಟ್ಕಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದವರು, ಅದು ರದ್ದಾದ ಹಿನ್ನಲೆಯಲ್ಲಿ ಕೆಲಸ ಇಲ್ಲದೇ ಬೀದಿಗೆ ಬಂದು ಸೀಮೆಎಣ್ಣೆ ಸರಿದುಕೊಂಡು ಆತ್ಮಹತ್ಯೆಗೆ ಪ್ರಯತ್ನ ಹೆಚ್ಚಾಗುವ ಸಂದರ್ಭಗಳು ಕಾಣುತ್ತಿವೆ, ಇದಕ್ಕೆ ಸರ್ಕಾರ ಕೊಡತಕ್ಕ ಪರಿಹಾರಗಳೇನು? ಇನ್ನೂ ಸಣ್ಣಪುಟ್ಟ ಗೂಡು ಅಂಗಡಿಗಳನ್ನು ನಡೆಸುವವರ ಬಗ್ಗೆ ಹೇಳುವುದಾದರೆ ಕೇರಳ ರಾಜ್ಯದ ಹೈಕೋರ್ಟ್ ಆದೇಶದಂತೆ ನಮ್ಮಲ್ಲೂ ಸಹ ತಂಬಾಕು ಮತ್ತು ನಿಕೋಟಿನ್ ರಹಿತ ಪಾನ್ ಮಸಾಲಗಳನ್ನು ಮಾತ್ರ ಮಾಡುವುದಕ್ಕೆ ಅವಕಾಶ ಕೊಡಬೇಕು. ಆದರೆ, ಚಿತ್ರದುರ್ಗ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈ ಪಾನ್ ಮಸಾಲ

ಮಾರುವ ಗೂಡಂಗಡಿಗಳ ಮೇಲೂ ದಾಳಿ ನಡೆದು, ಆ ಜನರು ಬಹಳ ತೊಂದರೆಗೆ ಒಳಗಾಗಿದ್ದಾರೆ. ಇದನ್ನೆಲ್ಲ ಸಮರ್ಪಕವಾಗಿ ನಿಭಾಯಿಸಲಿಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ ಎನ್ನುವುದು ನಮ್ಮ ಪ್ರಮುಖ ಪ್ರಶ್ನೆಗಳಾಗಿವೆ, ಇದಕ್ಕೆ ಸಚಿವರು ಉತ್ತರಗಳನ್ನು ನೀಡಬೇಕು. ಮಾನ್ಯ ಸಭಾನಾಯಕರು, ಈ ಉತ್ತರದಿಂದ ಸಮಾಧಾನ ಆಗದಿದ್ದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ನಾಳೆ ಇದರ ಬಗ್ಗೆ ಉತ್ತರ ಕೊಡಿಸುವುದಾಗಿ ಹೇಳಿದ್ದು ನನಗೆ ಬಹಳ ಸಂತೋಷ ಆಯಿತು. ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಡುವುದು ಸಮರ್ಪಕ ಎಂದು ನಾನು ಭಾವಿಸುತ್ತೇನೆ. ನಾಳೆ ಸದನಕ್ಕೆ ಮುಖ್ಯಮಂತ್ರಿಗಳು ಬಂದ ಕೂಡಲೇ ನನಗೆ ಉತ್ತರ ಕೊಡಿಸಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಚಿವರು ಸುದೀರ್ಘವಾದ ಉತ್ತರ ಕೊಟ್ಟಿದ್ದಾರೆ, ಗುಟ್ಕಾ ಬ್ಯಾನ್ ಮಾಡಿರುವುದನ್ನು ಎಲ್ಲರೂ ಸ್ವಾಗತಿಸಿದ್ದಾರೆ. ಅಡಕೆ ಬೆಳೆಗಾರರಿಗೆ ತೊಂದರೆಯಾದಂಥ ಸಂದರ್ಭದಲ್ಲಿ ಸರ್ಕಾರ ಅವರಿಗೆ ಬೆನ್ನೆಲುಬಾಗಿ ನಿಂತು, ಯಾವುದೇ ಸಮಸ್ಯೆಯಾಗದ ಹಾಗೆ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಸರ್ಕಾರದ ಮೇಲಿದೆ. ಮಾನ್ಯ ಸಚಿವರು ಅಡಕೆ ಬೆಳೆಗಾರರನ್ನು ಯಾವುದೇ ಸಂದರ್ಭದಲ್ಲೂ ಕೈಬಿಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರ ನಾಲ್ಕು ಬೇಡಿಕೆಗಳಿಗೆ ಮಾನ್ಯ ಸಚಿವರು ನೀಡಿದ ಎರಡು–ಮೂರು ಸಾಲು ಉತ್ತರದಲ್ಲಿ ಕವರ್ ಆಗಿದೆ. ಅವಶ್ಯಕವಿದ್ದರೆ ನಾಳೆ ಮುಖ್ಯಮಂತ್ರಿಗಳು ಬಂದಾಗ ಅವರಿಂದ ಒಂದು ಹೇಳಿಕೆ ಮಾಡಿಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಧನ್ಯವಾದಗಳು.

**ಸಭಾಪತಿಯವರು:–** ಈ ಚರ್ಚೆ ಇಲ್ಲಿಗೆ ಮುಗಿಯಲಿಲ್ಲ. ಮಾನ್ಯ ಸಭಾನಾಯಕರು ಹೇಳಿದ ಹಾಗೆ ನಾಳೆ ಮುಖ್ಯಮಂತ್ರಿಗಳು ಬಂದಾಗ ಹೇಳಿಕೆಯನ್ನು ಕೊಡಿಸುತ್ತಾರೆ. ಆ ನಂತರ ಈ ಚರ್ಚೆಯನ್ನು ಮುಕ್ತಾಯಗೊಳಿಸೋಣ.

ಈಗ ಸಮಯ 6.15. ಮಾನ್ಯ ನಾಣಯ್ಯನವರ ವಿಷಯವನ್ನು ನಾಳೆ ತೆಗೆದುಕೊಳ್ಳೋಣ. ಒಂದು ವಿಷಯ. ವಿರೋಧ ಪಕ್ಷದ ಕಡೆ ಶೇಕಡ

100ರಷ್ಟು ಅಲ್ಲದಿದ್ದರೂ ಸದಸ್ಯರ ಹಾಜರಾತಿ ಚೆನ್ನಾಗಿದೆ. ಆಡಳಿತ ಪಕ್ಷದ ಕಡೆ ಸ್ವಲ್ಪ ಶಾರ್ಟೇಜ್ ಕಾಣಿಸುತ್ತಿದೆ. ಎರಡೂ ಕಡೆ ಸದಸ್ಯರುಗಳಿದ್ದರೆ ಸದನ ನಡೆಸುವುದಕ್ಕೆ ಚೆನ್ನಾಗಿರುತ್ತದೆ. ಮತ್ತೆ, ಈ ಸದನದಲ್ಲಿ ಕೆಲವು ಜನ ಮಂತ್ರಿಗಳು ಬೆಳಿಗ್ಗೆಯಿಂದ ಸಂಜೆಯ ತನಕ ಕುಳಿತುಕೊಂಡಿದ್ದು ಸಂತೋಷ ತರುವ ವಿಚಾರವಾಗಿದೆ. ಉಳಿದ ಸಚಿವರಿಗೂ, ಈ ಸದನದಲ್ಲಿ ಚರ್ಚೆ ಚೆನ್ನಾಗಿ ನಡೆಯುತ್ತದೆಂದು ಹೇಳಿ ಕರೆದುಕೊಂಡು ಬಂದರೆ ಒಳ್ಳೆಯದು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಚಿವರಾದ ಅಭಯಚಂದ್ರರವರು ಬೆಳಿಗ್ಗೆಯಿಂದ ಇಲ್ಲಿಯತನಕ ಈ ಸದನದಲ್ಲಿಯೇ ಕುಳಿತುಕೊಂಡಿದ್ದಾರೆ.

**ಸಭಾಪತಿಯವರು:–** ಸದನದ ಎಲ್ಲ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ ಸಚಿವರನ್ನು ಅಭಿನಂದಿಸುತ್ತೇನೆ. ಈಗ ಸದನವನ್ನು ನಾಳೆ ಹನ್ನೊಂದು ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 6ನೇ ಜೂನ್ ಮಾಹೆ 2013ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**